ವಿಶ್ವವಾಣಿ
ವಿಶ್ವಾಸವೇ ವಿಶ್ವ

ಟ್ರಾವಿಸ್ ಹೆಡ್ ವಿಶ್ವದಾಖಲೆ ಶತಕ

ಆತಿಥೇಯ ಆಸ್ಟ್ರೇಲಿಯಾ ತಂಡ ಆ್ಯಶಸ್ ಟೆಸ್ಟ್ ಸರಣಿಯ 1ನೇ ಪಂದ್ಯದಲ್ಲಿ ಇಂಗ್ಲೆಂಡ್ ಅನ್ನು ಎರಡೇ ದಿನಗಳಲ್ಲಿ ಮಣಿಸಿದೆ. ಟ್ರಾವಿಸ್ ಹೆಡ್ ಟೆಸ್ಟ್ ಪಂದ್ಯವೊಂದರ ನಾಲ್ಕನೇ ಇನಿಂಗ್ಸ್‌ನಲ್ಲಿ ವೇಗದ ಶತಕ (69 ಎಸೆತ) ಬಾರಿಸಿ ವಿಶ್ವದಾಖಲೆ ನಿರ್ಮಿಸಿದ್ದಾರೆ. ಹೆಡ್ ಆರ್ಭಟದ ಪರಿಣಾಮ ಆಸೀಸ್ ಇಂಗ್ಲೆಂಡ್ ನೀಡಿದ 205 ರನ್ ಗುರಿಯನ್ನು 2 ವಿಕೆಟ್ ಕಳೆದುಕೊಂಡು ತಲುಪಿತು.

ಶ್ರೀ ವಿಧುಶೇಖರರ ಪುರೋಗಾಮಿ ನಡೆ: ಒಂದು ಜಿಜ್ಞಾಸೆ

ವೇದಬ್ರಹ್ಮ ಕೆ.ಸುಬ್ರಮಣ್ಯ ಶಾಸ್ತ್ರೀ

ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನದ ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠದ ಜಗದ್ಗುರುಗಳಾದ ಶ್ರೀ ವಿಧುಶೇಖರ ಭಾರತಿ ಸ್ವಾಮೀಜಿಗಳು 'ಧಾರ್ಮಿಕ ವಿಜಯ ಯಾತ್ರೆ'ಯ ಭಾಗವಾಗಿ ಬುಧವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಭೇಟಿಯಾದ ಫೋಟೋ ಮತ್ತು ಸುದ್ದಿಯನ್ನು ಪತ್ರಿಕೆಯಲ್ಲಿ ನೋಡಿದೆ. ಕಳೆದ 65 ವರ್ಷಗಳಿಂದ ನಿರಂತರವಾಗಿ ಪತ್ರಿಕೆಗಳನ್ನು ಓದುತ್ತಿರುವ ಹಾಗೂ ಶ್ರೀಮಠದ ಅನೂಚಾನ ಸತ್ಸಂಪ್ರದಾಯಗಳನ್ನು ಹತ್ತಿರದಿಂದ ಗಮನಿ ಸುತ್ತಿರುವ ನನಗೆ, ಶೃಂಗೇರಿಯ ಜಗದ್ಗುರು ಗಳನ್ನು ರಾಷ್ಟ್ರಪತಿಯವರೊಂದಿಗೆ ರಾಷ್ಟ್ರಪತಿ ಭವನದಲ್ಲಿ ನೋಡಿದ್ದು ತುಸು ಆಶ್ಚರ್ಯ ಹಾಗೂ ಸಂತಸವನ್ನು ಉಂಟು ಮಾಡಿತು.

ಇದಕ್ಕೆ ಕಾರಣವಿದೆ. ಸಾಮಾನ್ಯವಾಗಿ ಶೃಂಗೇರಿಯ ಜಗದ್ಗುರುಗಳು ಅಧಿಕಾರ ಕೇಂದ್ರದಿಂದ ದೂರ ವಿರಲು ಬಯಸುತ್ತಾರೆ. ಅದು ಇಲ್ಲಿಯವರೆಗೆ ನಿಜವೂ ಸಹ. ಈ ಭಾವನೆ ನಾನೂ ಸೇರಿದಂತೆ ಜನ ಸಾಮಾನ್ಯರಲ್ಲಿದೆ. ಹಾಗೆಂದು ಶ್ರೀಮಠಕ್ಕೆ ಅಧಿಕಾರದಲ್ಲಿರುವವರು ಅಸ್ಪೃಶ್ಯರು ಎಂದೇನೂ ಅಲ್ಲ. ಯಾರೇ ಅಧಿಕಾರದಲ್ಲಿರಲಿ, ಯಾವುದೇ ಅಧಿಕಾರದಲ್ಲಿರಲಿ, ಅವರನ್ನು ಓಲೈಸುವುದರಲ್ಲಿ ಶೃಂಗೇರಿ ಮಠವೂ ಸೇರಿದಂತೆ ಯಾವ ಮಠವೂ ಹೊರತೇನೂ ಅಲ್ಲ. ಉಳಿದ ಮಠಕ್ಕೂ, ಶೃಂಗೇರಿ ಮಠಕ್ಕೂ ಒಂದು ವ್ಯತ್ಯಾಸವೇನೆಂದರೆ, ಉಳಿದ ಮಠಮಾನ್ಯ ಗಳು ಅಧಿಕಾರ ಅಂಗಳಕ್ಕೆ ಧಾವಿಸಿ ಹೋದರೆ, ಶೃಂಗೇರಿ ಜಗದ್ಗುರುಗಳು ಅಧಿಕಾರದಲ್ಲಿರುವವರನ್ನು ತಮ್ಮ ಮಠದ ಅಂಗಳಕ್ಕೆ ಕರೆಸಿಕೊಳ್ಳುತ್ತಾರೆ. ಅಷ್ಟರಮಟ್ಟಿಗಿನ ಘನತೆ ಮತ್ತು ಗತ್ತನ್ನು ಉಳಿಸಿಕೊಂಡು ಬಂದಿದ್ದಾರೆ.

ಸ್ವಾತಂತ್ರ್ಯ ಬಂದಾಗಿನಿಂದ, ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಲೋಕಸಭಾ ಸ್ಪೀಕರ್, ಪ್ರಧಾನಿ, ರಾಜ್ಯಪಾಲರು, ಮುಖ್ಯಮಂತ್ರಿಗಳು, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಹೀಗೆ ಅಧಿಕಾರದಲ್ಲಿರುವ ಗಣ್ಯಾತಿಗಣ್ಯರನ್ನೆಲ್ಲ ಶೃಂಗೇರಿಯ ನರಸಿಂಹವನಕ್ಕೆ ಕರೆಯಿಸಿಕೊಂಡು ಪರಿಪೂರ್ಣ ಆಶೀರ್ವಾದ ಮಾಡಿ ಕಳಿಸಿದ್ದಾರೆ. ಸನ್ನಿಧಾನ ಅಪೇಕ್ಷೆಪಟ್ಟರೆ ಸಾಕು, ನಾಳೆಯೇ ಅವರು ಯಾರೇ ಆಗಿರಲಿ ಶೃಂಗೇರಿಯಲ್ಲಿ ಹಾಜರ್! ಅದು ಆ ಪೀಠದ ಮತ್ತು ಜಗದ್ಗುರುಗಳ ತಾಕತ್ತು. ಪ್ರಧಾನಿಯಾಗಿ ಹನ್ನೊಂದು ವರ್ಷಗಳ ಅವಧಿಯಲ್ಲಿ ಒಮ್ಮೆಯೂ ಶೃಂಗೇರಿಗೆ ಭೇಟಿ ನೀಡದವರೆಂದರೆ, ಪ್ರಾಯಶಃ ಮೋದಿಯವರೊಬ್ಬರೇ ಇರಬೇಕು. ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿರುವ ಮಾತೆಂದರೆ, ಪೀಠಾಧಿಪತಿಗಳು ತಮ್ಮ ಆಸನದ ಎತ್ತರಕ್ಕೆ ಸಂಬಂಧಿಸಿದ ಸ್ಥಾನ ಮಾನ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪಾಲಿಸಿ ಕೊಂಡು ಬಂದಿರುವ ಶಿಷ್ಟಾಚಾರ ಮೋದಿ ಯವರ ಭೇಟಿಗೆ ಅಡ್ಡಿಯಾಗಿದೆಯಂತೆ. ಉಳಿದ ಪ್ರಧಾನಿ, ಮಾಜಿ ಪ್ರಧಾನಿಗಳೆಲ್ಲ ಶೃಂಗೇರಿಗೆ ಭೇಟಿ ನೀಡಿ ಕೃತಾರ್ಥರಾದವರೇ.

ಅಂದರೆ ಶೃಂಗೇರಿ ಜಗದ್ಗುರುಗಳು ಯಾರನ್ನಾದರೂ ಭೇಟಿಯಾಗುವ ಅಪೇಕ್ಷೆಪಟ್ಟರೆ, ಶ್ರೀಕ್ಷೇತ್ರಕ್ಕೆ ಕರೆಯಿಸಿಕೊಳ್ಳುತ್ತಾರೆ ಎಂದಾಯಿತು. ಹೀಗಾಗಿ ಶ್ರೀಗಳೇ ಗಣ್ಯರಿದ್ದಲ್ಲಿ ಹೋಗುವ ಸಂಪ್ರದಾಯ, ಪರಿಪಾಠ ಈವರೆಗೂ ಕಂಡು ಕೇಳಿದ್ದಿಲ್ಲ. ಇದನ್ನು ಶ್ರೀ ವಿಧುಶೇಖರ ಭಾರತಿ ಸ್ವಾಮೀಜಿಯವರ ಪೂರ್ವ ಪೀಠಾಧಿಪತಿಗಳು ಒಂದು ಶಿಸ್ತಾಗಿ, ಶಿಷ್ಟಾಚಾರವಾಗಿ ಪಾಲಿಸಿಕೊಂಡು ಬಂದಿರುವುದು ಗಮನಾರ್ಹ. ಭಕ್ತರ ಮನೆಗೆ ಹೋಗುವ, ಆದರೆ ರಾಜಕಾರಣಿಗಳು ಮತ್ತು ಅಧಿಕಾರಸ್ಥರ ಮನೆ ಬಾಗಿಲಿನಿಂದ ದೂರವಿ ರುವ ಪರಿಪಾಠವನ್ನು ಪೀಠಾಧಿಪತಿಗಳು ನಾಜೂಕಾಗಿ



ಅನುಸರಿಸಿಕೊಂಡು ಬಂದಿರುವುದು ಶೃಂಗೇರಿಯ ಪೀಠವನ್ನು ಹತ್ತಿರದಿಂದ ಬಲ್ಲವರಿಗೆ ಗೊತ್ತಿರುವ ವಿಚಾರ. ಕರೆದರೆ, ಅಪೇಕ್ಷೆಪಟ್ಟರೆ ಅಧಿಕಾರದಲ್ಲಿರುವವರೇ ಓಡೋಡಿ ನಾಮುಂದು-ತಾಮುಂದು ಎಂದು ಬರುವಾಗ, ಅಧಿಕಾರ ಕೇಂದ್ರದ ಹತ್ತಿರ ಸುಳಿಯುವುದು ಭೂಷಣ ಅಲ್ಲ ಎಂದು ಆ ಪೀಠದ ಜಗದ್ಗುರುಗಳು ಭಾವಿಸಿಕೊಂಡು ಬಂದಿರುವುದು ಸರ್ವವಿಧಿತ.

ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಭವನಕ್ಕೆ ಭೇಟಿ ನೀಡಿದ ಶ್ರೀ ವಿಧುಶೇಖರರ ನಡೆ ಇಷ್ಟು ವರ್ಷಗಳಿಂದ ಪಾಲಿಸಿಕೊಂಡು ಬಂದಿರುವ ಸಂಪ್ರದಾಯವನ್ನು ಮುರಿದಂತಾಯಿತಾ ಎಂಬ ಸಂದೇಹ ಭಕ್ತರಲ್ಲಿ ಮೂಡುವಂತಾದರೆ ಆಶ್ಚರ್ಯವೇನೂ ಇಲ್ಲ. ಒಂದು ವೇಳೆ ಶ್ರೀ ವಿಧುಶೇಖರರು ಬಯಸಿದ್ದರೆ, ಅವರು ಇರು ವಲ್ಲಿಗೇ ರಾಷ್ಟ್ರಪತಿಯವರು ಖುದ್ದು ಬರುತ್ತಿದ್ದರು. ಇವರಾಗಿಯೇ ರಾಷ್ಟ್ರಪತಿ ಭವನಕ್ಕೆ ಹೋಗುವ ಅಗತ್ಯವಿರಲಿಲ್ಲ. ಶ್ರೀಗಳು ಎಲ್ಲಿದ್ದಾರೋ ಅಲ್ಲಿಗೆ ರಾಷ್ಟ್ರಪತಿಯವರನ್ನು ಕರೆಯಿಸಿಕೊಂಡಿದ್ದರೆ, ಅದು ಸಂಪ್ರದಾಯವನ್ನು ಪಾಲಿಸಿ ಹೆಚ್ಚುಗಾರಿಕೆಯನ್ನು ತೋರಿಸಿದಂತಾಗುತ್ತಿತ್ತು. ಆದರೆ ತಮ್ಮ ಪರಿವಾರ, ಪಟಾಲಮ್ಮಿನೊಂದಿಗೆ ರಾಷ್ಟ್ರಪತಿ ಭವನಕ್ಕೆ ಚಿತ್ತೈಸಿದ್ದು ಯಾಕೋ ಸರಿ ಹೋಗಲಿಲ್ಲ. ಶೃಂಗೇರಿಯ ಯಾವ ಜಗದ್ಗುರುಗಳೂ ಈ ಸಂಪ್ರದಾಯ 'ಪರಿವರ್ತನೆ'ಗೆ ಕೈ ಹಾಕಿರಲಿಲ್ಲ. ರಾಷ್ಟ್ರಪತಿ ಭವನಕ್ಕೆ ಹೋಗುವ ಎರಡು ದಿನಗಳ ಮುನ್ನ, ಶೃಂಗೇರಿ ಜಗದ್ಗುರುಗಳು, ಸುಪ್ರೀಂ ಕೋರ್ಟಿನ ನ್ಯಾಯಾಧೀಶರೊಬ್ಬರ ಮನೆಯಲ್ಲಿ ನಡೆದ 'ಗುರುವಂದನ' ಕಾರ್ಯ ಕ್ರಮಕ್ಕೆ ಸುಪ್ರೀಂ ಕೋರ್ಟಿನ ಎಲ್ಲ ನ್ಯಾಯ ಮೂರ್ತಿಗಳನ್ನು ಮತ್ತು ದಿಲ್ಲಿ ಹೈಕೋರ್ಟಿನ ಇಪ್ಪತ್ತು ನ್ಯಾಯಮೂರ್ತಿಗಳನ್ನು ಕರೆಯಿಸಿಕೊಂಡು ಆಶೀರ್ವದಿಸಿದ್ದರು.

ಇಲ್ಲಿ ಇನ್ನೊಂದು ಸಂಗತಿಯನ್ನು ಸೂಕ್ಷ್ಮ ವಾಗಿ ಗಮನಿಸಬೇಕು. ಸಾಮಾನ್ಯವಾಗಿ ಶೃಂಗೇರಿ ಜಗದ್ಗುರುಗಳು ವೇದಿಕೆಯಲ್ಲಾಗಲಿ ಅಥವಾ ಇತರೆಡೆಯಾಗಲಿ, ಸನ್ಯಾಸಿಗಳೂ ಸೇರಿದಂತೆ ಇತರ ಯಾರೊಂದಿಗೂ ಸಮಾನ ಆಸನ ವ್ಯವಸ್ಥೆಯಲ್ಲಿ ಕುಳಿತುಕೊಳ್ಳುವುದಿಲ್ಲ. ಇದು ಶೃಂಗೇರಿ ಶ್ರೀಮಠದಲ್ಲಿ ಶತಮಾನಗಳಿಂದ ಪಾಲಿಸಿಕೊಂಡು ಬಂದಿರುವ ಶಿಷ್ಟಾಚಾರ. ಈ ಶಿಷ್ಟಾಚಾರ ಪಾಲಿಸದ ಕಡೆ ಅವರು ಹೋಗುವುದಿಲ್ಲ. ಈ ಶಿಷ್ಟಾಚಾರ ಮೊನ್ನೆ ಶ್ರೀ ವಿಧುಶೇಖರರು ರಾಷ್ಟ್ರಪತಿ ಭವನಕ್ಕೆ ಹೋದಾಗಲೂ ಕಿಂಚಿತ್ತೂ ಲೋಪವಿಲ್ಲದೇ ಪಾಲನೆಯಾದಂತಿದೆ. ರಾಷ್ಟ್ರಪತಿಯವರಿಗಿಂತ ಎತ್ತರದ ಸ್ಥಾನದಲ್ಲಿ ಅದರಲ್ಲೂ ಮಠದ ರಜತಪೀಠದಲ್ಲೇ ವಿರಾಜಮಾನರಾಗಿರುವುದು ಫೋಟೋದಲ್ಲಿ ಕಾಣುತ್ತದೆ. ಇದು ನಮ್ಮಂಥ ಭಕ್ತರಿಗೆ ಖುಷಿಯ ವಿಚಾರ ಎಂಬುದು ಬೇರೆ ಮಾತು.

ಭಾರತದಲ್ಲಿ ಸಂವಿಧಾನಾತ್ಮಕವಾಗಿ ರಾಷ್ಟ್ರಪತಿಗಳದು ಅತ್ಯುನ್ನತ ಸ್ಥಾನ. ಅವರು ಈ ರಾಷ್ಟ್ರದ ಪ್ರಥಮ ಪ್ರಜೆಯೂ ಹೌದು, ನಮ್ಮ ಸಂವಿಧಾನದ ರಕ್ಷಕರೂ ಹೌದು. ಹೀಗಾಗಿ ಅವರಿಗೆ ಅಗ್ರಪಂಕ್ತಿ, ಅಗ್ರಪಟ್ಟ. ಉಳಿದವರಿಗೆ ಅವರಿಗಿಂತ ಕೆಳಗಿನ ಸ್ಥಾನಮಾನ. ಆದರೆ ಶೃಂಗೇರಿ ಜಗದ್ಗುರುಗಳು ರಾಷ್ಟ್ರಪತಿಗಿಂತ ತುಸು ಎತ್ತರದ ಪೀಠದಲ್ಲಿ ಕುಳಿತಿರುವುದು, ರಾಷ್ಟ್ರಪತಿ ಹುದ್ದೆಯ ಘನತೆಗೆ ಚ್ಯುತಿಯಾಯಿತಾ ಎಂಬ ಸಂದೇಹ ಪ್ರಜಾಪ್ರಭುತ್ವವಾದಿಗಳಲ್ಲಿ ಮೂಡುವಂತಾಗಿರಬಹುದು. ಶೃಂಗೇರಿಯ ಭಕ್ತರಿಗೆ ಇದು ಸಂತಸ ತರುವ ವಿಷಯವಾದರೂ, ಸಂವಿಧಾನದ ಘನತೆಯ ವಿಷಯ ಬಂದಾಗ ಎಲ್ಲೋ ಒಂದೆಡೆ ಲೋಪವಾಯಿತಾ ಎಂಬ ಪ್ರಶ್ನೆ ಸುಳಿಯದಿರದು.

ಅಷ್ಟಕ್ಕೂ ರಾಷ್ಟ್ರಪತಿ ಮತ್ತು ಜಗದ್ಗುರುಗಳ ಮಧ್ಯೆ ಲೋಕ ಕಲ್ಯಾಣಕ್ಕೆ ಸಂಬಂಧಿಸಿದ ಯಾವ ವಿಷಯ ಚರ್ಚೆ ಯಾಯಿತು ಎಂಬುದನ್ನು ರಾಷ್ಟ್ರಪತಿಭವನದ ಅಧಿಕಾರಿಗಳಾಗಲಿ, ಮಠದ ವಕ್ತಾರರಾಗಲಿ ಸಾರ್ವಜನಿಕರಿಗೆ ತಿಳಿಸಿಲ್ಲ. ಹಾಗಾದರೆ ಇದು ಸೌಜನ್ಯ ಇಲ್ಲವೇ ಖಾಸಗಿ ಭೇಟಿಯಾ ಎಂಬ ಪ್ರಶ್ನೆ ಮೂಡುವುದು ಸಹಜ. ಇದಕ್ಕೂ ಮುನ್ನ, ಇಂಥದ್ದೇ ಒಂದು ಘಟನೆ ನನ್ನನ್ನು ಚಿಂತೆಗೀಡು ಮಾಡಿತ್ತು. ನಾನು ತಿಳಿದಂತೆ, ಅದು ಯಾರೇ ಆಗಲಿ, ಶೃಂಗೇರಿ ಪೀಠದ ಜಗದ್ಗುರುಗಳ ಭೇಟಿ ಮಾಡುವ ಮುನ್ನ, ಶರ್ಟ್ ಕಳಚಿ ಶೇಷ ವಸ್ತ್ರ ಹೊದ್ದು ಭೇಟಿಯಾಗಬೇಕು. ಶೃಂಗೇರಿಗೆ ಭೇಟಿ ನೀಡಿದಾಗ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ ಮುಂತಾದವರು ಈ ನಿಯಮವನ್ನು ಪಾಲಿಸಿ ಆಶೀರ್ವಾದ ಪಡೆದು ಬಂದಿದ್ದರು. ಆದರೆ ಕಳೆದ ಬಾರಿ ಉತ್ತರ ಪ್ರದೇಶಕ್ಕೆ ಭೇಟಿ ನೀಡಿದ್ದ ಶ್ರೀ ವಿಧುಶೇಖರ ಶ್ರೀಗಳು, ಕಾವಿ ಜುಬ್ಬಾ ಧರಿಸಿ ಬಂದಿದ್ದ ಅಲ್ಲಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಕರೆದು ಶಾಲು ಹೊದಿಸಿ, ನೆನಪಿನ ಫಲಕ ನೀಡಿ, ಸನ್ಮಾನಿಸಿದ್ದರು. ಆಗಲೂ ನನ್ನ ತಲೆಯಲ್ಲಿ ಇಂಥ ಹತ್ತಾರು ವಿಷಯಗಳು ಸುಳಿದು ಹೋಗಿದ್ದವು.

ಇಲ್ಲಿ ನನಗೊಂದು ಪ್ರಶ್ನೆ ಕಾಡುತ್ತಿದೆ. ಒಂದು ವೇಳೆ ನಾಳೆ ಮೌಲ್ವಿಗಳು, ಬಿಷಪ್‌ಗಳು, ಪುಡಂಗುಗಳು ಅಥವಾ ಇತರ ಜಾತಿಯ ಸ್ವಾಮೀಜಿಗಳು ಭೇಟಿಗೆ ಅವಕಾಶ ಕೋರಿದರೆ ರಾಷ್ಟ್ರಪತಿಗಳು ಅವರವರ ಮಠದ ಸಂಪ್ರದಾಯ - ಶಿಷ್ಟಾಚಾರಕ್ಕೆ ಅನುಗುಣವಾಗಿ ಅವಕಾಶ ಕೊಡುತ್ತಾರಾ? ಅವರುಗಳು ಬಯಸಿದ ರೀತಿಯಲ್ಲೇ ಆಸನ ವ್ಯವಸ್ಥೆ (ರಾಷ್ಟ್ರಪತಿಯವರಿಗಿಂತ ಎತ್ತರದ ಆಸನ)ಯನ್ನು ಕಲ್ಪಿಸಿ ಕೊಡುತ್ತಾರಾ? ಇಂಥ ಹಲವಾರು ತಲೆಬುಡ ವಿಲ್ಲದ, ಒಂದು ರೀತಿಯಲ್ಲಿ ಎಷ್ಟೇ ಜಗ್ಗಾಡಿದರೂ ಉತ್ತರ ಪಡೆಯಲಾಗದ, ದ್ವಂದ್ವದಲ್ಲಿ ನಾನಿದ್ದೇನೆ. ಈ ವಿಷಯದಲ್ಲಿ ಬಲ್ಲವರು ಬೆಳಕು ಚೆಲ್ಲಲಿ.

ಸೊಂಪಾದ ಪುಟಗಳು

ಇದು ಇಸ್ರೇಲಿ ಜಲವಿಜ್ಞಾನಿಗಳ ಕಣ್ಣಿಗೆ ಕಾಣದ ಅಣೆಕಟ್ಟಿನ ವಿಸ್ಮಯ!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6



ತುತ್ತು ಅನ್ನಕ್ಕಿರುವಷ್ಟೇ ಗೌರವ ಕವಳಕ್ಕೂ ಇದೆ
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ

ಜನರು ನಿಮ್ಮ ಬಗ್ಗೆ ಏನು ಯೋಚಿಸುತ್ತಾರೆ ಎನ್ನುವುದಕ್ಕಿಂತ, ನೀವು ನಿಮ್ಮ ಬಗ್ಗೆ ಏನು ಯೋಚಿಸುತ್ತೀರಿ ಎಂಬುದು ಬಹಳ ಮುಖ್ಯ. ಬೇರೆಯವರು ಯೋಚಿಸಿದರೆ ಅದರಿಂದ ಅವರಿಗಾಗಿ, ನಿಮಗಾಗಲಿ, ಪ್ರಯೋಜನ ಇಲ್ಲ. ನೀವು ಯೋಚಿಸಿದರೆ ನಿಮಗೆ ಪ್ರಯೋಜನ.

ವಕ್ರತುಂಡೋಕ್ತಿ



ಗೂಗಲ್ ಸರ್ಚ್‌ನ ಎರಡನೇ ಪೇಜ್‌ಗೆ ಹೋಗೋದು ಅಂದ್ರೆ, ರಾತ್ರಿ ಹೊತ್ತು ಸ್ಮಶಾನಕ್ಕೆ ಹೋದ ಹಾಗೆ. ಅಲ್ಲಿ ಯಾರೂ ಇರಲ್ಲ, ಯಾರಿಗೂ ಅಲ್ಲಿಗೆ ಹೋಗೋ ಧೈರ್ಯನೂ ಇರಲ್ಲ!

ತುಂಗಾ ನದಿ ಸ್ಫೋಟ
ಇಬ್ಬರು ಉಗ್ರರಿಗೆ 6 ವರ್ಷ ಜೈಲು

ಶಿವಮೊಗ್ಗ: ತುಂಗಾ ನದಿ ದಂಡೆ ಮೇಲೆ ಪ್ರಾಯೋಗಿಕ ಬಾಂಬ್ ಸ್ಫೋಟ ಮತ್ತು ಹಿಂದೂ ಯುವಕನಿಗೆ ಚಾಕು ಇರಿದ ಪ್ರಕರಣದಲ್ಲಿ ಐಸಿಸ್ ಉಗ್ರ ಸಂಘಟನೆಯ ಇಬ್ಬರಿಗೆ ಎನ್‌ಐಎ ಕೋರ್ಟ್ 6 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಶಿವಮೊಗ್ಗ ಮೂಲದ ಜಬೀವುಲ್ಲಾ ಹಾಗೂ ನದೀಂ ಫೈಜಲ್ ಶಿಕ್ಷೆಗೊಳಗಾದವರು. ಆರೋಪಿಗಳಿಗೆ ತಲಾ 59,000 ರು. ದಂಡ ಕೂಡ ವಿಧಿಸಲಾಗಿದೆ. 4 ವರ್ಷಗಳ ಹಿಂದೆ ಆರೋಪಿಗಳು ಪ್ರಾಯೋಗಿಕ ಸ್ಫೋಟ ನಡೆಸಿದ್ದರು. ಸ್ವಾತಂತ್ರ್ಯ ದಿನಾಚರಣೆ ದಿನ ಹಿಂದೂ ಯುವಕನಿಗೆ ಚಾಕುವಿನಿಂದ ಇರಿದಿದ್ದರು.

ಸಿದ್ದರಾಮಯ್ಯ, ಡಿಕೆಶಿ ವಾದ ಆಲಿಸಿದ ಕಾಂಗ್ರೆಸ್ ಅಧ್ಯಕ್ಷ ಖರ್ಗೆ
ಇಬ್ಬರ ವಾದಗಳೂ ರಾಹುಲ್‌ಗೆ ರವಾನೆ, ಬಳಿಕ ತೀರ್ಮಾನ
ಕದನ ವಿರಾಮಕ್ಕೆ ಕೈ ಯತ್ನ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ ಎರಡು ದಿನಗಳಿಂದ ಗೊಂದಲ ಗೂಡಾ ಗಿರುವ ರಾಜ್ಯ ಕಾಂಗ್ರೆಸ್‌ನಲ್ಲಿ 'ಕದನ ವಿರಾಮ' ಘೋಷಿಸುವ ಪ್ರಯತ್ನಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮುಂದಾಗಿ ದ್ದಾರೆ. ಒಂದೆಡೆ ನಾಯಕತ್ವ ಬದಲಾವಣೆಗೆ ಡಿ.ಕೆ.ಶಿವಕುಮಾರ್ ಬಣ ಪಟ್ಟು ಹಿಡಿದಿದ್ದರೆ, ಇನ್ನೊಂದೆಡೆ ಮುಖ್ಯಮಂತ್ರಿ ಸಿದ್ದ ರಾಮಯ್ಯ ಸದ್ಯಕ್ಕೆ ಸ್ಥಾನ ಬಿಡಲ್ಲ ಎನ್ನುವ ಪಟ್ಟನ್ನು ಹಿಡಿದಿದ್ದರು. ಈ ನಡುವೆ ಹಾದಿ ಬೀದಿಯಲ್ಲಿ ಕಾಂಗ್ರೆಸ್ ನಾಯಕರ ಹೇಳಿಕೆ ಗಳಿಂದ ಪಕ್ಷಕ್ಕೆ ತೀವ್ರ ಡ್ಯಾಮೇಜ್ ಆಗುತ್ತಿರುವುದನ್ನು ಗಮನಿಸಿರುವ ಮಲ್ಲಿಕಾರ್ಜುನ ಖರ್ಗೆ ಶನಿವಾರ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿದ್ದಾರೆ. ಶುಕ್ರವಾರ ಡಿ.ಕೆ.ಶಿವಕುಮಾರ್ ವಾದ ಆಲಿಸಿದ್ದ ಖರ್ಗೆ ಅವರು ಶನಿವಾರ ಸಿದ್ದರಾಮಯ್ಯ ಅವರ ಮಾತನ್ನು ಆಲಿಸಿ, ಮುಂದಿನ ತೀರ್ಮಾನ ವನ್ನು ರಾಹುಲ್ ಗಾಂಧಿ ಅವರೇ ಕೈಗೊಳ್ಳಲಿದ್ದಾರೆ. → 4

ಖರ್ಗೆ ಅವರೊಂದಿಗೆ ಸ್ಥಳೀಯ ಸಂಸ್ಥೆ ಚುನಾವಣೆ, ಪಕ್ಷ ಸಂಘಟನೆಗೆ ಸಂಬಂಧಿಸಿದಂತೆ ಚರ್ಚಿಸಿದ್ದೇನೆ. ಹೈಕಮಾಂಡ್ ತಗೆದುಕೊಳ್ಳುವ ತೀರ್ಮಾನಕ್ಕೆ ನಾನು, ಡಿಕೆಶಿ ಸೇರಿ ಎಲ್ಲರೂ ಬದ್ಧ. ಹೈಕಮಾಂಡ್ ಕರೆದರೆ ಹೋಗುವೆ. ಅವರ ತೀರ್ಮಾನಕ್ಕೆ ಬದ್ಧ.
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಏನೇನಾಗಿದೆ?

- ಡಿ.ಕೆ.ಶಿವಕುಮಾರ್ ನಿವಾಸದಲ್ಲಿ ಶನಿವಾರ ಬೆಳಗ್ಗೆ ವಿಶೇಷ ಪೂಜೆ
- ನಾಯಕತ್ವ ಸ್ಪಷ್ಟನೆಗೆ ನಾಯಕರು ಪಟ್ಟು; ಇಕ್ಕಟ್ಟಿನಲ್ಲಿ ಹೈಕಮಾಂಡ್
- ರಾಜ್ಯ ಕಾಂಗ್ರೆಸ್‌ನಲ್ಲಿನ ಬೆಳವಣಿಗೆ ಬಗ್ಗೆ ಮಾಹಿತಿ ಪಡೆದ ಕೇಂದ್ರ ಬಿಜೆಪಿ
- ನಿನ್ನೆಯೂ ಸಿದ್ದು, ಡಿಕೆಶಿ ನಿವಾಸದಲ್ಲಿ ಶಾಸಕ, ಸಚಿವರ ಪರೇಡ್
- ಇಂದು ಕಾಂಗ್ರೆಸ್ ಅಧ್ಯಕ್ಷ ಖರ್ಗೆ ಭೇಟಿಯಾಗಲಿರುವ ಶಿವಕುಮಾರ್?

ನಾಲ್ಕು ಗೋಡೆ ನಡುವೆ ಆಗಿರುವ ತೀರ್ಮಾನ ತಿಳಿಸಿ ಹೈಕಮಾಂಡ್ ಮೇಲೆ ಕಾಂಗ್ರೆಸ್ ನಾಯಕರ ಒತ್ತಡ
ಸೂತ್ರ ಬಹಿರಂಗಕ್ಕೆ ತೀವ್ರವಾದ ಒತ್ತಡ

ವಿಶ್ವವಾಣಿ ವಿಶೇಷ ಬೆಂಗಳೂರು

ಮುಖ್ಯಮಂತ್ರಿ ಸಿದ್ದ ರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ಕುರ್ಚಿ ಕಾದಾಟ ಹೆಚ್ಚಾಗುತ್ತಿರುವ ನಡುವೆಯೇ, ತಟಸ್ಥ ಬಣದಲ್ಲಿದ್ದ ಅನೇಕರು ಇದೀಗ ನಾಲ್ಕು ಗೋಡೆಯ ನಡುವೆ ಯಾಗಿರುವ 'ಗುಟ್ಟಿನ ಸೂತ್ರ'ವನ್ನು ರಟ್ಟು ಮಾಡುವಂತೆ ಪಕ್ಷದ ಹೈಕಮಾಂಡ್ ಮೇಲೆ ಒತ್ತಡ ಹೇರುವ ತಂತ್ರಕ್ಕೆ ಮುಂದಾಗಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಸರಕಾರಕ್ಕೆ ಎರಡೂವರೆ ವರ್ಷ ಪೂರೈಸಿದ ಹೊಸ್ತಿಲಿನಲ್ಲಿ ಕಾಂಗ್ರೆಸ್‌ನಲ್ಲಿ ಶುರುವಾಗಿರುವ ನಾಯಕತ್ವ ಬದಲಾವಣೆ ಕೂಗು ಮುಂದುವರಿದಿದೆ. ಸಿಎಂ ಹಾಗೂ ಡಿಸಿಎಂ ಆಪ್ತರು ತಮ್ಮ ತಮ್ಮ ನಾಯಕರ ಪರವಾಗಿ ತಮ್ಮದೇಯಾದ ರೀತಿಯಲ್ಲಿ ಹೋರಾಟ ಮುಂದುವರಿಸಿದ್ದಾರೆ. ಆದರೆ 'ಪವರ್ ಶೇರಿಂಗ್' ವಿಷಯದಲ್ಲಿ ಆಗಿರುವ ಒಪ್ಪಂದ'ವೇನು ಎನ್ನುವುದನ್ನು ಬಹಿರಂಗಪಡಿಸಬೇಕು ಎನ್ನುವ ಒತ್ತಡ ಇದೀಗ ಬಹುತೇಕ ಶಾಸಕರಿಂದ ಕೇಳಿಬರುತ್ತಿದೆ. → 4

ಪಕ್ಷಕ್ಕೆ ಹೊಡೆತ ಎನ್ನುತ್ತಿರುವ ಹಲವರು ವಿವರ ಪುಟ 4

ಅಣ್ಣಾಮಲೈ ಮತ್ತೆ ತ.ನಾ. ಬಿಜೆಪಿ ರಾಜ್ಯಾಧ್ಯಕ್ಷ?

ಚೆನ್ನೈ: ತಮಿಳುನಾಡಿನಲ್ಲಿ ವಿಧಾನಸಭಾ ಚುನಾವಣೆ



ಸಮೀಪಿಸುತ್ತಿದ್ದು ಬಿಜೆಪಿ ಹೈಕಮಾಂಡ್ ಪ್ರಮುಖ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ. ಅಣ್ಣಾಮಲೈ ಮತ್ತೆ ಬಿಜೆಪಿ ರಾಜ್ಯಾಧ್ಯಕ್ಷರಾಗುತ್ತಾರೆಂದು ಸುದ್ದಿಗಳು ಹರಿದಾಡುತ್ತಿವೆ. ಎಐಎಡಿಎಂಕೆ ಜೊತೆ ಮೈತ್ರಿ ಮಾಡಿಕೊಳ್ಳುವ ಉದ್ದೇಶದಿಂದಾಗಿ ಅಣ್ಣಾಮಲೈರನ್ನು ಬದಲಿಸಿ, ಎನ್.ನಾಗೇಂದ್ರನ್‌ರನ್ನು ರಾಜ್ಯಾಧ್ಯಕ್ಷ ಸ್ಥಾನಕ್ಕೆ ನೇಮಿಸಲಾಗಿತ್ತು. ಇದರಿಂದ ಭಾರೀ ಗೊಂದಲ ಸೃಷ್ಟಿಯಾಗಿದೆ.

ಮೆಗಾ ಸಿಟಿ ಪ್ರಾಜೆಕ್ಟ್: ಯೋಗೇಶ್ವರ್ ಖುಲಾಸೆ

ಬೆಂಗಳೂರು: ಮೆಗಾ ಸಿಟಿ ಯೋಜನೆ ಪ್ರಕರಣದಲ್ಲಿ



ಚನ್ನಪಟ್ಟಣದ ಕಾಂಗ್ರೆಸ್ ಶಾಸಕ ಸಿ.ಪಿ.ಯೋಗೇಶ್ವರ್, ಮತ್ತೆರಡು ಪ್ರಕರಣಗಳಲ್ಲಿ ಖುಲಾಸೆಗೊಂಡಿದ್ದಾರೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಲ್ಲಿ ಒಟ್ಟು 6 ಆರೋಪಿಗಳು ಖುಲಾಸೆಗೊಂಡಿದ್ದಾರೆ. ಬೆಂಗಳೂರು-ಮೈಸೂರು ಮೆಗಾ ಸಿಟಿ ಯೋಜನೆಯಡಿ ಮನೆ ಕೊಡಿಸುವುದಾಗಿ ಹೇಳಿ ಯೋಗೇಶ್ವರ್ ವಂಚಿಸಿದ್ದಾರೆಂದು 1994ರಲ್ಲಿ ಪ್ರಕರಣ ದಾಖಲಾಗಿತ್ತು.

ಶ್ರೀರಾಮ ಕಾಲ್ಪನಿಕ: ರಾಗಾ ಖುದ್ದು ಹಾಜರಿಗೆ ಸೂಚನೆ

ವಾರಾಣಸಿ: ಭಗವಾನ್ ಶ್ರೀರಾಮ ಕಾಲ್ಪನಿಕ ವ್ಯಕ್ತಿ



ಎಂದು ರಾಹುಲ್ ಗಾಂಧಿ ನೀಡಿರುವ ಹೇಳಿಕೆಗೆ ಸಂಬಂಧಿಸಿದಂತೆ, ರಾಹುಲ್ ಖುದ್ದಾಗಿ ಡಿ.18ರಂದು ವಿಚಾರಣೆಗೆ ಹಾಜರಾಗಬೇಕು ಎಂದು ವಾರಾಣಸಿ ನ್ಯಾಯಾಲಯ ನಿರ್ದೇಶಿಸಿದೆ. ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ರಾಹುಲ್, ಧಾರ್ಮಿಕ ಭಾವನೆಗೆ ಧಕ್ಕೆ ಮಾಡಿದ್ದಾರೆಂದು ದೂರು ದಾಖಲಾಗಿದೆ. ಇದರ ವಿಚಾರಣೆಯಲ್ಲಿ ರಾಹುಲ್ ಪರ ವಕೀಲರೂ ಹಾಜರಿರದಿದ್ದರಿಂದ ಖುದ್ದು ಹಾಜರಾತಿಗೆ ನ್ಯಾಯಾಲಯ ಸೂಚಿಸಿದೆ.

ನ್ಯಾ.ಗವಾಯಿ ನಿವೃತ್ತಿ, ಸೂರ್ಯಕಾಂತ್ ಸಿಜೆಐ

ದೆಹಲಿ: ಭಾರತದ 52ನೇ ಮುಖ್ಯ ನ್ಯಾಯಮೂರ್ತಿ

ನ್ಯಾ. ಬಿ. ಆರ್. ಗವಾಯಿ ಭಾನುವಾರ ನಿವೃತ್ತರಾದರು. ಸುಪ್ರೀಂ ಕೋರ್ಟ್‌ನ ನೂತನ ಹಾಗೂ 53ನೇ ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾ. ಸೂರ್ಯಕಾಂತ್ ಸೋಮವಾರ ಅಧಿಕಾರ ಸ್ವೀಕರಿಸಲಿದ್ದಾರೆ. ನ್ಯಾ.ಸೂರ್ಯಕಾಂತ್ ಅವರಿಗೆ 'ಸಿಜೆಐ' ಹುದ್ದೆಯಲ್ಲಿ ಒಟ್ಟು 14 ತಿಂಗಳ ಸೇವಾವಧಿ ಇರಲಿದೆ. 2027ರ ಫೆ.9ರಂದು ಅವರು ಸಿಜೆಐ ಹುದ್ದೆಯಿಂದ ತಮ್ಮ 65ನೇ ವಯಸ್ಸಿಗೆ ನಿವೃತ್ತರಾಗುವರು.

ಬಂಡೀಪುರ ಕಾಡಲ್ಲಿ 1.3 ಕೆಜಿ ಚಿನ್ನ ದರೋಡೆ

ಚಾಮರಾಜನಗರ: ಬಂಡೀಪುರ ಅರಣ್ಯಪ್ರದೇಶ

ದಲ್ಲಿ ದರೋಡೆಕೋರರು ಕೇರಳ ಮೂಲದ ಚಿನ್ನದ ವ್ಯಾಪಾರಿಗಳಿಂದ 1.3 ಕೆಜಿ ಚಿನ್ನ ದರೋಡೆ ಮಾಡಿದ್ದಾರೆ. ಚಿನ್ನದ ವ್ಯಾಪಾರಿಗಳು ಬಂಡೀಪುರದ ಮೂಲಕ ಕೇರಳಕ್ಕೆ ಹೊರಟಿದ್ದರು. ಕಾರಿನ ಹ್ಯಾಂಡ್ ಬ್ರೇಕ್ ಸ್ಥಳದ ಬಳಿ 1.2 ಕೆಜಿ ಚಿನ್ನ ಇಟ್ಟಿದ್ದರು. ಸಿನಿಮಾ ಶೈಲಿಯಲ್ಲಿ ಸ್ಥಳಕ್ಕೆ ಬಂದ ಗ್ಯಾಂಗ್ ವಾಹನವನ್ನು ಕಾರಿಗೆ ಡಿಕ್ಕಿ ಹೊಡೆಸಿ, ಚಿನ್ನವನ್ನು ಲೂಟಿ ಮಾಡಿದೆ. ಗುರುವಾರ ರಾತ್ರಿ ದರೋಡೆ ನಡೆದಿದೆ. ತಡವಾಗಿ ದೂರು ನೀಡಲಾಗಿದೆ.

6.45 ಕೋಟಿ ರು. ಜಪ್ತಿ | ಪೊಲೀಸರಿಗೆ ಪ್ರಶಸ್ತಿ
ಲೂಟಿ ಹಣ ಬಹುತೇಕ ವಾಪಸ್

ಬೆಂಗಳೂರು: ಎಟಿಎಂ ಯಂತ್ರಗಳಿಗೆ ತುಂಬಿಸಲು ಕೊಂಡೊಯ್ಯುತ್ತಿದ್ದ 7.11 ಕೋಟಿ ರು.ಹಣ ದರೋಡೆ ಪ್ರಕರಣದ ಮೂವರು ಆರೋಪಿಗಳನ್ನು ಬೆಂಗಳೂರು ದಕ್ಷಿಣ ವಿಭಾಗದ ಪೊಲೀಸರು ಬಂಧಿಸಿದ್ದಾರೆ. ಸಿಎಂಎಸ್ ಸೆಕ್ಯುರಿಟೀಸ್ ಕಸ್ಟೋಡಿಯನ್ ವಾಹನದ ಮೇಲ್ವಿಚಾರಕ ರವಿ, ಮಾಜಿ ಉದ್ಯೋಗಿ ಕ್ಸೇವಿಯರ್ ಹಾಗೂ ಗೋವಿಂದಪುರ ಠಾಣೆಯ ಕಾನ್‌ಸ್ಟೇಬಲ್ ಅಣ್ಣಪ್ಪ ನಾಯ್ಕ್ ಎನ್ನುವವರನ್ನು ಬಂಧಿಸಲಾಗಿದೆ. ಹೈದ್ರಾಬಾದ್ ಲಾಡ್ಜ್‌ನಲ್ಲಿ ಮತ್ತೂ ಮೂವರು ಬಲೆಗೆ ಬಿದ್ದಿದ್ದಾರೆ.

ಬಂಧಿತರಿಂದ 6.45 ಕೋಟಿ ರು. ಹಣ ವಶಕ್ಕೆ ಪಡೆಯಲಾಗಿದೆ. ಇನ್ನೂ 84 ಲಕ್ಷ ರು. ಮರಳಬೇಕಿದೆ. ಪ್ರಕರಣ ವರದಿಯಾದ 54 ಗಂಟೆಗಳೊಳಗೆ 6 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮೂರು ತಿಂಗಳಿಂದ ದರೋಡೆಗೆ ಸಂಚು: ಮೂರು ತಿಂಗಳಿಂದ ದರೋಡೆಗೆ ಸಂಚು ರೂಪಿಸಿದ್ದ ಆರೋಪಿಗಳು, ಕೃತ್ಯಕ್ಕೆ 15 ದಿನಗಳಿಂದಲೂ ಸ್ಥಳ ನಿಗದಿ ಮಾಡಿದ್ದರು. ನ.19ರಂದು 12:48ರ ಸುಮಾರಿಗೆ ನಕಲಿ ನಂಬರ್ ಪ್ಲೇಟ್ ಅಳವಡಿಸಿದ ಕಾರಿನಲ್ಲಿ ಅಶೋಕ ಪಿಲ್ಲರ್, ಜಯನಗರ, ಡೇರಿ ಸರ್ಕಲ್ ಮಾರ್ಗದಲ್ಲಿ ಬಂದು, ಕಸ್ಟೋಡಿಯನ್ ವಾಹನವನ್ನು ಅಡ್ಡಗಟ್ಟಿ ತಾವು ಆರ್‌ಬಿಐ ನಿಯಂತ್ರಣಾಧಿಕಾರಿಗಳೆಂದು ಭದ್ರತಾ ಸಿಬ್ಬಂದಿ ಹಾಗೂ ಕಸ್ಟೋಡಿಯನ್ ಸಿಬ್ಬಂದಿಯನ್ನು ಕೆಳಗಿಳಿಸಿದ್ದರು.

ಜಿ20 ರಾಷ್ಟ್ರಗಳ ಶೃಂಗಸಭೆಯಲ್ಲಿ ಭಾರತದ ಪ್ರಧಾನಿ ಭಾಷಣ | ಉಗ್ರ ಆರ್ಥಿಕತೆ ಮಟ್ಟ ಹಾಕಲು ಕರೆ
ಉಗ್ರ-ಉದ್ದೀಪನ ಜಾಲ ನಿಗ್ರಹಕ್ಕೆ ಮೋದಿ ಆಗ್ರಹ

ಜೊಹಾನ್ಸ್‌ಬರ್ಗ್ (ದ.ಆಫ್ರಿಕಾ): ಇಲ್ಲಿ ಆರಂಭವಾಗಿರುವ ಜಿ20 ರಾಷ್ಟ್ರಗಳ ಶೃಂಗಸಭೆಯಲ್ಲೂ ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಉಗ್ರ-ಉದ್ದೀಪನ ಜಾಲ ನಿಗ್ರಹಕ್ಕೆ ಕರೆ ನೀಡಿದರು. ಸಭೆಯಲ್ಲಿ ನಾಲ್ಕು ಸೂತ್ರಗಳನ್ನು ಪ್ರಸ್ತಾಪಿಸಿದ ಮೋದಿ, ಒಂದು ಸೂತ್ರದಲ್ಲಿ ಉಗ್ರರು-ಮಾದಕದ್ರವ್ಯ ಜಾಲವನ್ನು ಹೊಸಕಿಹಾಕಲು ಒಂದಾಗಬೇಕೆಂದು ಕರೆ ನೀಡಿದರು.

ಜಿ20 ಶೃಂಗದ ಮೊದಲ ಅವಧಿಯಲ್ಲಿ ಎಲ್ಲರನ್ನೂ ಒಳಗೊಂಡ ಸ್ಥಿರ ಅಭಿವೃದ್ಧಿ ಬಗ್ಗೆ ಮಾತುಕತೆಯಿತ್ತು. ಈ ವೇಳೆ ಪ್ರಧಾನಿ ಜಾಗತಿಕ ಪಾರಂಪರಿಕ ಜ್ಞಾನಭಂಡಾರ ಸ್ಥಾಪನೆ, ಆಫ್ರಿಕಾದ ಕೌಶಲ್ಯವೃದ್ಧಿ ಕಾರ್ಯಯೋಜನೆ, ಜಾಗತಿಕ ಆರೋಗ್ಯ ಕಾಳಜಿ ತಂಡ, ಉಗ್ರ-ಉದ್ದೀಪನ ಜಾಲ ಭೇದಿಸಲು ಕಾರ್ಯಸೂಚಿ... ಈ ನಾಲ್ಕು ಅಂಶಗಳನ್ನಿಟ್ಟುಕೊಂಡು ಮಾತನಾಡಿದರು.

ಜಿ20 ಜಾಗತಿಕ ಪಾರಂಪರಿಕ ಜ್ಞಾನಭಂಡಾರ ಸ್ಥಾಪನೆ ಇಂದಿನ ಅವಶ್ಯಕತೆ. ಕಾಲನ ಪರೀಕ್ಷೆಯಲ್ಲಿ ಉಳಿದು ಬಂದಿರುವ ಪಾರಂಪರಿಕ ಜ್ಞಾನ ಮಾದರಿಗಳನ್ನು ದಾಖಲೀಕರಿಸಬೇಕು. ಅವು ಭವಿಷ್ಯದ ಜನಾಂಗಕ್ಕೆ ಸಿಗಲು ನೆರವಾಗಬೇಕು. ಭಾರತ ಅಂತಹ ಶ್ರೀಮಂತ ಪರಂಪರೆ ಹೊಂದಿದೆ. → 4

ಅಮೆರಿಕವನ್ನು ಲೆಕ್ಕಿಸದೇ ನಿರ್ಣಯಕ್ಕೆ ಅನುಮೋದನೆ ವಿವರ ಪುಟ 8

ಆಸ್ಟ್ರೇಲಿಯಾ-ಕೆನಡಾ-ಭಾರತ ತಂತ್ರಜ್ಞಾನ ಒಪ್ಪಂದ

ಜಿ20 ಸಭೆಯ ವೇಳೆ ಮೋದಿ ಆಸ್ಟ್ರೇಲಿಯಾದ ಪ್ರಧಾನಿ ಆ್ಯಂಟೋನಿ ಆಲ್ಬನೀಸ್, ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿಯೊಂದಿಗೆ ಮಾತುಕತೆ ನಡೆಸಿದರು. ಈ ಮೂರು ದೇಶಗಳು ಒಗ್ಗೂಡಿ ತಂತ್ರಜ್ಞಾನ-ನವಶೋಧ ನಡೆಸಲು ತೀರ್ಮಾನಿಸಿವೆ. ಸುಗಮ ಪೂರೈಕೆ, ಪರಿಶುದ್ಧ ಇಂಧನ, ಎಐ ಬಳಕೆಯೂ ಸೇರಿ ಹಲವು ಉದ್ದೇಶಗಳನ್ನು ಇದು ಹೊಂದಿದೆ. ಮೋದಿ ಟ್ವೀಟ್ ಮೂಲಕ ಪ್ರಕಟಿಸಿದ್ದಾರೆ.

ಮೋದಿ ಹೇಳಿದ್ದೇನು?

- ಜಾಗತಿಕ ಪಾರಂಪರಿಕ ಜ್ಞಾನಭಂಡಾರ ಸ್ಥಾಪಿಸಬೇಕು
- ಆಫ್ರಿಕಾ ಖಂಡದಲ್ಲಿ ಕೌಶಲ್ಯವೃದ್ಧಿಗೆ ನೆರವಾಗಬೇಕು
- ಜಾಗತಿಕ ಆರೋಗ್ಯ ಬಿಕ್ಕಟ್ಟು, ಪ್ರಕೃತಿ ವಿಕೋಪ ನಿಗ್ರಹಕ್ಕೆ ತಂಡ ಬೇಕು
- ಉಗ್ರ-ಉದ್ದೀಪನ ಆರ್ಥಿಕ ಜಾಲ ಹಣಿಯಬೇಕು

ಲಾಂಗ್ ಹಿಡಿದು ಆತಂಕ ಸೃಷ್ಟಿಸಿದ್ದ ವ್ಯಕ್ತಿ ಬಂಧನ

ಮಧುಗಿರಿ: ಲಾಂಗ್ ಹಿಡಿದು ಆತಂಕ ಸೃಷ್ಟಿಸಿದ್ದ ವ್ಯಕ್ತಿಯ ಬಂಧನ. ತಾಲೂಕಿನ ಬೇಡತ್ತೂರು ಗ್ರಾಮದಲ್ಲಿ ಘಟನೆ ನಡೆದಿದೆ.ದೇವರಾಜು ಬಂಧನಕ್ಕೊಳಗಾದ ವ್ಯಕ್ತಿ. ಮದ್ಯಪಾನ ಮಾಡಿ ಲಾಂಗ್ ಹಿಡಿದು ಓಡಾಡುತ್ತಿದ್ದ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಎಸ್ಪಿ ಅಶೋಕ್ ಸೂಚನೆ ಮೇರೆಗೆ ಮಿಡಿಗೇಶಿ ಪೊಲೀಸರು ದೇವರಾಜುನನ್ನು ಬಂಧಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹೆಸರು ಬದಲಾವಣೆ

ನಾನು, ಶ್ರೀಮತಿ ನಿರ್ಮಲಾ ಮಠದ (ಹೊಸ ಹೆಸರು) ಕೋಂ ಶಂಭುಲಿಂಗ ಮಠದ, ನಂ. 1496, ಸಾತಗಳ್ಳಿ ಬಡಾವಣೆ, ನಜರ್‌ಬಾದ್, ಶಕ್ತಿನಗರ ಅಂಚೆ, ಮೈಸೂರು–570029 ಇಲ್ಲಿ ವಾಸವಾಗಿದ್ದು ನನ್ನ ಹೆಸರನ್ನು ನಿರ್ಮಲಾ ಹೆಬ್ಬಾಳ ಹಿರೇಮಠ (ಹಳೆ ಹೆಸರು) ದಿಂದ ನಿರ್ಮಲಾ ಮಠದ (ಹೊಸ ಹೆಸರು) ಎಂದು ಬದಲಾಯಿಸಿದೆ. ಸದರಿ ಬದಲಾವಣೆಯನ್ನು ನೋಟರಿ ಶ್ರೀ ಸತೀಶ ಎಂ.ಕೆ. ಇವರ ಮುಂದೆ ದಿನಾಂಕ 20 ನವೆಂಬರ್ 2025 ರಂದು ಅಫಿಡವಿಟ್‌ನಲ್ಲಿ ನಮೂದಿಸಿ ಪ್ರಮಾಣೀಕರಿಸಿರುತ್ತೇನೆ.

IN THE COURT OF CIVIL JUDGE & J.M.F.C. AT KORATAGERE
C.Mis No: 205/ 2025
Petitioners; K.P. Ramesh and anothers
V/s
Respondents: Thasildar,
PUBLIC NOTIFICAION
The petitioner in the above case, have filed this petition against the present respondent seeking direction of the hon'ble court for registration of dates of death of of one Siddamma w/o Gurusiddaiah, the mother of the p2 and p3 as well as mother in law of p1 who has died on 12-08-1968, in hir house at Shanthalingaiahnapalaya Village, Holavanahalli Hobli, Koratagere Taluk. and any person interested or having objections for the same may appear on; 03-01-2026 before the Hon'ble court at 11-00 A.M.
By order of the court
Sd/-,Shirastedar
Civil judge & J.M.F.C.court
Koratagere.
C.N.Hanumanthraju. B.com.LL.B.
Adv. For petitioner.
Koratagere.

ಸಾಹೇ ವಿಶ್ವವಿದ್ಯಾಲಯದ 14ನೇ ಘಟಿಕೋತ್ಸವ | ಸಂಸದ ಜಯರಾಮ್ ರಮೇಶ್

ಶೇ.60ರಷ್ಟು ಹೆಣ್ಣು ಮಕ್ಕಳಿಗೆ ಶಿಕ್ಷಣ, ಹೆಮ್ಮೆ

ತುಮಕೂರು: ಸಹ ಶಿಕ್ಷಣ ಕೊಡುತ್ತಿರುವ ಶಿಕ್ಷಣ ಸಂಸ್ಥೆಯಾದ ಸಿದ್ಧಾರ್ಥ ಸಂಸ್ಥೆಯಲ್ಲಿ ಶೇ.60ರಷ್ಟು ಹೆಣ್ಣು ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ ಎನ್ನುವುದು ಹೆಮ್ಮೆಯ ಸಂಗತಿ ಎಂದು ಸಂಸದ ಜಯರಾಮ್ ರಮೇಶ್ ತಿಳಿಸಿದರು.

ನಗರದ ಅಗಳಕೋಟೆಯ ಶಿಕ್ಷಣ ಭೀಷ್ಮ ಡಾ.ಎಚ್.ಎಮ್.ಗಂಗಾಧರಯ್ಯ ಸ್ಮಾರಕ ಭವನದ ವಿಶಾಲ ವೇದಿಕೆಯಲ್ಲಿ ಸಾಹೇ (ಶ್ರೀ ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್‌ಎಜುಕೇಷನ್) ಆಯೋಜಿಸಿದ್ದ 14ನೇ ಘಟಿಕೋತ್ಸವದಲ್ಲಿ ಮಾತನಾಡಿ, ಮಹಿಳಾ ವಿಶ್ವವಿದ್ಯಾಲಯ ಮತ್ತು ಸಂಸ್ಥೆಗಳಲ್ಲಿ ಕೇವಲ ಹೆಣ್ಣು ಮಕ್ಕಳೇ ಶಿಕ್ಷಣ ಪಡೆಯುವುದು ಹೆಚ್ಚುಗಾರಿಕೆಯಲ್ಲ, ಸಹ ಶಿಕ್ಷಣ ನೀಡುತ್ತಿರುವ ಸಂಸ್ಥೆಯಲ್ಲಿ ಮೂರನೆ ಎರಡು ಭಾಗದಷ್ಟು ಹೆಣ್ಣು ಮಕ್ಕಳು ಶಿಕ್ಷಣ ಪಡೆಯುತ್ತಿರುವುದು ಶ್ಲಾಘನೀಯ ಎಂದರು. ಅಸಮಾನತೆ ಎಂಬುದು ನಮ್ಮ ದೇಶದ ಅಭಿವೃದ್ಧಿಗೆ ಬೀಳುತ್ತಿರುವ ದೊಡ್ಡ ಪೆಟ್ಟು. ಶಿಕ್ಷಣ, ಆರೋಗ್ಯ, ಆರ್ಥಿಕ, ಆದಾಯಗಳಂತಹ ಕ್ಷೇತ್ರದಲ್ಲಿ ಪ್ರಮುಖವಾಗಿ ಅಸಮಾನತೆ ಹೆಚ್ಚಾಗಿದೆ. ಭಾರತದಲ್ಲಿ ಬಡತನ ಕಡಿಮೆಯಾಗಿದೆ ಆದರೆ ಅಸಮಾನತೆ ಹೆಚ್ಚಾಗಿದೆ, ಆದ್ದರಿಂದ ಅಸಮಾನತೆಯ ಸಾಮಾಜಿಕ ವ್ಯವಸ್ಥೆ ಬದಲಾಗಬೇಕಿದೆ ಎಂದು ಪದವಿ ಪಡೆದ ವಿದ್ಯಾರ್ಥಿಗಳಿಗೆ ಸಂದೇಶ ನೀಡಿದರು.

ಜಪಾನ್, ಯುರೋಪ್ ದೇಶಗಳಲ್ಲಿ ಜನಸಂಖ್ಯೆ ಕಡಿಮೆಯಾಗಿದ್ದು, ಚೀನಾ ಜನಸಂಖ್ಯೆ ಸುಸ್ಥಿರವಾಗಿದೆ. ಈಗಾಗಲೇ ಭಾರತ 1.5 ಬಿಲಿಯನ್ ಜನಸಂಖ್ಯೆ ಹೊಂದಿದ್ದು, 2050ರ ವೇಳೆಗೆ 300 ಮಿಲಿಯನ್ನೆ ಏರಲಿದೆ. ಆದ ಕಾರಣ ಮುಂದಿನ ಪೀಳಿಗೆಯ ಭವಿಷ್ಯಕ್ಕೆ ಪರಿಸರವನ್ನು ಕಾಪಾಡುವುದು ಮತ್ತು ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಘಟಿಕೋತ್ಸವದಲ್ಲಿ ಪಾವಗಡದ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಸಂಸ್ಥಾಪಕ ಶ್ರೀ ಸ್ವಾಮಿ ಜಪಾನಂದಜಿ ಮಹಾರಾಜ್ ಹಾಗೂ ಭಾರತೀಯ ವಿಜ್ಞಾನ ಸಂಸ್ಥೆಯ ಏರೋಸ್ಪೇಸ್ ಇಂಜಿನಿಯರಿಂಗ್ನ ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಕೆ.ಪಿ.ಜೆ.ರೆಡ್ಡಿ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು.

ಸಾಹೇ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಜಿ.ಪರಮೇಶ್ವರ್,ಸಾಹೇ ವಿಶ್ವವಿದ್ಯಾಲಯದ 14ನೇ ಘಟಿಕೋತ್ಸವದಲ್ಲಿ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕೋರ್ಸ್ ಗಳ ಒಟ್ಟು 1086 ಮಂದಿಗೆ ಪದವಿ ಪ್ರದಾನ ಮಾಡಿದರು.

14 ಮಂದಿಗೆ ಪಿಎಚ್.ಡಿ ಪದವಿ, ವೈದ್ಯಕೀಯದಲ್ಲಿ 03, ದಂತ ವೈದ್ಯಕೀಯದಲಿ02, ಮತ್ತು ಇಂಜಿನಿಯರಿಂಗ್ ನಲ್ಲಿ 8 ಮಂದಿ ಸೇರಿದಂತೆ ಒಟ್ಟು 15 ಮಂದಿಗೆ ಚಿನ್ನದ ಪದಕ ಪ್ರದಾನ ಮಾಡಿದರು. ಇದೇ ವೇಳೆ ಇಬ್ಬರಿಗೆ ಫೆಲೋಶಿಪ್ ನೀಡಿದ್ದು ಈ ಬಾರಿ ಘಟಿಕೋತ್ಸವದ ವಿಶೇಷವಾಗಿತ್ತು.

ಸಾಹೇ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ಕೆ ಬಿ ಲಿಂಗೇಗೌಡ ವರದಿಯನ್ನು ಮಂಡಿಸಿದರು ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಟ್ರಸ್ಟಿಗಳಾದ ಕನ್ನಿಕಾ ಪರಮೇಶ್ವರಿ ಮತ್ತು ಡಾ.ಜಿ.ಎಸ್.ಆನಂದ್ ಅತಿಥಿಗಳಾಗಿದ್ದರು ಕುಲಸಚಿವ ಡಾ. ಅಶೋಕ್ ಮೆಹತಾ, ಪರೀಕ್ಷಾಂಗ ವಿಭಾಗದ ನಿಯಂತ್ರಕ ಡಾ. ಗುರುಶಂಕರ್‌ಸಿ, ಡೆಂಟಲ್ ಕಾಲೇಜಿನ ಪ್ರಾಂಶುಪಾಲ ಡಾ. ಬಿ. ಪ್ರವೀಣ್ ಕುಡುವ, ವೈದ್ಯಕೀಯ ಕಾಲೇಜಿನ ಉಪ ಪ್ರಾಂಶುಪಾಲ ಡಾ.ಪ್ರಭಾಕರ್‌ಜಿ ಎನ್, ಉಪ ಕುಲಸಚಿವ ಡಾ.ಸುದೀಪ್ ಕುಮಾರ್, ಪ್ರಾಂಶುಪಾಲ ಡಾ ದಿವಾಕರ್,ಶ್ರೀ ಸಿದ್ಧಾರ್ಥ ತಾಂತ್ರಿಕ ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಎಸ್. ರವಿಪ್ರಕಾಶ, ಕುಲಾಧಿಪತಿಗಳ ಸಲಹೆಗಾರ ಡಾ.ವಿವೇಕ್ ವೀರಯ್ಯ ಇದ್ದರು.

ತುಮಕೂರಿನ ಸಾಹೇ ವಿಶ್ವವಿದ್ಯಾಲಯದ 14ನೇ ಘಟಿಕೋತ್ಸವದಲ್ಲಿ ಸಾಧಕ ವಿದ್ಯಾರ್ಥಿಗಳಿಗೆ ಚಿನ್ನದ ಪದಕ – ಪದವಿ ಪ್ರದಾನ ಮಾಡಲಾಯಿತು.

ಗ್ರಾಮೀಣ ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ವಿಶ್ವವಿದ್ಯಾಲಯ

ಗೌರವ ಡಾಕ್ಟರೇಟ್ ಸ್ವೀಕರಿಸಿ ಮಾತನಾಡಿದ, ಏರೋಸ್ಪೇಸ್ ನ ವಿಶ್ರಾಂತ ಪ್ರಾಧ್ಯಾಪಕರಾದ ಕೆ. ಪಿ. ಜೆ ರೆಡ್ಡಿ , ಜಾಗತಿಕವಾಗಿ ಗುರುತಿಸಿಕೊಂಡಿರುವ ಸಾಹೇ ವಿಶ್ವವಿದ್ಯಾಲಯದಿಂದ ಗೌರವ ಲಭಿಸಿರುವುದು ಸಂತಸದ ವಿಷಯ. ಇದಕ್ಕೆ ಸಂಸ್ಥೆಗೆ ಅಭಾರಿಯಾಗಿದ್ದೇನೆ ಎಂದರು. ಭಾರತ ದೇಶದಲ್ಲಿ ಹೆಚ್ಚು ಪಾಲು ಹೆಣ್ಣು ಮಕ್ಕಳಿದ್ದಾರೆ. ಅಂತಹ ಹೆಣ್ಣು ಮಕ್ಕಳಿಗೆ ಸರಿಯಾದ ಶಿಕ್ಷಣ ನೀಡುವುದು ನಮ್ಮ ಮುಂದಿರುವ ಸವಾಲಾಗಿದೆ. ಗ್ರಾಮೀಣ ಭಾಗದ ಹೆಣ್ಣು ಮಕ್ಕಳಿಗಾಗಿ ಗ್ರಾಮೀಣ ಭಾಗದಲ್ಲೇ ವಿಶ್ವವಿದ್ಯಾಲಯ ತೆರೆಯುವ ಆಶಯವಿದ್ದು ಮುಂದಿನ ದಿನಗಳಲ್ಲಿ ಅದು ಸಾಧ್ಯವಾಗಲಿದೆ ಎಂದರು.

ಲಕ್ಷ ದೀಪೋತ್ಸವ ನ.24 ರಂದು

ಕೊರಟಗೆರೆ: ತಾಲೂಕಿನ ಮಾವತ್ತೂರುಗ್ರಾಮದ ವಿಘ್ನೇಶ್ವರಸ್ವಾಮಿ, ಶ್ರೀ ಅರಸೇಶ್ವರಿದೇವಿ, ಬೈಲಾಂಜನೇಯ ಮತ್ತುಕೆಂಪಮ್ಮದೇವಿ, ಚಾಮುಂಡೇಶ್ವರಿ ದೇವರುಗಳಿಗೆ ಗಂಗಾರತಿ ಹಾಗೂ ಲಕ್ಷ ದೀಪೋತ್ಸವ ಕಾರ್ಯಕ್ರಮವನ್ನ ನ.24ರಂದು ಹಮ್ಮಿಕೊಳ್ಳಲಾಗಿದೆ ಎಂದು ವಿಘ್ನೇಶ್ವರ ಸೇವಾ ಸಮಿತಿ ಪದಾಧಿಕಾರಿಗಳು ತಿಳಿಸಿದ್ದಾರೆ. ನ.24ರ ಸೋಮವಾರ ತಾಲೂಕಿನ ಮಾವತ್ತೂರು ಗ್ರಾಮದ ಐದು ದೇವರುಗಳಿಗೆ ಬೆಳಿಗ್ಗೆಯಿಂದ ಅಭಿಷೇಕ, ಪಂಚಾಮೃತ, ಹೂವಿನ ಅಲಂಕಾರ, ದೀಪಾಲಂಕಾರವನ್ನ ಏರ್ಪಡಿಸಲಾಗಿದೆ. ಸಂಜೆ ಲಕ್ಷದೀಪೋತ್ಸವ ಪ್ರಾರಂಭವಾಗುವುದು, ನಂತರ ಬರುವ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಲಾಗಿದೆ. ರಾತ್ರಿ 8 ಗಂಟೆಗೆ ವಿ.ಎನ್.ಇವೆಂಟ್ನ ನಟರಾಜು ಇವರಿಂದ ಸಂಗೀತ ರಸಸಂಜೆ ಕಾರ್ಯಕ್ರಮವನ್ನ ಹಮ್ಮಿಕೊಳ್ಳಲಾಗಿದೆ.

ಉತ್ತಮ ವ್ಯಕ್ತಿತ್ವದ ಮನುಷ್ಯರನ್ನ ರೂಪಿಸೋಣ

ಸತ್ಯ ಸಾಯಿ ಗ್ರಾಮದಲ್ಲಿ ನಡೆದ ವಿಶ್ವ ಸಾಂಸ್ಕೃತಿಕ ಮಹೋತ್ಸವ ಸಮಾರಂಭದಲ್ಲಿ ಸದ್ಗುರು ಶ್ರೀ ಮಧುಸೂದನ ಸಾಯಿ ಮಾತನಾಡಿದರು.

ಚಿಕ್ಕಬಳ್ಳಾಪುರ: ಎಲ್ಲರ ಹೃದಯಗಳಲ್ಲಿ ಮಾನವೀಯತೆ, ಪ್ರೀತಿಯ ದೀಪಗಳನ್ನು ಬೆಳಗಿಸಬೇಕು ಎಂದು ಸದ್ಗುರು ಶ್ರೀ ಮಧುಸೂದನ ಸಾಯಿ ಹೇಳಿದರು.

ತಾಲೂಕಿನ ಸತ್ಯ ಸಾಯಿ ಗ್ರಾಮದಲ್ಲಿ ''ಒಂದು ಜಗತ್ತು ಒಂದು ಕುಟುಂಬ ವಿಶ್ವ ಸಾಂಸ್ಕೃತಿಕ ಮಹೋತ್ಸವ''ದ ಭಾಗವಾಗಿ ಆರಂಭವಾಗಿರುವ 3 ದಿನಗಳ ವಿಶ್ವ ಧಾರ್ಮಿಕ ಶೃಂಗಸಭೆಯಲ್ಲಿ ಆಶೀರ್ವಚನ ನೀಡಿದರು. ಉತ್ತಮ ವ್ಯಕ್ತಿತ್ವದ ಮನುಷ್ಯರನ್ನು ರೂಪಿಸುವುದೇ ''ಒಂದು ಜಗತ್ತು. ಒಂದು ಕುಟುಂಬ ಮಿಷನ್''ನ ಧ್ಯೇಯವಾಗಿದೆ ಎಂದರು. ಒಬ್ಬ ಹಿಂದೂ ಉತ್ತಮ ಹಿಂದೂವಾಗಿ, ಒಬ್ಬ ಮುಸ್ಲಿಂ ವ್ಯಕ್ತಿ ಉತ್ತಮ ಮುಸ್ಲಿಂ ಆಗಿ, ಒಬ್ಬ ಕ್ರಿಶ್ಚಿಯನ್ ಉತ್ತಮ ಕ್ರಿಶ್ಚಿಯನ್ ಆಗಿ ಇರುವುದು ಹೇಗೆ ಎಂದು ತೋರಿಸಲು ನಾವೆಲ್ಲರೂ ಇಲ್ಲಿದ್ದೇವೆ. ಭಗವಾನ್ ಸತ್ಯ ಸಾಯಿ ಬಾಬಾ ಅವರ ಉದ್ದೇಶ ಇದೇ ಆಗಿತ್ತು ಎಂದು ಅಭಿಪ್ರಾಯಪಟ್ಟರು.

ಸತ್ಯ ಸಾಯಿ ಬಾಬಾ ಅವರ 100ನೇ ಜನ್ಮ ಶತಮಾನೋತ್ಸವದ ಅಂಗವಾಗಿ ವಿಶ್ವ ಸಾಂಸ್ಕೃತಿಕ ಉತ್ಸವ ವಿಶ್ವ ಧಾರ್ಮಿಕ ಶೃಂಗಸಭೆಯೊಂದಿಗೆ ಮುಕ್ತಾಯವಾಗುತ್ತಿದೆ. ಈ ಶೃಂಗಸಭೆಯಲ್ಲಿ ಭಾಗವಹಿಸಿದ ಎಲ್ಲರಿಗೂ ನಾನು ತುಂಬಾ ಕೃತಜ್ಞನಾಗಿದ್ದೇನೆ ಎಂದು ಹೇಳಿದರು.

ಸರ್ವ ದಾರ್ಶನಿಕರ ಜಯಂತಿ ನ.26ರಂದು

ಚಿಕ್ಕನಾಯಕನಹಳ್ಳಿ: ಜಾತಿ – ಜಾತಿ ನಡುವಿನ ಸಂಘರ್ಷವನ್ನು ತೊಡೆದುಹಾಕಿ ನಾವೆಲ್ಲರೂ ಭಾರತಾಂಬೆಯ ಮಕ್ಕಳು ಎಂಬ ಭಾವನೆ ಮೂಡಿಸುವುದೇ ಸರ್ವ ದಾರ್ಶನಿಕರ ಜಯಂತೋತ್ಸವದ ಉದ್ದೇಶ ಎಂದು ಎಂದು ಶಾಸಕ ಸಿ.ಬಿ.ಸುರೇಶ್ ಬಾಬು ತಿಳಿಸಿದರು. ಜಯಂತಿಗಳು ಒಂದು ಜಾತಿಗೆ ಸೀಮಿತವಾಗಬಾರದು, ಬದಲಿಗೆ ಎಲ್ಲರಿಗೂ ತಲುಪಬೇಕು ಎಂಬ ಮಹತ್ವಕಾಂಕ್ಷೆಯಿಂದ ಈ ಕಾರ್ಯಕ್ರಮವನ್ನು ನ.26 ರಂದು ಹಮ್ಮಿಕೊಳ್ಳಲಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಈ ದಿನ ಸಂವಿಧಾನ ಸಮರ್ಪಣಾ ದಿನವಾಗಿರುವುದು ಸೂಕ್ತವಾಗಿದೆ ಎಂದರು.



ಸರ್ವದಾರ್ಶನಿಕರ ಜಯಂತ್ಯೋತ್ಸವದ ನೆನಪಿಗಾಗಿ ತಾಲ್ಲೂಕು ಕಛೇರಿ ಮುಂಭಾಗ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಮಹಾತ್ಮಗಾಂಧೀಜಿಯವರ ಕಂಚಿನ ಪುತ್ಥಳಿ ಅನಾವರಣಗೊಳ್ಳಲಿದೆ. 10.30ಕ್ಕೆ ತಾಲ್ಲೂಕು ಕಛೇರಿಯಿಂದ ಮೆರವಣಿಗೆ ಪ್ರಾರಂಭವಾಗಲಿದೆ. ವೇದಿಕೆ ಕಾರ್ಯಕ್ರಮ ಪ್ರೌಢಶಾಲಾ ಮೈದಾನದಲ್ಲಿ ಬೆಳಗ್ಗೆ 11.30ಕ್ಕೆ ನಡೆಯಲಿದೆ. ಗೃಹ ಸಚಿವ ಡಾ.ಜಿ.ಪರಮೇಶ್ವರ್‌ಕಾರ್ಯಕ್ರಮ ಉದ್ಘಾಟಿಸುವರು. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಡಾ.ಬಿ.ಆರ್.ಅಂಬೇಡ್ಕರ್‌ಪುತ್ಥಳಿ, ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಗಾಂಧೀಜಿ ಪುತ್ಥಳಿ ಅನಾವರಣಗೊಳಿಸಲಿದ್ದಾರೆ. ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಸಾನಿದ್ಯ ವಹಿಸಲಿದ್ದಾರೆ. ಕೇಂದ್ರ ಸಚಿವ ವಿ.ಸೋಮಣ್ಣ, ಶಾಸಕರು ಮತ್ತು ಗಣ್ಯರು ಭಾಗವಹಿಸಲಿದ್ದಾರೆ. ಎಸ್.ಜಿ.ಸಿದ್ದರಾಮಯ್ಯನವರ ನೇತೃತ್ವದಲ್ಲಿ ಸಿದ್ದಪಡಿಸಿದ 600 ಪುಟಗಳ ದಾರ್ಶನಿಕರ ಚರಿತ್ರೆಯ ಗ್ರಂಥವನ್ನು ಹಂಪ ನಾಗರಾಜಯ್ಯ ಬಿಡುಗಡೆಗೊಳಿಸಲಿದ್ದಾರೆ. ಕಾರ್ಯಕ್ರಮದ ಯಶಸ್ಸಿಗೆ ಎಲ್ಲರೂ ಸಹಕರಿಸುವಂತೆ ಶಾಸಕರು ಮನವಿ ಮಾಡಿದರು. ಈ ಸಂದರ್ಭದಲ್ಲಿ ತಹಸೀಲ್ದಾರ್‌ಪುರಂದರ ಬಿಇಒ ಕಾಂತರಾಜು ಇದ್ದರು.

ಗೌರವಾನ್ವಿತ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಕೊರಟಗೆರೆ
ಸೀಮಿಸ್ ಸಂಖ್ಯೆ–399/2025
ಅರ್ಜಿದಾರರು:– ರಾಜಣ್ಣ ಬಿನ್ ಲೇಟ್ ಜ್ವಾಲ್ನಯ್ಯ–62 ವರ್ಷಗಳು,
ವಾಸ:–ಅಕ್ಕಿರಾಂಪುರ ಗ್ರಾಮ,ಹೊಳವನಹಳ್ಳಿ ಹೋಬಳಿ, ಕೊರಟಗೆರೆ ತಾಲ್ಲೂಕು.
ವಿರುದ್ದ
ಎದುರುದಾರರು:– 1.ತಹಸೀಲ್ದಾರ್ ರವರು ಜನನ ಮತ್ತು ಮರಣ ನೊಂದಣಾಧಿಕಾರಿ, ಕೊರಟಗೆರೆ ತಾಲ್ಲೂಕು,
2.ಬ್ರಹ್ಮಪ್ಪ ಬಿನ್ ಲೇಟ್ ಜ್ವಾಲ್ನಯ್ಯ– 58 ವರ್ಷಗಳು, ವಾಸ:–ವಿನಾಯಕ ನಗರ, ತುಮಕೂರು ಟೌನ್, ತುಮಕೂರು ತಾಲ್ಲೂಕು, 3.ಪದ್ಮಲತಾ ಕೋಂ ನಾಗಪದ್ಮನಾಥ– 56 ವರ್ಷಗಳು,
ವಾಸ:–ಚಿಕ್ಕಪೇಟೆ, ಬೆಂಗಳೂರು.
ಸಾರ್ವಜನಿಕ ಪ್ರಕಟಣೆ
ಅರ್ಜಿದಾರರ ಮೊದಲನೇ ತಾತನಾದ ರಾಜಣ್ಣ ಬಿನ್ ಲೇಟ್ ಚಿಕ್ಕಗುಂಡಯ್ಯ ರವರು ದಿನಾಂಕ–11–02–1949 ರಂದು, ಅಜ್ಜಿಯಾದ ಗುಳ್ಳಮ್ಮ ಕೋಂ ರಾಜಣ್ಣರವರು ದಿನಾಂಕ;–02–11–1955 ರಂದು ಮತ್ತು 2ನೇ ತಾತನಾದ ಸೂರಪ್ಪ ಬಿನ್ ಚಿಕ್ಕಗುಂಡಯ್ಯ ರವರು ದಿನಾಂಕ;–04–09–1958 ರಂದು ಹಾಗೂ ಅರ್ಜಿದಾರರ ಚಿಕ್ಕಪ್ಪನಾದ ಗುಟ್ಟಪ್ಪ ಬಿನ್ ಲೇಟ್ ರಾಜಣ್ಣ ರವರು ದಿನಾಂಕ:–09–05–1961 ರಂದು ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಹೊಳವನಹಳ್ಳಿ ಹೋಬಳಿ, ಅಕ್ಕಿರಾಂಪುರ ಗ್ರಾಮದಲ್ಲಿ ಮರಣ ಹೊಂದಿರುವ ಬಗ್ಗೆ ಮರಣ ಸಮರ್ಥನ ಪತ್ರವನ್ನು ಪಡೆಯಲು ಈ ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಮರಣ ಪ್ರಮಾಣ ಪತ್ರವನ್ನು ಅರ್ಜಿದಾರರು ಪಡೆಯಲು ತಕರಾರು ಇದ್ದಲ್ಲಿ ತಾವಾಗಲಿ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲಿ ಈ ನ್ಯಾಯಾಲಯಕ್ಕೆ ದಿನಾಂಕ;– 06–01– –2026 ರಂದು ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ತಮ್ಮ ತಕರಾರು ಸಲ್ಲಿಸುವುದು. ಇಲ್ಲವಾದಲ್ಲಿ ಸದರಿ ಅರ್ಜಿಯನ್ನು ಯಾರ ತಕರಾರು ಇಲ್ಲವೆಂದು ಪರಿಗಣಿಸಿ ತೀರ್ಮಾನ ಮಾಡಲಾಗುವುದು. ಈ ಪ್ರಕಟಣೆಯನ್ನು ದಿನಾಂಕ;–11–11–2025 ರಂದು ನ್ಯಾಯಾಲಯದ ಮೊಹರಿನೊಂದಿಗೆ
ಅನುಮೋದನೆ ನೀಡಲಟ್ಟಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಕೊರಟಗೆರೆ.
ಸಂಜೀವರಾಜು
ಅರ್ಜಿದಾರರ ಪರ ವಕೀಲರು ಕೊರಟಗೆರೆ.

ಅಧಿಕ ಸಿವಿಲ್ ನ್ಯಾಯಾದೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಮಧುಗಿರಿ
ಸೀಮಿಸ್ ಸಂಖ್ಯೆ: 927/2025
ಅರ್ಜಿದಾರರು: 1.ಜ್ಯೋತಿ ಬಿನ್ ಲೇಟ್ ರಾಮಪ್ಪ–ವರ್ಷ, ಐ ಡಿ ಹಳ್ಳಿ ಗರಣಿ ಪೋಸ್ಟ್ ಮಧುಗಿರಿ ,ತಾಲೂಕು,
2.ಭಾರತಿ ಕೋಮ್ ಸಂತೋಷ್ ಕುಮಾರ್ –39 ವರ್ಷ,16 ನೇ ಕ್ರಾಸ್ ಬಗಲಗುಂಟೆ,ಬೆಂಗಳೂರು,
3.ಎನ್ ಶಾರದಾ ಕೋಮ್ ವೇಣುಗೋಪಾಲ್ ಬಿನ್ ಎನ್ ತಿಮ್ಮಪ್ಪ–40 ವರ್ಷ, ತಿರುಮಲದೇವರಪಲ್ಲಿ, ಆಮಲಗುಂದಿ, ಮಡಕಶಿರ ಅನಂತಪುರ, ಆಂಧ್ರಪ್ರದೇಶ.
ವಿರುದ್ಧ
ಎದುರುದಾರರು: 1.ಡೆಪ್ಯೂಟಿ ತಹಶೀಲ್ದಾರ್, ನಾಡಕಛೇರಿ, ಕೊಡಿಗೇನಹಳ್ಳಿ, ಹೋಬಳಿ,ಮಧುಗಿರಿ ತಾಲ್ಲೂಕು ತುಮಕೂರು ಜಿಲ್ಲೆ.
2.ವೇಣುಗೋಪಾಲ ಭಿನ್ ರಾಮಪ್ಪ–50 ವರ್ಷ, ಗುಂಡಗಲ್ ಗ್ರಾಮ, ಕೊಡಿಗೇನಹಳ್ಳಿ ಹೋಬಳಿ ಮಧುಗಿರಿ ತಾಲೂಕು
ಸಾರ್ವಜನಿಕ ಪ್ರಕಟಣೆ
ಮೇಲ್ಕಂಡ 1 ಮತ್ತು 2 ನೇ ಅರ್ಜಿದಾರರ ತಂದೆಯಾದ,3ನೇ ಅರ್ಜಿದಾರರ ಮಾವನಾದ ಶ್ರೀರಾಮಪ್ಪ ಬಿನ್ ಲೇಟ್ ಮೈಲಾರಪ್ಪನವರು 22–10–2022 ರಂದು ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು, ಅರ್ಜಿದಾರರು ಸದರಿ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ–24–12–2025 ರಂದು, ಬೆಳಗ್ಗೆ 11 ಗಂಟೆಗೆ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.
2025 ನೇ ಇಸವಿ ನವೆಂಬರ್ ತಿಂಗಳ 21ನೇ ದಿನ ನ್ಯಾಯಾಲಯದ ಅಪ್ಪಣೆಯ ಮೇರೆಗೆ ನ್ಯಾಯಾಲಯದ ಮೊಹರಿನೊಂದಿಗೆ
ಶಿರಸ್ತೇದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಧುಗಿರಿ
ಆರ್ .ಆನಂದ್
ಅರ್ಜಿದಾರರ ಪರ ವಕೀಲರು ಮಧುಗಿರಿ.

ಅಧಿಕ ಸಿವಿಲ್ ನ್ಯಾಯಾದೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಮಧುಗಿರಿ
ಸೀಮಿಸ್ ಸಂಖ್ಯೆ: 881/2025
ಅರ್ಜಿದಾರರು: 1.ಚಿಕ್ಕಅಂಜಿನಮ್ಮ ಕೋಂ ಲೇಟ್ ಅಂಜಿನಪ್ಪ–68 ವರ್ಷ
2.ಕೃಷ್ಣಮೂರ್ತಿ ಬಿನ್ ಲೇಟ್ ಆಂಜಿನಪ್ಪ –51 ವರ್ಷ
3.ಮಂಗಳ ಬಿನ್ ಲೇಟ್ ಆಂಜಿನಪ್ಪ –48 ವರ್ಷ
4.ಅನಿತ ಬಿನ್ ಲೇಟ್ ಅಂಜಿನಪ್ಪ –46 ವರ್ಷ
5.ರಾಧ ಬಿನ್ ಲೇಟ್ ಅಂಜಿನಪ್ಪ – 40 ವರ್ಷ
6.ಶಿವಕುಮಾರ್ ಕೆ.ಎ. ಬಿನ್ ಲೇಟ್ ಅಂಜಿನಪ್ಪ –40 ವರ್ಷ.
ಮೇಲ್ಕಂಡ ಎಲ್ಲ ಅರ್ಜಿದಾರರು 2ನೇ ಬ್ಲಾಕ್, ಕೊಡಿಗೇನಹಳ್ಳಿ ಗ್ರಾಮ, ಮತ್ತು ಹೋಬಳಿ ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.
ಎದುರುದಾರರು:ಡೆಪ್ಯೂಟಿ ತಹಶೀಲ್ದಾರ್, ನಾಡಕಛೇರಿ, ಕೊಡಿಗೇನಹಳ್ಳಿ, ಹೋಬಳಿ,ಮಧುಗಿರಿ ತಾಲ್ಲೂಕು ತುಮಕೂರು ಜಿಲ್ಲೆ.
ಸಾರ್ವಜನಿಕ ಪ್ರಕಟಣೆ
ಮೇಲ್ಕಂಡ ಒಂದನೇ ಅರ್ಜಿದಾರರ ಅತ್ತೆಯಾದ,2 ರಿಂದ 6ನೇ ಅರ್ಜಿದಾರರ ಅಜ್ಜಿ ಯಾದ ಗಂಗಮ್ಮ ಕೋಮ್ ನರಸಿಂಹಯ್ಯರವರು ದಿನಾಂಕ–26–03–1979 ರಂದು ಮಧುಗಿರಿ ಕೊಡಿಗೇನಹಳ್ಳಿ, ಹೋಬಳಿ, ಕೊಡಿಗೇನಹಳ್ಳಿ, ಗ್ರಾಮದಲ್ಲಿ ಮರಣ ಹೊಂದಿದ್ದು, ಅರ್ಜಿದಾರರು ಸದರಿ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ–22–12–2025 ರಂದು ಬೆಳಗ್ಗೆ 11 ಗಂಟೆಗೆ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.
2025 ನೇ ಇಸವಿ ನವೆಂಬರ್ ತಿಂಗಳ 21ನೇ ದಿನ ನ್ಯಾಯಾಲಯದ ಅಪ್ಪಣೆಯ ಮೇರೆಗೆ ನ್ಯಾಯಾಲಯದ ಮೊಹರಿನೊಂದಿಗೆ
ಶಿರಸ್ತೇದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಧುಗಿರಿ
ಪಿ ಆರ್ ಪಾಂಡುರಂಗಪ್ಪ ಅರ್ಜಿದಾರರ ಪರ ವಕೀಲರು ಮಧುಗಿರಿ.

ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯಲು ಆಗ್ರಹ

ಗೌರಿಬಿದನೂರು: ಜಿಲ್ಲೆಯಲ್ಲಿ ಮೆಕ್ಕೆಜೋಳ ಖರೀದಿ ಕೇಂದ್ರಗಳನ್ನು ತೆರೆದು ರೈತರ ಹಿತ ಕಾಪಾಡಲು ಜಿಲ್ಲಾಡಳಿತ ಮತ್ತು ಸರಕಾರ ಮುಂದಾಗಬೇಕು ಎಂದು ಪುಟ್ಟಣ್ಣಯ್ಯ ಬಣದ ರೈತ ಸಂಘದ ಜಿಲ್ಲಾಧ್ಯಕ್ಷ ನಾರಾಯಣ್ ಆಗ್ರಹಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ನಡೆಸಿದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವಿನ ಸಮನ್ವಯ ಕೊರತೆಯಿಂದಾಗಿ ಮೆಕ್ಕೆಜೋಳ ಬೆಳೆ ಬೆಳೆದ ರೈತರು ಬೀದಿಗೆ ಬಿದ್ದಿದಾರೆ, ಈ ಕೂಡಲೆ ರಾಜ್ಯ ಸರ್ಕಾರ ಮೆಕ್ಕೆಜೋಳ ಖರೀದಿ ಕೇಂದ್ರಗಳನ್ನು ತೆರೆದು ರೈತರ ಹಿತ ಕಾಪಾಡಬೇಕು, ವಿಳಂಬ ಮಾಡಿದರೆ ರೈತರ ಆಕ್ರೋಶವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಈಗಾಗಲೆ ಕೇಂದ್ರ ಸರ್ಕಾರ ಒಂದು ಕ್ವಿಂಟಾಲ್ ಮೆಕ್ಕೆಜೋಳಕ್ಕೆ 2400 ರೂ. ಬೆಂಬಲ ಬೆಲೆಯನ್ನು ಘೋಷಣೆ ಮಾಡಿದ್ದು,ರಾಜ್ಯ ಸರ್ಕಾರವೂ ಇದರ ಜೊತೆಗೆ 600 ರೂ. ಘೋಷಿಸಿ, ಒಟ್ಟು ಮೂರು ಸಾವಿರ ರೂ.ಗೆ ಖರೀದಿಸಬೇಕೆಂದು ಆಗ್ರಹಿಸಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ಲೋಕೇಶ್ ಗೌಡ ಮಾತನಾಡಿ, ಭಾರತ ಸರಕಾರ ಎಪ್ಪತ್ತು ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳವನ್ನು ಅಮದು ಮಾಡಿಕೊಳ್ಳುತ್ತಿದೆ. ಇದರಿಂದಾಗಿ ನಮ್ಮ ರೈತರು ಬೆಳೆಯುವ ಮೆಕ್ಕೆಜೋಳಕ್ಕೆ ಸರಿಯಾದ ಬೆಲೆ ಮಾರುಕಟ್ಟೆಯಲ್ಲಿ ಸಿಗುತ್ತಿಲ್ಲ. ಕೇಂದ್ರ ಸರ್ಕಾರ ಈ ಕೂಡಲೆ ಅಮದು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೆಕ್ಕೆಜೋಳ ಖರೀದಿ ಕೇಂದ್ರಗಳನ್ನು ತೆರೆಯುವ ವಿಚಾರವಾಗಿ ಸ್ಪಷ್ಟತೆ ಇಲ್ಲದ ಮಾಹಿತಿಯನ್ನು ನೀಡಿದ್ದು , ಸರ್ಕಾರ ಹತ್ತು ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳವನ್ನು ಮಾತ್ರ ಖರೀದಿಸಬಹುದಾಗಿದೆ ಎಂದು ಹೇಳಿರುವುದು ರೈತರನ್ನು ಆಘಾತಕ್ಕೆ ಈಡುಮಾಡಿದೆ .ರಾಜ್ಯದಲ್ಲಿ ಸುಮಾರು 55 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಈ ಬಾರಿ ಉತ್ಪತ್ತಿಯಾಗಲಿದೆ ಎಂಬ ಅಂದಾಜು ಇದ್ದು , ಸರ್ಕಾರ ಕೇವಲ ಹತ್ತು ಲಕ್ಷ ಮೆಟ್ರಿಕ್ ಟನ್ ಮಾತ್ರ ಖರೀದಿಸಿದರೆ ಉಳಿದ ಮೆಕ್ಕೆಜೋಳವನ್ನು ಏನು ಮಾಡಬೇಕು ಎಂದು ಸ ಪ್ರಶ್ನಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಜಾ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಆರ್‌ಎನ್.ರಾಜು, ರೈತ ಸಂಘದ ತಾ.ಪ್ರಧಾನ ಕಾರ್ಯದರ್ಶಿ ಸನತ್ ಕುಮಾರ್, ಮುದ್ದುರಂಗಪ್ಪ, ಗೋಪಿ, ಬಾಬು, ವೆಂಕಟೇಶ್, ನರಸಾರೆಡ್ಡಿ. ಇದ್ದರು.

ರೈತ ಸಂಘದ ಜಿಲ್ಲಾಧ್ಯಕ್ಷ ನಾರಾಯಣ್ ರಾಜ್ಯ ರೈತ ಸಂಘ – ಹಸಿರು ಸೇನೆಯ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

IN THE COURT OF THE CIVIL JUDGE & J.M.F.C. AT KORATAGERE
C.Mis No: 395/ 2025.
Petitioners Lakshmamma w/o Late Channabasavaiah, Aged about 65 years. r/o Tharati village, C.N.Durga Hobali, Koratagere Taluk, Tumkur dist.
V/S
Respondents: The Deputy Tahasildhar The Register of birth and death, Nadakacheri, Thovinakere, C.N.Durga hobli, Koratagere taluk, Tumkuru dist.
PUBLIC NOTIFICAION
Whereas the petitioners has filed the above petition to obtain the death certificate of her father-in-law by name **Maribasappa s/o Late Siddaiah** and mother-in-law by name Chikkamma w/o Late Maribasappa at tharati village, C.N.Durga hobli, Koratagere taluk. who were died on 05-10-1994, and 10-08-1976 respectfuly, at her house in the said address It is hereby notify that whoever has interest or objection to obtain the death certificates of the said maribasappa s/o Late Shiddaiah and Chikkamma w/o Late Maribasappa may appear either in person or through your advocate on; 05-01-2026 at 11-00 am in the above case. Failing which the matter will be heard and written in your absence. Given under my hand and seal of the court on this 06-11-2025 at koratagere.
By order of the court
Sd/-,Shirastedar
Civil judge & J.M.F.C.court
Koratagere.
G.D.Devaraju.
Advocate for petitioner.
Koratagere.

IN THE COURT OF THE CIVIL JUDGE & J.M.F.C. AT KORATAGERE
C.Mis No: 393/ 2025.
Petitioners : Lakshmamma w/o Late Channabasavaiah, Aged about 65 years. r/o Tharati village, C.N.Durga Hobali, Koratagere Taluk, Tumkur dist.
V/S
Respondents: The Deputy Tahasildhar The Register of birth and death, Nadakacheri, Thovinakere, C.N.Durga hobli, Koratagere taluk, Tumkuru dist.
PUBLIC NOTIFICAION
Whereas the petitioners has filed the above petition to obtain the death certificate of her grand father by name **Shiddaiah s/o Late Lingaiah,** and grand mother by name **Hanumakka w/o Late Shiddaiah,** at tharati village, C.N.Durga hobli, Koratagere taluk. who were died on 02-02-1948, and 10-03-1955 respectfuly, at her house in the said address It is hereby notify that whoever has interest or objection to obtain the death certificates of the said **Shiddaiah s/o Late Lingaiah** and **Hanumakka w/o Late Shiddaiah,** may appear either in person or through your advocate on; 05-01-2026 at 11-00 am in the above case. Failing which the matter will be heard and written in your absence. Given under my hand and seal of the court on this 06-11-2025 at koratagere.
By order of the court
Sd/-,Shirastedar
Civil judge & J.M.F.C.court
Koratagere.
G.D.Devaraju.
Advocate for petitioner.
Koratagere.

IN THE COURT OF THE CIVIL JUDGE & J.M.F.C. AT KORATAGERE
O.S. NO.09/2024
Plaintiff: Puttashamaih, s/o Late Doddaiah @ Somaiah, aged about 70 years, R/o Bukkapatana village, C.N.Durga hobli, Koratagere Taluk, Tumkuru Dist.
V/S
Defendant; Raghuprasad s/o Late Ranganathappa, aged about 33 years, R/o Bukkapatana village, C.N.Durga hobli, Koratagere Taluk, Tumkuru Dist.
Summons to Defendant;
Whereas the plaintiff above named has instituted the above sit against all of you the defendant for Declaration and permanent injection and for such other relief. You are hereby summoned to appear in this court in person or by a pleader/advocate duly instructed and able to answer relating to the above case on 15-12-2025. At 11-00 a.m. in the forenoon, to answer the case and the day fixed for the final disposal of the case, you must be prepared to produce on that day all the witnesses and all the documents upon which you intend to rely in support of your case. Take notice that, in default if your appearancre on the day before mentioned, the above case will be heard and determined in your absence.
SCHEDULE
The land bearing sy.no 163/2A totally measuring 1.16 guntas, including 0.01 guntas kharsb, out of which 0.35 guntas, assessed at rs 1.33 ps, situated at Bukkapattana village, C.N.Durga hobli, Koratagere taluk, tumkuru dist, Bounded on; East; land of Malleshappa, West; Land of Sunandamma, North; Land of Defendant, South; Roar. Given under my hand and seal of this court on 18-11-2025.
By order of the court
Sd/-,Shirastedar
Civil judge & J.M.F.C.court
Koratagere.
G.D.Devaraju. M.A.LLB.
Advocate
Main Road, Koratagere.

ಅಧಿಕ ಸಿವಿಲ್ ನ್ಯಾಯಾದೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಮಧುಗಿರಿ
ಸೀಮಿಸ್ ಸಂಖ್ಯೆ: 880/2025
ಅರ್ಜಿದಾರರು: 1.ಚಿಕ್ಕಅಂಜಿನಮ್ಮ ಕೋಂ ಲೇಟ್ ಅಂಜಿನಪ್ಪ–68 ವರ್ಷ
2.ಕೃಷ್ಣಮೂರ್ತಿ ಬಿನ್ ಲೇಟ್ ಆಂಜಿನಪ್ಪ –51 ವರ್ಷ
3.ಮಂಗಳ ಬಿನ್ ಲೇಟ್ ಆಂಜಿನಪ್ಪ –48 ವರ್ಷ
4.ಅನಿತ ಬಿನ್ ಲೇಟ್ ಅಂಜಿನಪ್ಪ –46 ವರ್ಷ
5.ರಾಧ ಬಿನ್ ಲೇಟ್ ಅಂಜಿನಪ್ಪ – 40 ವರ್ಷ
6.ಶಿವಕುಮಾರ್ ಕೆ.ಎ. ಬಿನ್ ಲೇಟ್ ಅಂಜಿನಪ್ಪ –40 ವರ್ಷ.
ಮೇಲ್ಕಂಡ ಎಲ್ಲ ಅರ್ಜಿದಾರರು 2ನೇ ಬ್ಲಾಕ್, ಕೊಡಿಗೇನಹಳ್ಳಿ ಗ್ರಾಮ, ಮತ್ತು ಹೋಬಳಿ ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.
ಎದುರುದಾರರು: ಡೆಪ್ಯೂಟಿ ತಹಶೀಲ್ದಾರ್, ನಾಡಕಛೇರಿ, ಕೊಡಿಗೇನಹಳ್ಳಿ, ಹೋಬಳಿ,ಮಧುಗಿರಿ ತಾಲ್ಲೂಕು ತುಮಕೂರು ಜಿಲ್ಲೆ.
ಸಾರ್ವಜನಿಕ ಪ್ರಕಟಣೆ
ಮೇಲ್ಕಂಡ ಒಂದನೇ ಅರ್ಜಿದಾರರ ಮಾವನಾದ ,2 ರಿಂದ 6ನೇ ಅರ್ಜಿದಾರರ ತಾತ ನಾದ ನರಸಿಂಹಯ್ಯ ಬಿನ್ ಬಡಗಿದಾಸಪ್ಪರವರು ದಿನಾಂಕ–19–06–1986 ರಂದು ಮಧುಗಿರಿ ಕೊಡಿಗೇನಹಳ್ಳಿ ಹೋಬಳಿ, ಕೊಡಿಗೇನಹಳ್ಳಿ ಗ್ರಾಮದಲ್ಲಿ ಮರಣ ಹೊಂದಿದ್ದು, ಅರ್ಜಿದಾರರು ಸದರಿ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ–22–12–2025 ರಂದು ಬೆಳಗ್ಗೆ 11 ಗಂಟೆಗೆ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.
2025 ನೇ ಇಸವಿ ನವೆಂಬರ್ ತಿಂಗಳ 21ನೇ ದಿನ ನ್ಯಾಯಾಲಯದ ಅಪ್ಪಣೆಯ ಮೇರೆಗೆ ನ್ಯಾಯಾಲಯದ ಮೊಹರಿನೊಂದಿಗೆ
ಶಿರಸ್ತೇದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಧುಗಿರಿ
ಪಿ ಆರ್ ಪಾಂಡುರಂಗಪ್ಪ ಅರ್ಜಿದಾರರ ಪರ ವಕೀಲರು ಮಧುಗಿರಿ.

ಮಧುಗಿರಿಯ ಅಧಿಕ ಸಿವಿಲ್ ಜಡ್ಜ್ ತ್ತು ಅಧಿಕ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ
ಸೀಮಿಸ್ ಸಂಖ್ಯೆ–963/2025
ಅರ್ಜಿದಾರರು: 1.ನಟರಾಜು ಬಿನ್ ಲೇಟ್ ಶಿವಣ್ಣ–35 ವರ್ಷ
2.ಅಲುವೇಲಮ್ಮ ಕೋಂ ಲೇಟ್ ಶಿವಣ್ಣ–47 ವರ್ಷ, ಉಪ–ತಹಸೀಲ್ದಾರ್ ಪುರವರ
3.ಮಾರುತೀಶ ಬಿನ್ ಲೇಟ್ ಶಿವಣ್ಣ –33 ವರ್ಷ
4.ಲಕ್ಷ್ಮಮ್ಮ ಕೋಂ ಲೇಟ್ ರಾಜಣ್ಣ–50 ವರ್ಷ
5.ಜಯಮ್ಮ ಕೋಂ ಲೇಟ್ ಬೀರಣ್ಣ– 60 ವರ್ಷ
6.ಕೃಷ್ಣಮೂರ್ತಿ ಬಿನ್ ಲೇಟ್ ಕೋಟಿಲಿಂಗಣ್ಣ– 55 ವರ್ಷ
ವಾಸ: ವೀರಾಪುರ ಗ್ರಾಮ, ಮಿಡಿಗೇಶಿ ಹೋಬಳಿ ಮಧುಗಿರಿ ತಾಲ್ಲೂಕು ತುಮಕೂರು ಜಿಲ್ಲೆ.
ವಿರುದ್ಧ
ಎದುರುದಾರರು: ಉಪ ತಹಸೀಲ್ದಾರ್ , ಮಿಡಿಗೇಶಿ ನಾಡಕಚೇರಿ, ಮಧುಗಿರಿ ತಾಲೂಕು.
ಪ್ರಕಟಣೆ
ಈ ಮೇಲಿನ ಪ್ರಕರಣದಲ್ಲಿ 1ನೇ ಅರ್ಜಿದಾರರ ತಾಯಿ, 2 ರಿಂದ 6ನೇ ಅರ್ಜಿದಾರರ ಅತ್ತಿಗೆಯಾ. ನಾಗರತ್ನಮ್ಮ ಕೋಮ್ ಶಿವಣ್ಣ ರವರು ದಿನಾಂಕ:14/05/1991ರಂದು ಮೃತಪಟ್ಟಿರುತ್ತಾರೆಂದು, ಆ ಬಗ್ಗೆ ಮರಣ ದೃಡೀಕರಣ ಪತ್ರವನ್ನು ನೀಡಬೇಕೆಂದು ಘನ ನ್ಯಾಯಾಲಯದಲ್ಲಿ ಅರ್ಜಿಸಲ್ಲಿಸಿದ್ದು, ಈ ಬಗ್ಗೆ ಬೇರೆ ಯಾರಿಗಾದರೂ ತಕರಾರು ಇದ್ದಲ್ಲಿ ದಿನಾಂಕ– 23/12/2025 ರಂದು ಬೆಳಿಗ್ಗೆ 11–00 ಗಂಟೆಗೆ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಲಿ ತಕರಾರು ಸಲ್ಲಿಸತಕ್ಕದ್ದು . ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ದಿನಾಂಕ: 21/ 11/2025 ರಂದು ನ್ಯಾಯಾಲಯದ ಅಪ್ಪಣೆ ಮೇರೆಗೆ ಮೋಹರಿನೊಂದಿಗೆ ನೀಡಿದೆ.
ಶಿರಸ್ತೇದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಮಧುಗಿರಿ.
ಅರ್ಜಿದಾರರ ಪರ ವಕೀಲರು
ಪುಟ್ಟರಾಜು
ವಕೀಲರು. ಮಧುಗಿರಿ.

ಗೌರವಾನ್ವಿತ ಉಪ ವಿಭಾಗಾಧಿಕಾರಿರವರ ನ್ಯಾಯಾಲಯ,ಮಧುಗಿರಿ
ಆರ್ ಆರ್ ಟಿ (ಎ)(ಎಂ): ಸಂಖ್ಯೆ –236/2023
ಮೇಲ್ಮನವಿದಾರರು: 1.ಶ್ರೀ ಚೌಡಪ್ಪ ಬಿನ್ ಲೇಟ್ ದಾಸಣ್ಣ– 78 ವರ್ಷ,
ವಾಸ ದೊಡ್ಡಹೊಸಹಳ್ಳಿ ಗ್ರಾಮ, ಪುರವರ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ
ವಿರುದ್ಧ
ಎದುರುದಾರರು: 1.ನಂಜಮ್ಮ ಕೋಂ ಲೇಟ್ ರಂಗಪ್ಪ–80 ವರ್ಷ
2.ದಾಸಪ್ಪ ಬಿನ್ ಚೌಡಪ್ಪ–80 ವಷ9
3.ಆರ್.ಅಶ್ವತ್ಥಯ್ಯ ಬಿನ್ ಲೇಟ್ ರಾಮಯ್ಯ–60 ವರ್ಷ
4 ರಾಮಕ್ಕ ಬಿನ್ ಲೇಟ್ ರಾಮಯ್ಯ– 65 ವಷ9
5.ಡಿ.ಆರ್ ರಂಗನಾಥ ಬಿನ್ ಲೇಟ್ ರಾಮಯ್ಯ– 70 ವಷ9
6.ರಮೇಶ್ ಡಿ.ಆರ್ ಬಿನ್ ಲೇಟ್ ರಾಮಯ್ಯ– 68 ವರ್ಷ,
7.ಪ್ರಮೀಳ ಬಿನ್ ಲೇಟ್ ರಾಮಯ್ಯ–55 ವರ್ಷ
ಎಲ್ಲರ ವಾಸ– ದೊಡ್ಡಹೊಸಹಳ್ಳಿ ಗ್ರಾಮ,ಪುರವರ ಹೋಬಳಿ, ಮಧುಗಿರಿ ತಾಲ್ಲುಕು ತುಮಕೂರು ಜಿಲ್ಲೆ
ಸಾರ್ವಜನಿಕ ಪುಕಟಣೆ
ಈ ಮೇಲ್ಕಂಡ ಮೇಲ್ಮನವಿಯನ್ನು ಮೇಲ್ಮನವಿದಾರರು ಎದುರುದಾರರ ವಿರುದ್ಧ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲುಕು ಪುರವರ ಹೋಬಳಿ, ದೊಡ್ಡಹೊಸಹಳ್ಳಿ ಗ್ರಾಮದ ಸರ್ವೆನಂಬರ್ 98/3 ಎ1 ಒಟ್ಟು ವಿಸ್ತೀರ್ಣ 31 ಗುಂಟೆ ಪೈಕಿ ಪೂರ್ವ –ಪಶ್ಚಿಮ 15 ಗಜ, ಉತ್ತರ– ದಕ್ಷಿಣ 16 ಗಜ ಜಮೀನಿಗೆ ಸಂಬಂದಿಸಿದಂತೆ ಕುರಿತು ಎಂ.ಆರ್ ಹೆಚ್ 13/2021–22 ರ ವಿರುದ್ಧ ಭೂ ಕಂದಾಯ ಅಧಿನಿಯಮ ಕಲಂ 136 (2) ರ ಅಡಿ ಮೇಲ್ಮನವಿಯನ್ನು ಸಲ್ಲಿಸಿದ್ದು ಸದರಿ ಪ್ರಕರಣದಲ್ಲಿ ಈ ಗೌರವಾನ್ವಿತ ಘನ ನ್ಯಾಯಾಲಯದಿಂದ ಹಲವಾರು ಬಾರಿ ಸಮನ್ಸ್ ನೀಡಿದ್ದು ಜಾರಿಯಾಗದೆ ವಾಪಸ್ಸು ಬಂದಿರುತ್ತದೆ ಅಲ್ಲದೆ ಮೇಲ್ಮನವಿದಾರರು ನೋಂದಾಯಿದ ಅಂಚೆ ಮೂಲಕವು ಸಹ ಸಮನ್ಸ್ ಕಳುಹಿಸಿದ್ದು ,ಅದು ಸಹಾ ಜಾರಿಯಾಗದೆ ವಾಪಸ್ಸು ಬಂದಿರುತ್ತದೆ ಆದ ಕಾರಣ ಸದರಿ ಪತ್ರಿಕಾಪ್ರಕಟಣೆಯನ್ನು ತೆಗೆದುಕೊಳ್ಳಲಾಗಿದೆ. ಆದುದರಿಂದ ಮೇಲ್ಕಂಡ ಎದುರುದಾರರಾದ ನೀವುಗಳು ದಿನಾಂಕ–05–12–2025 ರಂದು ಮಧ್ಯಾಹ್ನ 3–00 ಗಂಟೆಗೆ ಈ ಘನ ನ್ಯಾಯಾಲಯದ ಮುಂದೆ ತಾವಾಗಲಿ ಅಥವಾ ನಿಮ್ಮಿಂದ ಅಧಿಕಾರ ಪಡೆದ ವಕೀಲರ ಮೂಲಕವಾಗಲಿ ತಪ್ಪದೆ ಹಾಜರಾಗುವುದು ತಪ್ಪಿದಲ್ಲಿ ತಮ್ಮ ಅನುಪಸ್ಥಿತಿಯಲ್ಲಿ ಏಕಪಕ್ಷಿಯವಾಗಿ ಪ್ರಕರಣವನ್ನು ಏಕಪಕ್ಷಿಯವಾಗಿ ತೀರ್ಮಾನಿಸಲಾಗುವುದು.
ನ್ಯಾಯಾಲಯದ ಆದೇಶದ ಮೇರೆಗೆ,
ತಹಸೀಲ್ದಾರ್ ಗ್ರೇಡ್–2
ಉಪ ವಿಭಾಗಾಧಿಕಾರಿರವರ ನ್ಯಾಯಾಲಯ,ಮಧುಗಿರಿ.
ಡಿ.ಪಿ.ನರಸಿಂಹಮೂರ್ತಿ
ಬಿಎ, ಬಿಎಡಿ,ಎಲ್ ಎಲ್.ಬಿ.
ಮೇಲ್ಮನವಿದಾರರ ಪರ ವಕೀಲರು,ಮಧುಗಿರಿ.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ,
ಸೀಮಿಸ್ ಸಂಖ್ಯೆ –638/2025
ಅರ್ಜಿದಾರರು: 1.ಗೌರಮ್ಮ ಕೋಂ ಲೇಟ್ ಕೃಷ್ಣಪ್ಪ, 52 ವರ್ಷ
2.ಉಮಾದೇವಿ ಬಿನ್ ಲೇಟ್ ಕೃಷ್ಣಪ್ಪ, 33 ವರ್ಷ
3.ರಂಗಮ್ಮ ಬಿನ್ ಲೇಟ್ ಅರ್ಜಿಬಾಲಯ್ಯ @ ಅರ್ಜಿಬಾಲಯ್ಯ, 57 ವರ್ಷ
4.ನಾಗರಾಜು ಬಿನ್ ಲೇಟ್ ಅರ್ಜಿಬಾಲಯ್ಯ @ ಅರ್ಜಿಬಾಲಯ್ಯ, 52 ವರ್ಷ
5.ಸೌಭಾಗ್ಯ ಬಿನ್ ನಾಗರಾಜು, –28 ವರ್ಷ,
6.ಲಕ್ಷ್ಮೀಶ.ಕೆ.ಎನ್. ಬಿನ್ ನಾಗರಾಜು, 26 ವರ್ಷ,
7.ದೇವರಾಜು ಬಿನ್ ಲೇಟ್ ಅರ್ಜಿಬಾಲಯ್ಯ @ ಅರ್ಜಿಬಾಲಯ್ಯ, 49 ವರ್ಷ
8.ವರಲಕ್ಷ್ಮೀ ಬಿನ್ ದೇವರಾಜು, 20 ವರ್ಷ,
9.ಹೇಮಶ್ರೀ ಬಿನ್ ದೇವರಾಜು,–19 ವರ್ಷ,
10.ಬಾಲರಾಜು ಬಿನ್ ಲೇಟ್ ಅರ್ಜಿಬಾಲಯ್ಯ @ ಅರ್ಜಿಬಾಲಯ್ಯ, 47 ವರ್ಷ
11. ಲೋಕೇಶ್ ಬಿನ್ ಬಾಲರಾಜು 20 ವರ್ಷ
12. ಭಾವನ ಬಿನ್ ಬಾಲರಾಜು, 14 ವರ್ಷ
ಎಲ್ಲರ ವಾಸ: ಕೃಷ್ಣಯ್ಯನಪಾಳ್ಯ ಗ್ರಾಮ, ಕಸಬಾ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.
ವಿರುದ್ಧ
ಎದುರುದಾರರು: ತಹಶೀಲ್ದಾರ್, ನಾಡಕಛೇರಿ, ಮಧುಗಿರಿ ತಾಲ್ಲೂಕು.
ಸಾರ್ವಜನಿಕ ಪ್ರಕಟಣೆ.
ಮೇಲ್ಕಂಡ ಅರ್ಜಿದಾರ 3,4,7, 10 ರವರ ತಂದೆ, ಅರ್ಜಿದಾರ 2.5.6,8.11 & 12 ರವರ ತಾತ ಮತ್ತು 1ನೇ ಅರ್ಜಿದಾರರ ಮಾವನಾದ ಅರ್ಜಿಬಾಲಯ್ಯ @ ಅರ್ಜಿಬಾಲಪ್ಪ ಬಿನ್ ದಾಸಪ್ಪ ರವರು ದಿನಾಂಕ: 06–05–1987 ರಂದು ಮಧುಗಿರಿ ತಾಲ್ಲೂಕು, ಕಸಬಾ ಹೋಬಳಿ, ಕೃಷ್ಣಯ್ಯನಪಾಳ್ಯ ಗ್ರಾಮದಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ: 11/12/25 ರಂದು ಬೆಳಿಗ್ಗೆ 11–00 ಗಂಟೆಗೆ ಖುದ್ದು ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.
2025ನೇ ವರ್ಷದ ನವೆಂಬರ್ ತಿಂಗಳ 21ನೇ ದಿನ ನ್ಯಾಯಾಲಯದ ಅಪ್ಪಣೆಯ ಮೇರೆಗೆ ನ್ಯಾಯಾಲಯದ ಮೊಹರಿನೊಂದಿಗೆ,
ಶಿರಸ್ತೆದಾರರು
ಅಧಿಕ ಸಿವಿಲ್ ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಧುಗಿರಿ.
ಅರ್ಜಿದಾರರ ಪರ ವಕೀಲರು.
ಕೇಶವ ಮೂರ್ತಿ
ವಕೀಲರು, ಮಧುಗಿರಿ.

ಸಮಾಚಾರ ಸಣ್ಣದಲ್ಲ

ಅನುವಾದ ಕೃತಿಗೂ ಒಂದು ಮಹತ್ವವಿದೆ

ಮಡಿಕೇರಿ : ಸಾಹಿತ್ಯ ಲೋಕದಲ್ಲಿ ಅನುವಾದ ಕೃತಿಗೆ ಅದರದ್ದೇ ಆದ ಮಹತ್ವವಿದೆ. ಅನುವಾದ ಕೃತಿ ಎರಡು ಕಾಲಘಟ್ಟ, ಸಂಸ್ಕೃತಿ ಮತ್ತು ಎರಡು ಭಾಷೆಗಳ ನಡುವೆ ರಾಯಭಾರಿಯಾಗಿ ಕೆಲಸ ಮಾಡುತ್ತದೆ ಎಂದು ಲೇಖಕಿ ಐಚಂಡ ರಶ್ಮಿ ಮೇದಪ್ಪ ಅಭಿಪ್ರಾಯಪಟ್ಟಿದ್ದಾರೆ.ಕೊಡವ ಮಕ್ಕಡ ಕೂಟದ ವತಿಯಿಂದ ನಗರದ ಪತ್ರಿಕಾ ಭವನದಲ್ಲಿ ನಡೆದ ತಾವು ರಚಿಸಿರುವ 'ಕೊಡಗ್ ಸಂಸ್ಥಾನ ಡ/ಠ ಬ್ರಿಟಿಷ್ ಸಾಮ್ರಾಜ್ಯ' ಕೊಡವ ಅನುವಾದ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಮೂಲ ಕೃತಿ ಲೇಖಕರು ಹಾಗೂ ಅನುವಾದಕರಿಗೂ ಮಹತ್ವ ಇದೆ ಎಂಬುದನ್ನು ಬುಕರ್‌ಪ್ರಶಸ್ತಿ ವಿಜೇತ ಸಾಹಿತಿ ದೀಪಭಾಸ್ತಿ ತೋರಿಸಿಕೊಟ್ಟಿದ್ದಾರೆ. ಅನುವಾದ ಎಂದರೆ ಮರುಸೃಷ್ಟಿ ಎಂದರ್ಥ,ಮೂಲ ಕೃತಿಯ ತಿರುಳನ್ನು ನಾವು ಬೇರೆ ಬೇರೆ ಭಾಷೆಗಳಲ್ಲಿ ಹೊರತಂದಾಗ ಅದು ಹೆಚ್ಚು ಹೆಚ್ಚು ಜನರನ್ನು ತಲುಪುತ್ತದೆ ಎಂದರು. ಕೊಡವ ಭಾಷೆಯಲ್ಲಿ ಅನುವಾದ ಕೃತಿ ಬೆರಳೆಣಿಕೆಯಷ್ಟಿದ್ದರೂ ಕೊಡಗಿನ ಸಾಕಷ್ಟು ಮಂದಿ ಅನುವಾದ ಕೃತಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದರು. ರಶ್ಮಿ ಮೇದಪ್ಪ, ಪುಸ್ತಕ ಬಿಡುಗಡೆಗೆ ಸಹಕಾರ ನೀಡಿದ ಪ್ರತಿಯೊಬ್ಬರಿಗೂ ಧನ್ಯವಾದ ಸಲ್ಲಿಸುವುದಾಗಿ ಹೇಳಿದರು. ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿ, ಕೂಟದ ವತಿಯಿಂದ ದಾಖಲೀಕರಣ ಪುಸ್ತಕಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದ್ದು, ಆಸಕ್ತರಿಗೆ ಪ್ರೋತ್ಸಾಹ ನೀಡುವುದಾಗಿ ಹೇಳಿದರು. ನಿವೃತ್ತ ಸೇನಾಧಿಕಾರಿ ಕರ್ನಲ್ ಕೊಡಂದೇರ ಉತ್ತಯ್ಯ ಅನುವಾದ ಕೃತಿಯನ್ನು ಬಿಡುಗಡೆಗೊಳಿಸಿದರು. ಸಾಹಿತಿ ಮೂಕೊಂಡ ಪುಷ್ಪ ದಮಯಂತಿ ಪೂಣಚ್ಚ ಹಾಗೂ ಕೊಡವ ಮಕ್ಕಡ ಕೂಟದ ಸಲಹೆಗಾರ ಕುಲ್ಲೇಟಿರ ಅಜಿತ್ ನಾಣಯ್ಯ ಉಪಸ್ಥಿತರಿದ್ದರು.

ಪೊಲೀಸರ ಷಡ್ಯಂತ್ರ: ನಾಗೇಂದ್ರ ಆರೋಪ

ಚಾಮರಾಜನಗರ : ಇತ್ತೀಚಿಗೆ ಅಯ್ಯನಪುರ ಶಿವಕುಮಾರ್‌ಮಾಡಿರುವ ಪತ್ರಿಕಾಗೋಷ್ಠಿ ಹಿಂದೆ ಪೊಲೀಸರ ಷಡ್ಯಂತ್ರ ಇದೆ ಎಂದು ನಾಯಕ ಸಮುದಾಯದ ಯುವ ಮುಖಂಡ ನಾಗೇಂದ್ರ ಆರೋಪಿಸಿದರು. ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಜ್ಯೋತಿಗೌಡನಪುರ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡು ಸಮುದಾಯಗಳ ನಡುವೆ ವಿಷ ಬೀಜ ಬಿತ್ತುವ ಕೆಲಸ ಮಾಡುವುದು ಸರಿಯಲ್ಲ ಎಂದರು. ಕಳೆದ ಕೆಲ ದಿನಗಳ ಹಿಂದೆ ''ಅಯ್ಯನಪುರ ಶಿವಕುಮಾರ್‌ಅವರು ಸುದ್ದಿಗೋಷ್ಠಿಯಲ್ಲಿ ನಮ್ಮ ನಾಯಕ ಸಮುದಾಯದ ಮುಖಂಡರಾದ ಕೆಲ್ಲಂಬಳ್ಳಿ ಸೋಮನಾಯಕ, ಎಂ.ರಾಮಚಂದ್ರ, ಪು.ಶ್ರೀನಿವಾಸನಾಯಕ ಇತರರ ಮೇಲೆ ಇಲ್ಲ ಸಲ್ಲದ ಆರೋಪ ಮಾಡಿದ್ದರು. ಅಲ್ಲದೇ ಎಸ್ ಸಿ, ಎಸ್ ಟಿ ನಡುವೆ ಗಲಭೆಗೆ ಪ್ರಚೋದನೆ ನೀಡುವ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಆರೋಪಿಸಿದರು. ಜ್ಯೋತಿಗೌಡನಪುರದಲ್ಲಿ ನಾಯಕ ಹಾಗೂ ದಲಿತ ಸಮುದಾಯವರು ಸಹೋದರರಂತೆ ಇದ್ದಾರೆ. ಕೋಮು ಸಾಮರಸ್ಯ ಹಾಳು ಮಾಡುವ ಹೇಳಿಕೆ ನೀಡುತ್ತಿರುವ ಶಿವಕುಮಾರ್‌ನ್ನು ಬಂಧಿಸಿ, ಮಂಪರು ಪರೀಕ್ಷೆ ಗೊಳಪಡಿಸಬೇಕು ಎಂದು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸಮುದಾಯದ ಯುವ ಮುಖಂಡರಾದ ಚಂದ್ರಶೇಖರ್,ಬುಲೆಟ್ಚಂದ್ರು, ಆಟೋ ಮಂಜುನಾಥ್, ರಘು, ಬಸವರಾಜು ಹಾಜರಿದ್ದರು.

ಬೀದಿ ನಾಯಿಗಳ ಹಾವಳಿ ತಡೆಗೆ ಡಿಸಿ ಸೂಚನೆ

ಚಾಮರಾಜನಗರ : ಬೀದಿ ನಾಯಿಗಳ ಹಾವಳಿ ತಡೆಗೆ ಸರ್ವೋಚ್ಚ ನ್ಯಾಯಾಲಯ ನೀಡಿರುವ ಆದೇಶ ಅನುಸಾರ ಸಂಬಂಧಪಟ್ಟ ಇಲಾಖೆಗಳು ಕಟ್ಟುನಿಟ್ಟಾಗಿ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಸೂಚನೆ ನೀಡಿದರು. ಜಿಲ್ಲಾಮಟ್ಟದ ಸಮಿತಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಸುಪ್ರೀಂ ಆದೇಶ ಅನುಸಾರ ನಗರ ಸ್ಥಳೀಯ ಸಂಸ್ಥೆಗಳು ಪ್ರಾಣಿ ಜನನ ನಿಯಂತ್ರಣ (ಎಬಿಸಿ) ನಿಯಮಾವಳಿ ಅನ್ವಯ ಸಕಲ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಬೀದಿ ನಾಯಿಗಳನ್ನು ಸಂತಾನ ಹರಣ ಶಸ್ತ್ರ ಚಿಕಿತ್ಸೆಗೊಳಿಸುವ ಕುರಿತು ಪ್ರಾಣಿ ಕಲ್ಯಾಣ ಮಂಡಳಿಯಿಂದ ಮಾನ್ಯತೆ ಪಡೆದ ಎನ್.ಜಿ.ಓ ಗಳಲ್ಲದೆ ಹೆಚ್ಚಿನ ಸಂಸ್ಥೆಗಳಿಂದ ಪ್ರಸ್ತಾವನೆ ಪಡೆದು ನಿಯಮಾನುಸಾರ ಕ್ರಮವಹಿಸಬೇಕು ಎಂದರು. ಜಿಪಂ ಉಪ ಕಾರ್ಯದರ್ಶಿ ಶೃತಿ, ಪಶುಪಾಲನಾ ಇಲಾಖೆ ಉಪನಿರ್ದೇಶಕರಾದ ಡಾ. ಮಂಜುನಾಥ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಎಂ.ವಿ. ಸುಧಾ, ಡಿಎಚ್‌ಒ ಡಾ. ಎಸ್.ಚಿದಂಬರ, ಚಾಮರಾಜನಗರ ವಿವಿ ಕುಲಸಚಿವ ಜಿ.ವಿ. ವೆಂಕಟರಮಣ, ಡಿಡಿಪಿಯು ಪುಟ್ಟಗೌರಮ್ಮ ಉಪಸ್ಥಿತರಿದ್ದರು.

ವಿರಾಮ
ಪ್ರತಿ ಭಾನುವಾರ

{ಡಾ..ಜಿ.ಪರಮೇಶ್ವರ} ಸಚಿವರು

ಪವರ್‌ಶೇರಿಂಗ್ ಬಗ್ಗೆ ಯಾರು ಹೇಳಿದ್ದಾರೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರಾ ಅಥವಾ ಕರ್ನಾಟಕ ಉಸ್ತುವಾರಿ ಜನರಲ್ ಸೆಕ್ರೆಟರಿ ಆಗಲಿ, ಯಾರಾದರೂ ಹೇಳಿದ್ದಾರಾ? ನಾವೇ ಹೇಳಿಕೊಂಡು ಓಡಾಡುತ್ತಿದ್ದೇವೆ ಅಷ್ಟೇ. ಯಾರಾದರೂ ಹೇಳಬೇಕಲ್ವಾ?

ಕಸ್ತೂರಿ ರಂಗನ್ ವರದಿ ವಿರೋಧಿ ಹೋರಾಟ ಸಮಿತಿ ಸಭೆ | ಉಸ್ತುವಾರಿ ಸಚಿವ ಬೋಸರಾಜು ಅಧ್ಯಕ್ಷತೆಯಲ್ಲಿ ಸಿ- ಡಿ ಭೂಮಿ ಸಮಸ್ಯೆ ಚರ್ಚೆ

ರೈತರ ಪರ ನಿಲ್ಲಲು ಸಚಿವರಿಗೆ ಮನವಿ

ಮಡಿಕೇರಿ: ಕಸ್ತೂರಿ ರಂಗನ್ ವರದಿ ವಿರೋಧಿ ಹೋರಾಟ ಸಮಿತಿ ವತಿಯಿಂದ ನಗರದ ಕ್ರಿಸ್ಟಲ್ ಹಾಲ್ ಸಭಾಂಗಣದಲ್ಲಿ ರೈತರು ಹಾಗೂ ಬೆಳೆಗಾರರ ಭೂಮಿ ಸಮಸ್ಯೆ ಕುರಿತು ಸಭೆ ನಡೆಯಿತು.

ಸಭೆಯಲ್ಲಿ ಪಾಲ್ಗೊಂಡ ರೈತರು, ಬೆಳೆಗಾರರು, 'ಸಿ ಮತ್ತು ಡಿ' ಭೂಮಿ ಹೋರಾಟಗಾರರು, ರೈತ ಸಂಘದ ಮುಖಂಡರು ಕಸ್ತೂರಿ ರಂಗನ್ ವರದಿ ಹಾಗೂ ಸಿ ಮತ್ತು ಡಿ ಭೂಮಿ ಸಮಸ್ಯೆಗಳ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು, ಶಾಸಕದ್ವಯರಾದ ಎ.ಎಸ್.ಪೊನ್ನಣ್ಣ, ಡಾ.ಮಂತರ್ ಗೌಡ, ಮಾಜಿ ಸ್ಪೀಕರ್‌ಕೆ.ಜಿ.ಬೋಪಯ್ಯ ಅವರುಗಳ ಮುಂದೆ ತಮ್ಮ ಅಳಲು ತೋಡಿಕೊಂಡರು. ಅರಣ್ಯ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಮಾಡಿದ ಗೊಂದಲಗಳಿಂದ ಇಂದು ಜಿಲ್ಲೆಯ ಸಹಸ್ರಾರು ರೈತರು ಮತ್ತು ಬೆಳೆಗಾರರು ತೊಂದರೆ ಅನುಭವಿಸುವಂತಾಗಿದೆ. ಈ ಗೊಂದಲಗಳನ್ನು ಸರಿಪಡಿಸಿ ರೈತರು ಮತ್ತು ಬೆಳೆಗಾರರ ಪರವಾಗಿ ಸರಕಾರ ಸೂಕ್ತ ನಿರ್ಧಾರ ಕೈಗೊಳ್ಳಬೇಕಿದೆ ಎಂದು ಒಕ್ಕೊರಲಿನಿಂದ ಒತ್ತಾಯಿಸಿದರು.

ನೂರಾರು ವರ್ಷಗಳಿಂದ ಕೃಷಿ ಮಾಡಿಕೊಂಡು ಬಂದ ಭೂಮಿಯನ್ನು ಇದೀಗ ಅರಣ್ಯ ಎಂದು ಉಲ್ಲೇಖಿಸಲಾಗುತ್ತಿದೆ. ಇದರಿಂದ ಬುಡಕಟ್ಟು ಕೃಷಿಕರ ಬದುಕು ದುರಂತಕ್ಕೆ ಸಿಲುಕಿದೆ. ಅರಣ್ಯ ಭೂಮಿ ಬಿಟ್ಟು ಕಂದಾಯ ಭೂಮಿಯಲ್ಲಿ ಕೃಷಿ ಮಾಡಿದರೂ ಆ ಭೂಮಿಯನ್ನು ಇದೀಗ ಅರಣ್ಯ ಎನ್ನಲಾಗುತ್ತಿದೆ ಎಂದು ಬುಡಕಟ್ಟು ಕೃಷಿಕರ ಸಂಘದ ಕುಡಿಯರ ಮುತ್ತಪ್ಪ ಆತಂಕ ತೋಡಿಕೊಂಡರು.

ಸಿ ಮತ್ತು ಡಿ ಭೂಮಿ ಸಮಸ್ಯೆಯಿಂದ ಜಿಲ್ಲೆಯ 5 ಸಾವಿರಕ್ಕೂ ಅಧಿಕ ಕುಟುಂಬಗಳು ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ. ಇಲ್ಲಿ 1905ರಿಂದ ಕೃಷಿ ಮಾತ್ರವಲ್ಲದೇ ಜನ ವಸತಿ ಪ್ರದೇಶವೂ ಇದ್ದು 2003ರಲ್ಲಿ ಅರಣ್ಯ ಎಂದು ಉಲ್ಲೇಖಿಸಲಾಗಿದೆ. ಸರಕಾರಿ ಅಧಿಕಾರಿಗಳಿಗೆ ಆರ್‌ಟಿಸಿ ತಿದ್ದುಪಡಿ ಮಾಡಲು ಅವಕಾಶ ನೀಡಿದವರು ಯಾರು ಎಂದು ಪ್ರಶ್ನಿಸಿದರು. ಇಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸಿ ಮತ್ತು ಡಿ ಭೂಮಿ ಹೋರಾಟಗಾರ ಸುರೇಶ್ ಚಕ್ರವರ್ತಿ ಆಗ್ರಹಿಸಿದರು.

ನಗರದ ಕ್ರಿಸ್ಟಲ್ ಹಾಲ್ ಸಭಾಂಗಣದಲ್ಲಿ ರೈತರು ಹಾಗೂ ಬೆಳೆಗಾರರ ಭೂಮಿ ಸಮಸ್ಯೆ ಕುರಿತು ಸಭೆ ನಡೆಯಿತು.

ರೈತ ಸಂಘದ ಮುಖಂಡ ಮನು ಸೋಮಯ್ಯ ಮಾತನಾಡಿ, ಕಸ್ತೂರಿ ರಂಗನ್ ವರದಿ ಅಡಿಯಲ್ಲಿ ಹಲವಾರು ಗ್ರಾಮಗಳು ಬಫರ್‌ಝೋನ್ ವ್ಯಾಪ್ತಿಗೆ ಒಳಪಡುತ್ತವೆ. ಸಿ ಮತ್ತು ಡಿ ಭೂಮಿ ಸಮಸ್ಯೆ ಕುರಿತು ರಾಜ್ಯ ಸರಕಾರ ರಚನೆ ಮಾಡಿರುವ ಎಸ್‌ಐಟಿ ಯಾವ ರೀತಿಯಲ್ಲಿ ಭೂಮಿ ಸಮಸ್ಯೆಯನ್ನು ಬಗೆಹರಿಸಲಿದೆ ಎಂಬುದನ್ನು ಜನರಿಗೆ ತಿಳಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಕ್ರೀಡಾ ಪ್ರಾಧಿಕಾರ ಉಪಾಧ್ಯಕ್ಷ ಸಿ.ಎಸ್. ಅರುಣ್ ಮಾಚಯ್ಯ ಅವರು ಮಾತನಾಡಿ, ರಾಜ್ಯ ಸರಕಾರ ಸಮಿತಿ ರಚನೆ ಮಾಡಿರುವುದನ್ನು ಸ್ವಾಗತಿಸಿದರಲ್ಲದೇ, ಸಮಿತಿಯಲ್ಲಿರುವ ಅಧಿಕಾರಿಗಳು ಜನಪರವಾಗಿಲ್ಲ. ಸ್ಥಳೀಯ ಶಾಸಕರು ಹಾಗೂ ಉಸ್ತುವಾರಿ ಸಚಿವರನ್ನು ಸಮಿತಿಯಲ್ಲಿ ಸೇರ್ಪಡೆ ಮಾಡಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಸ್.ಜಿ.ಮೇದಪ್ಪ ಅವರು ಮಾತನಾಡಿ, ಜನ ವಿರೋಧಿ ಸುತ್ತೋಲೆಯನ್ನು ಸರಕಾರ ಹಿಂಪಡೆಯಬೇಕು. ಈ ಹಿಂದಿನ ಯಾವುದೇ ಸರಕಾರ ಕೂಡ ಸಿ ಮತ್ತು ಡಿ ಭೂಮಿಯಲ್ಲಿರುವ ರೈತರು ಮತ್ತು ಜನರನ್ನು ಒಕ್ಕಲೆಬ್ಬಿಸಲು ಆದೇಶ ನೀಡಿಲ್ಲ ಎಂದು ಸಭೆಯ ಗಮನ ಸೆಳೆದರು.

ರಾಜ್ಯ ಸರಕಾರ ಸೂಕ್ತ ಸ್ಪಂದನೆ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್ .ಬೋಸರಾಜು ಅವರು ಮಾತನಾಡಿ, ಜಿಲ್ಲೆಯ ರೈತರು, ಬೆಳೆಗಾರರ ಸಮಸ್ಯೆಗಳನ್ನು ಅರಿತು ಶಾಸಕರ ಸಹಿತ ಕಂದಾಯ ಹಾಗೂ ಅರಣ್ಯ ಸಚಿವರನ್ನು ಭೇಟಿ ಮಾಡಿ ಸಮಸ್ಯೆ ವಿವರಿಸಲಾಗಿದೆ. ಇದೀಗ ಸಮಿತಿ ರಚನೆಯಾಗಿದ್ದು, ಯಾವ ರೀತಿ ಪರಿಹಾರ ಕಾಣಬೇಕು ಎಂಬುದನ್ನು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಪೊನ್ನಣ್ಣ ಅವರು ಸಲಹೆ ನೀಡಿದ್ದಾರೆ. ಜಿಲ್ಲೆಯ ಜನರ ಸಮಸ್ಯೆಗಳ ಪರಿಹಾರಕ್ಕೆ ರಾಜ್ಯ ಸರಕಾರ ಸೂಕ್ತ ಸ್ಪಂದನೆಯನ್ನು ನೀಡಲಿದೆ ಎಂದು ಭರವಸೆ ನೀಡಿದರು.

ಹೋರಾಟ ಸಮಿತಿ ಸಂಚಾಲಕ ಧರ್ಮಜಾ ಉತ್ತಪ್ಪ ಮಾತನಾಡಿ, ಕೊಡಗು ಜಿಲ್ಲೆಯ 53 ಗ್ರಾಮಗಳು ಕಸ್ತೂರಿ ರಂಗನ್ ವರದಿಗೆ ಒಳಪಡುತ್ತವೆ. ರಾಜ್ಯದ 8 ಜಿಲ್ಲೆಗಳಲ್ಲಿ ಕಸ್ತೂರಿ ರಂಗನ್ ವರದಿಗೆ ವಿರೋಧ ವ್ಯಕ್ತವಾಗಿದೆ. ಜಿಲ್ಲೆಯ ಅಳಿವು ಉಳಿವಿನ ಪ್ರಶ್ನೆ ಬಂದ ಸಂದರ್ಭ ಜಿಲ್ಲೆಯ ಜನಪ್ರತಿನಿಧಿಗಳು, ವಿವಿಧ ಸಂಘ ಸಂಸ್ಥೆಗಳು ರಾಜಕೀಯ ಮರೆತು ಒಗ್ಗಟ್ಟಾಗಿ ಹೋರಾಟ ಮಾಡಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 10 ಸಾವಿರ ಸಹಿ ಸಂಗ್ರಹಿಸಿ ರಾಜ್ಯ ಸರಕಾರಕ್ಕೆ ಕಳುಹಿಸಲಾಗಿದೆ. ಅದರಂತೆ ರಾಜ್ಯ ಸರಕಾರ ಕೂಡ ವರದಿ ಜಾರಿಗೆ ತಮ್ಮ ವಿರೋಧ ಇರುವುದಾಗಿ ಕೇಂದ್ರ ಸರಕಾರಕ್ಕೆ ಸಲ್ಲಿಸಿದೆ ಎಂದು ಮಾಹಿತಿ ನೀಡಿದರು.

ಮಾಜೀ ಸ್ಪೀಕರ್‌ಕೆ.ಜಿ.ಬೋಪಯ್ಯ ಅವರು ಮಾತನಾಡಿ, ಈ ಭೂಮಿ ಸಮಸ್ಯೆ ಕೊಡಗು ಮಾತ್ರವಲ್ಲದೇ ಇಡೀ ಪಶ್ಚಿಮ ಘಟ್ಟ ಪ್ರದೇಶಕ್ಕೆ ವ್ಯಾಪಿಸಿದೆ. ಸರಕಾರ ಸಿ ಮತ್ತು ಡಿ ಭೂಮಿ ಒತ್ತುವರಿದಾರರನ್ನು ಒಕ್ಕಲೆಬ್ಬಿಸಲು ಯಾವುದೇ ಸುತ್ತೋಲೆಯನ್ನು ಹೊರಡಿಸಿಲ್ಲ. ಇವೆಲ್ಲ ಕಂದಾಯ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಮಾಡಿರುವ ಗೊಂದಲಗಳಾಗಿವೆ ಎಂದು ಹೇಳಿದರು.

ಶಾಸಕ ಡಾ.ಮಂತರ್‌ಗೌಡ ಅವರು ಮಾತನಾಡಿ, ರಾಜ್ಯದ 1 ಲಕ್ಷದ 30 ಸಾವಿರ ಹೆಕ್ಟೇರ್‌ಪ್ರದೇಶದಲ್ಲಿ ಈ ಸಮಸ್ಯೆ ಇದೆ. ಸಿ ಮತ್ತು ಡಿ ಜಮೀನನ್ನು ಗುರುತಿಸಿರುವುದೇ ಈ ಸಮಸ್ಯೆಗಳಿಗೆ ಕಾರಣವಾಗಿದೆ. ಜಿಲ್ಲೆಯಲ್ಲಿ 11 ಸಾವಿರ ಎಕರೆ ಭೂಮಿಗೆ ಪರ್ಯಾಯ ಭೂಮಿ ನೀಡುವಂತಾಗಬೇಕು ಎಂದು ಹೇಳಿದರು.

ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರು ಮಾತನಾಡಿ, ಕೇವಲ ಭಾವನೆಗಳಿಂದ ಸಮಸ್ಯೆ ಬಗೆಹರಿಯಲಾರದು. ಕಾನೂನಾತ್ಮಕವಾಗಿ ಹೋರಾಟ ಮಾಡಿದಲ್ಲಿ ಯಶಸು ದೊರೆಯುವ ಎಲ್ಲಾ ಸಾಧ್ಯತೆ ಇದೆ. ರಾಜ್ಯ ಸರಕಾರ ಇದೀಗ ರಚನೆ ಮಾಡಿರುವ ಸಮಿತಿ ಮುಂದೆ ಸಿ ಮತ್ತು ಡಿ ಭೂಮಿಯ ವಿಚಾರಗಳನ್ನು ಮಂಡಿಸಬೇಕಿದೆ. ಇದರಿಂದ ಸಮಸ್ಯೆಗೆ ಪರಿಹಾರ ಸಾಧ್ಯವಿದೆ ಎಂದು ಹೇಳಿದರು.

ಸಭೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಸುನೀಲ್ ಸುಬ್ರಮಣಿ, ಕಾಫಿ ಬೆಳೆಗಾರ ಚೇರಂಡ ನಂದಾ ಸುಬ್ಬಯ್ಯ, ಕೊಲ್ಯದ ಗಿರೀಶ್, ಕೆ.ಎಂ. ಲೋಕೇಶ್, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಅಖಿಲ ಕೊಡವ ಸಮಾಜ ಅಧ್ಯಕ್ಷ ಪರದಂಡ ಸುಬ್ರಮಣಿ, ರೈತ ಸಂಘದ ಸುಜಯ್ ಬೋಪಯ್ಯ , ರೈತರು ಪಾಲ್ಗೊಂಡಿದ್ದರು.

ಹಿಂದುಳಿದವರ ಅಭಿವೃದ್ಧಿಗೆ ಕಾಂಗ್ರೆಸ್ ಆದ್ಯತೆ

ಪಿರಿಯಾಪಟ್ಟಣ: ಹಿಂದೂ ಮುಸ್ಲಿಮರ ಭಾವೈಕ್ಯತೆ ಗ್ರಾಮವಾದ ಅರೇನಹಳ್ಳಿ ಗ್ರಾಮದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಸಚಿವ ಕೆ ವೆಂಕಟೇಶ್ ತಿಳಿಸಿದ್ದಾರೆ. ಕಿತ್ತೂರು ಮತ್ತು ಕಂಪಲಾಪುರ ಮುಖ್ಯ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು. ಪ್ರತಿ ಗ್ರಾಮಗಳ ಅಭಿವೃದ್ಧಿಗೆ ಹಂತ ಹಂತವಾಗಿ ಶಾಶ್ವತ ಯೋಜನೆಗಳನ್ನು ರೂಪಿಸುವ ಮೂಲಕ ಗ್ರಾಮಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುವುದು. ಮಾಜಿ ಸಚಿವ ಹೆಚ್ ಚನ್ನಬಸಪ್ಪನವರ ನಂತರ ಇದುವರೆಗೆ ಅಧಿಕಾರ ನಡೆಸಿದ ಜನಪ್ರತಿನಿಧಿಗಳು ಎಷ್ಟರಮಟ್ಟಿಗೆ ತಾಲೂಕು ಅಭಿವೃದ್ಧಿ ಕಡೆ ಗಮನ ಹರಿಸಿದ್ದಾರೆ ಎಂಬ ಬಗ್ಗೆ ಜನರಲ್ಲಿ ಹೆಚ್ಚು ಅರಿವಿದೆ. ಆದರೆ ಜನರಿಗೆ ತಪ್ಪು ಕಲ್ಪನೆ ಮೂಡಿಸುವ ಮೂಲಕ ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ' ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಕಾಂಗ್ರೆಸ್ ಸರ್ಕಾರವೇ ಮುಖ್ಯ ಕಾರಣ ಎಂದು ತಿಳಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಡಿಟಿ ಸ್ವಾಮಿ, ರಾಮತ್ ಜಾನ್ ಬಾಬು, ಎಂ ಡಿ ಸಿ ಸಿ ಬ್ಯಾಂಕ್ ನಿರ್ದೇಶಕ ಲೋಕೇಶ್, ಮೈಮಲ್ ನಿರ್ದೇಶಕ ಪ್ರಕಾಶ್, ಪಿ ಎಲ್ ಡಿ ಬ್ಯಾಂಕ್ ನ ಅಧ್ಯಕ್ಷ ಹೊಲದಪ್ಪ, ಮುಖಂಡರಾದ ಕೆಲ್ಲೂರು ನಾಗರಾಜ್, ವಿ ಜಿ ಕೊಪ್ಪಲು ಲೋಕೇಶ್ ಇದ್ದರು.

ಪಿರಿಯಾಪಟ್ಟಣ ತಾಲೂಕು ಅರೇನಹಳ್ಳಿ ಗ್ರಾಮದಲ್ಲಿ ಕಿತ್ತೂರು ಕಂಪಲಾಪುರ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿ ಮಾತನಾಡಿದರು.

ಎನ್ ಸಿ ಸಿ ಯಿಂದ ಸ್ವಚ್ಛತಾ ಅಭಿಯಾನ

ನಗರದ ಕೊಡಗು ವಿದ್ಯಾ ಲಯದ ಎನ್.ಸಿ. ಸಿ. ಕೆಡೆಟ್ ಗಳಿಂದ ಸ್ವಚ್ಛತಾ ಅಭಿಯಾನ ನಡೆಯಿತು.

ಮಡಿಕೇರಿ: ನಗರದ ಕೊಡಗು ವಿದ್ಯಾ ಲಯದ ಎನ್.ಸಿ. ಸಿ. ಕೆಡೆಟ್ ಗಳು. ಎನ್. ಸಿಸಿ ರೈಝಿಂಗ್ ಡೇ ಪ್ರಯುಕ್ತ ಮಡಿಕೇರಿಯ ಸರಕಾರಿ ಮತ್ತು ಖಾಸಗಿ ಬಸ್ ನಿಲ್ದಾಣಗಳಲ್ಲಿ 'ಸ್ವಚ್ಛ ಕೊಡಗು, ಸುಂದರ ಕೊಡಗು' ಅಭಿಯಾನವನ್ನು ನಡೆಸಿದರು. ಪ್ರಯಾಣಿಕರಿಗೆ ಬಸ್ನಲ್ಲಿ ಕಸವನ್ನು ಹೊರಗೆ ಎಸೆಯಬಾರದು ಎಂದು ಕೆಡೆಟ್ ಗಳು ಮನವಿ ಮಾಡಿದರು. ಸರಕಾರಿ ಹಾಗೂ ಖಾಸಗಿ ಬಸ್ ನಿಲ್ದಾಣ ಗಳಲ್ಲಿ ಸ್ವಚ್ಛತೆ ಕೈಗೊಂಡರು. ಶಾಲೆಯ ಪ್ರಾಂಶುಪಾ ಲರಾದ ಕೆ. ಎಸ್. ಸುಮಿತ್ರ, ಆಡಳಿತ ವ್ಯವಸ್ಥಾಪಕ ರವಿ ಪಿ., ಶಾಲೆಯ ಎನ್.ಸಿ.ಸಿ ಅಧಿಕಾರಿ ಹಾಗೂ ಶಿಕ್ಷಕರು ಈ ಕಾರ್ಯಕ್ರಮದಲ್ಲಿ ಕೆಡೆಟ್ಗಳೊಂದಿಗೆ ಭಾಗವಹಿಸಿದರು.

ಕಾರು ಅಡ್ಡಗಟ್ಟಿ ಕೆಜಿಗಟ್ಟಲೇ ಚಿನ್ನ ದರೋಡೆ !

ಚಾಮರಾಜನಗರ: ಗಡಿಜಿಲ್ಲೆ ಚಾಮರಾಜನಗರದಲ್ಲಿ ಕೇರಳಿಯನ್ ಡಕಾಯಿತಿ ಗ್ಯಾಂಗ್ ಮತ್ತೇ ಆಕ್ಟೀವ್ ಆದಂತೆ ಕಾಣುತ್ತಿದ್ದು ಆಭರಣ ತಯಾರಕನ ಕಾರು ಅಡ್ಡಗಟ್ಟಿ ಕೆಜಿಗಟ್ಟಲೇ ಚಿನ್ನ ದರೋಡೆ ಮಾಡಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬಂಡೀಪುರದ ಮೂಲೆಹೊಳೆ ಚೆಕ್ ಪೋಸ್ಟ್ ಸಮೀಪ ನ.20 ರಂದು ನಡೆದಿದ್ದು ಶನಿವಾರ ದೂರು ದಾಖಲಾಗಿದೆ.ಕೇರಳ ರಾಜ್ಯದ ಕ್ಯಾಲಿಕೆಟ್ ನಿವಾಸಿ ವಿನು(49) ದರೋಡೆಗೆ ಒಳಗಾದ ಆಭರಣ ತಯಾರಕನಾಗಿದ್ದು ಎರಡು ದಿನಗಳ ಬಳಿಕ ಗುಂಡ್ಲುಪೇಟೆ ಠಾಣೆಗೆ ಬಂದು ದೂರು ಕೊಟ್ಟಿದ್ದಾನೆ. ಮಂಡ್ಯದ ರಾಜೇಶ್ ಜ್ಯುವೆಲರ್ಸ್ ಎಂಬಾತನಿಂದ ಆಭರಣ ತಯಾರಿಕೆಗಾಗಿ 1800 ಗ್ರಾಂ 24 ಕ್ಯಾರೆಟ್ ಚಿನ್ನದ ಗಟ್ಟಿ ಹಾಗೂ 518 ಗ್ರಾಂ 22 ಕ್ಯಾರೆಟ್ ಚಿನ್ನವನ್ನು ಬಂಡೀಪುರದ ಮೂಲೆಹೊಳೆ ಮೂಲಕ ತರುತ್ತಿದ್ದಾಗ ಎರಡು ಇನ್ನೋವಾ ಹಾಗೂ 1 ಇಟಿಯೋಸ್ ವಾಹನದಲ್ಲಿ ಬಂದ ದರೋಡೆಕೋರರು ಮೊಬೈಲ್ ನೆಟ್ವರ್ಕ್ ಸಿಗದ ಸ್ಥಳದಲ್ಲಿ ಕಾರನ್ನು ಅಡ್ಡಗಟ್ಟಿ ಕಾರು ಸಮೇತ ಅಪಹರಿಸಿದ್ದಾರೆ. ಮೈಸೂರಿನ ವಿರಾಜಪೇಟೆಯ ರಸ್ತೆಯ ಜನನಿಬಿಡ ರಸ್ತೆಯಲ್ಲಿ ಆಭರಣ ತಯಾರಕನ ಕಾರು ನಿಲ್ಲಿಸಿ ಚಿನ್ನ ಕದ್ದೊಯ್ದು ಪರಾರಿಯಾಗಿದ್ದು 10-12 ಮಂದಿ ಇದ್ದರು ಎಂದು ವಿನು ತಿಳಿಸಿದ್ದಾನೆ. ಚಿನ್ನವನ್ನು ತರುವಾಗ ಚಾಲಕ ಸಮೀರ್‌ಹಾಗೂ ವಿನು ಮಾತ್ರ ಇದ್ದರು ಎಂದು ದೂರಿನಲ್ಲಿದೆ.

ಸ್ಥಳಕ್ಕೆ ಎಸ್ಪಿ ಭೇಟಿ: ದೂರು ದಾಖಲಾಗುತ್ತಿದ್ದಂತೆ ಚಾಮರಾಜನಗರ ಎಸ್ಪಿ ಡಾ.ಬಿ.ಟಿ.ಕವಿತಾ ಮೂಲೆಹೊಳೆ ಚೆಕ್ ಪೋಸ್ಟ್ ಗೆ ಭೇಟಿ ಕೊಟ್ಟು ಸ್ಥಳ ಪರಿಶೀಲನೆ ನಡೆಸಿದ್ದಾರೆ. ಬಳಿಕ ಗುಂಡ್ಲುಪೇಟೆ ಠಾಣೆಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, ಪೂರ್ವನಿಯೋಜಿತವಾಗಿ ಸಂಚು ರೂಪಿಸಿ ಚಿನ್ನ ಪಡೆಯುವ ಹಾಗೂ ಚಿನ್ನ ಸಾಗಣೆ ಮಾರ್ಗದ ಮಾಹಿತಿ ಪಡೆದು ಕೃತ್ಯ ಎಸಗಿದ್ದಾರೆ ಎಂದರು.

ಜಿಲ್ಲೆಯ ಗಡಿಯಲ್ಲಿ ಎರಡೆರಡು ಚೆಕ್ ಪೋಸ್ಟ್ ಗಳಿದ್ದರೂ ಆಗ್ಗಿಂದಾಗ್ಗೆ ಈ ರೀತಿಯ ದರೋಡೆ ರಾಬರಿಗಳು ನಡೆಯುತ್ತಲೇ ಇವೆ. ಇದು ವಿಪರ್ಯಾಸವೇ ಸರಿ. ಇನ್ನಾದರೂ ಸರ್ಕಾರ ಇತ್ತ ಕ್ರಮವಹಿಸಬೇಕಾಗಿದೆ ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ರಸ್ತೆ ಅಭಿವೃದ್ಧಿಗೆ ಸಿಎಂ 10 ಕೋಟಿ ಅನುದಾನ

ಕೆ.ಆರ್.ನಗರ : ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪಟ್ಟಣದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ಅಭಿವೃದ್ಧಿಗೆ 10 ಕೋಟಿ ವಿಶೇಷ ಅನುದಾನ ನೀಡಿದ್ದಾರೆ ಎಂದು ಶಾಸಕ.ಡಿ.ರವಿಶಂಕರ್‌ಹೇಳಿದರು.ಕೆ. ಆರ್.ನಗರದಿಂದ – ಹುಣಸೂರು ರಸ್ತೆಗೆ 5 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.

ಪಟ್ಟಣದ ಸಮಗ್ರ ಅಭಿವೃದ್ಧಿಗೆ ಈಗಾಗಲೇ ಕ್ರಿಯಾ ಯೋಜನೆ ತಯಾರಿಸಲಾಗಿದ್ದು ಬಯಲು ರಂಗಮಂದಿರ (ಡಾ.ರಾಜ್ ಬಾನಂಗಳ) 1.50 ಕೋಟಿ ಹಾಗೂ ಗಾಂಧಿ ಪಾರ್ಕ್, ದೇವಿರಮ್ಮ ಶಿಶು ವಿಹಾರ ಮೈದಾನ, ಪಾರ್ಕಿಗೆ ತಲಾ 50 ಲಕ್ಷ ವೆಚ್ಚದಲ್ಲಿ ಕಾಮಗಾರಿ ಕೈಎತ್ತಿಗೊಳ್ಳಲಾಗಿದೆ ಎಂದರು.

ಪಟ್ಟಣದ ನಾಗರೀಕರು, ವಿದ್ಯಾರ್ಥಿ ಗಳಿಗೆ 1.30 ವೆಚ್ಚದಲ್ಲಿ ಡಿಜಿಟಲ್ ಲೈಬ್ರರಿ ಮಾಡಲಾಗುವುದು ಎಂದರಲ್ಲದೆ ಪ್ರವಾಸಿ ಮಂದಿರ ತುಂಬಾ ಹಳೇಯದಾಗಿದ್ದು ಅದನ್ನು ತೆರವುಗೊಳಿಸಿ 2.50 ಕೋಟಿ ವೆಚ್ಚದಲ್ಲಿ ನೂತನ ಕಟ್ಟಡ ಕೈಗೊಳ್ಳುವುದರ ಜೊತೆಗೆ ಪಟ್ಟಣದ ಹೊರ ವಲಯದ ಹಳೇ ಎಡತೊರೆಯ ಮೀನಾಕ್ಷಿ ಸಮೇತ ಅರ್ಕೇಶ್ವರ ಸ್ವಾಮಿಯ ದೇವಾಲಯ ಜೀರ್ಣೋದ್ಧಾರ ಪೂರ್ಣಗೊಂಡಿದ್ದು ಈ ಬಾರಿ ವಿಶೇಷವಾಗಿ ಜಾತ್ರೆ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಗಡ್ಡಮಹೇಶ್, ನಿರ್ದೇಶಕರಾದ ಕೆ.ಎನ್ .ಪ್ರಸನ್ನ, ಸಯ್ಯದ್ದ್ ಜಾಬೀರ್,ಹಿರಿಯ ವೈದ್ಯ ಡಾ.ಮೋಹನ್ ದಾಸಭಟ್, ಪುರಸಭೆ ಮಾಜಿ ಅಧ್ಯಕ್ಷರಾದ ಕೋಳಿ ಪ್ರಕಾಶ್, ಸಿದ್ದಿಕ್, ಶಿವುನಾಯಕ್, ಮಾಜಿ ಸದಸ್ಯರಾದ ಜಾವೀದ್ ಪಾಷ, ಶಂಕರ್‌ಸ್ವಾಮಿ, ನಟರಾಜ್, ಕೆ. ವಿನಯ್, ಅಸ್ಲಂಪಾಷ, ಜಿ.ಪಂ.ಮಾಜಿ ಅಧ್ಯಕ್ಷ ಸಿದ್ದಪ್ಪ, ತಾ.ಕುರುಬರ ಸಂಘದ ಅಧ್ಯಕ್ಷ ಚೀರನಹಳ್ಳಿ ಶಿವಣ್ಣ, ಬ್ಲಾಕ್ ಕಾಂಗ್ರೆಸ್ ರಾದ ಅಧ್ಯಕ್ಷ ಎಂ.ಎಸ್.ಮಹದೇವ್, ಎಂ. ಜೆ.ರಮೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಕೆಂಚಿಮಂಜು ಇದ್ದರು.

ಶಾಸಕ.ಡಿ.ರವಿಶಂಕರ್ ಕೆ.ಆರ್.ನಗರ– ಹುಣಸೂರು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.

ಕಪಾಳ ಮೋಕ್ಷದ ಅಪಪ್ರಚಾರ !

ವಿರೋಧಿಗಳು ನನ್ನ ವಿರುದ್ಧ ಅಪ ಪ್ರಚಾರ ಮಾಡುತ್ತಿದ್ದಾರೆ ಇದಕ್ಕೆ ನಾನು ಕಿವಿಗೊಡಲ್ಲ, ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡುತ್ತಿದ್ದೇನೆ ಹೊರತು ಇವರ ಹೇಳಿಕೆಗಳಿಗೆ ಮಹತ್ವ ಕೊಡಲ್ಲ, ಕಳೆದ 20 ವರ್ಷಗಳಿಂದ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ನಾನು ಸಾರ್ವಜನಿಕ ಸೇವೆ ಮಾಡುತ್ತಿದ್ದು ನಮ್ಮ ಕುಟುಂಬದ ವ್ಯಕ್ತಿತ್ವ ಏನೆಂಬುದು ಕ್ಷೇತ್ರದ ಜನತೆಗೆ ಗೊತ್ತಿದೆ. ಆದರಿಂದಲೇ ನಾನು 27 ಸಾವಿರ ಅಧಿಕ ಮತಗಳಿಂದ ಆಯ್ಕೆಯಾಗಿದ್ದೇನೆ. ವಿರೋಧಿಗಳ ಅಪ ಪ್ರಚಾರಕ್ಕೆ ಕಿವಿಗೊಡಲ್ಲ ಎಂದು ಶಾಸಕ ಡಿ ರವಿಶಂಕರ್‌ಸ್ಪಷ್ಟಪಡಿಸಿದರು.

ಹೆಚ್ಚಿನ ಅನುದಾನ ತಂದು ಅಭಿವೃದ್ಧಿಗೆ ಒತ್ತು

ಮದ್ದೂರು: ತಾಲೂಕನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಬೇಕೆಂದು ಹೆಚ್ಚಿನ ಅನುದಾನ ತಂದು ಮಾದರಿ ತಾಲೂಕನ್ನಾಗಿಸಲು ಕ್ರಮ ವಹಿಸಿರುವುದಾಗಿ ಶಾಸಕ ಕೆ.ಎಂ ಉದಯ ತಿಳಿಸಿದರು,

ತಾಲೂಕಿನ ದೇಶಹಳ್ಳಿ ಹಾಗೂ ಹುಲಿಗೆರೆಪುರ ಕಾಲೋನಿಗಳಿಗೆ ಬಿಡುಗಡೆ ಯಾಗಿರುವ 50 ಲಕ್ಷ ರೂ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು,

ಹಿಂದೆ ಅಧಿಕಾರ ನಡೆಸಿದ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಿದ ಹಿನ್ನೆಲೆಯಲ್ಲಿ ಹಲವಾರು ಕಾಮಗಾರಿಗಳು ನನೆಗುದಿಗೆ ಕಾರಣವಾಗಿದ್ದು ತಾವು ಶಾಸಕರಾದ ಬಳಿಕ ವಿವಿಧ ಇಲಾಖೆಯ ಸಚಿವರನ್ನು ಸಂಪರ್ಕಿಸಿ ಹೆಚ್ಚಿನ ಅನುದಾನ ತರುವ ಮೂಲಕ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿರುವುದಾಗಿ ತಿಳಿಸಿದರು,

ಈಗಾಗಲೇ ಕೋಟ್ಯಂತರ ರೂಪಾಯಿ ಅನುದಾನ ತಂದು ವಿವಿಧ ಕಾಮಗಾರಿಗಳು ನಡೆಯುತ್ತಿದ್ದು ಮೂಲ ಸೌಲಭ್ಯಗಳಿಂದ ವಂಚಿತವಾಗಿರುವ ಗ್ರಾಮಗಳನ್ನು ಗುರುತಿಸಿ ಹಲವು ಸೌಲಭ್ಯ ಕಲ್ಪಿಸಲು ಕ್ರಮ ವಹಿಸಿರುವುದಾಗಿ ಹೇಳಿದರು..

ಈ ವೇಳೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಚ್. ಎಂ ಮಲ್ಲೇಶ್ ಗೌಡ, ಗ್ರಾಮ ಪಂಚಾಯತಿ ಸದಸ್ಯ ಎನ್. ಡಿ. ಶಿವ ಚರಣ್, ಎಚ್. ಡಿ ದೇವೇಗೌಡ, ರವಿ, ಮುಖಂಡರಾದ ದೇಶಹಳ್ಳಿ ಮೋಹನ್ ಕುಮಾರ್,ಗೌತಮ್ ,ಶಂಕರ್,ವೆಂಕಟೇಶ್, ಚಂದ್ರಶೇಖರ್ ,ನವೀನ್, ಪ್ರಕಾಶ್, ಹೆಚ್. ಬಿ ಶ್ರೀಧರ್ ,ನಾಗರಾಜು,ಇಂಜಿನಿಯರ್‌ರಾಕೇಶ್. ಇದ್ದರು.

ಹುಲಿಗೆರೆಪುರ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆಮದ್ದೂರು ಕ್ಷೇತ್ರದ ಶಾಸಕ ಕೆ.ಎಂ ಉದಯ ಅವರು ಚಾಲನೆ ನೀಡಿದರು.

ಜಿಲ್ಲಾ ಪತ್ರಕರ್ತರ ಸಂಘದಿಂದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ | ಮಾಹಿತಿ ಹಕ್ಕು ಆಯೋಗದ ಆಯುಕ್ತ ರುದ್ರಣ್ಣ ಹರ್ತಿಕೋಟೆ

ಮಾಹಿತಿ ಹಕ್ಕು ಎಂಬ ಪ್ರಬಲ ಕಾಯಿದೆ ಜಾರಿಗೂ ಅನೇಕರ ಹೋರಾಟವಿದೆ

ಮೈಸೂರು: ಮಾಹಿತಿ ಹಕ್ಕು ಎಂಬ ಪ್ರಬಲ ಕಾಯಿದೆ ಜಾರಿಗೊಳ್ಳಲು ಕೂಡ ಅನೇಕ ಹೋರಾಟ ನಡೆದಿದ್ದು, ಕಾಯಿದೆಯನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ಪತ್ರಕರ್ತರಾಗಬೇಕು ಎಂದು ರಾಜ್ಯ ಮಾಹಿತಿ ಹಕ್ಕು ಆಯೋಗದ ಆಯುಕ್ತ ರುದ್ರಣ್ಣ ಹರ್ತಿಕೋಟೆ ಕಿವಿ ಮಾತು ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಶನಿವಾರ ಆಯೋಜಿಸಿದ್ದ ಸಂವಾದ ಮತ್ತು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಮತ್ತು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭದಲ್ಲಿ ಅವರು ವಾತನಾಡಿದರು.

ಕೇಂದ್ರದಲ್ಲಿ ಮನಮೋಹನ ಸಿಂಗ್ ಸರ್ಕಾರ ವಾಹಿತಿ ಹಕ್ಕು ಕಾಯಿದೆ ಜಾರಿಗೊಳಿಸಿದ ಕೂಡಲೇ ಆ ಕಾಯಿದೆಯನ್ನು ಮೊದಲು ಅಳವಡಿಸಿಕೊಂಡಿದ್ದು ಕರ್ನಾಟಕ. ನಾವು ಮೊದಲು ಅರ್ಜಿಗಳ ವಿಲೇವಾರಿಗೆ ಕ್ರಮ ಕೈಗೊಳ್ಳುತ್ತಿದ್ದೇವೆ. ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಯಾವುದೇ ಸಂಸ್ಥೆಯು ಕೂಡ ವಾಹಿತಿ ಹಕ್ಕು ಕಾಯಿದೆ ವ್ಯಾಪ್ತಿಗೆ ಬರಲಿದೆ ಎಂದು ಹೈ ಕೋರ್ಟ್ ಆದೇಶಿಸಿದೆ ಎಂದು ಹೇಳಿದರು.

ನಾವು ಈಗ ಊಹಾ ಪತ್ರಿಕೋದ್ಯಮದಿಂದ ಹೊರಬಂದು, ನೈಜ ಪತ್ರಿಕೋದ್ಯಮ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ತನಿಖಾ ಪತ್ರಿಕೋದ್ಯಮ ಮತ್ತು ಅಭಿವೃದ್ಧಿ ಪತ್ರಿಕೋದ್ಯಮ ಮೂಲೆ ಸೇರಿದೆ. ಇಂತಹ ಕಾಯಿದೆಯನ್ನು ಪತ್ರಕರ್ತರು ಬಳಸಿಕೊಳ್ಳಬೇಕು ಮತ್ತು ಅರ್ಜಿ ಸಲ್ಲಿಸುವಾಗ ಎಚ್ಚರಿಕೆಯಿಂದ ಇರಬೇಕು ಎಂದು ಹೇಳಿದರು.ನಾನು ಆಯುಕ್ತನಾದ ಮೇಲೆ ಸುಮಾರು 5 ಸಾವಿರ ಪ್ರಕರಣಗಳನ್ನು ಇತ್ಯರ್ಥಪಡಿಸಿದ್ದೇನೆ. ಈ ಪೈಕಿ ಕಾರ್ಯನಿರತ ಪತ್ರಕರ್ತರು ಅರ್ಜಿ ಹಾಕಿರುವುದು ಕಡಿಮೆ. ಪತ್ರಕರ್ತರ ಹೆಸರಿನಲ್ಲಿ ಯಾರ್ಯಾರೋ ಅರ್ಜಿ ಸಲ್ಲಿಸುತ್ತಾರೆ. ಆದರೆ ನೈಜ ಪತ್ರಕರ್ತರು ಅರ್ಜಿ ಸಲ್ಲಿಸುವಾಗ ದಿಕ್ಕು ತಪ್ಪಿಸುವುದುಂಟು. ಆ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ನಡೆದ ' ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ ಕಾರ್ಯಕ್ರಮವನ್ನು ರಾಜ್ಯ ಮಾಹಿತಿ ಆಯುಕ್ತ ರುದ್ರಣ್ಣ ಹರ್ತಿಕೋಟೆ ಉದ್ಘಾಟಿಸಿದರು.

ಮಾಹಿತಿ ಹಕ್ಕು ಕಾಯಿದೆ ಕುರಿತು ಮಾತ್ರವಲ್ಲದೆ, ಈ ಸಂಬಂಧ ಜಾರಿಯಾದ ನ್ಯಾಯಾಲಯದ ಆದೇಶವನ್ನು ಪತ್ರಕರ್ತರು ಓದಿಕೊಳ್ಳಬೇಕು. ಇದರಲ್ಲಿ ಅಧ್ಯಯನ ಬಹಳ ಮುಖ್ಯ ಎಂದರು.

ಮತ್ತೋರ್ವ ರಾಜ್ಯ ವಾಹಿತಿ ಹಕ್ಕು ಆಯೋಗದ ಆಯುಕ್ತ ಬದ್ರುದ್ದೀನ್ ಮಾತನಾಡಿ, ಮಾಹಿತಿ ಹಕ್ಕು ಕಾಯಿದೆ ಬೇರೆ ಬೇರೆ ಸ್ವರೂಪದಲ್ಲಿ ಸಹಾಯವಾಗಲಿದೆ. ಪತ್ರಕರ್ತರ ವೃತ್ತಿಗೆ ಇದು ದೊಡ್ಡ ಅಸ್ತ್ರ. ಇದನ್ನು ಹೆಚ್ಚು ಹೆಚ್ಚು ಬಳಸಿಕೊಳ್ಳಬೇಕು. ಎಲ್ಲಾ ಕಾಯಿದೆಯಂತೆ ಇದೂ ಕೂಡ ದುರ್ಬಳಕೆ ಆಗಲಿದೆ. ಅದನ್ನು ಹೇಗೆ ಸದ್ಬಳಕೆ ವಾಡಿಕೊಳ್ಳುವುದು ಎಂಬುದು ಮುಖ್ಯ. ಸದುದ್ದೇಶದಿಂದ ಇದನ್ನು ಪ್ರಾವಾಣಿಕವಾಗಿ ಬಳಸಿಕೊಳ್ಳಬೇಕು ಎಂದರು.

ಮಾಹಿತಿ ಹಕ್ಕು ಮತ್ತು ಕಾಯಿದೆ ಕುರಿತು ಕೆಲವರಿಗೆ ಅರಿವೇ ಇರುವುದಿಲ್ಲ. ಈ ಬಗ್ಗೆ ಸಂವಾದ ಮತ್ತು ಜಾಗೃತಿ ಕಾರ್ಯಕ್ರಮ ನಡೆಸಲಾಗುವುದು. ಅಧಿಕಾರಿ ವರ್ಗ ಪ್ರಜೆಗಳನ್ನು ಸತಾಯಿಸಬಹುದು.

ಅಂತಹ ಅಧಿಕಾರಿಗಳ ನಿಯಮದ ವಿರುದ್ಧ ಕ್ರಮಕ್ಕೆ ಅವಕಾಶವಿದೆ. ನಷ್ಟ ಪರಿಹಾರಕ್ಕೂ ಅವಕಾಶವಿದೆ. ನಾವು ಸಮರೋಪಾದಿಯಲ್ಲಿ ಕೆಲಸ ವಾಡಬೇಕಾಗುತ್ತದೆ. ನಾವು ಆಯುಕ್ತರಾದ ಮೇಲೆ ಸುವಾರು 25 ಸಾವಿರ ಅರ್ಜಿ ವಿಲೇವಾರಿ ವಾಡಿದ್ದೇವೆ. ಅಲ್ಲದೆ ವಾಹಿತಿ ಹಕ್ಕು ಆಯೋಗವು ಹೆಚ್ಚು ಕ್ರಿಯಾಶೀಲವಾಗಿದೆ. ಕೆಲವೊಂದು ನ್ಯೂನ್ಯತೆಗಳನ್ನು ತಿಳಿಸಿದರೆ ತಿದ್ದುಪಡಿಗೆ ಶಿಫಾರಸ್ಸು ವಾಡಲಾಗುವುದು ಎಂದು ಅವರು ಹೇಳಿದರು.

ಈ ಕಾಯಿದೆಯನ್ನು ಅನೇಕ ಕಡೆಗಳಲ್ಲಿ ಗಂಭೀರವಾಗಿ ಪರಿಗಣಿಸುವುದಿಲ್ಲ.

ಈ ಕುರಿತ ನಡಾವಳಿಯನ್ನು ಕೆಡಿಪಿ ಸಭೆಯಲ್ಲಿ ಕಾರ್ಯ ಸೂಚಿಯನ್ನಾಗಿ ಮಾಡಿದರೆ ಆಯೋಗಕ್ಕೆ ಇರುವ ಒತ್ತಡ ಕಡಿಮೆಯಾಗಿ ಸಾರ್ವಜನಿಕರ ದೂರಿಗೆ ಬೇಗ ಪರಿಹಾರ ದೊರಕಬಹುದು ಎಂದು ಆಶಯ ವ್ಯಕ್ತಪಡಿಸಿದರು.

ಅಭಿನಂದನೆ ಸ್ವೀಕರಿಸಿದ ಹಿರಿಯ ಪತ್ರಕರ್ತರು ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಅಂಶಿ ಪ್ರಸನ್ನಕುವಾರ್ ಮಾತನಾಡಿ, ಮಾಹಿತಿ ಹಕ್ಕು ಪತ್ರಕರ್ತರಿಗೆ ಹೇಗೆ ಉಪುಟಯೊಗವಾಗುತ್ತದೆ. ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬ ಅರಿವನ್ನು ಬೆಳಸಿಕೊಳ್ಳಿ. ನೈತಿಕತೆ, ವಿಶ್ವಾಸದೊಂದಿಗೆ ಸರಕಾರ ಮತ್ತು ಸಮಾಜದ ಸೇತುವೆಯಾಗಿ ಪತ್ರಕರ್ತರು ಕೆಲಸ ಮಾಡಬೇಕು ಎಂದು ಅವರು ಹೇಳಿದರು.

ಸಮಾಚಾರ ಸಣ್ಣದಲ್ಲ

ಶಬರಿಮಲೆಗೆ ತೆರಳಿದ್ದ ಮಾಲಾಧಾರಿ ನಾಪತ್ತೆ

ಕೋಲಾರ: ಕೇರಳದ ಶಬರಿಮಲೆಗೆ ತೆರಳಿದ್ದ ಕೋಲಾರದ ಅಯ್ಯಪ್ಪ ಮಾಲಾಧಾರಿಯೊಬ್ಬರು ನಾಪತ್ತೆಯಾಗಿದ್ದಾರೆ. ಅಮರೇಶ ನಾಪತ್ತೆಯಾದ ಮಾಲಾಧಾರಿ. ಕೋಲಾರ ಜಿಲ್ಲೆಯ ಮಾಲೂರು ತಾಲೂಕು ನೂಟುವೆ ಗ್ರಾಮದ ಅಮರೇಶ ಶಬರಿಮಲೆ ಅಯ್ಯಪ್ಪ ಸ್ವಾಮಿ ದರ್ಶನಕ್ಕೆ ಹೋದ ಸಂದರ್ಭದಲ್ಲಿ ನಾಪತ್ತೆಯಾಗಿದ್ದಾರೆ.

23 ಕೋಟಿ ರು. ವಂಚಿಸಿದ್ದ ದಂಪತಿ ಸೆರೆ

ಧಾರವಾಡ: ಹೈದರಾಬಾದ್‌ನಲ್ಲಿ 23 ಕೋಟಿ ರು. ವಂಚಿಸಿದ್ದ ದಂಪತಿಯನ್ನು ಧಾರವಾಡ ಪೊಲೀಸರು ಬಂಧಿಸಿದ್ದಾರೆ. ಖಚಿತ ಮಾಹಿತಿ ಮೇರೆಗೆ ಧಾರವಾಡ ಬೈಪಾಸ್‌ನಲ್ಲಿ ಕಾರ್ಯಾಚರಣೆ ನಡೆಸಿದ ಗ್ರಾಮೀಣ ಠಾಣೆ ಪೊಲೀಸರು ಗೋವಾಗೆ ಪರಾರಿ ಆಗುತ್ತಿದ್ದ ದಂಪತಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹೈದರಾಬಾದ್ ವಿವಿಧ ಠಾಣೆಗಳಲ್ಲಿ ಬಂಧಿತರ ಮೇಲೆ ವಂಚನೆ ಪ್ರಕರಣ ದಾಖಲಾದ ಹಿನ್ನೆಲೆ ಪೊಲೀಸರು ತನಿಖೆ ಕೈಗೊಂಡಿದ್ದರು. ಸತೀಶ ಉಪ್ಪಲಪತಿ, ಶಿಲ್ಪಾ ಬಂಡಾ ದಂಪತಿಯನ್ನು ಹೈದ್ರಾಬಾದ್ ಸೆಂಟ್ರಲ್ ಕ್ರೈಮ್ ಸ್ಟೇಶನ್‌ಗೆ ಪೊಲೀಸರಿಗೆ ಧಾರವಾಡ ಗ್ರಾಮೀಣ ಠಾಣೆ ಪೊಲೀಸರು ಒಪ್ಪಿಸಿದ್ದಾರೆ. ಧಾರವಾಡ ಎಸ್‌ಪಿ ಗುಂಜನ್ ಆರ್ಯ ನೇತೃತ್ವದಲ್ಲಿ ವಿಶೇಷ ಕಾರ್ಯಾಚರಣೆ ನಡೆದಿದೆ.

ಉಗ್ರ-ಉದ್ದೀಪನ ಜಾಲ ನಿಗ್ರಹಕ್ಕೆ ಮೋದಿ ಆಗ್ರಹ

← ಮೊದಲ ಪುಟದಿಂದ

ಇದನ್ನು ನಾವು ಮುಂದಿನ ಜನಾಂಗದ ಉತ್ತಮ ಆರೋಗ್ಯಕ್ಕಾಗಿ ಹಸ್ತಾಂತರಿಸಬೇಕೆಂದು ಹೇಳಿದರು.

ಜಾಗತಿಕ ಬೆಳವಣಿಗೆಯಲ್ಲಿ ಆಫ್ರಿಕಾದ ಪ್ರಗತಿಯೂ ಮುಖ್ಯ ಪಾತ್ರವಹಿಸುತ್ತದೆ. ಈ ಖಂಡದೊಂದಿಗೆ ಭಾರತ ಯಾವಾಗಲೂ ನಿಂತಿದೆ. ಆಫ್ರಿಕಾ ಕೌಶಲ್ಯವೃದ್ಧಿ ಕಾರ್ಯಸೂಚಿಯಡಿ ತರಬೇತು ದಾರರಿಗೆ ತರಬೇತು ನೀಡುವ ಉದ್ದೇಶವಿದೆ. ಮುಂದಿನ ಒಂದು ದಶಕದೊಳಗೆ 10 ಲಕ್ಷ ಪ್ರಮಾಣೀಕೃತ ತರಬೇತುದಾರರನ್ನು ಸಿದ್ಧಪಡಿಸಬೇಕು. ಇದು ಮುಂದಿನ ಬೆಳವಣಿಗೆಗೆ ಪ್ರೇರಕವಾಗುತ್ತದೆ ಎಂದರು.

ಪ್ರಕೃತಿ ವಿಕೋಪ, ಜಾಗತಿಕ ಆರೋಗ್ಯ ತುರ್ತುಸ್ಥಿತಿಯಲ್ಲಿ ಒಗ್ಗೂಡಿ ಕೆಲಸ ಮಾಡಿದರೆ ನಾವು ಸದೃಢವಾಗಿರುತ್ತೇವೆ. ಜಿ20 ದೇಶಗಳ ಆರೋಗ್ಯತಜ್ಞರನ್ನು ತರಬೇತುಗೊಳಿಸುವುದು ನಮ್ಮ ಗುರಿಯಾಗ ಬೇಕು. ಜಾಗತಿಕವಾಗಿ ಯಾವುದೇ ರೀತಿಯ ಆರೋಗ್ಯ ದುಸ್ಥಿತಿ ಅಥವಾ ಪ್ರಾಕೃತಿಕ ವಿಕೋಪಗಳಲ್ಲಿ ಈ ತಂಡಗಳನ್ನು ನಿಯೋಜಿಸಲು ಸಿದ್ಧವಿರುವಂತಹ ಪರಿಸ್ಥಿತಿ ಇರಬೇಕು ಎಂದು ಮೋದಿ ಕರೆ ನೀಡಿದ್ದಾರೆ.

ಫೆಂಟಾನಿಲ್‌ನಂತಹ ಮಾರಕ ಉದ್ದೀಪನಗಳ ಕಳ್ಳಸಾಗಣೆ ತಡೆಯಬೇಕು, ಅದಕ್ಕಾಗಿ ಉಗ್ರರು ಮತ್ತು ಉದ್ದೀಪನಗಳ ಜಾಲವನ್ನು ನಿಗ್ರಹಿಸಬೇಕೆಂದು ಮೋದಿ ಆಗ್ರಹಿಸಿದರು. 'ಉದ್ದೀಪನ-ಉಗ್ರಜಾಲ ನಿಗ್ರಹದಡಿ ಹಣಕಾಸು, ಆಡಳಿತ, ಭದ್ರತೆಯಂತಹ ಸಂಗತಿಗಳನ್ನು ಒಗ್ಗೂಡಿಸಬೇಕು. ಆಗಲೇ ಉಗ್ರ-ಉದ್ದೀಪನ ಆರ್ಥಿಕತೆ ದುರ್ಬಲವಾಗಲು ಸಾಧ್ಯ. ಈ ಸವಾಲನ್ನು ನಾವು ಮೀರಿ ನಿಲ್ಲಲೇಬೇಕು' ಎಂದು ಮೋದಿ ಹೇಳಿದ್ದಾರೆ.

ಬ್ರಿಟನ್, ದಕ್ಷಿಣ ಕೊರಿಯಾ ಮುಖ್ಯಸ್ಥರೊಂದಿಗೆ ಚರ್ಚೆ: ಸಭೆಯ ವೇಳೆ ಪ್ರಧಾನಿ ಮೋದಿ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್, ದ.ಕೊರಿಯಾ ಅಧ್ಯಕ್ಷ ಲೀ ಜೇ ಮಿಯುಂಗ್‌ರನ್ನು ಭೇಟಿ ಮಾಡಿದರು. ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆ್ಯಂಟನಿ ಗುಟೆರಸ್‌ರೊಂದಿಗೆ ಚರ್ಚೆ ನಡೆಸಿದರು. ಈ ಮಾತುಕತೆಗಳ ವಿವರ ಇನ್ನಷ್ಟೇ ಪ್ರಕಟವಾಗಬೇಕಿದೆ.

ಮೀನುಗಾರಿಕಾ ವಿವಿ ಸ್ಥಾಪನೆಗೆ ಸಿದ್ಧ: ಸಿದ್ದರಾಮಯ್ಯ

ಮತ್ಸ್ಯಮೇಳಕ್ಕೆ ಚಾಲನೆ | ರಾಜ್ಯದ 10 ಲಕ್ಷ ಜನರಿಗೆ ಮೀನುಗಾರಿಕೆ ಆಸರೆ: ಸಿಎಂ | ಗಾಳ ಹಾಕಿ ಮೀನು ಹಿಡಿಯುವ ಕಲೆಗಾರಿಕೆ ನನಗಿದೆ: ಡಿಕೆಶಿ

ಬೆಂಗಳೂರು: ಕರ್ನಾಟಕದಲ್ಲಿ ಮೀನುಗಾರಿಕಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸರಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಬೆಂಗಳೂರಿನಲ್ಲಿ ಆಯೋಜಿಸಿದ್ದ ಮೀನುಗಾರಿಕಾ ದಿನಾಚರಣೆ ಮತ್ತು ಮತ್ಸ್ಯಮೇಳವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರಕಾರ ಮೀನುಗಾರರಿಗೆ ಹಲವು ಯೋಜನೆಗಳನ್ನು ನೀಡಿದೆ. ಮೀನುಗಾರಿಕಾ ಇಲಾಖೆಗೆ ಮೀನುಗಾರರ ಕುಟುಂಬಗಳನ್ನು ಹತ್ತಿರದಿಂದ ನೋಡಿರುವ ಕರಾವಳಿಯವರೇ ಆದ ಮಂಕಾಳ ವೈದ್ಯ ಅವರನ್ನೇ ಸಚಿವರನ್ನಾಗಿ ಮಾಡಿದ್ದೇವೆ. ಇವರು ಉತ್ತಮವಾಗಿ ಇಲಾಖೆಯನ್ನು ನಿರ್ವಹಿಸುತ್ತಿದ್ದಾರೆ. ಮೀನುಗಾರ ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಲ್ಲಿ ಪರಿಹಾರ ಮೊತ್ತವನ್ನು ಆರು ಲಕ್ಷ ರು.ಗಳಿಂದ 10 ಲಕ್ಷಕ್ಕೆ ಹೆಚ್ಚಿಸಲು ತೀರ್ಮಾನಿಸಿದೆ. ಕಳೆದ ಎರಡು ವರ್ಷಗಳಲ್ಲಿ 264 ಪ್ರಕರಣಗಳಿಗೆ ಒಟ್ಟು 9.48 ಕೋಟಿ ರು. ಪರಿಹಾರ ಬಿಡುಗಡೆ ಮಾಡಿದೆ. ಮೀನುಗಾರಿಕೆ ಕಷ್ಟದ ಕಾಯಕವಾಗಿದ್ದು, ಹತ್ತು ಲಕ್ಷಕ್ಕಿಂತ ಹೆಚ್ಚು ಜನರು ಮೀನುಗಾರಿಕೆ ಮೇಲೆ ಅವಲಂಬಿತರಾಗಿದ್ದಾರೆ. ರಾಜ್ಯದಲ್ಲಿ 2024-25ನೇ ಸಾಲಿನಲ್ಲಿ 9.63 ಲಕ್ಷ ಮೆಟ್ರಿಕ್ ಟನ್ ಮೀನು ಉತ್ಪಾದಿಸಲಾಗಿದ್ದು, ರಾಜ್ಯವು ಒಳನಾಡು ಮೀನು ಉತ್ಪಾದನೆಯಲ್ಲಿ ಏಳನೇ ಸ್ಥಾನ ಹಾಗೂ ಕರಾವಳಿ ಮೀನು ಉತ್ಪಾದನೆಯಲ್ಲಿ ಐದನೇ ಸ್ಥಾನ ಹೊಂದಿದ್ದು, ಒಟ್ಟು ಉತ್ಪಾದನೆಯಲ್ಲಿ ಮೂರನೇ ಸ್ಥಾನದಲ್ಲಿದ್ದು ಮೀನುಗಾರಿಕೆ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ ಎಂದರು.

ನಮ್ಮ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ ಯಾಂತ್ರೀಕೃತ ದೋಣಿಗಳ ಡೀಸೆಲ್ ವಾರ್ಷಿಕ ಮಿತಿಯನ್ನು 1.5 ಲಕ್ಷ ಕಿ.ಲೋದಿಂದ ಎರಡು ಲಕ್ಷ ಕಿ.ಲೋಗೆ ಹೆಚ್ಚಿಸಲಾಗಿದೆ. ನಾಡ ದೋಣಿಗಳಿಗೆ ಕೈಗಾರಿಕಾ ಸೀಮೆ ಎಣ್ಣೆಯನ್ನು ಪ್ರತೀ ಲೀಟರ್‌ಗೆ 35 ರು.ರಿಯಾಯಿತಿ ದರದಲ್ಲಿ ವಿತರಣೆ ಮಾಡುತ್ತಿದ್ದೇವೆ. ಒಟ್ಟಾರೆ ಮೀನುಗಾರ ಸಮುದಾಯದ ಏಳಿಗೆಗೆ ಸರಕಾರ ಪ್ರತಿ ಬಜೆಟ್‌ನಲ್ಲಿಯೂ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಮೀನುಗಾರಿಕಾ ಕ್ಷೇತ್ರದ ಸಮಗ್ರ, ಸರ್ವತೋಮುಖ ಅಭಿವೃದ್ಧಿಗೆ 3,000 ಕೋಟಿ ರು. ಮೀಸಲಿಟ್ಟಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮೃತ ಮೀನುಗಾರರ ಕುಟುಂಬಗಳಿಗೆ 10 ಲಕ್ಷ ರು.ಪರಿಹಾರ ಚೆಕ್‌ಗಳನ್ನು ವಿತರಿಸಿ ಇಲಾಖೆಯ ಕೈಪಿಡಿಗಳನ್ನು ಬಿಡುಗಡೆ ಮಾಡಿದರು. ಅಲ್ಲದೇ ಉತ್ತಮ ಮೀನುಗಾರರಿಗೆ ಹಾಗೂ ಮೀನುಗಾರಿಕಾ ಸಂಘಸಂಸ್ಥೆಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಂಗಳೂರಿನಲ್ಲಿ ಆಯೋಜಿಸಿದ್ದ ಮೀನುಗಾರಿಕಾ ದಿನಾಚರಣೆ, ಮತ್ಸ್ಯಮೇಳವನ್ನು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು.

ಗಾಳ ಹಾಕೋದು ಗೊತ್ತಿದೆ: ಡಿಕೆಶಿ

ರಾಜ್ಯ ರಾಜಕೀಯದಲ್ಲಿ ನಡೆಯುತ್ತಿರುವ ಹಲವು ಬೆಳವಣಿಗೆಗಳ ನಡುವೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ 'ನನಗೆ ಗಾಳ ಹಾಕೋದು ಗೊತ್ತಿದೆ' ಎನ್ನುವ ಹೇಳಿಕೆ ತೀವ್ರ ಚರ್ಚೆಗೆ ಗ್ರಾಸವಾಗಿದೆ. ನಾನು ಸಣ್ಣವನಿದ್ದಾಗ ಸಂಗಮಕ್ಕೆ ಹೋಗಿ ಮೀನು ಹಿಡಿಯುತ್ತಿದ್ದೆ. ಗಾಳ ಹಾಕಿ ಮೀನು ಹಿಡಿಯುವ ಕಲೆಗಾರಿಕೆ ನನಗಿದೆ. ಅದಕ್ಕೆ ಬಹಳ ತಾಳ್ಮೆ ಬೇಕು. ಈ ಮೀನು ವ್ಯವಹಾರ ಜಾತಿ ಮೇಲೆ ಇಲ್ಲ, ನೀತಿ, ಛಲ ಹಾಗೂ ಆಸಕ್ತಿ ಮೇಲಿದೆ. ಮೀನುಗಾರನಿಗೆ ನಿತ್ಯ ಮೀನು ಸಿಗುವುದಿಲ್ಲ. ಕೆಲವೊಮ್ಮೆ ವಾರವಾದರೂ ಒಂದು ಮೀನು ಸಿಗುವುದಿಲ್ಲ. ಅಂತಹ ತಾಳ್ಮೆ ವೃತ್ತಿ ನಡೆಸುತ್ತಿರುವ ನೀವು ಶ್ರಮಜೀವಿಗಳು ಎಂದರು.

ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ ಕೆರೆಗಳಿಗೆ ನೀರು ತುಂಬಿಸುತ್ತಿದ್ದು, ಈ ಕೆರೆಗಳಲ್ಲಿ ಮೀನುಗಾರಿಕೆ ಮಾಡಲು ಅವಕಾಶ ಕಲ್ಪಿಸಿಕೊಡಲಿದೆ. ಸಿದ್ದರಾಮಯ್ಯ ಅವರ ನೇತೃತ್ವದ ಸರಕಾರ 10 ಸಾವಿರಕ್ಕೂ ಹೆಚ್ಚು ಕೆರೆಗಳನ್ನು ತುಂಬಿಸುವ ಕೆಲಸ ಮಾಡಿದ್ದೇವೆ. ಈ ಕೆರೆಗಳಿಗೆ ನೀರು ತುಂಬಿಸುವ ಪ್ರಕ್ರಿಯೆಯಲ್ಲಿ ವಿದ್ಯುತ್ ಇಲಾಖೆಗೆ 3 ಸಾವಿರ ಕೋಟಿಯಷ್ಟು ಮೊತ್ತ ಪಾವತಿಸಬೇಕಾಗಿದೆ. ಈ ಕೆರೆಗಳ ಪೈಕಿ ಸಣ್ಣ ಕೆರೆಗಳನ್ನು ಸೊಸೈಟಿಗಳಿಗೆ ಜವಾಬ್ದಾರಿ ನೀಡುತ್ತೇವೆ. ಉಳಿದ ಕೆರೆಗಳನ್ನು ಹರಾಜು ಪ್ರಕ್ರಿಯೆ ಮೂಲಕ ಮೀನುಗಾರಿಕೆ ಮಾಡಲು ಅವಕಾಶ ನೀಡಲಾಗುವುದು.

– **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ಸುರಕ್ಷತೆಯೇ ನಮ್ಮ ಮೊದಲ ಆದ್ಯತೆ. ನಮ್ಮ ಕರಾವಳಿಯಲ್ಲಿ ಮೊದಲ ಸಮರ್ಪಿತ ಸಮುದ್ರ ಅಂಬ್ಯುಲೆನ್ಸ್ ಕಾರ್ಯರೂಪಕ್ಕೆ ತರಲಾಗುತ್ತಿದೆ. ಏಳು ಕೋಟಿ ರು. ವೆಚ್ಚದ ಈ ಯೋಜನೆಯು, ಸಮುದ್ರದಲ್ಲಿ ಮೀನುಗಾರರ ಜೀವ ತುರ್ತು ವೈದ್ಯಕೀಯ ನೆರವಿನಿಂದ ವಂಚಿತವಾಗಬಾರದು ಎಂಬ ನಮ್ಮ ಆಶಯ. ಮತ್ಸ್ಯ ಆಶಾ ಕಿರಣ ಯೋಜನೆಯಲ್ಲಿ ನೀಡಲಾಗುತ್ತಿದ್ದ ಪರಿಹಾರವನ್ನು 1,500ಗಳಿಂದ 3,000 ರು.ಗಳಿಗೆ ದ್ವಿಗುಣಗೊಳಿಸಿದ್ದೇವೆ. ಇದು ನಮ್ಮ ಮೀನುಗಾರ ಕುಟುಂಬಗಳಿಗೆ ಅತಿ ಮುಖ್ಯವಾದ ಆರ್ಥಿಕ ಬೆಂಬಲವಾಗಿದೆ.

– **ಮಂಕಾಳ ವೈದ್ಯ** ಮೀನುಗಾರಿಕಾ ಸಚಿವ

ಮೆಕ್ಕೆಜೋಳ ಆಮದು ನಿಲ್ಲಿಸಿ, ರೈತರ ರಕ್ಷಣೆಗೆ ಧಾವಿಸಲು ಸಿಎಂ ಸಿದ್ದರಾಮಯ್ಯ ಆಗ್ರಹ

ಬೆಂಗಳೂರು: ಮೆಕ್ಕೆಜೋಳ ಮತ್ತು ಹೆಸರುಕಾಳು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ ಸಿಎಂ ಸಿದ್ದರಾಮಯ್ಯ ಅವರು, ಮೆಕ್ಕೆಜೋಳ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸುವಂತೆ ಕೋರಿದ್ದಾರೆ.

ಮೆಕ್ಕೆಜೋಳ, ಹೆಸರುಕಾಳು ಲಕ್ಷಾಂತರ ರೈತರ ಜೀವನಕ್ಕೆ ಆಧಾರವಾಗಿರುವ ಬೆಳೆಗಳಾಗಿವೆ. ಕೇಂದ್ರ ಸರಕಾರ ಘೋಷಿಸಿರುವ ಕನಿಷ್ಠ ಬೆಂಬಲ ಬೆಲೆಗಿಂತ ಗಣನೀಯವಾಗಿ ಕಡಿಮೆಯಾದ ಮಾರುಕಟ್ಟೆ ಬೆಲೆಗಳು ರೈತರಲ್ಲಿ ದೊಡ್ಡ ಆತಂಕವನ್ನು ಸೃಷ್ಟಿಸಿವೆ. ಈ ಋತುವಿನಲ್ಲಿ ಕರ್ನಾಟಕದಲ್ಲಿ 17.94 ಲಕ್ಷ ಹೆಕ್ಟೇರಿಗೂ ಅಧಿಕ ಪ್ರದೇಶದಲ್ಲಿ ಮೆಕ್ಕೆಜೋಳ ಹಾಗೂ 4.16 ಲಕ್ಷ ಹೆಕ್ಟೇರಿಗೂ ಹೆಚ್ಚು ಪ್ರದೇಶದಲ್ಲಿ ಹೆಸರುಕಾಳು ಬೆಳೆಯಲಾಗಿದ್ದು, ರಾಜ್ಯದಲ್ಲಿ ಸುಮಾರು 54.74 ಲಕ್ಷ ಮೆಟ್ರಿಕ್ ಟನ್‌ಗಿಂತ ಹೆಚ್ಚು ಮೆಕ್ಕೆಜೋಳ ಮತ್ತು ಹೆಸರುಕಾಳು 1.983 ಲಕ್ಷ ಮೆಟ್ರಿಕ್ ಟನ್‌ಗೂ ಹೆಚ್ಚು ಉತ್ಪಾದನೆಯಾಗುವ ನಿರೀಕ್ಷೆಯಿದೆ ಎಂದು ವಿವರಿಸಿದ್ದಾರೆ.

ಕೇಂದ್ರ, ಮೆಕ್ಕೆಜೋಳಕ್ಕೆ ಪ್ರತಿ ಮೆಟ್ರಿಕ್ ಟನ್‌ಗೆ 2,400 ರು. ಹಾಗೂ ಹೆಸರುಕಾಳಿಗೆ 8,768 ರು. ಕನಿಷ್ಠ ಬೆಂಬಲ ಬೆಲೆ ಘೋಷಿಸಿದ್ದರೂ, ಕರ್ನಾಟಕದಲ್ಲಿ ಪ್ರಸ್ತುತ ಮಾರುಕಟ್ಟೆ ಬೆಲೆ ಜೋಳಕ್ಕೆ 1600-1800 ರು. ಮತ್ತು ಹೆಸರುಕಾಳಿಗೆ 5,400ರ ಆಸುಪಾಸಿನಲ್ಲಿರುವುದು ತೀವ್ರ ಸಮಸ್ಯೆಗೆ ಕಾರಣವಾಗಿದೆ. ಕರ್ನಾಟಕದಲ್ಲಿ ಸುಮಾರು 32 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಮಾರುಕಟ್ಟೆಯಲ್ಲಿ ಹೆಚ್ಚುವರಿಯಾಗಿ ಲಭ್ಯವಿದ್ದು, ಸ್ಥಳೀಯ ಕೈಗಾರಿಕೆಗಳ ಬಳಕೆಯ ಸಾಮರ್ಥ್ಯಕ್ಕಿಂತ ಇದು ಹೆಚ್ಚಾಗಿದೆ. ಆದ್ದರಿಂದ ಕೇಂದ್ರ ಸರಕಾರ ಕೂಡಲೇ ಮಧ್ಯಪ್ರವೇಶಿಸಬೇಕು ಎಂದು ಮನವಿ ಮಾಡಿದ್ದಾರೆ.

ಎಥೆನಾಲ್ ಹಂಚಿಕೆ ಪ್ರಮಾಣ ಹೆಚ್ಚಿಸಿ: ಕರ್ನಾಟಕದಲ್ಲಿ ಮೆಕ್ಕೆಜೋಳದ ಉತ್ಪಾದನೆ ಗರಿಷ್ಠ ಪ್ರಮಾಣದಲ್ಲಿದ್ದು, ಸುಮಾರು 272 ಕೋಟಿ ಲೀ. ಡಿಸ್ಟಿಲರಿ ಸಾಮರ್ಥ್ಯ ಹೊಂದಿದೆ. ಹಾಗಾಗಿ ಎಥೆನಾಲ್ ಉತ್ಪಾದನೆಗೆ ಅಧಿಕ ಪ್ರಮಾಣದ ಮೆಕ್ಕೆಜೋಳದ ಉತ್ಪಾದನೆಯು ತಕ್ಕುದಾಗಿದೆ. 2025-26ರ ಎಥೆನಾಲ್ ಟೆಂಡರ್ ಹಂಚಿಕೆಯ ಪ್ರಕಾರ ತೈಲ ಉತ್ಪಾದಕ ಕಂಪನಿಗಳು 1,050 ಕೋಟಿ ಲೀಟರ್ ಎಥೆನಾಲ್ ಉತ್ಪಾದಿಸಲು ಟೆಂಡರ್ ನೀಡಿವೆ. ಈ ಪೈಕಿ 758.6 ಕೋಟಿ ಲೀ. (ಶೇ.72.45) ಧಾನ್ಯಗಳ ಆಧಾರಿತ ಎಥೆನಾಲ್ ಉತ್ಪಾದನೆಗೆ ಹಂಚಿಕೆಯಾಗಿದ್ದು, ಇದರಲ್ಲಿ ಮೆಕ್ಕೆಜೋಳ ಒಂದರಿಂದಲೇ 478 ಕೋಟಿ ಲೀ. ಎಥೆನಾಲ್ ಉತ್ಪಾದಿಸಬೇಕಿದೆ. ಕರ್ನಾಟಕದಲ್ಲಿರುವ 49 ಘಟಕಗಳಿಂದ 272 ಕೋಟಿ ಲೀ. ಎಥೆನಾಲ್ ಉತ್ಪಾದಿಸುವ ಸಾಮರ್ಥ್ಯವಿದ್ದರೂ ನಮ್ಮ ರಾಜ್ಯಕ್ಕೆ ಅತ್ಯಂತ ಕಡಿಮೆ ಹಂಚಿಕೆ ಮಾಡಲಾಗಿದೆ. ರಾಜ್ಯದ ಮೆಕ್ಕೆಜೋಳದ ಉತ್ಪಾದನಾ ಸಾಮರ್ಥ್ಯ ಹೆಚ್ಚಿದ್ದು, ನಮ್ಮ ಎಥೆನಾಲ್ ಉತ್ಪಾದನಾ ಸಾಮರ್ಥ್ಯಕ್ಕೆ ಹೋಲಿಸಿದರೆ ಅತ್ಯಂತ ಕನಿಷ್ಠ ಪ್ರಮಾಣವಾಗಿದೆ ಎಂದು ವಿವರಿಸಿದ್ದಾರೆ.

ಮೆಕ್ಕೆಜೋಳ ಆಮದು ಕಡಿಮೆ ಮಾಡಿ

ಕಳೆದ ವರ್ಷ ಮಯನ್ಮಾರ್, ಉಕ್ರೇನ್ ಮತ್ತಿತರ ರಾಷ್ಟ್ರಗಳಿಂದ ಹೆಚ್ಚಾಗಿ ಮೆಕ್ಕೆಜೋಳವನ್ನು ಆಮದು ಮಾಡಿಕೊಂಡಿದ್ದರಿಂದ ದೇಶದ ರೈತರಿಗೆ ದೊಡ್ಡ ಹೊಡೆತ ಬಿದ್ದಿದೆ. ಇಂತಹ ಆಮದು ಪ್ರಕ್ರಿಯೆಯಿಂದ ದೇಶಿಯವಾಗಿ ಬೆಲೆ ಕುಸಿಯಲು ಕಾರಣವಾಗಿದೆ ಮತ್ತು ರೈತರ ನ್ಯಾಯಯುತ ಆದಾಯಕ್ಕೆ ಬರೆ ಎಳೆದಂತಾಗಿದೆ. ಹಾಗಾಗಿ ಮೆಕ್ಕೆಜೋಳವನ್ನು ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಬೇಕು ಎಂದು ನಾನು ಕೇಂದ್ರ ಸರ್ಕಾರವನ್ನು ಬಲವಾಗಿ ಒತ್ತಾಯಿಸುತ್ತಿದ್ದೇನೆ. ಇದರಿಂದ ವಿಶ್ವದಲ್ಲೇ ಅತ್ಯುತ್ತಮ ಮೆಕ್ಕೆಜೋಳ ಉತ್ಪಾದಿಸುವ ಭಾರತದ ರೈತರಿಗೆ ನ್ಯಾಯ ಒದಗಿಸಿದಂತಾಗುತ್ತದೆ ಎಂದು ಪತ್ರದಲ್ಲಿ ಸಿಎಂ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ಮೆಕ್ಕೆಜೋಳ ಖರೀದಿ ಮತ್ತು ಆಮದು ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಸಿ ಹಸಿ ಸುಳ್ಳುಗಳನ್ನೇ ಬಿತ್ತರಿಸುತ್ತ ಕೇಂದ್ರದ ಮೇಲೆ ಗೂಬೆ ಕೂರಿಸುತ್ತಿದ್ದಾರೆ. ಸಿದ್ದರಾಮಯ್ಯ ಸರಕಾರ ರಾಜ್ಯದ ರೈತರ ಹಿತರಕ್ಷಣೆ ಕಡೆಗಣಿಸಿದೆ. ಕೈಲಾಗದವರು ಮೈ ಪರಚಿಕೊಂಡರು ಎಂಬಂತೆ ತನ್ನ ಆಡಳಿತ ವೈಫಲ್ಯದಿಂದ ಕಂಗೆಟ್ಟು ಈಗ ಕೇಂದ್ರದ ಮೇಲೆ ಗೂಬೆ ಕೂರಿಸಲು ನೋಡುತ್ತಿದೆ. ಮೆಕ್ಕೆಜೋಳ ಖರೀದಿ, ಎಥೆನಾಲ್ ಉತ್ಪಾದನೆ ಮತ್ತು ಬೆಂಬಲ ಬೆಲೆ ನೀಡುವಲ್ಲಿ ರಾಜ್ಯ ಸರಕಾರ ತಾನು ತಕ್ಷಣ ಕೈಗೊಳ್ಳಬೇಕಾದ ಕಾರ್ಯ ಮರೆತು ಕೇಂದ್ರದತ್ತ ಬೊಟ್ಟು ತೋರುತ್ತಿದೆ.

– **ಪ್ರಲ್ಹಾದ ಜೋಶಿ** ಕೇಂದ್ರ ಸಚಿವ

ಸೂತ್ರ ಬಹಿರಂಗಕ್ಕೆ ತೀವ್ರವಾದ ಒತ್ತಡ

← ಮೊದಲ ಪುಟದಿಂದ

2023ರಲ್ಲಿ ಬಹುಮತ ಬರುತ್ತಿದ್ದಂತೆ ದೆಹಲಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಕೂರಿಸಿಕೊಂಡು ಹೈಕಮಾಂಡ್ ಸಮ್ಮುಖದಲ್ಲಿ 'ಒಪ್ಪಂದ' ಮಾಡಿರುವುದಂತೂ ಸತ್ಯ. ಆದರೆ ಈ ಒಪ್ಪಂದದಲ್ಲಿ ಆಗಿರುವುದೇನು ಎನ್ನುವುದು ಸಭೆಯಲ್ಲಿ ಆರು ಜನರಿಗೆ ಬಿಟ್ಟು ಇನ್ಯಾರಿಗೂ ಗೊತ್ತಿಲ್ಲ. ಇಂದಿನ ಈ ಗೊಂದಲಗಳಿಗೆ ಈ ಗುಟ್ಟೇ ಪ್ರಮುಖ ಕಾರಣ. ಆದ್ದರಿಂದ ಆ ಸಭೆಯಲ್ಲಿ ಆಗಿರುವ ಒಪ್ಪಂದವೇನು ಎನ್ನುವುದನ್ನು ಬಹಿರಂಗಗೊಳಿಸಬೇಕು. ಕನಿಷ್ಠ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ. ಅಲ್ಲಿಗೆ ಒಟ್ಟಾರೆ ಗೊಂದಲ ಇತ್ಯರ್ಥವಾಗುತ್ತದೆ ಎನ್ನುವ ಮಾತನ್ನು ಕಾಂಗ್ರೆಸ್ಸಿನ ಹಲವರು ಆಡುತ್ತಿದ್ದಾರೆ.

ಅಧಿಕಾರ ಹಂಚಿಕೆ ವಿಚಾರದಲ್ಲಿ ನಮ್ಮ ಹೈಕಮಾಂಡ್ ಮೊದಲೇ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕಿತ್ತು. ಈ ವಿಚಾರದಲ್ಲಿ ಒಪ್ಪಂದ ಆಗಿದೆಯೋ? ಇಲ್ಲವೋ ನನಗೆ ಗೊತ್ತಿಲ್ಲ. ಈ ಗೊಂದಲ ಮಾತ್ರ ಎರಡೂವರೆ ವರ್ಷದಿಂದ ಮುಂದುವರಿದಿದೆ. ಅದು ಅಪಾಯಕಾರಿ ಹಂತ ತಲುಪುವ ಎಲ್ಲಾ ಲಕ್ಷಣಗಳು ಕಾಣಿಸುತ್ತಿದೆ. ಆದಷ್ಟು ಬೇಗ ಹೈಕಮಾಂಡ್ ತನ್ನ ನಿರ್ಧಾರ ಹೇಳಬೇಕಿದೆ.

– **ತನ್ವೀರ್ ಸೇಠ್** ಕೆಪಿಸಿಸಿ ಕಾರ್ಯಾಧ್ಯಕ್ಷ

ಪಟ್ಟು ಸಡಿಲಿಕೆ ಮಾಡದಂತೆ ಡಿಕೆಗೆ ಸಲಹೆ: ಇನ್ನು ಹೈಕಮಾಂಡ್ ಮೇಲೆ ಕಳೆದ ಮೂರು ದಿನಗಳಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇರಿರುವ ಒತ್ತಡದಿಂದ ಕಳೆದ ಎರಡೂವರೆ ವರ್ಷದ ಗೊಂದಲಕ್ಕೆ 'ಸ್ಪಷ್ಟನೆ' ಸಿಗುವ ಹಂತ ತಲುಪಿದೆ. ಈ ಹಂತದಲ್ಲಿ ಪಕ್ಷದ ಹೈಕಮಾಂಡ್ ಮಾತಿಗೆ ಪಟ್ಟನ್ನು ಸಡಿಲಿಕೆ ಮಾಡಬೇಡಿ ಎನ್ನುವ ಸಲಹೆಯನ್ನು ಆಪ್ತರು ನೀಡಿದ್ದಾರೆ ಎನ್ನಲಾಗಿದೆ. ಈಗಿರುವ ಬಿಸಿಯಲ್ಲಿಯೇ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಸ್ಪಷ್ಟನೆ ಸಿಗಬೇಕು. ಇಲ್ಲದೆ ಹೋದರೆ, ಈ ಗೊಂದಲ ಪದೇಪದೆ ಎದುರಾಗುತ್ತದೆ. ಆದ್ದರಿಂದ ಯಾವುದೇ ತೀರ್ಮಾನವಾಗುವುದಿದ್ದರೂ ಈಗಲೇ ಆಗಲಿ ಎನ್ನುವ ಸಲಹೆ ನೀಡಿದ್ದಾರೆ.

ಶುಕ್ರವಾರ ರಾತ್ರಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಡಿ.ಕೆ.ಶಿವಕುಮಾರ್ ಭೇಟಿಯಾದ ಸಮಯದಲ್ಲಿಯೂ ಇದೇ ವಾದವನ್ನು ಮಂಡಿಸಿದ್ದಾರೆ ಎನ್ನಲಾಗಿದೆ. ಹಲವು ಸವಾಲಿನ ಸನ್ನಿವೇಶದಲ್ಲಿಯೂ ನಾನು ಪಕ್ಷದ ಪರವಾಗಿ ನಿಂತಿದ್ದೇನೆ. ಕೆಪಿಸಿಸಿ ಅಧ್ಯಕ್ಷನಾಗಿ ಕಾಂಗ್ರೆಸ್ ಅನ್ನು ಕರ್ನಾಟಕದಲ್ಲಿ ಸ್ಪಷ್ಟ ಬಹುಮತದೊಂದಿಗೆ ಗೆಲ್ಲಿಸಿಕೊಂಡು ಬಂದಿದ್ದೇನೆ. ಆದರೆ ನಿಮ್ಮ (ಹೈಕಮಾಂಡ್) ಮಾತಿಗೆ ಬೆಲೆ ಕೊಟ್ಟು ಪಕ್ಷಕ್ಕೆ ತೊಂದರೆಯಾಗುವ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಆದರೀಗ ಎರಡೂವರೆ ವರ್ಷ ಪೂರ್ಣಗೊಂಡಿದೆ. ಈ ಹಂತದಲ್ಲಿಯೂ ನನ್ನ ನಿಷ್ಠೆಯನ್ನು ಕಡೆಗಣಿಸಿದರೆ, ಪಕ್ಷಕ್ಕೆ ಭಾರಿ ಹಾನಿಯಾಗಲಿದೆ ಎನ್ನುವ ಸಂದೇಶವನ್ನು ರವಾನಿಸಿದ್ದಾರೆ ಎನ್ನಲಾಗಿದೆ.

ಪಕ್ಷಕ್ಕೆ ಹೊಡೆತ ಎನ್ನುತ್ತಿರುವ ಹಲವರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಒಡನಾಟವಿರುವ ಹಲವು ನಾಯಕರು, ಹೈಕಮಾಂಡ್‌ನ ಈ ವಿಳಂಬ ನೀತಿಯಿಂದಾಗಿ ಪಕ್ಷಕ್ಕೆ ಮುಜುಗರವಾಗುತ್ತಿದೆ ಎನ್ನುವ ಮನವಿ ಮಾಡಿದ್ದಾರೆ ಎನ್ನಲಾಗಿದೆ.

ಜಮೀನು ವಿವಾದದ ಹಿನ್ನೆಲೆ ಸೇಡು | ಆರೋಪಿಯ ಬಂಧನ

ಮಗಳ ಕೊಂದು ವಿರೋಧಿಗಳ ತಲೆಗೆ ಕಟ್ಟಲು ಯತ್ನ

ಕಲಬುರಗಿ: ತನ್ನ ವಿಶೇಷಚೇತನ ಮಗಳನ್ನು ಸ್ವತಃ ತಂದೆಯೇ ಕೊಲೆಗೈದು ವಿರೋಧಿಗಳ ಮೇಲೆ ಆತ್ಮಹತ್ಯೆ ಪ್ರಚೋದನೆ ಎಂದು ಆರೋಪಿಸಿದ ಘಟನೆ ಕಲಬುರಗಿ ಸಬ್ ಅರ್ಬನ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಗುಂಡೇರಾಯ ನೀಲೂರ ಮಗಳನ್ನು ಕೊಲೆಗೈದಿದ್ದಾನೆ ಎನ್ನಲಾದ ಬಂಧಿತ ಆರೋಪಿ. ಕಲಬುರಗಿ ಜಿಲ್ಲೆಯ ಕಲ್ಲಹಂಗರಗಾ ಗ್ರಾಮದಲ್ಲಿ ನ.19 ರಂದು ವಿಶೇಷ ಚೇತನ ಯುವತಿ ಮಂಜುಳಾ (17) ಎಂಬಾಕೆ ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪಿದ್ದಾಳೆ ಎಂದು ಪ್ರಕರಣ ದಾಖಲಾಗಿತ್ತು. ಈ ಸಂಬಂಧ ಮಂಜುಳ ತಂದೆ ನನ್ನ ಮಗಳ ಆತ್ಮಹತ್ಯೆಗೆ ಪಕ್ಕದ ಜಮೀನಿನ ಮಾಲೀಕರ ಪ್ರಚೋದನೆಯೇ ಕಾರಣ ಎಂದು ಆರೋಪಿಸಿದ್ದರು. ಮಂಜುಳಾ ಕೈಯಲ್ಲಿದ್ದ ಡೆತ್‌ನೋಟ್ ಆಧರಿಸಿ ಕಲ್ಯಾಣಿ, ಗುಂಡಪ್ಪ, ಮಲ್ಲಿಕಾರ್ಜುನ ವಿರುದ್ಧ ದೂರು ದಾಖಲಾಗಿತ್ತು. ಸ್ಥಳ ಪರಿಶೀಲನೆ ನಡೆಸಿದ ಪೊಲೀಸರಿಗೆ ಕೈಗಳು ಸ್ವಾಧೀನ ಆಗಿರುವ ವಿಶೇಷ ಚೇತನ ಯುವತಿ ಡೆತ್‌ನೋಟ್ ಹೇಗೆ ಬರೆಯುತ್ತಾಳೆ ಎಂಬ ಸಂಶಯ ಕಾಡಿತ್ತು. ಈ ಸಂಬಂಧ ಮೃತ ಮಂಜುಳಾ ತಂದೆ ಹಾಗೂ ತಾಯಿ ವಿಮಲಬಾಯಿ ಅವರನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದ ವೇಳೆ ಸತ್ಯ ಬಯಲಾಗಿದೆ. ತಮ್ಮ ಮಗಳನ್ನು ತಾವೇ ಕೊಂದು ಆಸ್ತಿ ಕಲಹದ ಸಂಬಂಧ ಸೇಡು ತೀರಿಸಿಕೊಳ್ಳಲು ಪಕ್ಕದ ಜಮೀನಿನ ಮಾಲೀಕರ ಮೇಲೆ ಆರೋಪ ಮಾಡಿದ್ದರು ಎಂಬುದು ಬಯಲಾಗಿದೆ. ಈ ಸಂಬಂಧ ಮೃತ ಮಂಜುಳಾ ತಂದೆ ಗುಂಡೇರಾಯನನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಗುಂಡೇರಾಯನಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗನಿದ್ದಾನೆ. ವಿವಾದಕ್ಕೊಳಗಾದ ತನ್ನ ಪಾಲಿನ 2.5 ಎಕರೆ ಜಮೀನಿನ ವಿಚಾರದಲ್ಲಿ ಪಕ್ಕದ ಜಮೀನು ಮಾಲೀಕರೊಂದಿಗೆ ಆತನಿಗೆ ದೀರ್ಘಕಾಲದ ಜಗಳವಿತ್ತು. ಈ ಜಗಳದಲ್ಲಿ ವಿರೋಧಿಗಳನ್ನು ಸಿಲುಕಿಸಲು ಮತ್ತು ಮಗನಿಗೆ ವಿವಾದವಿಲ್ಲದ ಜಮೀನು ಉಳಿಯಲಿ ಎಂಬ ದುರಾಸೆಯಿಂದ, ಗುಂಡೇರಾಯನು ತನ್ನ ಸ್ವಂತ ಮಗಳನ್ನು ಕೊಲೆ ಮಾಡಿ, ಅದನ್ನು ವಿರೋಧಿಗಳ ಮೇಲೆ ಹಾಕಲು ಡೆತ್ ನೋಟ್ ನಾಟಕ ಸೃಷ್ಟಿಸಿದ್ದ.

– **ಡಾ.ಶರಣಪ್ಪ ಎಸ್.ಡಿ.** ನಗರ ಪೊಲೀಸ್ ಆಯುಕ್ತ

ಉ.ಕ. ಪ್ರತ್ಯೇಕ ರಾಜ್ಯ ಬೇಡಿಕೆಯಿಂದ ಯಾವುದೇ ಪ್ರಯೋಜನವಿಲ್ಲ: ಹೊರಟ್ಟಿ

ಬೆಳಗಾವಿ: ಉತ್ತರ ಕರ್ನಾಟಕ ಭಾಗದ ಜನಪ್ರತಿನಿಧಿಗಳಿಗೆ ಇಚ್ಛಾಶಕ್ತಿ ಕೊರತೆ ಇದೆ. ಈ ಭಾಗದ 96 ಜನ ಶಾಸಕರು ಸದನದಲ್ಲಿದ್ದರೂ ಗಟ್ಟಿಯಾಗಿ ಸಮಸ್ಯೆ ಕುರಿತು ಚರ್ಚಿಸಲು ಸಿದ್ಧರಿಲ್ಲ. ಪ್ರತ್ಯೇಕ ರಾಜ್ಯ ಬೇಡಿಕೆಯಿಂದ ಯಾವುದೇ ಪ್ರಯೋಜನವಿಲ್ಲ ವೆಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.



ಹುಕ್ಕೇರಿ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಕುರಿತು ಹೋರಾಟ ಮಾಡುವುದನ್ನು ಬಿಟ್ಟು ಪ್ರತ್ಯೇಕ ರಾಜ್ಯ ಕೇಳಿದರೆ ಏನು ಲಾಭ. ಈ ಹಿಂದೆ ಅನೇಕ ರಾಜ್ಯಗಳು ವಿಭಜನೆಯಾಗಿದ್ದರೂ ಅಭಿವೃದ್ಧಿ ಸಾಧ್ಯವಾಗಿಲ್ಲ. ಮುಖ್ಯಮಂತ್ರಿ, ಸಚಿವಸ್ಥಾನ ಪಡೆಯಲು ಮಾತ್ರ ಪತ್ಯೇಕತೆ ಕೂಗು ಎದ್ದಿದೆ ಎಂದರು.

ಉತ್ತರ ಕರ್ನಾಟಕ ಭಾಗದ ಶಾಸಕರು ಅಭಿವೃದ್ಧಿ ಕುರಿತು ಗಲಾಟೆ ಮಾಡುವುದಿಲ್ಲ. ಮತ ಹಾಕಿ ಆಯ್ಕೆ ಮಾಡಿದ ಜನ ಪ್ರಶ್ನೆ ಮಾಡುವುದಿಲ್ಲ. ರಾಜ್ಯದ 61 ಪ್ರತಿಶತ ಆದಾಯ ಬೆಂಗಳೂರು ನಗರದಲ್ಲಿದೆ. ಪ್ರತ್ಯೇಕ ರಾಜ್ಯ ಮಾಡಿದರೆ ಅದರ ಲಾಭ ನಮಗೆ ದೊರೆಯುವುದಿಲ್ಲ. ಬರುವ ಅಧಿವೇಶನ ಸಂದರ್ಭದಲ್ಲಿ ಉತ್ತರ ಕರ್ನಾಟಕ ಸಮಸ್ಯೆ ಕುರಿತು ಚರ್ಚಿಸಲು ಕಾಲಾವಕಾಶ ಮೀಸಲಿಡಲಾಗುತ್ತದೆ ಅಲ್ಲಿ ಶಾಸಕರು ಹಾಗೂ ಸಚಿವರು ಭಾಗವಹಿಸಲಿ ಎಂದರು.

ನಾನೇನು ತಪ್ಪು ಮಾಡಿದ್ದೇನೆ?

ಕಾಂಗ್ರೆಸ್ ಶಾಸಕರು ವಿಧಾನ ಪರಿಷತ್ ಸಭಾಪತಿ ವಿರುದ್ಧ ಅವಿಶ್ವಾಸ ಮಂಡನೆ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಬಸವರಾಜ ಹೊರಟ್ಟಿ ಅವರು ನಾನೇನು ತಪ್ಪು ಮಾಡಿದ್ದೇನೆ ಎಂದು ಹೇಳಿ ನನ್ನ ವಿರುದ್ಧ ಅವಿಶ್ವಾಸ ಮಂಡನೆ ಮಾಡಲಿ. ನಾನು ಯಾವುದೇ ಹಗರಣ ಮಾಡಿಲ್ಲ. ಒಂದು ವೇಳೆ ಮಾಡಿದರೂ ಸದನದ ನಿರ್ಧಾರ ಅಂತಿಮ ಎಂದರು.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.
ನಂ.ಲೋ.ಇ/ಚಿ.ವಿ/ಸ.ಇಂ-2/ಟೆಂಡರ್/2025-26/4869 ದಿನಾಂಕ : 18/11/2025

ಅಲ್ಪಾವಧಿ/ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26ನೇ ಸಾಲಿನ ಲೆಕ್ಕ ಶೀರ್ಷಿಕೆ 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ - ಬಂಡವಾಳ ವೆಚ್ಚ ಅಡಿ 2 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಮೊತ್ತ ಕ್ರಮವಾಗಿ ರೂ. 160.00 ಲಕ್ಷ ಹಾಗೂ ಮೊತ್ತ ರೂ. 240.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
ಕ್ರ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1) ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ: 04-12-2025 ರಂದು (11.00 ಗಂಟೆಗೆ)
2) ಆಕ್ಷೇಪಣೆ- ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ: 06-12-2025 (ಸಾಯಂಕಾಲ 5.30 ಗಂಟೆಯವರೆಗೆ)
3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 08-12-2025 (ಸಾಯಂಕಾಲ 5.00 ಗಂಟೆಯವರೆಗೆ)
4) ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ (Two Cover System): 10-12-2025 (ಸಾಯಂಕಾಲ 4.30 ಗಂಟೆಗೆ)
5) ಹಣಕಾಸು ಬಿಡ್ ಅನ್ನು ತೆರೆಯುವ ದಿನಾಂಕ (Two Cover System): ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ
6) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್‌ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.in ಅನ್ನು ಮತ್ತು ಟೆಂಡರ್ ಪ್ರಕಟಣೆಗಾಗಿ www.kpwd.gov.in ಅನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯದ ಕಚೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

DIPR/BGM/RO-NO- 1365/2025-26
ಕಾರ್ಯನಿರ್ವಾಹಕ ಇಂಜಿನೀಯರರು
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

ಕದನ ವಿರಾಮಕ್ಕೆ ಕೈ ಯತ್ನ?

← ಮೊದಲ ಪುಟದಿಂದ

ಅಲ್ಲಿಯವರೆಗೆ ಯಾವುದೇ ಗೊಂದಲಗಳಿಗೆ ಅವಕಾಶ ನೀಡಬೇಡಿ ಎನ್ನುವ ಸಂದೇಶವನ್ನು ರವಾನಿಸಿದ್ದಾರೆ. ಮಲ್ಲಿಕಾರ್ಜುನ ಖರ್ಗೆಯನ್ನು ಶನಿವಾರ ರಾತ್ರಿ ಭೇಟಿಯಾದ ಸಿದ್ದರಾಮಯ್ಯ, ದೆಹಲಿ ಪರೇಡ್, ಕೆಲ ಶಾಸಕರ ಅವಶ್ಯಕ ಹೇಳಿಕೆಗಳಿಂದ ಪಕ್ಷಕ್ಕೆ ಹಾಗೂ ಸರಕಾರಕ್ಕೆ ಸಮಸ್ಯೆಯಾಗುತ್ತಿದೆ. ಸಂಪುಟ ಪುನಾರಚನೆಗೆ ಈಗಾಗಲೇ ಅವಕಾಶ ಕೇಳಲಾಗಿದೆ. ಮುಂದಿನ ದಿನಗಳಲ್ಲಿ ತೀರ್ಮಾನಿಸಲಾಗುವುದೆನ್ನುವ ನಿಮ್ಮ ಮಾತಿಗೆ ಬೆಲೆ ಕೊಟ್ಟು ಯಾವುದೇ ರಾಜಕೀಯ ಹೇಳಿಕೆಗಳನ್ನು ನಾನಾಗಲಿ, ನನ್ನ ಆಪ್ತರಾಗಲಿ ನೀಡುತ್ತಿಲ್ಲ. ಆದರೆ ಇನ್ನೊಂದು ಕಡೆಯಿಂದ ಹೇಳಿಕೆಗಳು ಶುರುವಾದರೆ ನಿಶ್ಚಿತವಾಗಿ ಗೊಂದಲವಾಗುತ್ತದೆ. ಆದ್ದರಿಂದ ಕೂಡಲೇ ಈ ಎಲ್ಲ ಗೊಂದಲಗಳಿಗೆ ತೆರೆ ಎಳೆಯಿರಿ ಎನ್ನುವ ಒತ್ತಡ ಹೇರಿದ್ದಾರೆ ಎಂದು ತಿಳಿದುಬಂದಿದೆ.

ದಿಲ್ಲಿಗೆ ದಂಡು ಬಂದರೆ ಕೆಟ್ಟ ಸಂದೇಶ: ಸಂಪುಟ ಪುನಾರಚನೆ ಇಲ್ಲ ಎನ್ನುವ ಸ್ಪಷ್ಟ ಸಂದೇಶ ನೀಡಿದ ಹೊರತಾಗಿಯೂ ಕೆಲವರು ದೆಹಲಿಗೆ ಭೇಟಿ ನೀಡಿ ನಿಮ್ಮನ್ನು ಭೇಟಿಯಾಗಲು ಪ್ರಯತ್ನಿಸುತ್ತಿದ್ದಾರೆ. ಈ ರೀತಿಯ ಗೊಂದಲಕಾರಿ ನಡೆ ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಮಲ್ಲಿಕಾರ್ಜುನ ಖರ್ಗೆ, ಅವರು ಈ ರೀತಿ ದೆಹಲಿಗೆ ಗುಂಪು ಗುಂಪಾಗಿ ಬರುವುದರಿಂದ ಪಕ್ಷದಲ್ಲಿ ಬೇರೆ ಚರ್ಚೆಗೆ ಕಾರಣವಾಗುತ್ತಿದೆ. ನಾನೂ ಸಹ ಕರ್ನಾಟಕದವನೇ ಆಗಿರುವುದರಿಂದ ಈ ರೀತಿಯ ನಡೆಗಳು ಕೆಟ್ಟ ಸಂದೇಶವನ್ನು ರವಾನಿಸುತ್ತದೆ ಎಂದು ಖರ್ಗೆ ಅವರು ಸಿದ್ದರಾಮಯ್ಯ ಮುಂದೆ ಹೇಳಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ನಿಲುವು ಸ್ಪಷ್ಟಪಡಿಸಿ- 'ಹೈ'ಗೆ ಸಿದ್ದು: ಮಲ್ಲಿಕಾರ್ಜುನ ಖರ್ಗೆ ಅವರ ಭೇಟಿಯ ಸಮಯದಲ್ಲಿ ಸಿದ್ದರಾಮಯ್ಯ ಈಗಾಗಲೇ ನಾನು ನನ್ನ ನಿಲುವನ್ನು ಸ್ಪಷ್ಟಪಡಿಸಿದ್ದೇವೆ. ಹೈಕಮಾಂಡ್ ತೀರ್ಮಾನಕ್ಕೆ ನಾನು ಬದ್ಧ ಎಂದು ಹೇಳಿಕೊಂಡೇ ಬಂದಿದ್ದೇನೆ. ಆದರೂ ಈ ರೀತಿಯ ಹೇಳಿಕೆ ನೀಡುವುದು ಸರಿಯಲ್ಲ. ಒಂದು ವೇಳೆ ಬದಲಾವಣೆ ಮಾಡುವುದಿದ್ದರೆ ನನಗೆ ಸ್ಪಷ್ಟಪಡಿಸಿ. ಇಲ್ಲವೇ ಡಿ.ಕೆ.ಶಿವಕುಮಾರ್ ಅವರನ್ನು ಕರೆದು ಸ್ಪಷ್ಟಪಡಿಸಿ. ಇಲ್ಲದೇ ಹೋದರೆ ಈ ರೀತಿಯ ಚರ್ಚೆಗಳು ಮುಂದುವರಿಯುತ್ತವೆ ಎಂದಿದ್ದಾರೆ ಎನ್ನಲಾಗಿದೆ. ಸರಕಾರಕ್ಕೆ ಎರಡೂವರೆ ಪೂರೈಸಿರುವುದರಿಂದ ಸಚಿವ ಸಂಪುಟ ಪುನಾರಚನೆಗೆ ಅವಕಾಶ ನೀಡಿ. ಸಂಪುಟ ಪುನಾರಚನೆ ಮುಂದೂಡುವುದು ಸೂಕ್ತವಲ್ಲ. ಪುನಾರಚನೆ ಪ್ರಕ್ರಿಯೆ ಪೂರ್ಣಗೊಂಡರೆ ಹಲವು ಗೊಂದಲಗಳು ಇತ್ಯರ್ಥವಾಗಲಿದೆ ಎನ್ನುವ ಮಾತನ್ನು ಹೇಳಿದ್ದಾರೆ ಎಂದು ತಿಳಿದುಬಂದಿದೆ.

ಸುರೇಶ್ 'ಗಮ್ಯಸ್ಥಾನ' ಪೋಸ್ಟ್ ಚರ್ಚೆಯಲ್ಲಿ

ಈ ಎಲ್ಲ ಪ್ರಹಸನದ ನಡುವೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಹೋದರ ಡಿ.ಕೆ. ಸುರೇಶ್, ಎಕ್ಸ್‌ನಲ್ಲಿ ಮಾಡಿರುವ ಪೋಸ್ಟ್ ಇದೀಗ ಭಾರಿ ಕುತೂಹಲಕ್ಕೆ ಕಾರಣವಾಗಿದೆ. 'ಯಶಸ್ಸು ಒಂದು ಪ್ರಯಾಣ, ಗಮ್ಯಸ್ಥಾನವಲ್ಲ!' ಎನ್ನುವ ಮೂಲಕ ಯಾವ ಸಂದೇಶ ರವಾನಿಸುವ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವುದು ಇದೀಗ ಕಾಂಗ್ರೆಸ್ ವಲಯದಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ.

ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆಗೆ ಸಂಬಂಧಿಸಿದಂತೆ ವರಿಷ್ಠರು ಪಕ್ಷಕ್ಕೆ ಮುಜುಗರವಾಗದಂತೆ ಇತ್ಯರ್ಥ ಪಡಿಸಬೇಕು. ಹೈಕಮಾಂಡ್ ನಾಯಕರು ಒಂದು ಸ್ಪಷ್ಟ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಪಕ್ಷಕ್ಕೆ ತುಂಬಾ ಹಾನಿಯಾಗಲಿದೆ. ಪಕ್ಷದ ಶಾಸಕರಿಗೆ ಹಾಗೂ ಅಧಿಕಾರ ಕೊಟ್ಟಿರುವ ಜನರಿಗೆ ಒಂದು ಕ್ಲಾರಿಟಿ ಸಿಗಬೇಕಾದರೆ ಹೈಕಮಾಂಡ್ ನಾಯಕರು ಮಧ್ಯಪ್ರವೇಶಿಸಬೇಕು.

– **ಬಾಲಕೃಷ್ಣ** ಮಾಗಡಿ ಶಾಸಕ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ತೆರಳುವಾಗ ನನಗೆ ಬರುವಂತೆ ಆಹ್ವಾನಿಸಿದ್ದರು. ಆದರೆ ಬೇರೆ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಿದ್ದ ಕಾರಣಕ್ಕೆ ದೆಹಲಿಗೆ ತೆರಳಲಿಲ್ಲ.

– **ಷಡಕ್ಷರಿ** ಶಾಸಕ

ಸಮಾಚಾರ ಸಣ್ಣದಲ್ಲ

ಸ್ವಿಮ್ಮಿಂಗ್ ಪೂಲ್‌ಗೆ ಬಿದ್ದು ಬಾಲಕ ಸಾವು

ಕಾರವಾರ: ಹೋಮ್ ಸ್ಟೇ ಸ್ವಿಮ್ಮಿಂಗ್ ಪೂಲ್‌ಗೆ ಬಿದ್ದು ಮಗು ಸಾವನ್ನಪ್ಪಿದ ಘಟನೆ ಉತ್ತರ ಕನ್ನಡ ಜಿಲ್ಲೆಯ ಭಟ್ಕಳದ ಜಾಲಿಯಲ್ಲಿ ನಡೆದಿದೆ. ಮೃತ ಬಾಲಕನನ್ನು ಭಟ್ಕಳದ ಮೌಲವಿ ಶಾಹಿದುಲ್ಲಾಹ ಎಂಬವರ ಪುತ್ರ ಮೊಹಮ್ಮದ್ ಮುಸ್ತಾಕೀಮ್ ಶೇಖ್ (5) ಎಂದು ಗುರುತಿಸಲಾಗಿದೆ. ಕುಟುಂಬದವರ ಜತೆ ಆಟವಾಡುತ್ತಿದ್ದಾಗ ಮಗು ಕಾಲುಜಾರಿ ಈಜುಕೊಳಕ್ಕೆ ಬಿದ್ದಿದೆ. ಪರಿಣಾಮ ಮಗು ಸ್ಥಳದಲ್ಲೇ ಸಾವನ್ನಪ್ಪಿದೆ. ಶಾಹಿದುಲ್ಲಾಹ ಹೋಮ್ ಸ್ಟೇ ಮನೆಯನ್ನು ಲೀಸ್‌ಗೆ ಪಡೆದಿದ್ದರು ಎಂದು ತಿಳಿದುಬಂದಿದೆ. ಘಟನೆ ಸಂಬಂಧ ಭಟ್ಕಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿಕೆಶಿ ಸಿಎಂ ಆಗಲಿ: ಗಣಿಗ ರವಿಕುಮಾರ್

ಮಂಡ್ಯ: ಡಿ.ಕೆ.ಶಿವಕುಮಾರ್ ಅವರು ಸಿಎಂ ಆಗಬೇಕು ಎಂದು ನನ್ನ ಹೃದಯ ಬಯಸುತ್ತಿದೆ

ಎಂದು ಮಂಡ್ಯ ಶಾಸಕ ಗಣಿಗ ರವಿಕುಮಾರ್ ಹೇಳಿದ್ದಾರೆ. ಮಂಡ್ಯದಲ್ಲಿ ಮಾತನಾಡಿದ ಅವರು, ಡಿ.ಕೆ. ಶಿವಕುಮಾರ್ ಪಕ್ಷಕ್ಕಾಗಿ ದುಡಿದಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಅವರು ಜೈಲಿಗೂ ಸಹ ಹೋಗಿದ್ದಾರೆ. ನನ್ನ ವೈಯಕ್ತಿಕ ಕಷ್ಟಕಾಲದಲ್ಲಿ ಜತೆಗೆ ನಿಂತಿದ್ದಾರೆ. ಡಿಕೆಶಿ ಅವರಿಗೆ ಸಿಎಂ ಸ್ಥಾನ ಸಿಗಬೇಕು. ನಮಗೆ ಸಿಎಂ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರು ಸಮಾನರು. ಇಬ್ಬರ ಕೊಡುಗೆ ಪಕ್ಷಕ್ಕೆ ಅಪಾರವಾಗಿದೆ. 140 ಜನ ಶಾಸಕರು ಇಬ್ಬರ ಪರವಾಗಿ ಇದ್ದಾರೆ. ಆದಷ್ಟು ಬೇಗ ಎಲ್ಲವೂ ಒಳ್ಳೆಯದಾಗುತ್ತದೆ, ಹೈಕಮಾಂಡ್ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಿರುತ್ತಾರೆ ಎಂದರು.

ಚೂನಪ್ಪ ಪೂಜಾರಿ ಕಾರು ಅಪಘಾತ

ಚಿಕ್ಕೋಡಿ: ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಚುನ್ನಪ್ಪ ಪೂಜಾರಿ ಹಾಗೂ ರೈತ ಮುಖಂಡರು ಪ್ರಯಾಣಿಸುತ್ತಿದ್ದ ಕಾರು ಅಪಘಾತಕ್ಕೀಡಾಗಿದೆ. ಹಂಚಿನಾಳದಿಂದ ನಾಗರಮುನ್ನೊಳ್ಳಿ ಮಾರ್ಗವಾಗಿ ಕಬ್ಬೂರ ಕಡೆಗೆ ಹೊರಟಿದ್ದ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ನಾಗರಮುನ್ನೊಳ್ಳಿ ಹೊರವಲಯದಲ್ಲಿ ಚಾಲಕನ ನಿಯಂತ್ರಣ ತಪ್ಪಿ ಕಾರು ಅಪಘಾತ ಸಂಭವಿಸಿದೆ. ಅದೃಷ್ಟವಶಾತ್ ಕಾರಿನಲ್ಲಿದ್ದ ಚೂನಪ್ಪ ಪೂಜಾರಿ ಸೇರಿ ಎಲ್ಲರು ಬಚಾವ್ ಆಗಿದ್ದಾರೆ. ಯಾವುದೇ ಅನಾಹುತ ಸಂಭವಿಸಿಲ್ಲ. ಡಿಸೆಂಬರ್ 11ರಿಂದ ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದ ವೇಳೆ ರೈತರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಡೆಯಲಿರುವ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ರೈತ ಮುಖಂಡರನ್ನು ಆಹ್ವಾನಿಸಲು ತೆರಳುವ ವೇಳೆ ಅಪಘಾತ ನಡೆದಿದೆ.

ಜನರ ಕಲ್ಯಾಣ ಮರೆತ ರಾಜ್ಯ ಸರಕಾರ

ಹುಬ್ಬಳ್ಳಿ: ರಾಜ್ಯದಲ್ಲಿ ಸಿಎಂ ಕುರ್ಚಿ ಹಾಗೂ ಸಚಿವ ಸ್ಥಾನಕ್ಕೆ ಕಳೆದ ಒಂದು ತಿಂಗಳಿನಿಂದ ಕಾಂಗ್ರೆಸ್ ನಾಯಕರು ದೆಹಲಿಗೆ ದೌಡಾಯಿಸುತ್ತಿದ್ದಾರೆ. ತಮ್ಮ ಸ್ವಾರ್ಥಕ್ಕಾಗಿ, ಸಂಖ್ಯಾಬಲ ತೋರಿಸಿಕೊಳ್ಳುವ

ತವಕದಲ್ಲಿದ್ದಾರೆಯೇ ಹೊರತು ಜನರ ಕಲ್ಯಾಣ ಮರೆತುಬಿಟ್ಟಿದ್ದಾರೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಆಕ್ರೋಶ ವ್ಯಕ್ತಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲ ಅಪ್ರಬುದ್ಧ ಮಂತ್ರಿಗಳು ಹಿಂದು ವಿರೋಧಿ ಹೇಳಿಕೆ ನೀಡುವುದನ್ನು ಬಿಟ್ಟು ಬೇರೇನನ್ನೂ ಮಾಡುತ್ತಿಲ್ಲ. ಪ್ರವಾಹ, ಅತೀವೃಷ್ಟಿ, ಅನಾವೃಷ್ಟಿ, ರೈತರ ಸಂಕಷ್ಟಕ್ಕೆ ಸ್ಪಂದಿಸದೇ ಉಸ್ತುವಾರಿ ಸಚಿವರು ಹಣ ವಸೂಲಿ ಗಾಗಿ ಓಡಾಡುತ್ತಿದ್ದಾರೆ ಎಂದು ಆರೋಪಿಸಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವಿಜಯೇಂದ್ರ ನಕಲಿ ವೀರಶೈವ ಲಿಂಗಾಯತ ಮತ್ತು ಹಿಂದೂ ಆಗಿದ್ದು, ಇಂತಹ ನಕಲಿ ಲಿಂಗಾಯತ, ಹಿಂದುತ್ವವಾದಿ ಯನ್ನು ರಾಜ್ಯದ ಜನ ಒಪ್ಪಲ್ಲ. ಬೇಕಾದರೆ ತಾನು ಯಾವ ವರ್ಗದವ ಎಂಬುದಕ್ಕೆ ಶಾಲೆ ಬಿಟ್ಟ ಪ್ರಮಾಣ ಪತ್ರ ಬಿಡುಗಡೆ ಮಾಡಲಿ ಎಂದು ಆಗ್ರಹಿಸಿದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಜೆ.ಪಿ.ನಗರ ಬೆಂಗಳೂರು**

ಸಮಸ್ಯೆಯೇನು..? : ಒಳಚರಂಡಿ ಪೈಪ್ ಲೈನ್ ಕಾಮಗಾರಿಯ ರಸ್ತೆಯನ್ನು ದುರಸ್ಥಿಗೊಳಿಸುವ ಬಗ್ಗೆ.

- **ಪರಿಹಾರ:** ಜೆ.ಪಿ.ನಗರ 5 ನೇ ಹಂತದಲ್ಲಿನ 15ನೇ ಮುಖ್ಯ ರಸ್ತೆ ಹೊಸ ಯು.ಜಿ.ಡಿ ಸಿಟೇಜ್ ಪೈಪ್ ಲೈನ್ ಅಳವಡಿಸಲು ಅಗೆದಿರುವ ರಸ್ತೆಯನ್ನು ಸರಿಪಡಿಸಲು ಸ್ಥಳೀಯರೊಬ್ಬರು ಸಿಎಂ, ಡಿಸಿಎಂ ಅಧಿಕೃತ ಎಕ್ಸ್ ಖಾತೆಗೆ ಎಕ್ಸ್‌ನಲ್ಲಿ ಟ್ಯಾಗ್ ಮಾಡಿದ್ದರು. ಈ ಸಂಬಂಧ ಪಾಲಿಕೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಚರಂಡಿಗಾಗಿ ಅಗೆದಿರುವ ಸ್ಥಳದಲ್ಲಿ ಡಾಂಬರೀಕರಣ ಮಾಡಿಸಿದ್ದಾರೆ.

ಶಾಸಕರ ಶಕ್ತಿಗಿಂತ, ಹೈಕಮಾಂಡ್ ಕೊಟ್ಟ ಮಾತು ಉಳಿಸಿಕೊಳ್ಳಬೇಕು: ಡಿಸಿಎಂ ಡಿಕೆಶಿ

ಶಾಸಕರ ಅಭಿಪ್ರಾಯ ಪಡೆದು ಹೈ ತೀರ್ಮಾನಿಸಲಿ ಎನ್ನುತ್ತಿರುವ ಸಿಎಂ ಸಿದ್ದರಾಮಯ್ಯ

ನಾಯಕರ ಪಟ್ಟು: ಹೈಕಮಾಂಡ್‌ಗೆ ಇಕ್ಕಟ್ಟು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿನ ಸರಣಿ ಸಭೆಯ ಹೊರತಾಗಿಯೂ ಶುರುವಾಗಿರುವ ಗೊಂದಲಕ್ಕೆ ಯಾವುದೇ ಸ್ಪಷ್ಟತೆ ಸಿಕ್ಕಿಲ್ಲ. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಇಬ್ಬರೂ ತಮ್ಮ ತಮ್ಮ ವಾದಕ್ಕೆ ಗಟ್ಟಿಯಾಗಿ ನಿಂತಿರುವುದು ಹೈಕಮಾಂಡ್ ಅನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಕರ್ನಾಟಕದಲ್ಲಿ ಈ ಇಬ್ಬರೂ ನಾಯಕರು ತಮ್ಮದೇಯಾದ ಕಾರಣಗಳಿಗೆ ಶಕ್ತಿಯುತವಾಗಿದ್ದಾರೆ. ಆದ್ದರಿಂದ ಯಾರ ಪರ ತೀರ್ಮಾನ ಕೈಗೊಳ್ಳಬೇಕು ಎಂಬುದು ಈಗ ಹೈಕಮಾಂಡ್ ತಲೆನೋವಿಗೆ ಕಾರಣವಾಗಿದ್ದು, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಇಬ್ಬರು ಬಣದವರಿಗೂ ಒಪ್ಪಿಗೆಯಾಗುವಂತಹ ರೀತಿಯಲ್ಲಿ, ಪಕ್ಷ ಮತ್ತು ಸರಕಾರವನ್ನು ಕಾಪಾಡಿಕೊಳ್ಳಲು ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಇಬ್ಬರಿಗೂ ಸರ್ವ ಸಮ್ಮತವಾಗಿ ಸೂತ್ರವನ್ನು ರೂಪಿಸಬೇಕಿರುವುದು ಹೈಕಮಾಂಡ್ ಅನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಅಧಿಕಾರ ಹಂಚಿಕೆ ಎಲ್ಲವನ್ನು ತಳ್ಳಿ ಹಾಕಿ ಸಂಪುಟ ಪುನಾರ ಚನೆಗೆ ಅವಕಾಶ ಕೊಡಿ ಎಂಬ ಬೇಡಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಖರ್ಗೆಯವರ ಮುಂದೆ ಮಂಡಿಸಿದ್ದಾರೆ. ಆದರೆ ಇದಕ್ಕೆ ಡಿ.ಕೆ.ಶಿವಕುಮಾರ್ ಸುತಾರಾಂ ಒಪ್ಪಿಲ್ಲ. ಆದ್ದರಿಂದ ಇಬ್ಬರ ಮಾತನ್ನು ಆಲಿಸಿ, ಸ್ವಲ್ಪ ದಿನ ಸುಮ್ಮನಿರುವಂತೆ ಸಲಹೆ ನೀಡಿ, ಎಲ್ಲವನ್ನೂ ರಾಹುಲ್ ಗಾಂಧಿ ಹೆಗಲಿಗೆ ಹಾಕಿದ್ದಾರೆ.

ಮುಂದುವರಿದ ಬಣ ರಾಜಕೀಯ: ರಹಸ್ಯಸಭೆ

ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಬಣಗಳ ಶಾಸಕರ ಸಭೆ, ಸಮಾಲೋಚನೆಗಳು ಮುಂದುವರೆದಿದ್ದು, ದೆಹಲಿಯಲ್ಲಿರುವ ಡಿಕೆಶಿ ಬಣದಿಂದ ಸಂಖ್ಯಾಬಲ ಪ್ರದರ್ಶನ ಮಾಡಿದ್ದಾರೆ. ಇದಕ್ಕೆ ಪ್ರತಿಯಾಗಿ ಸಿದ್ದರಾಮಯ್ಯ ಬಣದ ಪ್ರಮುಖ ಸಚಿವರುಗಳು ದೆಹಲಿಗೆ ತೆರಳಿ ಕಾಂಗ್ರೆಸ್ ವರಿಷ್ಠ ರಾಹುಲ್‌ಗಾಂಧಿ ಸೇರಿದಂತೆ ಹಲವು ವರಿಷ್ಠ ನಾಯಕರನ್ನು ಭೇಟಿ ಮಾಡಿ ಸಿದ್ದರಾಮಯ್ಯನವರನ್ನೇ ಮುಖ್ಯಮಂತ್ರಿಯನ್ನಾಗಿ ಮುಂದುವರೆಸಲು ಮನವಿ ಮಾಡಲು ಸಿದ್ಧತೆ ನಡೆಸಿದ್ದಾರೆ ಎನ್ನಲಾಗಿದೆ.

ಚರ್ಚೆ ನಡೆದಿದ್ದೇನು?

- ಆಪ್ತ ಸಚಿವ ಜತೆ ಶನಿವಾರ ಸಿಎಂ ಸಿದ್ದರಾಮಯ್ಯ ಸಭೆ
- ಖರ್ಗೆ ಭೇಟಿಗೂ ಮುನ್ನ ಆಪ್ತರ ಜತೆ ಸಭೆ ನಡೆಸಿದ ಸಿದ್ದರಾಮಯ್ಯ
- ದೆಹಲಿಯಲ್ಲಿ ಡಿಕೆಶಿ ಪರ ಆಪ್ತರು ಲಾಬಿ ನಡೆಸಿರುವ ಕುರಿತು ಚರ್ಚೆ
- ಸಿದ್ದರಾಮಯ್ಯ ಅಧಿಕಾರ ಭದ್ರಪಡಿಸಿ ಕೊಳ್ಳಲು ಕಾರ್ಯತಂತ್ರಗಳ ಚರ್ಚೆ

ಸಿಎಂ-ಆಪ್ತ ಸಚಿವರ ಸಭೆ

ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆಯ ಜಟಾಪಟಿ ನಡೆದು ಡಿ.ಕೆ.ಶಿವಕುಮಾರ್ ಬಣ ದೆಹಲಿಗೆ ತೆರಳಿ ಲಾಬಿ ನಡೆಸುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಿನ ಕಾರ್ಯ ತಂತ್ರಗಳನ್ನು ರೂಪಿಸಲು ಶನಿವಾರ ಆಪ್ತ ಸಚಿವರೊಂದಿಗೆ ಮತ್ತೊಂದು ಸುತ್ತಿನ ಸಭೆ ನಡೆಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಭೇಟಿಗೂ ಮುನ್ನ ಸಿಎಂ ಸಿದ್ದರಾಮಯ್ಯ ತಮ್ಮ ಆಪ್ತ ಸಚಿವರುಗಳೊಂದಿಗೆ ಚರ್ಚಿಸಿ, ಏನೆಲ್ಲಾ ಪ್ರಸ್ತಾಪಗಳನ್ನು ಮಂಡಿಸಬೇಕು. ಅಧಿಕಾರ ಭದ್ರಪಡಿಸಿಕೊಳ್ಳಲು ಯಾವೆಲ್ಲಾ ಕಾರ್ಯತಂತ್ರಗಳನ್ನು ರೂಪಿಸಬೇಕು ಎಂಬ ಬಗ್ಗೆ ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ.

ವಿರೋಧ ಪಕ್ಷದವರ ಸಲಹೆ ಬೇಕಿಲ್ಲ: ಪರಂ

ಅಧಿಕಾರ ಹಸ್ತಾಂತರ ಹೈ ತೀರ್ಮಾನವೇ ಅಂತಿಮ

ತುಮಕೂರು: ಪವರ್ ಶೇರಿಂಗ್ ಬಗ್ಗೆ ಹೈ ಕಮಾಂಡ್ ತೀರ್ಮಾನ ಮಾಡಲಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆ ರೀತಿ ಏನು ಕಾಣಿಸುತ್ತಿಲ್ಲ

ಹೊರಗಿನ ಪ್ರಪಂಚಕ್ಕೆ ಆ ರೀತಿ ಆಗಿರಬಹುದು. ಆಡಳಿತದಲ್ಲಿ ಆಗಲು ನಾವು ಬಿಟ್ಟಿಲ್ಲ. ಆಡಳಿತದಲ್ಲಿ ಮುಖ್ಯಮಂತ್ರಿಗಳಾಗಲಿ ಬೇರೆ ಬೇರೆ ಸಚಿವರುಗಳಾಗಲಿ ಇಲಾಖೆಗಳನ್ನು ಕಂಟ್ರೋಲ್ ತಗೊಂಡು ಕೆಲಸ ಮಾಡುತ್ತಿದ್ದಾರೆ ಎಂದರು.

ಡಿ.ಕೆ.ಶಿವಕುಮಾರ್ ಹೆಸರಲ್ಲಿ ಪವರ್ ಶೇರಿಂಗ್ ಬಗ್ಗೆ ಅಶೋಕ್ ಹೇಳಿಕೆ ವಿಚಾರಕ್ಕೆ ಉತ್ತರಿಸಿ ವಿರೋಧ ಪಕ್ಷದವರ ಸಲಹೆ ಸೂಚನೆಗಳಿಗೆ ನಮ್ಮ ಪಕ್ಷದಲ್ಲಿ ಆಂತರಿಕವಾಗಿ ನಾವೇನೂ ನಿರ್ಧಾರ ಮಾಡಿಲ್ಲ. ನಮ್ಮಲ್ಲಿ ಹೈಕಮಾಂಡ್ ಇದೆ. ಅವರಿಗೆ ಗೊತ್ತಿದೆ ಯಾವ ಸಂದರ್ಭದಲ್ಲಿ ಏನು ಮಾಡಬೇಕು. ಯಾರಿಗೆ ಅವಕಾಶ ಕೊಡಬೇಕು. ಯಾರಿಗೆ ಯಾವ ಅಧಿಕಾರ ಕೊಡಬೇಕು ಎಂದು ತೀರ್ಮಾನ ಮಾಡಲಾಗುತ್ತದೆ ಎಂದರು.

ಹೈಕಮಾಂಡ್ ನವ್ರು ಹೇಳಿದ್ದಾರಾ?

ಪವರ್ ಶೇರಿಂಗ್ ಬಗ್ಗೆ ಯಾರು ಹೇಳಿದ್ದಾರೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರಾ ಅಥವಾ ಕರ್ನಾಟಕ ಉಸ್ತುವಾರಿ ಜನರಲ್ ಸೆಕ್ರೆಟರಿ ಆಗಲಿ ಯಾರಾದರೂ ಹೇಳಿದ್ದಾರಾ. ನಾವೇ ಹೇಳಿಕೊಂಡು ಓಡಾಡುತ್ತಿದ್ದೇವೆ ಅಷ್ಟೇ. 50-50 ಆಗಿದೇ ಎಂದು ಯಾರಾದರೂ ಅಧಿಕೃತವಾಗಿ ಹೇಳಬೇಕಲ್ವಾ. ಅಧಿಕೃತ ಹೇಳಿಕೆಗಳು ಬಂದರೆ ಅದಕ್ಕೆ ಕಿಮ್ಮತ್ ಇರುತ್ತದೆ. ಹಾದಿಬೀದಿಯಲ್ಲಿ ನಿಂತು ಹೇಳಿದರೆ ಅದಕ್ಕೆ ಕಿಮ್ಮತ್ ಬರುತ್ತಾದಾ ? ಒಪ್ಪಂದ ಆಗಿದೆ ಅನ್ನೋದು ಗೊತ್ತಿಲ್ಲ, ಆಗಿಲ್ಲ ಅನ್ನೋದು ಗೊತ್ತಿಲ್ಲ. ಅದನ್ನು ಹೈಕಮಾಂಡ್ ಹೇಳಬೇಕು ಎಂದು ಸಚಿವ ಪರಮೇಶ್ವರ್ ಹೇಳಿದರು.

ಡಿಕೆಶಿ ಸಿಎಂ ಆಗಲೆಂದು ಶನಿದೇವರಿಗೆ ತುಲಾಭಾರ



ಪಾವಗಡ ಪಟ್ಟಣದ ಶನಿದೇವರ ದೇಗುಲದಲ್ಲಿ ಡಿಕೆಶಿ ಸಿಎಂ ಆಗಲೆಂದು ಅಭಿಮಾನಿಗಳು ತುಲಾಭಾರ ನಡೆಸಿದರು.

ತುಮಕೂರು: ಡಿಸಿಎಂ ಡಿಕೆ ಶಿವಕುಮಾರ್ ಮುಖ್ಯಮಂತ್ರಿ ಆಗಲೆಂದು ಹಾರೈಸಿ ಅವರ ಅಭಿಮಾನಿಗಳು ಶನಿದೇವರಿಗೆ ತುಲಾಭಾರ ಸೇವೆ ಮಾಡಿದ್ದಾರೆ. ತುಮಕೂರು ಜಿಲ್ಲೆ ಪಾವಗಡ ತಾಲೂಕಿನ ಅಭಿಮಾನಿಗಳು ಪಾವಗಡ ಪಟ್ಟಣದ ಶನಿದೇವರಿಗೆ 91 ಕೆ.ಜಿ. ತೂಕದ ಎಳ್ಳಿನ ತುಲಾಭಾರ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ರಾಜಕೀಯದಲ್ಲಿ ಕುರ್ಚಿ ಕದನವಿರುವ ಸಮಯದಲ್ಲೇ ಉಪಮುಖ್ಯಮಂತ್ರಿ, ಡಿಕೆ ಶಿವಕುಮಾರ್ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಲೆಂದು ಪಾವಗಡದಲ್ಲಿ ಅಭಿಮಾನಿಗಳು ವಿಶಿಷ್ಟ ರೀತಿಯಲ್ಲಿ ಹಾರೈಸಿದ್ದಾರೆ. ಡಿಕೆ ಶಿವಕುಮಾರ್ ಅವರಿಗೆ ಇರುವ ಕುಜದೋಷ ಮತ್ತು ಶನಿ ದೋಷಗಳು ದೂರವಾಗಿ, ಮುಖ್ಯಮಂತ್ರಿ ಸ್ಥಾನಕ್ಕೆ ಹಾದಿ ಸುಗಮವಾಗಲೆಂದು ತುಲಾಭಾರ ನಡೆಸಲಾಗಿದೆ. ಇದೇ ವೇಳೆ ದೇವಾಲಯದ ನವಗ್ರಹಗಳಿಗೆ ವಿಶೇಷ ತೈಲಾಭಿಷೇಕವನ್ನು ಸಹ ನೆರವೇರಿಸಿ, ಶಿವಕುಮಾರ್ ಅವರ ರಾಜಕೀಯ ಜೀವನಕ್ಕೆ ಪ್ರಾರ್ಥಿಸಿದ್ದಾರೆ. ಕಾರ್ಯಕ್ರಮದಲ್ಲಿ ಮಾಜಿ ತಾಲೂಕು ಪಂಚಾಯತ್ ಸದಸ್ಯ ಹನುಮಂತರಾಯಪ್ಪ, ಡಿಕೆಶಿ ಅಭಿಮಾನಿ ಬಳಗ ಅಧ್ಯಕ್ಷ ಕಳರಾಜನಹಳ್ಳಿ ಗೋವಿಂದರಾಜು, ಅರಸೀಕೆರೆ ನಿವೃತ್ತ ಶಿಕ್ಷಕ ಚಿಕ್ಕಣ್ಣ, ಉಮಾಪತಿ, ಹರೀಶ್ ಸೇರಿದಂತೆ ಅನೇಕ ಅಭಿಮಾನಿಗಳು ಭಾಗವಹಿಸಿದ್ದರು.

ಭ್ರಷ್ಟಾಚಾರದಲ್ಲಿ ರಾಜ್ಯ ಸರಕಾರ ಮುಳುಗಿದೆ

ಉತ್ತರ ಕರ್ನಾಟಕದ ಸಮಸ್ಯೆ ಪರಿಹರಿಸಲಿ: ಛಲವಾದಿ

ಬಾಗಲಕೋಟೆ: ರಾಜ್ಯ ಸರಕಾರ ಬೆಂಗಳೂರಿನ ಅಭಿವೃದ್ಧಿಯನ್ನು ರಾಜ್ಯದ ಅಭಿವೃದ್ಧಿ ಎಂದು ತಿಳಿದುಕೊಂಡಿದೆ. ರಿಯಲ್ ಎಸ್ಟೇಟ್

ಗಾಗಿ ಬೆಂಗಳೂರು ಸುತ್ತಲು ಅಭಿವೃದ್ಧಿ ಮಾಡಲಾಗುತ್ತಿದೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಆಕ್ರೋಶ ವ್ಯಕ್ತ ಪಡಿಸಿದರು.

ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗಾವಿಯಲ್ಲಿ 10 ದಿನ ಕುಂದಾ ತಿಂದು ಹೋಗುವುದನ್ನು ಬಿಟ್ಟು, ರಾಜ್ಯ ಸರಕಾರ ತಾರತಮ್ಯ ಬಿಟ್ಟು, ಉತ್ತರ ಕರ್ನಾಟಕದ ಅಭಿವೃದ್ಧಿಯತ್ತ ಗಮನಹರಿಸಬೇಕು ಎಂದು ಆಗ್ರಹಿಸಿದರು.

ಬೆಳಗಾವಿಯಲ್ಲಿ ಡಿ.8 ರಿಂದ ನಡೆಯಲಿರುವ ಚಳಿಗಾಲ ಅಧಿವೇಶನದಲ್ಲಿ 31 ವಿಧೇಯಕಗಳನ್ನು ಪಾಸ್ ಮಾಡಲು ಸರಕಾರ ಹೊರಟಿದೆ. ವಿಧೇಯಕಗಳನ್ನು ಬಿಟ್ಟು, ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳನ್ನು ಪರಿಹರಿಸಿ ಎಂದು ಸಭಾಪತಿ ಹಾಗೂ ಸರಕಾರಕ್ಕೆ ಪತ್ರ ಬರೆದಿದ್ದಾಗಿ ತಿಳಿಸಿದರು.

ಕಬ್ಬು ದರಕ್ಕೆ ಉತ್ತರ ಕರ್ನಾಟಕದ ವಿವಿಧ ಕಡೆಗಳಲ್ಲಿ ರೈತರು ಪ್ರತಿಭಟನೆ ನಡೆಸಿದರು. ಈಗ ಗೋವಿನ ಜೋಳಕ್ಕೆ ವೈಜ್ಞಾನಿಕ ಬೆಲೆಗೆ ಆಗ್ರಹಿಸಿ ಹೋರಾಟ ನಡೆಸುತ್ತಿದ್ದಾರೆ. ಸರಕಾರ ಇವುಗಳನ್ನು ಬಗೆಹರಿಸುವತ್ತ ಚಿಂತಿಸುತ್ತಿಲ್ಲ. ತಹಸೀಲ್ದಾರ್, ಉಪವಿಭಾಗಾಧಿಕಾರಿಗಳು ಲೂಟಿ ಮಾಡುವ ಕೆಲಸಕ್ಕಿಳಿದಿದ್ದಾರೆ. ಗಂಟು ಕೊಟ್ಟು ಬಂದಿರುತ್ತಾರೆ.ಖಾಸಗಿ ಜಾಗೆಯಲ್ಲಿ ಕುಳಿತು ಕೆಲಸ ಮಾಡುವ ದಿನಗಳು ಬಂದಿವೆ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

> ಕಾಂಗ್ರೆಸ್ ಹೈಕಮಾಂಡ್ ಬದುಕಿದೆಯಾ? ರಾಜ್ಯ ಸರಕಾರದಲ್ಲಿ ಭ್ರಷ್ಟಾಚಾರ ಇದೆ ಎಂದು ಕಾಂಗ್ರೆಸ್ ಪಕ್ಷದವರೆ ಹೇಳುತ್ತಿದ್ದಾರೆ. ಸಿಎಂ ಬದಲಾವಣೆ ಹಾಗೂ ಸಚಿವ ಸಂಪುಟ ವಿಸ್ತರಣೆಯಂತಹ ವಿಷಯಗಳಲ್ಲಿ ಕಾಲಹರಣ ಮಾಡುತ್ತಿದೆ. ಇಲ್ಲಿಯವರೆಗೆ ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆ ಬಗ್ಗೆ ಕಾಂಗ್ರೆಸ್ ಹೈ ಕಮಾಂಡ್ ಮಾತನಾಡುತ್ತಿಲ್ಲ. ಇದನ್ನು ನೋಡಿದರೆ ಕಾಂಗ್ರೆಸ್ ಹೈಕಮಾಂಡ್ ಬದುಕಿದೆಯಾ ಎಂಬ ಅನುಮಾನ ಕಾಡುತ್ತಿದೆ.
>
> -ಛಲವಾದಿ ನಾರಾಯಣಸ್ವಾಮಿ, ಪರಿಷತ್ ವಿಪಕ್ಷದ ನಾಯಕ

ಮೈಮೇಲೆ ಡೀಸೆಲ್ ಸುರಿದುಕೊಂಡು ಹೈಡ್ರಾಮಾ

ಶಾಸಕ ಜಿ.ಎಸ್.ಪಾಟೀಲಗೆ ಸಚಿವ ಸ್ಥಾನ ನೀಡಲು ಆಗ್ರಹ

ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಲು ಆಗ್ರಹಿಸಿ ಗಜೇಂದ್ರಗಡ ಪಟ್ಟಣದಲ್ಲಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಗದಗ: ರೋಣ ಮತಕ್ಷೇತ್ರದ ಶಾಸಕ ಜಿ. ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ ಗಜೇಂದ್ರಗಡ ಪಟ್ಟಣದ ಕಾಲಕಾಲೇಶ್ವರ ವೃತ್ತದಲ್ಲಿ ನಡೆಯುತ್ತಿದ್ದ ಪ್ರತಿಭಟನೆ ಸಂದರ್ಭದಲ್ಲಿ ಇಬ್ಬರು ಕಾಂಗ್ರೆಸ್ ಕಾರ್ಯಕರ್ತರು ಮೈಮೇಲೆ ಡೀಸೆಲ್ ಸುರಿದುಕೊಂಡು ಹೈಡ್ರಾಮ ನಡೆಸಿದರು.

ಪ್ರತಿಭಟನೆ ನಡೆಯುತ್ತಿದ್ದ ಸಂದರ್ಭದಲ್ಲಿ ವೃತ್ತದ ಒಂದು ಬದಿಯಲ್ಲಿ ದಿಂಡೂರ ಗ್ರಾಮದ ಸಂಗಪ್ಪ ತೇಜಿ ಮೈಮೇಲೆ ಡೀಸೆಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದರು. ತಕ್ಷಣ ಕಾರ್ಯಕರ್ತರು ಹಾಗೂ ಪೊಲೀಸರು ಆತನಿಂದ ಡೀಸೆಲ್ ಕ್ಯಾನ್ ಕಸಿದುಕೊಂಡು ಸಮಾಧಾನಪಡಿಸಿದರು. ಪ್ರತಿಭಟನೆ ಮುಗಿದ ಬಳಿಕ ಮಾರನಬಸರಿ ಗ್ರಾಮದ ರವಿ ಅಬ್ಬಿಗೇರಿ ಕಾಲಕಾಲೇಶ್ವರ ವೃತ್ತದ ಮೇಲೆ ಹತ್ತಿ ಮೈಮೇಲೆ ಡೀಸೆಲ್ ಸುರಿದುಕೊಂಡರು. ತಕ್ಷಣ ಪೊಲೀಸರು ಆತನನ್ನು ತಡೆದರು. ಆತ್ಮಹತ್ಯೆಗೆ ಯತ್ನಿಸಿದ ಸಂಗಪ್ಪ ಹಾಗೂ ರವಿ, ನಮ್ಮ ನಾಯಕರಾದ ಜಿ.ಎಸ್.ಪಾಟೀಲರಿಗೆ ಪದೇ ಪದೇ ಅನ್ಯಾಯವಾಗುತ್ತಿದೆ. ಈ ಬಾರಿ ಸಚಿವ ಸ್ಥಾನ ನೀಡದಿದ್ದರೆ ಅವರಿಗಾಗಿ ಪ್ರಾಣ ನೀಡಲು ಸಿದ್ಧರಿದ್ದೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಸ್ಯೆ ಇತ್ಯರ್ಥ ಆಗದಿದ್ದರೆ ಪಕ್ಷ ಸಂಘಟನೆಗೆ ಕುತ್ತು: ಬಾಲಕೃಷ್ಣ

ಹೈಕಮಾಂಡ್ ಗೊಂದಲ ಸರಿಪಡಿಸಲಿ

ಬೆಂಗಳೂರು: ರಾಜ್ಯದಲ್ಲಿ ಆಗುತ್ತಿರುವ ಗೊಂದಲಗಳನ್ನು ಕೂಡಲೇ ಪಕ್ಷದ ಹೈಕಮಾಂಡ್ ಮಧ್ಯಪ್ರವೇಶಿಸಿ ಸರಿಪಡಿಸಬೇಕು. ಇಲ್ಲದಿದ್ದರೆ ಪಕ್ಷದ ಸಂಘಟನೆಗೆ ಮುಂದೆ ಸಮಸ್ಯೆಯಾಗಲಿದೆ ಎಂದು ಶಾಸಕ ಮಾಗಡಿ ಬಾಲಕೃಷ್ಣ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆಗೆ ಸಂಬಂಧಿಸಿದಂತೆ ವರಿಷ್ಠರು ಪಕ್ಷಕ್ಕೆ ಮುಜುಗರವಾಗದಂತೆ ಇತ್ಯರ್ಥ ಪಡಿಸಬೇಕು. ಹೈಕಮಾಂಡ್ ನಾಯಕರು ಒಂದು ಸ್ಪಷ್ಟ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಪಕ್ಷಕ್ಕೆ ತುಂಬಾ ಹಾನಿಯಾಗಲಿದೆ. ಪಕ್ಷದ ಶಾಸಕರಿಗೆ ಹಾಗೂ ಅಧಿಕಾರ ಕೊಟ್ಟಿರುವ ಜನರಿಗೆ ಒಂದು ಕ್ಲಾರಿಟಿ ಸಿಗಬೇಕಾದರೆ ಹೈಕಮಾಂಡ್ ನಾಯಕರು ಮಧ್ಯಪ್ರವೇಶಿಸಬೇಕು ಶಾಸಕರಿಗೂ, ಜನರಿಗೂ ಒಂದು ಸ್ಪಷ್ಟನೆ ಸಿಗಬೇಕಾದರೆ ಪಕ್ಷದ ಹೈಕಮಾಂಡ್ ಕೂಡಲೇ ಪ್ರವೇಶಿಸಬೇಕು. ಇಲ್ಲದಿದ್ದರೆ ಪಕ್ಷಕ್ಕೆ ಭಾರಿ ಹಾನಿಯಾಗುವುದರೊಂದಿಗೆ ಸಂಘಟನೆ ಹಂತಹಂತವಾಗಿ ಪಕ್ಷ ಕ್ಷೀಣಿಸುತ್ತದೆ ಎಂದು ಎಚ್ಚರಿಸಿದರು. ಮುಖ್ಯಮಂತ್ರಿ ಯಾರಾಗಿರಬೇಕು ಎನ್ನುವುದನ್ನು ಸಂಖ್ಯೆಗಿಂತ ಹೆಚ್ಚಾಗಿ ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಅಂತಿಮವಾಗಿ ಯಾರು ಸಿಎಂ ಆಗಬೇಕು ಅಂತ ಹೈಕಮಾಂಡ್ ನಿರ್ಧಾರ ಮಾಡುತ್ತದೆ. ಡಿಕೆಶಿ ಅವರಿಗೆ ಅಧಿಕಾರ ಹಂಚಿಕೆ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತೆ. ಇದರ ಬಗ್ಗೆ ಹೈಕಮಾಂಡ್ ಒಂದು ಇತ್ಯರ್ಥ ಮಾಡಬೇಕು. ಇಲ್ಲದಿದ್ದರೆ ಪಕ್ಷದಲ್ಲಿ, ಕಾರ್ಯಕರ್ತರಲ್ಲಿ ಗೊಂದಲ ಆಗುತ್ತದೆ. ಗೊಂದಲ ಈಗಾಗಲೇ ಆಗಿರುವ ಹಿನ್ನೆಲೆಯಲ್ಲಿ ಇದಕ್ಕೆ ಹೈಕಮಾಂಡ್ ಒಂದು ಅಂತಿಮ ರೂಪ ಕೊಡಬೇಕು ಎಂದು ಒತ್ತಾಯಿಸಿದರು.

> ದೆಹಲಿಗೆ ನನ್ನ ನೇತೃತ್ವದಲ್ಲಿ ಹೋಗುತ್ತಿಲ್ಲ. ಇಲ್ಲಿ ಯಾರ ನೇತೃತ್ವವೂ ಅವಶ್ಯಕತೆ ಇಲ್ಲ. ಡಿಕೆಶಿ ಅವರಿಗೆ ಮುಖ್ಯಮಂತ್ರಿ ಆಗೋದಕ್ಕೆ ಅವರದ್ದೇ ಆದ ಶಕ್ತಿಯಿದೆ. ಯಾರೋ ಹೋಗಿ ಅಥವಾ ನಾನೇ ಹೋಗಿ ಸಿಎಂ ಮಾಡಿಸುತ್ತೀನಿ ಎಂದು ಬಿಲ್ಡಪ್ ಕೊಡುವುದಕ್ಕಾಗುವುದಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗುತ್ತೇನೆ. ಆದರೆ ರಾಜಕೀಯ ಮಾತನಾಡುವುದಿಲ್ಲ. ಅಧಿಕಾರ ಹಂಚಿಕೆ ಬಗ್ಗೆ ಮಾತಾಡುವಷ್ಟು ಸೀನಿಯರ್ ಅಲ್ಲ.
>
> - ಬಾಲಕೃಷ್ಣ, ಶಾಸಕ

ಈಗಲಾದರೂ ಡಿಕೆಶಿ ರಾಜ್ಯದ ಜನರ ಮುಂದೆ ಸತ್ಯ ಹೇಳಲಿ

ಕೊಟ್ಟ ಮಾತಿನಂತೆ ಸಿದ್ದರಾಮಯ್ಯ ನಡೆಯಲಿ

ಮೈಸೂರು: ಡಿ.ಕೆ.ಶಿವಕುಮಾರ್, ಡಿ.ಕೆ.ಸುರೇಶ್ ತಲೆ ಮೇಲೆ ಕೈ ಇಟ್ಟು 30 ತಿಂಗಳ ನಂತರ ಅಧಿಕಾರ ಬಿಟ್ಟುಕೊಡುತ್ತೇನೆ ಎಂದು ಹೇಳಿರುವ ಸಿದ್ದರಾಮಯ್ಯ ಅವರೆ ಕೊಟ್ಟ ಮಾತಿನಂತೆ ನಡೆದುಕೊಳ್ಳಿ ವಚನ

ಭ್ರಷ್ಟರಾಗಬೇಡಿ ಎಂದು ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ದೆಹಲಿಯ ಕರ್ನಾಟಕ ಭವನದಲ್ಲಿ ಎಐಸಿಸಿ ಅಧ್ಯಕ್ಷರ ಸಮ್ಮುಖದಲ್ಲೇ ಸಿದ್ದರಾಮಯ್ಯ ಅವರು, ಡಿ.ಕೆ.ಶಿವಕುಮಾರ್ ಮತ್ತು ಡಿ.ಕೆ.ಸುರೇಶ್ ತಲೆ ಮೇಲೆ ಕೈ ಇಟ್ಟು 30 ತಿಂಗಳ ನಂತರ ಅಧಿಕಾರ ಬಿಟ್ಟುಕೊಡು ವುದಾಗಿ ಹೇಳಿದ್ದಾರೆ. ಇದು ಎಲ್ಲರಿಗೂ ಗೊತ್ತು. ಯಾರು ಮಾತನಾಡುತ್ತಿಲ್ಲ ಅಷ್ಟೇ. ನಿಮ್ಮ ಮತ್ತು ಸಿದ್ದರಾಮಯ್ಯ ನಡುವಿನ ಒಪ್ಪಂದವನ್ನು ಈಗಲಾದರೂ ಡಿ.ಕೆ.ಶಿವಕುಮಾರ್ ರಾಜ್ಯದ ಜನರಿಗೆ ಹೇಳಬೇಕು ಎಂದು ಆಗ್ರಹಿಸಿದರು.

ಎಚ್.ಡಿ.ಕುಮಾರಸ್ವಾಮಿ ಯಡಿಯೂರಪ್ಪ ಅವರಿಗೆ ವಚನ ಭ್ರಷ್ಟ ಮಾಡಿದರು. ಅಂತಹದನ್ನು ನೀವು ಮಾಡಿ ಸಮುದಾಯದ ಮೇಲೆ ತಪ್ಪು ಸಂದೇಶ ನೀಡಬೇಡಿ. ರಾಜ್ಯದ ಜನ ಸಿದ್ದರಾಮಯ್ಯನನ್ನು ನೋಡಿ 136 ಸ್ಥಾನ ಕೊಟ್ಟಿಲ್ಲ, ಕಾಂಗ್ರೆಸ್ ಪಕ್ಷಕ್ಕೆ ಕೊಟ್ಟಿರುವುದು. ಒಪ್ಪಂದದಂತೆ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡಬೇಕು ಎಂದರು.

ಆಗೇಕೆ ಕುರುಬ ಸ್ವಾಮೀಜಿಗೆ ವಿರೋಧ?: ಎಚ್.ವಿಶ್ವನಾಥ್

ಕುರುಬ ಸಮಾಜದ ಮಠವನ್ನು 1988 ರಲ್ಲಿ ಸ್ಥಾಪನೆ ಮಾಡಬೇಕಾದರೆ ಸಿದ್ದರಾಮಯ್ಯ ಎಲ್ಲಿದ್ದರು? ಅವರೊಬ್ಬ ಬೊಗಳೆದಾಸ ಎಂದು ಎಚ್.ವಿಶ್ವನಾಥ್ ವಾಗ್ದಾಳಿ ನಡೆಸಿದರು. ರೌಡಿ ಪುಟ್ಟಸ್ವಾಮಿ ಜತೆ ವಿಶ್ವನಾಥ್ ಸೇರಿಕೊಂಡಿದ್ದರು ಎಂದು ಸಿಎಂ ಸಿದ್ದರಾಮಯ್ಯ ಹೇಳಿದ ಮಾತಿಗೆ ತಿರುಗೇಟು ನೀಡಿದ ವಿಶ್ವನಾಥ್, ಕುರುಬ ಸಮಾಜವನ್ನು ಯಾರು ಕಟ್ಟಿದರು ಎಂಬುದು ಸಮಾಜದ ಜನರಿಗೆ ಸ್ವಾಮೀಜಿಗಳಿಗೆ ಗೊತ್ತಿದೆ. 1920 ರಲ್ಲಿ ಸ್ಥಾಪನೆಯಾದ ಸಮಾಜದ ಬಗ್ಗೆ ಸಿದ್ದರಾಮಯ್ಯ ಅವರಿಗೆ ಕೃತಜ್ಞತೆ ಇಲ್ಲ. 1988 ರಲ್ಲಿ ನಾನು ರಾಜ್ಯ ಸುತ್ತಿ ಸಮಾಜದವರೊಟ್ಟಿಗೆ ಕಾಗಿನೆಲೆಯಲ್ಲಿ ಮಠವನ್ನು ಸ್ಥಾಪಿಸಿದೆ. ಆಗ ಸಿದ್ದರಾಮಯ್ಯ ಎಲ್ಲಿದ್ದರು? ಮಠಕ್ಕೆ ಸ್ವಾಮೀಜಿ ನೇಮಕ ಮಾಡಬೇಕು ಎಂದಾಗ ವಿರೋಧಿಸಿದರು. ಯಾವ ಸ್ವಾಮೀಜಿ? ಅದನ್ನೆಲ್ಲಾ ಬಿಟ್ಟು ಸಮುದಾಯದವರಿಗೆ ರಾಮಮನೋಹರ ಲೋಹಿಯಾ ಪುಸ್ತಕ ಕೊಡಿ ಎಂದಿದ್ದರು ಎಂದು ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದರು.

ಗಂಡನ ಹತ್ಯೆ: 7 ವರ್ಷ ಬಳಿಕ ಸಿಕ್ಕಿ ಬಿದ್ದ ಪತ್ನಿ

ಕಲಬುರಗಿ: ಅನೈತಿಕ ಸಂಬಂಧಕ್ಕೆ ಅಡ್ಡಿಯಾದ ಗಂಡನಿಗೆ ಪತ್ನಿ ಸುಪಾರಿ ಕೊಟ್ಟು ಕೊಲೆ ಮಾಡಿಸಿ ಸಹಜ ಸಾವಿನಂತೆ ಬಿಂಬಿಸಿ ಅಂತ್ಯಸಂಸ್ಕಾರ ಮಾಡಿದ ಘಟನೆ ಕಲಬುರಗಿಯಲ್ಲಿ ನಡೆದಿದೆ.

ಕಲಬುರಗಿ ತಾಲೂಕಿನ ಕಣ್ಣಿ ಗ್ರಾಮದ ಬೀರಪ್ಪ ಎಂಬಾತನ ಕೊಲೆಗೆ ಆರೋಪಿಗಳು ಸುಪಾರಿ ಪಡೆದಿದ್ದರು. ಇದೀಗ ಬೀರಪ್ಪನ ಹೆಂಡತಿ ಶಾಂತಾಬಾಯಿ ಕೊಲೆಗೆ ಸುಪಾರಿ ನೀಡಿರೋದು ಬೆಳಕಿಗೆ ಬಂದಿದೆ. ಅಸಹಜ ಸಾವು ಎಂದು ಬಿಂಬಿಸಿ ಹೆಂಡತಿ ಮತ್ತು ಕುಟುಂಬಸ್ಥರು ಅಂತ್ಯ ಸಂಸ್ಕಾರ ನೆರವೇರಿಸಿದ್ದಾರೆ. ಏಳು ವರ್ಷಗಳ ಬಳಿಕ ಅಸಹಜ ಸಾವಿನ ಹಿಂದಿನ ಕೊಲೆ ರಹಸ್ಯ ಬಯಲಾಗಿದೆ. ಸುಪಾರಿ ಕೊಟ್ಟು ಕೊಲೆ ಮಾಡಿಸಿದ ದುಡ್ಡಿನ ವಿಚಾರದ ವಿಡಿಯೊ ಇದೀಗ ವೈರಲ್ ಆಗಿದೆ. ದುಡ್ಡು ಕೊಡದೆ ಇರೋದಕ್ಕೆ ಕೊಲೆ ಆರೋಪಿ ಫೋನ್‌ನಲ್ಲಿ ಮಾತನಾಡುತ್ತಿರುವ ವಿಡಿಯೊ ವೈರಲ್ ಆಗಿದೆ. ಕೊಲೆ ಆರೋಪಿ ಮಹೇಶ್ ಫೋನ್‌ನಲ್ಲಿ ಮಹಿಳೆ ಜತೆ ಮಾತಾಡಿರುವ ವಿಡಿಯೊ ವೈರಲ್ ಆಗಿದ್ದರ ಬೆನ್ನಲ್ಲೇ ಬೀರಪ್ಪ ಸಹೋದರ ಕೊಲೆ ದೂರು ದಾಖಲಿಸಿದ್ದಾರೆ. ಕೊಲೆ ದೂರಿನ ಸಂಬಂಧ ಬೀರಪ್ಪನ ಹೆಂಡತಿ ಶಾಂತಾಬಾಯಿ, ಮಹೇಶ್, ಸುರೇಶ್, ಸಿದ್ದು, ಶಂಕರ್ ಸೇರಿ ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

ಕುರ್ಚಿ ಕಚ್ಚಾಟದಲ್ಲಿ ರಾಜ್ಯಸರಕಾರದ ಆಡಳಿತ ಯಂತ್ರ ನಿಷ್ಕ್ರಿಯ: ಆರ್.ಅಶೋಕ

ಪರಿಸ್ಥಿತಿ ಬಿಗಡಾಯಿಸಿದರೆ ರಾಜ್ಯಪಾಲರ ಮೊರೆ

ಬೆಂಗಳೂರು: ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ, ಕುರ್ಚಿ ಕದನ, ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಅನಿವಾರ್ಯವಾಗಿ ನಾವು ರಾಜ್ಯಪಾಲರ ಮೊರೆ ಹೋಗುತ್ತೇವೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ ಎಚ್ಚರಿಕೆ ನೀಡಿದ್ದಾರೆ.

ಬನಶಂಕರಿಯ 2ನೇ ಹಂತದ ಶಾಸಕರ ಕಚೇರಿಯಲ್ಲಿ ಹಮ್ಮಿಕೊಂಡಿದ್ದ 150 ವರ್ಷಗಳ ವಂದೇ ಮಾತರಂ ಸಂಭ್ರಮಾಚರಣೆ ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಕಾದು ನೋಡುತ್ತಿದ್ದೇವೆ. ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದುಬಿದ್ದಿದೆ. ಅಧಿಕಾರಿಗಳು ಯಾರ ಮಾತು ಕೇಳುತ್ತಿಲ್ಲ, ಜನರ ಗೋಳು ಕೇಳುವವರೇ ಇಲ್ಲದಂತಾಗಿದೆ. ಮೂರು ದಿನದೊಳಗೆ ಸರಿ ಹೋಗದಿದ್ದರೆ ರಾಜ್ಯಪಾಲರಿಗೆ ದೂರು ಕೊಡುತ್ತೇವೆ ಎಂದರು.

ಯಾವುದೇ ನಿರ್ಧಾರ ತೆಗೆದುಕೊಳ್ಳುವುದಕ್ಕೂ ಕಾಂಗ್ರೆಸ್ ಹೈಕಮಾಂಡ್‌ಗೆ ಭಯವಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ಬಿಟ್ಟು ಕೊಡುವುದಿಲ್ಲ. ಹಾಗಂತ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸುಮನಿರುವುದಿಲ್ಲ. ಒಂದು ವೇಳೆ ಸಿದ್ದರಾಮಯ್ಯನವರನ್ನು ಅಧಿಕಾರದಿಂದ ಕೆಳಗಿಳಿಸಿದರೆ ರಾಜ್ಯದಲ್ಲಿ ಕಾಂಗ್ರೆಸ್ ಮುಳುಗಿ ಅರಾಜಕತೆ ಸೃಷ್ಟಿಯಾಗುತ್ತದೆ. ಮುಖ್ಯಮಂತ್ರಿ ಸ್ಥಾನ ಸಿಗದಿದ್ದರೆ ಶಿವಕುಮಾರ್ ಸುಮ್ಮನಿರುವುದಿಲ್ಲ. ಇದು ಕಾಂಗ್ರೆಸ್ ಪಾಲಿಗೆ ಉಗುಳಲು ಆಗದ, ನುಂಗಲು ಆಗದ ಬಿಸಿ ತುಪ್ಪವಾಗಿದೆ. ಸಿದ್ದರಾಮಯ್ಯ ವಲಸೆ ಬಂದವರು. ಕೊಟ್ಟಿರುವ ಅಧಿಕಾರ ಸಾಕು. ನನಗೆ ಕೊಡಿ ಎಂದು ಡಿಸಿಎಂ ಕೇಳುತ್ತಿದ್ದಾರೆ. ಸಿದ್ದರಾಮಯ್ಯ ವಚನಭ್ರಷ್ಟ ಎಂದು ಡಿ.ಕೆ. ಸುರೇಶ್ ಹೇಳುತ್ತಿದ್ದಾರೆ. ವಚನಭ್ರಷ್ಟ ಎಂಬುದು ಸಿಎಂಗೆ ಕಾಂಗ್ರೆಸ್ ನಾಯಕರು ಕೊಟ್ಟಿರುವ ಟೈಟಲ್ ಎಂದರು.

ರಾಜ್ಯದಲ್ಲಿ ಸಂಪೂರ್ಣ ಗೊಂದಲಮಯ ವಾತಾವರಣವಿದೆ. ಸರಕಾರ ಸತ್ತು ಹೋಗಿ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಅಧಿಕಾರಿಗಳ ಮಾತು ಕೇಳುತ್ತಿಲ್ಲ. ಗೊಂದಲ ಬಗೆಹರಿಸದಿದ್ದರೆ ಪಕ್ಷ ಕ್ಷೀಣಿಸುತ್ತದೆ ಎಂದು ಶಾಸಕ ಬಾಲಕೃಷ್ಣ ಹೇಳುತ್ತಿದ್ದಾರೆ. ಸರಕಾರ ಐಸಿಯುನಲ್ಲಿದೆ. ಸಮಸ್ಯೆ ಬಗೆಹರಿಸದೆ ಹೈಕಮಾಂಡ್‌ಗೆ ಬೇರೆ ದಾರಿ ಇಲ್ಲ. ಕಾಂಗ್ರೆಸ್‌ನಲ್ಲಿ ಒಟ್ಟು ನಾಲ್ಕು ಬಣಗಳಾಗಿವೆ. ಸಿಎಂ, ಡಿಸಿಎಂ, ತಟಸ್ಥ ಬಣ, ಹೈಕಮಾಂಡ್ ಬಣಗಳಾಗಿವೆ. ಕಾನೂನು ಸುವ್ಯವಸ್ಥೆ ಕುಸಿದು ಬಿದ್ದರೂ ಇಲ್ಲಿ ಹೇಳುವವರು, ಕೇಳುವವರು ಇಲ್ಲ. ರಾಜ್ಯದಲ್ಲಿ ಅರಾಜಕತೆ ಸೃಷ್ಟಿಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

> ಜೈಲಿನಲ್ಲಿರುವ ಶಾಸಕರ ಬಳಿ ಹೋಗಿ ಮುಂದೊಂದು ದಿನ ಸಂದರ್ಭ ಬಂದರೆ ನನಗೆ ಬೆಂಬಲ ಕೊಡಿ ಎಂದು ಗೋಗರಿಯುವಂತಹ ಪರಿಸ್ಥಿತಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಬಂದಿರುವುದು ನಾಚಿಕೆಗೇಡಿನ ಸಂಗತಿ.
>
> - ಆರ್.ಅಶೋಕ, ಪ್ರತಿಪಕ್ಷ ನಾಯಕ

ರಾಹುಲ್ ವೀಕ್ ಲೀಡರ್

ಸಿಎಂ ಸ್ಥಾನಕ್ಕಾಗಿ ನಡೆಯುತ್ತಿರುವ ಕಚ್ಚಾಟದಿಂದಾಗಿ ಆಡಳಿತ ಯಂತ್ರ ನಿಷ್ಕ್ರಿಯವಾಗಿದೆ. ಸಾರ್ವಜನಿಕರು, ರೈತ ಸಮುದಾಯ, ವಿದ್ಯಾರ್ಥಿಗಳು ಎದುರಿಸುತ್ತಿರುವ ಹತ್ತಾರು ಸಮಸ್ಯೆ ಬಗೆಹರಿಸಬೇಕೆಂಬ ಕಾಳಜಿ ಕಾಂಗ್ರೆಸ್‌ಗೆ ಇಲ್ಲ. ಈ ನಡುವೆ ಅಪರಾಧ ಕೃತ್ಯಗಳು ಹೆಚ್ಚಿವೆ. ರೈತರು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ರಾಜಕೀಯ ಪರಿಸ್ಥಿತಿ ಅಧೋಗತಿಗೆ ಹೋಗಿದೆ. ಇಲ್ಲಿ ಯಾರು ಮುಖ್ಯಮಂತ್ರಿ ಎಂದು ತಿಳಿಯುತ್ತಿಲ್ಲ. ರಾಹುಲ್ ಗಾಂಧಿ ವೀಕ್ ಲೀಡರ್ ಆಗಿದ್ದು, ಇಡೀ ರಾಜ್ಯದಲ್ಲಿ ವೀಕ್ ನಾಯಕತ್ವ ಎದ್ದು ಕಾಣುತ್ತಿದೆ. ಈ ಆಟಗಳ ನಡುವೆ ರಾಜ್ಯದ ಜನರು ಪರಿತಪಿಸುತ್ತಿದ್ದಾರೆ. ಆದ್ದರಿಂದ ಕೂಡಲೇ ಕಾಂಗ್ರೆಸ್ ಹೈಕಮಾಂಡ್ ಸಿಎಂ ಬಗ್ಗೆ ತನ್ನ ತೀರ್ಮಾನ ನೀಡಬೇಕು ಎಂದು ಆರ್.ಅಶೋಕ ಆಗ್ರಹಿಸಿದರು.

ಇದು ಇಸ್ರೇಲಿ ಜಲವಿಜ್ಞಾನಿಗಳ ಕಣ್ಣಿಗೆ ಕಾಣದ ಅಣೆಕಟ್ಟಿನ ವಿಸ್ಮಯ!

ಶೈಜಾಫ್ ಅಣೆಕಟ್ಟಿನ ವಿಶೇಷವೆಂದರೆ, ಇದು ನದಿಯ ಮೇಲೆ ಕಟ್ಟಿದ ಗೋಡೆಯಲ್ಲ, ಬದಲಾಗಿ ನದಿಯ 'ಒಳಗೆ' ಅಥವಾ ನದಿಯ ಪಾತ್ರದ ಮರಳಿನ ಪದರದ ಕೆಳಗೆ ಕಟ್ಟಿದ ಗೋಡೆ. ಇದನ್ನು ತಾಂತ್ರಿಕವಾಗಿ ಸಬ್-ಸರ್ಫೇಸ್ ಡ್ಯಾಮ್ ಅಥವಾ ಅಂತರ್ಜಲ ಅಣೆಕಟ್ಟು ಎಂದು ಕರೆಯುತ್ತಾರೆ. ಇಲ್ಲಿ ನೀರು ಭೂಮಿಯ ಮೇಲ್ಮೈಗಿಂತ ಕೆಳಗೆ, ಮರಳಿನ ಪದರಗಳ ನಡುವೆ ಸಂಗ್ರಹವಾಗಿರುತ್ತದೆ.

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಸಾಮಾನ್ಯವಾಗಿ 'ಅಣೆಕಟ್ಟು' ಅಥವಾ 'ಡ್ಯಾಮ್' ಎಂದ ತಕ್ಷಣ ನಮ್ಮ ಕಣ್ಣಮುಂದೆ ಬರುವುದು ಬೃಹದಾಕಾರದ ಕಾಂಕ್ರೀಟ್ ಗೋಡೆಗಳು, ಅದರ ಹಿಂದೆ ನಿಂತಿರುವ ವಿಶಾಲವಾದ ನೀಲಿ ನೀರಿನ ಚಾಪೆ ಮತ್ತು ಕ್ರೆಸ್ಟ್ ಗೇಟ್‌ಗಳಿಂದ ಧುಮ್ಮಿಕ್ಕುವ ಜಲಧಾರೆ. ಕನ್ನಂಬಾಡಿ (ಕೆಆರ್ ಎಸ್) ಅಥವಾ ಆಲಮಟ್ಟಿ ಅಣೆಕಟ್ಟುಗಳನ್ನು ನೋಡಿದ ನಮಗೆ, ಅಣೆಕಟ್ಟು ಎಂದರೆ ನೀರನ್ನು ತಡೆದು ನಿಲ್ಲಿಸುವ ಒಂದು ಭೌತಿಕ ರಚನೆ ಅಥವಾ ಬೃಹತ್ ಗೋಡೆ ಎಂದೇ ತಿಳಿದಿದೆ. ಇಂಥ ತೆರೆದ ಅಣೆಕಟ್ಟುಗಳಲ್ಲಿ ಎರಡು ಪ್ರಮುಖ ಸಮಸ್ಯೆಗಳಿವೆ. ಒಂದು, ಬಿಸಿಲ ತಾಪಕ್ಕೆ ಅಪಾರ ಪ್ರಮಾಣದ ನೀರು ಆವಿಯಾಗಿ ಹೋಗುತ್ತದೆ. ಎರಡು, ನೆಲದ ಅಡಿಯಲ್ಲಿ ನೀರು ಇಂಗಿ ಹೋಗಿ ನಷ್ಟವಾಗುತ್ತದೆ.

ಆದರೆ, ಇಸ್ರೇಲ್ ಎಂಬ ಮರುಭೂಮಿಯ ದೇಶ ಈ ಎರಡೂ ಸಮಸ್ಯೆಗಳಿಗೆ ಸೆಡ್ಡು ಹೊಡೆದು, ವಿಜ್ಞಾನವನ್ನೇ ಬೆರಗುಗೊಳಿಸುವಂಥ ಒಂದು ವಿನೂತನ ಪ್ರಯೋಗವನ್ನು ಮಾಡಿದೆ. ಅದೇ 'ಅರವಾ' ಮರುಭೂಮಿ ಪ್ರದೇಶದಲ್ಲಿ, 'ನೆಕಾರಟ್' ನದಿಗೆ ನಿರ್ಮಿಸಲಾದ 'ಶೈಜಾಫ್ ಅಣೆಕಟ್ಟು'. ಇದೊಂದು 'ನದಿ ಪಾತ್ರದೊಳಗಿನ ಅಣೆಕಟ್ಟು' ಅಂದರೆ Underground Dam. ಇಲ್ಲಿ ನೀರು ಹರಿಯುವುದೂ ಕಾಣುವುದಿಲ್ಲ, ನಿಂತಿರುವುದೂ ಕಾಣುವುದಿಲ್ಲ. ಆದರೂ ಇಲ್ಲಿ ನೀರು ಆವಿಯಾಗುವುದಿಲ್ಲ, ಹನಿ ನೀರೂ ವ್ಯರ್ಥವಾಗಿ ಇಂಗಿಹೋಗುವುದಿಲ್ಲ!

ಇಸ್ರೇಲಿನ ದಕ್ಷಿಣ ಭಾಗದಲ್ಲಿರುವ 'ಅರವಾ' ಕಣಿವೆ ಒಂದು ಅತ್ಯಂತ ಶುಷ್ಕ ಪ್ರದೇಶ. ಇಲ್ಲಿ ಮಳೆ ಬರುವುದು ತೀರಾ ಅಪರೂಪ. ಆದರೆ ಯಾವಾಗಲಾದರೂ ಮಳೆ ಬಂದರೆ, ಅದು ಪ್ರವಾಹದ ರೂಪದಲ್ಲಿ ಬರುತ್ತದೆ. ಇಲ್ಲಿರುವ 'ನೆಕಾರಟ್' ನದಿ ಒಂದು ಹಂಗಾಮಿ ನದಿ (ವಾಡಿ). ಅಂದರೆ ವರ್ಷದ ಬಹುಕಾಲ ಇದು ಒಣಗಿರುತ್ತದೆ. ಮಳೆ ಬಂದಾಗ ಮಾತ್ರ ಇಲ್ಲಿ ಭೋರ್ಗರೆದು ನೀರು ಹರಿಯುತ್ತದೆ.

ಹಿಂದೆ ಈ ಪ್ರವಾಹದ ನೀರು ಮರುಭೂಮಿಯ ಮರಳಿನಲ್ಲಿ ಸುಮ್ಮನೆ ಹರಿದು, ಕೊನೆಗೆ ಉಪ್ಪು ನೀರಿನ ಸರೋವರವಾದ 'ಮೃತ ಸಮುದ್ರ' (Dead Sea) ಸೇರಿ ವ್ಯರ್ಥವಾಗುತ್ತಿತ್ತು. ಈ ನೀರನ್ನು ಸಾಂಪ್ರದಾಯಿಕ ಅಣೆಕಟ್ಟು ಕಟ್ಟಿ ನಿಲ್ಲಿಸಿದರೆ, ಅಲ್ಲಿನ 40–45 ಡಿಗ್ರಿ ಉಷ್ಣಾಂಶಕ್ಕೆ ಅರ್ಧದಷ್ಟು ನೀರು ಆವಿಯಾಗಿ ಹೋಗುತ್ತಿತ್ತು. ಈ ಸಮಸ್ಯೆಗೆ ಪರಿಹಾರವಾಗಿ ಹುಟ್ಟಿದ್ದೇ ಶೈಜಾಫ್ ಡ್ಯಾಮ್.

ಏನಿದು 'ನದಿ ಪಾತ್ರದೊಳಗಿನ ಅಣೆಕಟ್ಟು'?

ಶೈಜಾಫ್ ಅಣೆಕಟ್ಟಿನ ವಿಶೇಷವೆಂದರೆ, ಇದು ನದಿಯ ಮೇಲೆ ಕಟ್ಟಿದ ಗೋಡೆಯಲ್ಲ, ಬದಲಾಗಿ ನದಿಯ 'ಒಳಗೆ' ಅಥವಾ ನದಿಯ ಪಾತ್ರದ ಮರಳಿನ ಪದರದ ಕೆಳಗೆ ಕಟ್ಟಿದ ಗೋಡೆ. ಇದನ್ನು ತಾಂತ್ರಿಕವಾಗಿ ಸಬ್-ಸರ್ಫೇಸ್ ಡ್ಯಾಮ್ (Sub-surface Dam) ಅಥವಾ ಅಂತರ್ಜಲ ಅಣೆಕಟ್ಟು ಎಂದು ಕರೆಯುತ್ತಾರೆ.

ಇದರ ನಿರ್ಮಾಣ ಮತ್ತು ಕಾರ್ಯವೈಖರಿ ಹೇಗಿದೆ? ಎಂಜಿನಿಯರ್‌ಗಳು ನೆಕಾರಟ್ ನದಿಯ ಪಾತ್ರದಲ್ಲಿ ಅಡ್ಡಲಾಗಿ ಆಳವಾದ ಕಂದಕವನ್ನು ತೋಡಿದರು. ಎಲ್ಲಿಯವರೆಗೆ ಎಂದರೆ, ನೀರು ಇಂಗದ ಕಠಿಣ ಬಂಡೆ (Bedrock) ಸಿಗುವವರೆಗೆ. ನಂತರ ಆ ಕಂದಕದಲ್ಲಿ ಮಣ್ಣು ಅಥವಾ ಕಾಂಕ್ರೀಟ್ ಅಥವಾ ಪ್ಲಾಸ್ಟಿಕ್ ಲೈನಿಂಗ್ ಬಳಸಿ ಒಂದು ಗೋಡೆಯನ್ನು ನಿರ್ಮಿಸಿದರು. ವಿಶೇಷವೆಂದರೆ, ಈ ಗೋಡೆಯ ಎತ್ತರ ನದಿಪಾತ್ರದ ಮರಳಿನ ಮಟ್ಟಕ್ಕಿಂತ ಕೆಳಗೇ ಇರುತ್ತದೆ. ನಿರ್ಮಾಣದ ನಂತರ ಇದನ್ನು ಮತ್ತೆ ನೈಸರ್ಗಿಕ ಮರಳಿನಿಂದ ಮುಚ್ಚಲಾಯಿತು. ಈಗ ಅಲ್ಲಿ ಅಣೆಕಟ್ಟು ಇದೆ ಎಂಬುದಕ್ಕೆ ಯಾವ ಕುರುಹೂ ಸಿಗುವುದಿಲ್ಲ!

ಮಳೆ ಬಂದಾಗ ನೆಕಾರಟ್ ನದಿಯಲ್ಲಿ ಪ್ರವಾಹ ಉಂಟಾಗುತ್ತದೆ. ಈ ನೀರು ಮೇಲ್ಮೈಯಲ್ಲಿ ರಭಸವಾಗಿ ಹರಿಯುವುದರ ಜತೆಗೆ, ನದಿಪಾತ್ರದ ಮರಳಿನ ಮೂಲಕ ಕೆಳಗೂ ಇಳಿಯುತ್ತದೆ. ಹೀಗೆ ಮರಳಿನ ಪದರದ ಮೂಲಕ ಹರಿಯುವ ನೀರಿಗೆ ಈ 'ಗುಪ್ತ ಗೋಡೆ' ಅಡ್ಡಿಯಾಗುತ್ತದೆ. ಆಗ ನೀರು ಅಲ್ಲಿಯೇ ಮರಳಿನ ಕಣಗಳ ನಡುವೆ ಸಂಗ್ರಹವಾಗಲು ಪ್ರಾರಂಭಿಸುತ್ತದೆ.

ಇಲ್ಲಿ ನೀರು ಆವಿಯಾಗದಿರಲು ಮತ್ತು ಇಂಗದಿರಲು ಪ್ರಮುಖ ಕಾರಣಗಳಿವೆ. ಇಲ್ಲಿ ನೀರು ಭೂಮಿಯ ಮೇಲ್ಮೈಗಿಂತ ಕೆಳಗೆ, ಮರಳಿನ ಪದರಗಳ ನಡುವೆ ಸಂಗ್ರಹವಾಗಿರುತ್ತದೆ. ಸೂರ್ಯನ ಕಿರಣಗಳು ನೇರವಾಗಿ ನೀರನ್ನು ತಲುಪುವುದಿಲ್ಲ. ಮರುಭೂಮಿಯ ಸುಡುವ ಬಿಸಿಲು ಮೇಲಿನ ಮರಳನ್ನು ಕಾಯಿಸಬಹುದೇ ವಿನಾ, ಅಡಿಯಲ್ಲಿರುವ ನೀರನ್ನು ಆವಿಯಾಗಿಸಲು ಸಾಧ್ಯವಿಲ್ಲ. ಇದರಿಂದಾಗಿ ಶೇ.ನೂರರಷ್ಟು ನೀರು ಉಳಿತಾಯವಾಗುತ್ತದೆ.

ಸಾಮಾನ್ಯವಾಗಿ ಕೆರೆಗಳಲ್ಲಿ ನೀರು ಪಾತಾಳಕ್ಕೆ ಇಂಗಿಹೋಗುತ್ತದೆ. ಆದರೆ ಶೈಜಾಫ್ ಅಣೆಕಟ್ಟಿನಲ್ಲಿ, ಕೆಳಭಾಗದಲ್ಲಿ ನೈಸರ್ಗಿಕವಾದ ಕಠಿಣ ಬಂಡೆ ಇರುವುದರಿಂದ ನೀರು ಕೆಳಗೆ ಹೋಗಲಾರದು. ಹಾಗೆಯೇ, ಅಡ್ಡಲಾಗಿ ಕೃತಕ ಗೋಡೆ ಕಟ್ಟಿರುವುದರಿಂದ ನೀರು ಮುಂದೆ ಹರಿದು ಸಮುದ್ರ ಸೇರಲಾರದು. ಹೀಗೆ ನೀರು ಒಂದು ಬೃಹತ್ ಭೂಗತ ಟ್ಯಾಂಕ್‌ನಲ್ಲಿ ಇದ್ದಂತೆ ಸುರಕ್ಷಿತವಾಗಿರುತ್ತದೆ. ಅರವಾ ಪ್ರದೇಶದ ರೈತರಿಗೆ ಈ ಅಣೆಕಟ್ಟು ವರದಾನವಾಗಿದೆ. ಕೃಷಿಗೆ ಸಂಜೀವಿನಿಯಾಗಿದೆ.

ಮರಳಿನ ಪದರಗಳ ಮೂಲಕ ನೀರು ಇಳಿಯುವುದರಿಂದ, ಅದು ನೈಸರ್ಗಿಕವಾಗಿಯೇ ಶೋಧಿಸಲ್ಪಡುತ್ತದೆ. ಹೀಗಾಗಿ ಕೃಷಿಗೆ ಅತ್ಯಂತ ಶುದ್ಧ ನೀರು ಸಿಗುತ್ತದೆ. ಮೇಲ್ಮೈ ಅಣೆಕಟ್ಟುಗಳು ಬೇಸಗೆಯಲ್ಲಿ ಒಣಗಬಹುದು. ಆದರೆ ಮರಳಿನ ಅಡಿಯಲ್ಲಿ ರಕ್ಷಿತವಾಗಿರುವ ಈ ನೀರು ದೀರ್ಘಕಾಲದವರೆಗೆ ಲಭ್ಯವಿರುತ್ತದೆ. ಪಂಪ್‌ಗಳ ಮೂಲಕ ಈ ನೀರನ್ನು ಮೇಲೆತ್ತಿ, ಹನಿ ನೀರಾವರಿ (Drip Irrigation) ಪದ್ಧತಿಯ ಮೂಲಕ ಅಲ್ಲಿನ ಪ್ರಸಿದ್ಧ ದಪ್ಪ ಮೆಣಸಿನಕಾಯಿ (Bell Peppers), ಖರ್ಜೂರ ಮತ್ತು ಕಲ್ಲಂಗಡಿ ಬೆಳೆಗಳಿಗೆ ಬಳಸಲಾಗುತ್ತದೆ. ಇಸ್ರೇಲ್ ಈ ಪ್ರದೇಶದಿಂದಲೇ ಯುರೋಪ್‌ಗೆ ಭಾರಿ ಪ್ರಮಾಣದ ತರಕಾರಿಗಳನ್ನು ರಫ್ತು ಮಾಡುತ್ತದೆ ಎಂದರೆ ಈ ಅಣೆಕಟ್ಟಿನ ಮಹತ್ವ ಅರಿವಾಗುತ್ತದೆ.

ದೊಡ್ಡ ಅಣೆಕಟ್ಟುಗಳನ್ನು ಕಟ್ಟುವಾಗ ಕಾಡು ಮುಳುಗಡೆಯಾಗುತ್ತದೆ, ಪ್ರಾಣಿ ಸಂಕುಲಕ್ಕೆ ತೊಂದರೆಯಾಗುತ್ತದೆ. ಆದರೆ ಶೈಜಾಫ್ ಅಣೆಕಟ್ಟು ಪರಿಸರಸ್ನೇಹಿ. ಇದು ನದಿಯ ನೈಸರ್ಗಿಕ ಹರಿವಿನಂತೆ ಮೇಲ್ನೋಟಕ್ಕೆ ಕಾಣುವುದರಿಂದ, ಪ್ರಾಣಿಗಳು ಮುಕ್ತವಾಗಿ ಓಡಾಡಬಹುದು. ನೀರು ನಿಂತು ಸೊಳ್ಳೆಗಳ ಕಾಟ ಇರುವುದಿಲ್ಲ ಅಥವಾ ಪಾಚಿ ಕಟ್ಟುವುದಿಲ್ಲ. ಭೂಮಿಯ ಮೇಲ್ಮೈಯನ್ನು ಕೃಷಿಗೆ ಅಥವಾ ರಸ್ತೆ ನಿರ್ಮಾಣಕ್ಕೆ ಬಳಸಿಕೊಳ್ಳಬಹುದು.

'ನದಿ ಪಾತ್ರದೊಳಗಿನ ಅಣೆಕಟ್ಟು' ಎಂಬ ಪರಿಕಲ್ಪನೆ ಕೇವಲ ಎಂಜಿನಿಯರಿಂಗ್ ಕೌಶಲವಲ್ಲ, ಅದು ಪ್ರಕೃತಿಯನ್ನು ಅರ್ಥ ಮಾಡಿಕೊಂಡು ನಡೆಸಿದ ಜೀವನಕಲೆ. ನಮಗೆ ನೀರು ಕಾಣಬೇಕಿಲ್ಲ, ಅದು ಬಳಕೆಗೆ ಸಿಕ್ಕರೆ ಸಾಕು ಎಂಬ ಸರಳ ಸತ್ಯವನ್ನು ಇಸ್ರೇಲಿಗರು ಅರಿತಿದ್ದಾರೆ.

ಭಾರತದಂಥ ದೇಶಗಳಲ್ಲಿ, ಅದರಲ್ಲೂ ಉತ್ತರ ಕರ್ನಾಟಕದಂಥ ಬಿಸಿಲ ನಾಡಿನಲ್ಲಿ, ಕೆರೆಗಳ ನೀರು ಬೇಸಗೆಯಲ್ಲಿ ಆವಿಯಾಗಿ ಹೋಗುವುದನ್ನು ನಾವು ನೋಡುತ್ತೇವೆ. ಶೈಜಾಫ್ ಡ್ಯಾಮ್ ಮಾದರಿಯು, ನೀರನ್ನು ಹೇಗೆ 'ಬಚ್ಚಿಟ್ಟು' ಬಳಸಬಹುದು ಎಂಬುದಕ್ಕೆ ಜಗತ್ತಿಗೆ ಒಂದು ಮಾದರಿಯಾಗಿದೆ. ಅಲ್ಲಿ ನೀರು ಮಣ್ಣಿನ ಪಾಲಾಗುವುದಿಲ್ಲ, ಬದಲಾಗಿ ಮಣ್ಣೇ ನೀರನ್ನು ಮಡಿಲಲ್ಲಿಟ್ಟು ಕಾಪಾಡುತ್ತದೆ. ಇದೇ ನಿಜವಾದ ಜಲಕ್ರಾಂತಿ!

ಈ ತಂತ್ರಜ್ಞಾನ ಸಂಪೂರ್ಣವಾಗಿ ಹೊಸದೇನಲ್ಲ. ರೋಮನ್ನರು ಮತ್ತು ಪುರಾತನ ಪರ್ಷಿಯನ್ನರು ಇರಾನ್‌ನಲ್ಲಿ 'ಕಾನತ್' (Qanat) ಎಂಬ ಸುರಂಗ ವ್ಯವಸ್ಥೆಯ ಮೂಲಕ ಇಂಥದ್ದೇ ಪ್ರಯೋಗ ಮಾಡಿದ್ದರು. ಅವರು ಭೂಮಿಯ ಅಡಿಯಲ್ಲಿ ಸುರಂಗ ಕೊರೆದು ನೀರನ್ನು ಆವಿಯಾಗದಂತೆ ತಂದು ಕೃಷಿಗೆ ಬಳಸುತ್ತಿದ್ದರು. ಇಸ್ರೇಲ್ ಈ ಪ್ರಾಚೀನ ಬುದ್ಧಿವಂತಿಕೆಗೆ ಆಧುನಿಕ ಎಂಜಿನಿಯರಿಂಗ್ ಸ್ಪರ್ಶ ನೀಡಿ, ಪ್ಲಾಸ್ಟಿಕ್ ಶೀಟ್‌ಗಳು ಮತ್ತು ಕಾಂಕ್ರೀಟ್ ತಡೆಗೋಡೆಗಳನ್ನು ಬಳಸಿ ಇದನ್ನು ಹೆಚ್ಚು ಪರಿಣಾಮಕಾರಿಯಾಗಿಸಿದೆ.

ಮರುಭೂಮಿಯ ಮಣ್ಣಿನಲ್ಲಿ ಸ್ವಾಭಾವಿಕವಾಗಿ ಉಪ್ಪಿನಂಶ ಹೆಚ್ಚಿರುತ್ತದೆ. ಸಾಮಾನ್ಯವಾಗಿ ನೀರನ್ನು ಒಂದೇ ಕಡೆ ನಿಲ್ಲಿಸಿದರೆ, ಅದು ಮಣ್ಣಿನಲ್ಲಿರುವ ಉಪ್ಪನ್ನು ಹೀರಿಕೊಂಡು ಕೃಷಿಗೆ ಯೋಗ್ಯವಿಲ್ಲದಂತಾಗುತ್ತದೆ. ಆದರೆ ಶೈಜಾಫ್ ಅಣೆಕಟ್ಟಿನಲ್ಲಿ ನೀರು ನಿಂತಿದ್ದರೂ, ಮರಳಿನ ಪದರಗಳ ನಡುವೆ ನಿಧಾನವಾಗಿ ಚಲಿಸುತ್ತಲೇ ಇರುತ್ತದೆ. ಹೀಗೆ ಚಲಿಸುವಾಗ ಅದು ನೈಸರ್ಗಿಕವಾಗಿ ಶುದ್ಧೀಕರಣಗೊಳ್ಳುತ್ತದೆ. ಇದರಿಂದ ನೀರಿನಲ್ಲಿ ಉಪ್ಪಿನಂಶ ಹೆಚ್ಚಾಗದಂತೆ (Salinity) ತಡೆದು, ಬೆಳೆಗೆ ಸಿಹಿನೀರನ್ನು ಒದಗಿಸಲು ಸಾಧ್ಯವಾಗುತ್ತದೆ.

ಮರುಭೂಮಿಯಲ್ಲಿ ಮಳೆ ಬಂದರೆ ಅದು ರಾಕ್ಷಸ ಸ್ವರೂಪದಲ್ಲಿ ಬರುತ್ತದೆ. ಒಣಗಿದ ಭೂಮಿಗೆ ನೀರು ಹೀರುವ ಶಕ್ತಿ ಇರುವುದಿಲ್ಲ, ಹೀಗಾಗಿ ನೀರು ರಭಸವಾಗಿ ಹರಿದು ಸಿಕ್ಕಿದ್ದನ್ನೆಲ್ಲ ಕೊಚ್ಚಿಕೊಂಡು ಹೋಗುತ್ತದೆ. ಶೈಜಾಫ್ ಅಣೆಕಟ್ಟು ಈ ರಭಸದ ಪ್ರವಾಹಕ್ಕೆ 'ಬ್ರೇಕ್' ಹಾಕಿದಂತೆ ಕೆಲಸ ಮಾಡುತ್ತದೆ. ನದಿಪಾತ್ರದ ಅಡಿಯಲ್ಲಿರುವ ಈ ತಡೆಗೋಡೆ, ನೀರಿನ ವೇಗವನ್ನು ತಗ್ಗಿಸಿ, ಅದು ನಿಧಾನವಾಗಿ ಭೂಮಿಯೊಳಗೆ ಇಳಿಯುವಂತೆ ಮಾಡುತ್ತದೆ. ಇದರಿಂದ ಮಣ್ಣಿನ ಸವಕಳಿ ತಪ್ಪುತ್ತದೆ.

ನಂಬಿದರೆ ನಂಬಿ, ಈ ಮರುಭೂಮಿಯ ಮಧ್ಯೆ ಈ ಅಣೆಕಟ್ಟಿನ ನೀರನ್ನು ಬಳಸಿ ಅಲಂಕಾರಿಕ ಮೀನುಗಳನ್ನು (Ornamental Fish) ಬೆಳೆಸಿ ಯುರೋಪ್‌ಗೆ ರಫ್ತು ಮಾಡಲಾಗುತ್ತದೆ. ದೊಡ್ಡ ಅಣೆಕಟ್ಟುಗಳಿಗೆ ಹೂಳು ತೆಗೆಯಲು (Desilting) ಕೋಟ್ಯಂತರ ರುಪಾಯಿ ಖರ್ಚಾಗುತ್ತದೆ. ಆದರೆ ಶೈಜಾಫ್ ಅಣೆಕಟ್ಟಿನಲ್ಲಿ ಹೂಳಿನ ಸಮಸ್ಯೆ ಇಲ್ಲ. ಏಕೆಂದರೆ ನದಿಪಾತ್ರದ ಮೇಲ್ಭಾಗದಲ್ಲಿ ನೀರು ಸಹಜವಾಗಿ ಹರಿಯುವುದರಿಂದ, ಹೂಳು ತಾನಾಗಿಯೇ ಮುಂದೆ ಸಾಗುತ್ತದೆ. ಕೇವಲ ಶುದ್ಧನೀರು ಮಾತ್ರ ಮರಳಿನ ಅಡಿಯಲ್ಲಿ ಶೇಖರಣೆಯಾಗುತ್ತದೆ. ಹೀಗಾಗಿ ಇದನ್ನು ನಿರ್ವಹಣೆ ಮಾಡುವುದು ತುಂಬಾ ಸುಲಭ ಮತ್ತು ಅಗ್ಗ.

ನಮ್ಮ ದೇಶದ ರಾಜಸ್ಥಾನ, ಗುಜರಾತಿನ ಕಛ್ ಪ್ರದೇಶ ಮತ್ತು ಕರ್ನಾಟಕದ ಉತ್ತರ ಭಾಗದ ಜಿಲ್ಲೆಗಳಲ್ಲಿ (ರಾಯಚೂರು, ಕೊಪ್ಪಳ) ಬೇಸಿಗೆಯಲ್ಲಿ ಉಷ್ಣಾಂಶ 45 ಡಿಗ್ರಿ ದಾಟುತ್ತದೆ. ನಮ್ಮಲ್ಲಿ ಕೆರೆಗಳಿಗೆ ನೀರು ತುಂಬಿಸಿದರೂ, ಏಪ್ರಿಲ್-ಮೇ ತಿಂಗಳಲ್ಲಿ ಅರ್ಧದಷ್ಟು ನೀರು ಆವಿಯಾಗಿ ಹೋಗುತ್ತದೆ.

ಇಸ್ರೇಲಿನ ಈ 'ಸ್ಯಾಂಡ್ ಡ್ಯಾಮ್' ಅಥವಾ 'ನೆಲದಡಿಯ ಅಣೆಕಟ್ಟು' ಮಾದರಿಯನ್ನು ನಮ್ಮ ಹಳ್ಳ-ಕೊಳ್ಳಗಳಿಗೆ ಅಳವಡಿಸಿದರೆ, ಬೇಸಿಗೆಯಲ್ಲೂ ಬತ್ತದ ಅಂತರ್ಜಲವನ್ನು ನಾವು ಹೊಂದಬಹುದು. ಈಗಾಗಲೇ ಆಂಧ್ರಪ್ರದೇಶ ಮತ್ತು ಕರ್ನಾಟಕದ ಕೆಲವೆಡೆ ಸಣ್ಣ ಪ್ರಮಾಣದಲ್ಲಿ ಇಂಥ ಪ್ರಯೋಗಗಳು ನಡೆದಿವೆ. ಆದರೆ ಇಸ್ರೇಲ್ ಮಾದರಿಯ ಬೃಹತ್ ಯೋಜನೆಗಳು ಇನ್ನೂ ಬರಬೇಕಿದೆ.

ಶೈಜಾಫ್ ಅಣೆಕಟ್ಟು ಮನುಷ್ಯನು ಪ್ರಕೃತಿಯ ವಿರುದ್ಧ ಹೋರಾಡದೇ, ಪ್ರಕೃತಿಯ ನಿಯಮಗಳನ್ನೇ ಬಳಸಿಕೊಂಡು ಹೇಗೆ ಗೆಲ್ಲಬಹುದು ಎಂಬುದಕ್ಕೆ ಸಾಕ್ಷಿ.

ಇತಿಹಾಸ ಸಾರುವ ರಸ್ತೆಗಳು

ಯಾವುದೇ ನಗರದ ಇತಿಹಾಸ, ಪರಂಪರೆಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವ ಮಾರ್ಗವೆಂದರೆ, ಆ ನಗರದ ಪ್ರಮುಖ ಬೀದಿ ಅಥವಾ ರಸ್ತೆಗಳಿಗೆ ಯಾರ ಹೆಸರನ್ನಿಟ್ಟಿದ್ದಾರೆ ಎಂಬುದನ್ನು ತಿಳಿಯುವುದು. ಯಾರ ಹೆಸರನ್ನಿಟ್ಟಿದ್ದಾರೋ ಅವರ ಬಗ್ಗೆ ತಿಳಿದುಕೊಂಡರೆ ಆ ನಗರ ಅಥವಾ ದೇಶದ ಇತಿಹಾಸ ನಿಧಾನವಾಗಿ ತೆರೆದುಕೊಳ್ಳುತ್ತಾ ಹೋಗುತ್ತದೆ.

ಇಸ್ರೇಲಿನ ಟೆಲ್ ಅವಿವ್‌ನಲ್ಲಿರುವ ವಿಮಾನ ನಿಲ್ದಾಣದಲ್ಲಿ ಇಳಿದರೆ, 'ಬೆನ್ ಗುರಿಯನ್' ಅವರ ಹೆಸರು ಕಾಣುತ್ತದೆ. ಯಾರು ಬೆನ್ ಗುರಿಯನ್? ದೇಶದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೆಸರನ್ನಿಟ್ಟಿದ್ದಾರೆ ಅಂದ್ರೆ, ಅವರು ಪ್ರಮುಖ ವ್ಯಕ್ತಿಯಾಗಿರಲೇಬೇಕು ತಾನೇ? ಬೆನ್ ಗುರಿಯನ್ ಇಸ್ರೇಲ್‌ನ ಸ್ಥಾಪಕರಲ್ಲಿ ಒಬ್ಬರು ಮತ್ತು ಅದರ ಮೊದಲ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದವರು. ಬ್ರಿಟಿಷರ ಅಧಿಕಾರ ಕೊನೆಗೊಂಡ ನಂತರ, ಮೇ 14, 1948ರಂದು ಇಸ್ರೇಲ್ ರಾಜ್ಯದ ಸ್ವಾತಂತ್ರ್ಯವನ್ನು ಘೋಷಿಸಿದವರು ಅವರೇ ಮತ್ತು ಅವರೇ ಆ ಘೋಷಣೆಯ ದಾಖಲೆಗೆ ಸಹಿ ಮಾಡಿದ ಮೊದಲ ವ್ಯಕ್ತಿ.

ಇಸ್ರೇಲ್‌ನ ಶುಷ್ಕವಾದ ದಕ್ಷಿಣ ಭಾಗದ ನೆಗೆವ್ ಮರುಭೂಮಿಯನ್ನು ಅಭಿವೃದ್ಧಿಪಡಿಸಿ ಅಲ್ಲಿ ಜನರು ವಾಸಿಸುವಂತಾಗಬೇಕು ಎಂದು ಅವರು ಕನಸು ಕಂಡಿದ್ದರು. ನಿವೃತ್ತಿಯ ನಂತರ, ಅವರು ಪ್ರೇರಣೆಯಾಗಿ ಕಾರ್ಯನಿರ್ವಹಿಸಲು ಸ್ವತಃ ಅಲ್ಲಿನ ಸ್ಡೆ ಬೋರ್ಕ ಕಿಬೂಟ್ಸ್ (ಸಮುದಾಯ ವಸಾಹತು) ಗೆ ತೆರಳಿದರು. ಅವರು ಅಧಿಕಾರದಲ್ಲಿದ್ದಾಗಲೂ ಬಹಳ ಸರಳ ಜೀವನ ನಡೆಸುತ್ತಿದ್ದರು. ರಾಜಕೀಯ ನಾಯಕರಾಗಿದ್ದರೂ, ಅವರಿಗೆ ಯೋಗಾಭ್ಯಾಸದಲ್ಲಿ ಆಸಕ್ತಿ ಇತ್ತು. ಅವರಿಗೆ ಮಹಾತ್ಮ ಗಾಂಧಿಯವರ ಜತೆ ಉತ್ತಮವಾದ ಗೆಳೆತನವಿತ್ತು.

ಜೆರುಸಲೆಮ್‌ನ ಬೀದಿಗಳ ಹೆಸರುಗಳು ಆ ನಗರದ ಇತಿಹಾಸವನ್ನು ಹೇಗೆ ಪ್ರತಿಬಿಂಬಿಸುತ್ತವೆ ಎಂಬುದನ್ನು ಗಮನಿಸಬೇಕು. ಜೆರುಸಲೆಮ್ ಒಂದು ಪುರಾತನ ನಗರ, ಅದರ ಪ್ರತಿಯೊಂದು ಮೂಲೆಯೂ ಸಾವಿರಾರು ವರ್ಷಗಳ ಇತಿಹಾಸವನ್ನು ಹೇಳುತ್ತದೆ. ಅಲ್ಲಿನ ಬೀದಿಗಳ ಹೆಸರುಗಳು ಆ ನಗರದ ವೈವಿಧ್ಯಮಯ ಮತ್ತು ಸಂಕೀರ್ಣ ಇತಿಹಾಸವನ್ನು ಬಿಚ್ಚಿಡುವ ನಕ್ಷೆಯಾಗಿವೆ. ಈ ಹೆಸರುಗಳು ವಿವಿಧ ಸಾಮ್ರಾಜ್ಯಗಳು, ಧರ್ಮಗಳು ಮತ್ತು ಸಂಸ್ಕೃತಿಗಳು ನಗರದ ಮೇಲೆ ಬೀರಿದ ಪ್ರಭಾವವನ್ನು ಅನಾವರಣಗೊಳಿಸುತ್ತವೆ. ಅನೇಕ ಬೀದಿಗಳು ಬೈಬಲ್‌ನಲ್ಲಿ ಉಲ್ಲೇಖಗೊಂಡಿರುವ ಪ್ರಮುಖ ವ್ಯಕ್ತಿಗಳು, ಘಟನೆಗಳು ಮತ್ತು ಸ್ಥಳಗಳ ಹೆಸರನ್ನು ಹೊಂದಿವೆ. ಇದು ಜೆರುಸಲೆಮ್‌ಗೆ ಯಹೂದಿ ಮತ್ತು ಕ್ರಿಶ್ಚಿಯನ್ ಧರ್ಮಗಳಲ್ಲಿ ಇರುವ ಕೇಂದ್ರ ಸ್ಥಾನವನ್ನು ಎತ್ತಿ ತೋರಿಸುತ್ತದೆ.

ಉದಾಹರಣೆಗೆ, ಕಿಂಗ್ ಡೇವಿಡ್ ಸ್ಟ್ರೀಟ್ (ರೆಹೋವ್ ಹಮೆಲೆಕ್ ಡೇವಿಡ್). ಇಸ್ರೇಲ್ ರಾಜಧಾನಿಯನ್ನಾಗಿ ಜೆರುಸಲೆಮ್ ಅನ್ನು ಸ್ಥಾಪಿಸಿದ ಬೈಬಲ್‌ನ ರಾಜ ಡೇವಿಡ್‌ನ ಹೆಸರನ್ನು ಈ ಬೀದಿಗೆ ಇಡಲಾಗಿದೆ. ಹಾಗೆಯೇ ಮೌಂಟ್ ಝಿಯೋನ್ (ಹರ್ ಟ್ಸಿಯೋನ್). ಇದು ಕೇವಲ ಬೀದಿಯ ಹೆಸರಲ್ಲ, ಆದರೆ ಜೆರುಸಲೆಮ್‌ನ ಇತಿಹಾಸದಲ್ಲಿ ಒಂದು ಪ್ರಮುಖ ಭೌಗೋಳಿಕ ಮತ್ತು ಧಾರ್ಮಿಕ ಸ್ಥಳವಾಗಿದೆ. ಇದರ ಹೆಸರು ಸಾಮಾನ್ಯವಾಗಿ ಬೈಬಲ್‌ನಲ್ಲಿ ಜೆರುಸಲೆಮ್‌ಗೆ ಪರ್ಯಾಯ ಪದವಾಗಿ ಬಳಕೆಯಾಗುತ್ತದೆ. ಹಾಗೆ ಹೆಝೆಕಿಯಾಹ್ ಸ್ಟ್ರೀಟ್. ಅಸ್ಸಿರಿಯನ್ ಬೆದರಿಕೆಯ ಸಮಯದಲ್ಲಿ ಯಹೂದಿಯ ರಾಜನಾಗಿದ್ದ ಹೆಝೆಕಿಯಾಹ್‌ನ ಹೆಸರನ್ನು ಈ ಬೀದಿಗೆ ಇಡಲಾಗಿದೆ. ಆತ ನಗರದ ನೀರು ಸರಬರಾಜನ್ನು ಸುಭದ್ರಗೊಳಿಸಲು ಸೈಲೋಂ ಸುರಂಗವನ್ನು ನಿರ್ಮಿಸಿದ.

ಆಟೋಮನ್ ಸಾಮ್ರಾಜ್ಯವು 400 ವರ್ಷಗಳ ಕಾಲ (1517–1917) ಜೆರುಸಲೆಮ್ ಅನ್ನು ಆಳಿತು. ಅವರ ಪ್ರಭಾವವು ಇಂದಿಗೂ ಪೂರ್ವ ಜೆರುಸಲೆಮ್ ಮತ್ತು ಹಳೆಯ ನಗರದ ಕೆಲವು ಬೀದಿಗಳಲ್ಲಿ ಕಾಣಸಿಗುತ್ತದೆ. ಉದಾಹರಣೆಗೆ, ಸುಲ್ತಾನ್ ಸುಲೈಮಾನ್ ಸ್ಟ್ರೀಟ್ (ಶರಿಯಾ ಅಲ್-ಸುಲ್ತಾನ್ ಸುಲೈಮಾನ್). 16ನೇ ಶತಮಾನದಲ್ಲಿ ನಗರದ ಕೋಟೆ ಗೋಡೆಗಳನ್ನು ಪುನರ್ನಿರ್ಮಿಸಿದ ಆಟೋಮನ್ ಸುಲ್ತಾನ್ ಸುಲೈಮಾನ್ ದಿ ಮ್ಯಾಗ್ನಿಫಿಸೆಂಟ್‌ನ ಹೆಸರನ್ನು ಈ ಬೀದಿಗೆ ಇಡಲಾಗಿದೆ. ಇದು ಪೂರ್ವ ಜೆರುಸಲೆಮ್‌ನ ಪ್ರಮುಖ ರಸ್ತೆಯಾಗಿದ್ದು, ಡಮಾಸ್ಕಸ್ ಗೇಟ್‌ಗೆ ಹೋಗುತ್ತದೆ.

ಆಟೋಮನ್ ಸಾಮ್ರಾಜ್ಯದ ನಂತರ, ಬ್ರಿಟಿಷರು 1917ರಿಂದ 1948ರವರೆಗೆ ಜೆರುಸಲೆಮ್ ಅನ್ನು ನಿಯಂತ್ರಿಸಿದರು. ಈ ಅವಧಿಯ ಬೀದಿ ಹೆಸರುಗಳು ಅವರ ಆಡಳಿತ ಮತ್ತು ಪ್ರಭಾವವನ್ನು ಪ್ರತಿಬಿಂಬಿಸುತ್ತವೆ. ಉದಾಹರಣೆಗೆ, ಜಾಫ್ಫಾ ರೋಡ್ (ಡೆರೆಚ್ ಯಾಫೊ). ಇದು ಜೆರುಸಲೆಮ್ ಅನ್ನು ಜಾಫ್ಫಾ ಬಂದರಿಗೆ ಸಂಪರ್ಕಿಸುವ ಐತಿಹಾಸಿಕ ರಸ್ತೆಯಾಗಿದೆ. ಬ್ರಿಟಿಷರು ಇದನ್ನು ಆಧುನೀಕರಿಸಿ, ನಗರದ ಪ್ರಮುಖ ವಾಣಿಜ್ಯ ರಸ್ತೆಯನ್ನಾಗಿ ಮಾಡಿದರು. ಹಾಗೇ ಕಿಂಗ್ ಜಾರ್ಜ್ ಸ್ಟ್ರೀಟ್ (ರೆಹೋವ್ ಹಮೆಲೆಕ್ ಜಾರ್ಜ್). ಯುನೈಟೆಡ್ ಕಿಂಗ್‌ಡಮ್‌ನ ರಾಜ ಐದನೇ ಜಾರ್ಜ್‌ನ ಹೆಸರನ್ನು ಈ ಬೀದಿಗೆ ಇಡಲಾಗಿದೆ. ಇದು ಜೆರುಸಲೆಮ್‌ನ ಪ್ರಮುಖ ವಾಣಿಜ್ಯ ಬೀದಿಗಳಲ್ಲಿ ಒಂದಾಗಿದೆ.

1948ರಲ್ಲಿ ಇಸ್ರೇಲ್ ರಾಷ್ಟ್ರದ ಸ್ಥಾಪನೆಯ ನಂತರ, ಝಯೋನಿಸಂ ಮತ್ತು ಆಧುನಿಕ ಇಸ್ರೇಲ್ ಇತಿಹಾಸಕ್ಕೆ ಸಂಬಂಧಿಸಿದ ವ್ಯಕ್ತಿಗಳು ಮತ್ತು ಘಟನೆಗಳ ಹೆಸರನ್ನು ಹಲವು ಹೊಸ ಬೀದಿಗಳಿಗೆ ಇಡಲಾಗಿದೆ. ಉದಾಹರಣೆಗೆ, ಹೆರ್ಝಲ್ ಬೌಲೆವಾರ್ಡ್ (ಸ್ಡೆರೋಟ್ ಹೆರ್ಝಲ್). ಆಧುನಿಕ ರಾಜಕೀಯ ಝಯೋನಿಸಂನ ದಾರ್ಶನಿಕ ಥಿಯೋಡೋರ್ ಹೆರ್ಝಲ್‌ನ ಹೆಸರನ್ನು ಈ ಪ್ರಮುಖ ಬೌಲೆವಾರ್ಡ್‌ಗೆ ಇಡಲಾಗಿದೆ. ಇದು ಹೆರ್ಝಲ್ ಪರ್ವತಕ್ಕೆ ದಾರಿ ಮಾಡಿಕೊಡುತ್ತದೆ.

ಥ್ಯಾಂಕ್ಸ್‌ಗಿವಿಂಗ್ ಹೊಸ್ತಿಲಲ್ಲಿ ಕೃತಜ್ಞತೆಯ ಕಥಾನಕಗಳು

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅಮೆರಿಕದಲ್ಲಿ ಈ ವಾರ 'ಥ್ಯಾಂಕ್ಸ್‌ಗಿವಿಂಗ್' ಹಬ್ಬ. ಪ್ರತಿವರ್ಷ ನವೆಂಬರ್ ತಿಂಗಳ ನಾಲ್ಕನೆಯ ಗುರುವಾರ ಇದರ ಆಚರಣೆ. 17ನೆಯ ಶತಮಾನದಲ್ಲಿ ಯುರೋಪ್‌ನಿಂದ ಬಂದ ವಲಸೆಗಾರರು ಇಲ್ಲಿನ ಮೂಲ ನಿವಾಸಿಗಳಿಗೆ ಧನ್ಯವಾದ ಸಲ್ಲಿಸುತ್ತ ಅವರನ್ನೂ ಸೇರಿಸಿಕೊಂಡು ಮೊದಲು ಈ ಹಬ್ಬವನ್ನು ಆಚರಿಸಿದರಂತೆ. ಆಮೇಲೆ ವಲಸೆಗಾರರು ಹೆಚ್ಚಿದಂತೆಲ್ಲ, ವಸಾಹತುಗಳು ಸ್ಥಾಪನೆಯಾದಂತೆಲ್ಲ ಹಬ್ಬದಾಚರಣೆಯಲ್ಲಿ ಮೂಲ ನಿವಾಸಿಗಳನ್ನು ಕೈಬಿಟ್ಟದ್ದೂ ಇದೆಯಂತೆ. 1863ರಲ್ಲಿ ಅಬ್ರಹಾಂ ಲಿಂಕನ್ ಅಧ್ಯಕ್ಷನಾಗಿದ್ದಾಗ ಇದು ರಾಷ್ಟ್ರವ್ಯಾಪಿಯಾಗಿ ಆಚರಣೆಯ ಸ್ವರೂಪ ಪಡೆಯಿತು ಎನ್ನುತ್ತದೆ ಹಬ್ಬದ ಇತಿಹಾಸ. ವಲಸೆನಾಡಿನಲ್ಲಿ ಹೊಟ್ಟೆಪಾಡಿಗೆ ಆಹಾರ ದೊರಕಿಸಿಕೊಟ್ಟಿದ್ದಕ್ಕೆ ದೇವರಿಗೆ ಕೃತಜ್ಞತಾಪೂರ್ವಕ ವಂದನೆ ಸಲ್ಲಿಸುವುದು ಈ ಹಬ್ಬದ ಒಟ್ಟಾರೆ ಆಶಯ. ಉತ್ತಮ ಫಸಲು ನೀಡಿದ ಭೂಮಿತಾಯಿಯನ್ನು, ಪ್ರಾಣ ರಕ್ಷಿಸಿದ ಪ್ರಕೃತಿ ಮಾತೆಯನ್ನು ವಂದಿಸುವ ಆಚರಣೆಗಳು ಎಲ್ಲ ಸಂಸ್ಕೃತಿಗಳಲ್ಲೂ ಇವೆಯೆನ್ನುವುದಕ್ಕೆ ಇದೊಂದು ಉತ್ತಮ ನಿದರ್ಶನ.

ಅಮೆರಿಕನ್ನರಲ್ಲೂ ಕೌಟುಂಬಿಕ ಮೌಲ್ಯಗಳು ಜೀವಂತವಾಗಿವೆಯೆಂದು ಗೊತ್ತಾಗುವುದು ಥ್ಯಾಂಕ್ಸ್‌ಗಿವಿಂಗ್ ಹಬ್ಬದಲ್ಲೇ. ಬಂಧುಬಾಂಧವರೆಲ್ಲ ಸೇರಿ ಹಬ್ಬ ಆಚರಿಸುತ್ತಾರೆ. ಔತಣಕೂಟ ಏರ್ಪಡಿಸುತ್ತಾರೆ. ಟರ್ಕಿ ಹಕ್ಕಿಯ ಮಾಂಸದ ಅಡುಗೆಯನ್ನು ಚಪ್ಪರಿಸುತ್ತಾರೆ. ಸಿಹಿಗುಂಬಳದ 'ಪಂಪ್‌ಕಿನ್ ಪೈ' ಸವಿಯುತ್ತಾರೆ. ಫುಟ್‌ಬಾಲ್ ಮ್ಯಾಚ್‌ಗಳಲ್ಲಿ, ಬಣ್ಣಬಣ್ಣದ ಪರೇಡ್‌ಗಳಲ್ಲಿ ಭಾಗವಹಿಸಿ/ಅವುಗಳನ್ನು ವೀಕ್ಷಿಸಿ ಆನಂದಿಸುತ್ತಾರೆ. ಕುಟುಂಬಕಷ್ಟೇ ಸೀಮಿತವಾಗದೆ ಮಿತ್ರವಲಯದಲ್ಲಿ, ವ್ಯಾಪಾರಿಗಳು ಗ್ರಾಹಕರೊಂದಿಗೆ, ಮಾಲೀಕರು ನೌಕರರೊಂದಿಗೆ- ಪರಸ್ಪರ ಧನ್ಯವಾದಗಳನ್ನು ಅರ್ಪಿಸಿ ಶುಭಾಶಯ ವಿನಿಮಯ ಮಾಡಿಕೊಳ್ಳುತ್ತಾರೆ. ಉಳ್ಳವರು ಇಲ್ಲದವರಿಗೆ ನೆರವಾಗುವ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾರೆ. ಶಾಲಾಮಕ್ಕಳಿಗೂ ಕೃತಜ್ಞತೆಯ ಮಹತ್ತ್ವವನ್ನು- ಸ್ಕೂಲ್‌ಬಸ್ ಡ್ರೈವರ್ ಅಪ್ರಿಸಿಯೇಷನ್, ಲೈಬ್ರೇರಿಯನ್ ಅಪ್ರಿಸಿಯೇಷನ್ ಅಂತೆಲ್ಲ ಚಟುವಟಿಕೆಗಳ ಮೂಲಕ ಕಲಿಸುತ್ತಾರೆ. ಥ್ಯಾಂಕ್ಸ್‌ಗಿವಿಂಗ್‌ಗೆ ಆರಂಭವಾಗುವ ಉಡುಗೊರೆ ವಿನಿಮಯ ಕ್ರಿಸ್ಮಸ್ ಮತ್ತು ಜನವರಿ 1ರ ಹೊಸ ವರ್ಷಾಚರಣೆವರೆಗೂ ಮುಂದುವರಿಯುತ್ತದೆ. ಒಟ್ಟಿನಲ್ಲಿ ಹೃದಯವಂತಿಕೆಯು ಹಸನಾಗಿ ವ್ಯಕ್ತವಾಗುವ 'ಥ್ಯಾಂಕ್ಸ್‌ಗಿವಿಂಗ್' ಎಂಬ ಪದಪುಂಜವೇ ಒಂದು ರೀತಿಯ ವಿಶಿಷ್ಟ ಹಿತಾನುಭವ ಒದಗಿಸುತ್ತದೆ. ಧನ್ಯತಾಭಾವ ಸ್ಫುರಿಸುತ್ತದೆ. ಆದ್ದರಿಂದಲೇ ಈ ಹಬ್ಬ ನಮ್ಮಂಥ ಈಗಿನ ವಲಸೆಗಾರರಿಗೂ ಅರ್ಥಪೂರ್ಣವೆನಿಸುತ್ತದೆ.

ಕೃತಜ್ಞತೆಯೆಂಬ ಗುಣವೇ ಹಾಗೆ. ಪ್ರಪಂಚವೆಲ್ಲ ಕೃತಘ್ನರೇ ತುಂಬಿದ್ದಾರೇನೋ ಅಂತನಿಸುವ ಈ ಕಾಲಘಟ್ಟದಲ್ಲಿ ಯಾರೇ ಆದರೂ ಕೃತಜ್ಞತೆಯ ಚಿಕ್ಕದೊಂದು ನಡೆಯನ್ನು ತೋರಿದರೂ ಅವರ ಬಗ್ಗೆ ಹೆಮ್ಮೆಯೆನಿಸುತ್ತದೆ. ಹೃದಯ ಬೆಚ್ಚಗಾದ ಅನುಭವವಾಗುತ್ತದೆ. ಅಂಥದೊಂದು ಕಥಾನಕವನ್ನು, ನನಗೆ ತುಂಬ ಇಷ್ಟದ್ದೆಂದು ಇಲ್ಲಿ ಮತ್ತೊಮ್ಮೆ ನೆನಪಿಸಿಕೊಳ್ಳುತ್ತಿದ್ದೇನೆ. ಇದನ್ನು ಫೇಸ್‌ಬುಕ್/ವಾಟ್ಸ್ಯಾಪ್/ಇಮೇಲ್ ಫಾರ್ವರ್ಡ್ ಗಳಲ್ಲಿ ನೀವು ಈಗಾಗಲೇ ಓದಿರುವ ಸಾಧ್ಯತೆಯಿದೆ. ಆದರೂ ಆಗೊಮ್ಮೆ ಈಗೊಮ್ಮೆ ಇಂಥವನ್ನು ಓದುತ್ತಿರಬೇಕು ಎಂದು ನನ್ನ ಅಭಿಪ್ರಾಯ. ಮೊದಲಿಗೆ ಕಥಾನಕ, ಆಮೇಲೆ ಅದರ ಅಸಲಿಯತ್ತಿನ ಕೆಲವು ವಿವರಗಳು:

ಬಡಹುಡುಗನೊಬ್ಬ ಮನೆಮನೆಗೆ ಹೋಗಿ ಸಣ್ಣಪುಟ್ಟ ಸರಕುಗಳನ್ನು ಮಾರಿಕೊಂಡು ಅದರಿಂದ ಬಂದ ದುಡ್ಡನ್ನು ತನ್ನ ಶಾಲೆಯ ಫೀಸ್‌ಗೆ ಹೊಂದಿಸಿ ಜೀವನ ನಡೆಸುತ್ತಿದ್ದನು. ಒಂದು ದಿನ ಮಟಮಟ ಮಧ್ಯಾಹ್ನದ ವೇಳೆ. ಬಿಸಿಲೇರಿದ್ದರೂ ಇನ್ನೂ ಹೆಚ್ಚಿನ ವ್ಯಾಪಾರ ಆಗಿರಲಿಲ್ಲ. ಹುಡುಗನ ಹೊಟ್ಟೆ ಹಸಿದಿತ್ತು. ಜೇಬಿನಲ್ಲಿದ್ದುದು ಬರೀ ಹತ್ತು ಸೆಂಟ್ಸ್ ಮಾತ್ರ. ಮುಂದೆ ಸಿಗುವ ಮನೆಯವರ ಬಳಿ 'ಊಟ ಬಡಿಸುತ್ತೀರಾ?' ಎಂದು ಕೇಳಬೇಕೆಂದುಕೊಂಡ. ಆದರೆ ಅಲ್ಲಿ ಪುಟ್ಟ ಹುಡುಗಿಯೊಬ್ಬಳು ಬಾಗಿಲು ತೆರೆದಾಗ ಊಟ ಬೇಡುವ ಮನಸ್ಸಾಗಲಿಲ್ಲ. 'ಕುಡಿಯಲು ಸ್ವಲ್ಪ ನೀರು ಕೊಡುತ್ತೀರಾ?' ಎಂದಷ್ಟೇ ಕೇಳಿದ, ಅದೂ ನಡುಗುವ ಧ್ವನಿಯಲ್ಲಿ. ಆತ ನಿಜವಾಗಿಯೂ ಹಸಿವೆಯಿಂದ ಬಳಲಿದ್ದಾನೆ ಎಂದರಿತ ಆ ಹುಡುಗಿ ನೀರಿನ ಬದಲಿಗೆ ಒಂದು ಲೋಟ ಬಿಸಿಬಿಸಿ ಹಾಲನ್ನು ತಂದು ಅವನಿಗೆ ಕುಡಿಯಲು ಕೊಟ್ಟಳು. ನಿಧಾನವಾಗಿ ಹಾಲನ್ನು ಗುಟುಕರಿಸಿ ದಣಿವಾರಿಸಿಕೊಂಡ ಹುಡುಗ 'ಎಷ್ಟು ದುಡ್ಡು ಕೊಡಬೇಕು?' ಎಂದು ವಿನಯದಿಂದ ಕೇಳಿದ. 'ಇಲ್ಲ, ನಮ್ಮಮ್ಮ ಹೇಳಿಕೊಟ್ಟಿದ್ದಾರೆ, ಕರುಣೆಯಿಂದ ಮಾಡಿದ ಕೆಲಸಕ್ಕೆ ಕಾಸು ತೆಗೆದುಕೊಳ್ಳಬಾರದು. ನೀನೇನೂ ಕೊಡುವುದು ಬೇಡ!' ಎಂದಳು ಹುಡುಗಿ. 'ಹಾಗಾದರೆ ನಾನು ನನ್ನ ಎದೆಯಾಳದಿಂದ ನಿಮಗೆ ಕೃತಜ್ಞತೆ ಸಲ್ಲಿಸುತ್ತೇನೆ' ಎನ್ನುತ್ತ ಹುಡುಗ ಅಲ್ಲಿಂದ ತೆರಳಿದನು. ಬಿಸಿಹಾಲು ಕುಡಿದು ಅವನಿಗೆ ದೈಹಿಕವಾಗಿ ಹಿತವೆನಿಸಿತ್ತು; ಅದಕ್ಕಿಂತ ಹೆಚ್ಚಾಗಿ ಆ ಮನೆಯವರ ಸ್ನೇಹಪರ ಔದಾರ್ಯವನ್ನು ಕಂಡು ಮನದಲ್ಲಿ ಹೊಸದೊಂದು ಹುರುಪು ಮೂಡಿತ್ತು. ದೇವರಲ್ಲಿ ನಂಬಿಕೆಯೂ ಚಿಗುರಿತ್ತು! ಅಲ್ಲಿಯವರೆಗೆ ಬಹುಕಷ್ಟದ ಬದುಕಿನಿಂದ ಸಾಕಷ್ಟು ಹೈರಾಣಾಗಿದ್ದ ಆ ಹುಡುಗ ಆಮೇಲೆ ಮತ್ತೂ ಕೆಲ ವರ್ಷಗಳ ಕಾಲ ದುಡಿದು ಸಂಪಾದಿಸಿ ವಿದ್ಯೆ

ಗಳಿಸಿದನು. ಡಾ. ಹೊವರ್ಡ್ ಕೆಲ್ಲಿ ಎಂಬ ಹೆಸರಿನ ಪ್ರಖ್ಯಾತ ವೈದ್ಯನಾಗಿ ಅಮೆರಿಕದ ಪೆನ್ಸಿಲ್ವೇನಿಯಾ ಸಂಸ್ಥಾನದ ಒಂದು ಪಟ್ಟಣದಲ್ಲಿ ಸುಸಜ್ಜಿತ ಚಿಕಿತ್ಸಾಲಯವನ್ನೂ ತೆರೆದನು.

ಇದಾಗಿ ಕೆಲವಾರು ವರ್ಷಗಳ ನಂತರ ಒಮ್ಮೆ ಡಾ. ಕೆಲ್ಲಿಯ ಚಿಕಿತ್ಸಾಲಯಕ್ಕೆ ಒಬ್ಬ ಹೆಂಗಸು ರೋಗಿಯಾಗಿ ಬಂದಳು. ಅವಳಿದ್ದ ಹಳ್ಳಿಯ ವೈದ್ಯರು ಆಕೆಯ ರೋಗವನ್ನು ಗುಣಪಡಿಸಲಾಗದೆ ಡಾ. ಕೆಲ್ಲಿಯ ಆಸ್ಪತ್ರೆಗೆ ಅವಳನ್ನು ಕಳಿಸಿದ್ದರು. ರೋಗಿಯ ಹೆಸರು ಮತ್ತು ಊರಿನ ವಿವರಗಳನ್ನು ಓದಿದಾಕ್ಷಣ ಡಾ. ಕೆಲ್ಲಿಗೆ ಒಮ್ಮೆ ವಿದ್ಯುತ್ ಸಂಚಾರವಾದಂತಾಯಿತು. ಒಡನೆಯೇ ತನ್ನ ಕುರ್ಚಿಯಿಂದೆದ್ದು ಆಸ್ಪತ್ರೆಯ ಕೆಳಅಂತಸ್ತಿನ ಕೋಣೆಯಲ್ಲಿದ್ದ ಆ ಹೆಂಗಸಿನ ಹತ್ತಿರಕ್ಕೆ ಹೋದರು. ಮಂಚದ ಮೇಲೆ ಕಳಾಹೀನವಾಗಿ ಮಲಗಿದ್ದ ಆಕೆಯ ಗುರುತು ಅವರಿಗೆ ತತ್‌ಕ್ಷಣವೇ ಸಿಕ್ಕಿತು. ಅವಳನ್ನು ಹೇಗಾದರೂ ಮಾಡಿ ಬದುಕಿಸಬೇಕೆಂಬ ಛಲ ಅವರ ಅಂತರಾಳದಲ್ಲಿ ಮೂಡಿತು. ಮೂರ್ನಾಲ್ಕು ವಾರಗಳ ಕಾಲ ಸತತ ಚಿಕಿತ್ಸೆಯ ಬಳಿಕ ಆ ಹೆಂಗಸು ಆಸ್ಪತ್ರೆಯಿಂದ ಹೊರಡುವ ದಿನ ಬಂತು. ಅವಳ ಚಿಕಿತ್ಸೆ ಮತ್ತು ಔಷಧಗಳ ಖರ್ಚುವೆಚ್ಚದ ಪಟ್ಟಿಯನ್ನು ಆಸ್ಪತ್ರೆಯ ಸಿಬ್ಬಂದಿ ತಯಾರಿಸಿದರು. ಡಾ. ಕೆಲ್ಲಿ ಅದಕ್ಕೆ ಸಹಿ ಹಾಕಿದರು, ಜತೆಯಲ್ಲೇ ಒಂದು ಷರಾ ಬರೆದರು. ಬಿಲ್‌ನ ಒಂದು ಪ್ರತಿಯನ್ನು ರೋಗಿ ಇದ್ದ ಕೋಣೆಗೆ ಕಳಿಸಲಾಯಿತು. ಅಷ್ಟು ದೀರ್ಘಾವಧಿಯ ಚಿಕಿತ್ಸೆ, ಜೀವರಕ್ಷಕ ಔಷಧಗಳು, ಕನಿಷ್ಠ ಹತ್ತಿಪ್ಪತ್ತು ಸಾವಿರ ಡಾಲರ್ ಗಳಷ್ಟಾದರೂ ಆಗಿರಬಹುದು, ತನ್ನ ಬದುಕಿನ ಸರ್ವವೂ ಆ ಮೆಡಿಕಲ್ ಬಿಲ್‌ಗೆ ಸಂದಾಯ ಆಗಬೇಕಾದೀತು ಎಂದು ಅಳುಕಿನಿಂದಲೇ ಲಕೋಟೆಯನ್ನು ತೆರೆದ ಹೆಂಗಸಿಗೆ ಒಂದು ಆಶ್ಚರ್ಯ ಕಾದಿತ್ತು. ಬಿಲ್‌ನ ಕೆಳಮೂಲೆಯಲ್ಲಿ, ಒಟ್ಟು ಮೊಬಲಗಿನ ಬಲ ಭಾಗದಲ್ಲಿ, ಡಾ. ಕೆಲ್ಲಿ ಬರೆದಿದ್ದ ಷರಾ ಏನೆಂದರೆ, 'ಒಂದು ಲೋಟ ಬಿಸಿಬಿಸಿ ಹಾಲಿನ ರೂಪದಲ್ಲಿ ಪಾವತಿಯಾಗಿದೆ. ಬಾಕಿ ಶುಲ್ಕ: ಸೊನ್ನೆ'. ಅದರ ಕೆಳಗೆ ವೈದ್ಯಲಿಪಿಯಲ್ಲಿ ಡಾ. ಕೆಲ್ಲಿ ಎಂದು ಹಸ್ತಾಕ್ಷರ. ಮೆಡಿಕಲ್ ಬಿಲ್‌ನ ಆ ಹಾಳೆಗೇ ಮುತ್ತಿಕ್ಕಿ ಗಳಗಳನೆ ಅತ್ತ ಹೆಂಗಸು ಮನದಲ್ಲೇ ದೇವರನ್ನು ನೆನೆದಳು- 'ಕರುಣಾಳುವೇ, ನಿನ್ನ ಪ್ರೀತಿ-ಪ್ರೇಮಗಳ ಮಾಯೆ ಮನುಕುಲದಲ್ಲಿನ್ನೂ ಜೀವಂತವಾಗಿದೆ, ಹೃದಯದಿಂದ ಹೃದಯಕ್ಕೆ ಪಸರಿಸುತ್ತಿದೆ. ನಿನಗೆ ಶರಣುಶರಣು'.

ಮನಸ್ಸು-ಹೃದಯಗಳಿಗೆ ಹಾಯೆನಿಸುವ, ತಂಗಾಳಿಯ ತಂಪನೆರೆಯುವ ಈ ಕಥೆಯಂಥವು ಫಾರ್ವರ್ಡೆಡ್ ಮೆಸೇಜುಗಳಲ್ಲಿ ಬೇಕಾದಷ್ಟು ಬರುತ್ತಿರುತ್ತವೆ. ಬಹುತೇಕವಾಗಿ ಕಪೋಲಕಲ್ಪಿತವಾಗಿರುವವೇ ಹೆಚ್ಚು. ಇನ್ನು ಕೆಲವು ಮಾನವೀಯತೆಯ ಹೆಸರಲ್ಲಿ ಬ್ಲ್ಯಾಕ್‌ಮೈಲ್ ಮಾಡಿ 'ಇದನ್ನು ಇಂತಿಷ್ಟು ಮಂದಿಗೆ ಶೇರ್ ಮಾಡಿ, ಇಲ್ಲಾಂದರೆ ಕಷ್ಟನಷ್ಟ ಅನುಭವಿಸಬೇಕಾಗುತ್ತದೆ!' ಎಂದು ದಬ್ಬಾಳಿಕೆಯ ಆದೇಶವನ್ನೂ ಹೊತ್ತುಕೊಂಡು ಬರುವುದಿದೆ. ಅಂಥ ಮೆಸೇಜುಗಳಿಂದ ದಬ್ಬಾಳಿಕೆಯ ಭಾಗವನ್ನಷ್ಟೇ ನಿರ್ಲಕ್ಷಿಸಿ ಉಳಿದ ತಿರುಳನ್ನು ನಾನು ಸಂಗ್ರಹಿಸಿಡುತ್ತೇನೆ. ಈ ಕಥೆಯನ್ನು ಓದುವಾಗೆಲ್ಲ ನನಗೆ 'ಸಂಕಷ್ಟದಲ್ಲಿರುವವನನ್ನು ಅವನ ಪೂರ್ವಸುಕೃತ ಪುಣ್ಯವೇ ರಕ್ಷಿಸುತ್ತದೆ' ಎಂಬ ತಾತ್ಪರ್ಯದ ಸುಭಾಷಿತವೊಂದು ನೆನಪಾಗುತ್ತದೆ. ಬಿಸಿಲಲ್ಲಿ ಅಲೆದು ಹಸಿದಿದ್ದ ಹುಡುಗನಿಗೆ ನೀರಿನ ಬದಲಿಗೆ ಒಂದು ಲೋಟ ಬೆಚ್ಚಗಿನ ಹಾಲು ಸಿಕ್ಕಿದ್ದೇ ಅವನ ಪೂರ್ವಸುಕೃತದ ಫಲವಾದರೆ, ಕುಡಿಯಲು ಹಾಲು ಕೊಟ್ಟ ಹುಡುಗಿ ದೊಡ್ಡವಳಾದ ಮೇಲೆ ಜೀವನ್ಮರಣ ಹೋರಾಟದಲ್ಲಿ ಆ ಹುಡುಗನಿಂದಲೇ ಚಿಕಿತ್ಸೆ ಪಡೆದು ಬದುಕಿಕೊಂಡದ್ದು, ಚಿಕಿತ್ಸೆಯ ಶುಲ್ಕ ಒಂದುಲೋಟ ಹಾಲಿನ ರೂಪದಲ್ಲಿ ಈಗಾಗಲೇ ಪಾವತಿಯಾಗಿದೆಯೆಂದು ವೈದ್ಯರು ಶಿಫಾರಸು ಮಾಡಿದ್ದು ನಮ್ಮ ಕಣ್ಮುಂದೆಯೇ ನಡೆಯಿತೇನೊ ಎನ್ನುವಂಥ ಸುಕೃತದ ಫಲ!

ಆಶ್ಚರ್ಯವೆಂದರೆ ಇದು ಕಟ್ಟುಕತೆಯಲ್ಲ. ಹೃದಯಸ್ಪರ್ಶಿ ಎನಿಸಿಕೊಳ್ಳಲು ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಅತಿರಂಜನೆ-ಉತ್ಪ್ರೇಕ್ಷೆ ಇದೆಯೆಂಬುದನ್ನು ಬಿಟ್ಟರೆ ಸತ್ಯಕಥೆ. ಡಾ. ಹೊವರ್ಡ್ ಕೆಲ್ಲಿಯ ಜೀವನಚರಿತ್ರೆಯಲ್ಲಿ ಬರುವ ಈ ಕಥೆ ವ್ಯಕ್ತಿತ್ವವಿಕಸನದ ಪುಸ್ತಕಗಳಲ್ಲೂ ಪ್ರಕಟವಾಗಿದೆ. ಉಪನ್ಯಾಸಗಳಲ್ಲಿ, ಕಾರ್ಯಾಗಾರಗಳಲ್ಲಿ ಪ್ರತಿಧ್ವನಿಸಿದೆ. ಡಾ. ಹೊವರ್ಡ್ ಕೆಲ್ಲಿ (1858–1943) ಆ ಕಾಲದ ಶ್ರೇಷ್ಠ ವೈದ್ಯರು. ಬಾಲ್ಟಿಮೋರ್‌ನಲ್ಲಿರುವ ವಿಶ್ವವಿಖ್ಯಾತವಾದ ಮತ್ತು ಅಮೆರಿಕದ ಮೊತ್ತಮೊದಲ ವೈದ್ಯಕೀಯ ಸಂಶೋಧನಾ ವಿಶ್ವವಿದ್ಯಾಲಯವಾದ 'ಜಾನ್ಸ್ ಹಾಪ್‌ಕಿನ್ಸ್'ನ ನಾಲ್ಕು ಮಂದಿ ಸಂಸ್ಥಾಪಕ ವೈದ್ಯರಲ್ಲಿ ಡಾ. ಕೆಲ್ಲಿ ಒಬ್ಬರು. 1895ರಲ್ಲಿ ಅವರು 'ಸ್ತ್ರೀರೋಗ ಮತ್ತು ಪ್ರಸೂತಿಶಾಸ್ತ್ರ'ವನ್ನು ವಿಶ್ವವಿದ್ಯಾಲಯದಲ್ಲಿ ಆರಂಭಿಸಿ ಜೀವನದುದ್ದಕ್ಕೂ ಅದೇ ವಿಭಾಗದಲ್ಲಿ ಬೋಧಕ ಮತ್ತು ಚಿಕಿತ್ಸಕರಾಗಿದ್ದರು. ಪ್ರಸ್ತುತ ಕಥೆಯಲ್ಲಿ ಡಾ. ಕೆಲ್ಲಿಯ ವೈದ್ಯಕೀಯ ಪರಿಣತಿ ಅಥವಾ 'ಕೈಗುಣ'ಕ್ಕಿಂತಲೂ ಹೆಚ್ಚಾಗಿ ಮೆರೆಯುವುದು ಋಣಸಂದಾಯದ ಗುಣಶ್ರೇಷ್ಠತೆ. ಡಾ. ಕೆಲ್ಲಿಯೊಂದಿಗೆ ಒಡನಾಟವಿದ್ದ ಔಡ್ರೆ ಡೇವಿಸ್ ಎಂಬ ಲೇಖಕ ಕೆಲ್ಲಿಯ ಜೀವನಚರಿತ್ರೆ ಬರೆದಿದ್ದಾನೆ. ಅದರಲ್ಲಿ ಕೆಲ್ಲಿಯ ಡೈರಿಯಿಂದ ಉದ್ಧೃತವಾದ ಅಂಶಗಳೂ ಇವೆ. ಅವುಗಳಲ್ಲೊಂದು, 'ಹಾಲಿನ ಲೋಟದಿಂದ ಹಾಸ್ಪಿಟಲ್ ಬಿಲ್ ಚುಕ್ತಾ' ಆದ ಈ ಕಥೆ.

ಆದರೆ ಕಥೆಯ ಸತ್ಯರೂಪವಾಗಿ ನಾವು ಕೆಲ ಅಂಶಗಳನ್ನು ಗಮನಿಸಬೇಕು. ಡೇವಿಸ್ ಬರೆದ ಜೀವನಚರಿತ್ರೆಯ ಪ್ರಕಾರ, ಹೊವರ್ಡ್ ಕೆಲ್ಲಿ ಹುಡುಗನಾಗಿದ್ದಾಗ ಬಡತನದಲ್ಲೇನೂ ಇರಲಿಲ್ಲ. ಶ್ರೀಮಂತ ಮನೆತನದಿಂದ ಬಂದ ಅವನಿಗೆ ಮನೆಮನೆಗೆ ಹೋಗಿ ವಸ್ತುಗಳ ಮಾರಾಟಮಾಡಿ ದುಡ್ಡುಸಂಪಾದಿಸುವ ಅಗತ್ಯವಿರಲಿಲ್ಲ. ವಿದ್ಯಾಭ್ಯಾಸ, ಊಟ, ವಸತಿಯ ವೆಚ್ಚವಷ್ಟೇ ಅಲ್ಲದೆ ತಿಂಗಳಿಗೆ ಐದು ಡಾಲರ್ 'ಪಾಕೆಟ್ ಮನಿ' ಸಹ ಕೆಲ್ಲಿಯ ಕಿಸೆಗೆ ಸೇರುತ್ತಿತ್ತಂತೆ. ಇಪ್ಪತ್ತೊಂದನೇ ವರ್ಷದ ಹುಟ್ಟುಹಬ್ಬಕ್ಕೆ ಅವನ ತಂದೆ ಮತ್ತು ಅತ್ತೆಯಂದಿರಿಂದ ತಲಾ 100 ಡಾಲರ್‌ಗಳ ಚೆಕ್‌ಗಳನ್ನು ಉಡುಗೊರೆಯಾಗಿ ಪಡೆದ ಪುಣ್ಯವಂತ ಹೊವರ್ಡ್ ಕೆಲ್ಲಿ! ಆಗಿನ ಕಾಲದಲ್ಲಿ ಅದು ದೊಡ್ಡ ಮೊತ್ತವೇ. ನಿರುದ್ಯೋಗಿಯಾಗಿದ್ದ ಕೆಲ್ಲಿಯನ್ನು ಅವನ ಹೆತ್ತವರು ಕೊಲರಾಡೊ ಸ್ಪ್ರಿಂಗ್ ಪಟ್ಟಣಕ್ಕೆ ಕಳಿಸಿದ್ದರು. ಅಲ್ಲಿ ನಲ್ವತ್ತು ಡಾಲರ್‌ಗಳಿಗೆ ಕುದುರೆಯೊಂದನ್ನು ಖರೀದಿಸಿ, ಅಂಚೆ ಬಟವಾಡೆಯ ಕೆಲಸವನ್ನೂ ಆತ ಮಾಡಿದ್ದನು. ಮರುವರ್ಷ ಪೆನ್ಸಿಲ್ವೇನಿಯಾಕ್ಕೆ ವಾಪಸಾದ ಕೆಲ್ಲಿ ಒಂದು ಫಾರ್ಮ್‌ಹೌಸ್‌ನಲ್ಲಿ ವಾಸಿಸತೊಡಗಿದನು. ಪ್ರಕೃತಿಯ ಮಡಿಲಲ್ಲಿ ವಾಸ, ಪ್ರಾಣಿ-ಪಕ್ಷಿಗಳ ಒಡನಾಟ, ಮೈಲುಗಟ್ಟಲೆ ಚಾರಣ ಅವನಿಗೆ ಖುಷಿಕೊಡುವ ವಿಚಾರಗಳಾಗಿದ್ದವು. ಕೆಲ್ಲಿ ವಿದ್ಯಾಭ್ಯಾಸ ಗಳಿಸಿ ಪ್ರಸಿದ್ಧ ವೈದ್ಯನಾಗಿ ಮನುಕುಲದ ಸೇವೆ ಮಾಡಬೇಕೆಂಬುದು ಅವನ ತಂದೆಯ ಇಚ್ಛೆಯಾಗಿತ್ತು. ಅದನ್ನು ಈಡೇರಿಸಲಿಕ್ಕೆಂದೇ ಆತ ವೈದ್ಯನಾದದ್ದು.

ವೈದ್ಯನಾದರೂ ತನ್ನ ನೆಚ್ಚಿನ ಹವ್ಯಾಸವಾದ ಚಾರಣವನ್ನು ಮುಂದುವರಿಸಿದ್ದ ಕೆಲ್ಲಿ ಅದೊಂದು ದಿನ ಪೆನ್ಸಿಲ್ವೇನಿಯಾದ ಹಳ್ಳಿಯೊಂದರ ಮನೆಬಾಗಿಲು ತಟ್ಟಿ ನೀರು ಕೇಳಿದ್ದು, ಪುಟ್ಟ ಹುಡುಗಿಯೊಬ್ಬಳು ನೀರಿನ ಬದಲಿಗೆ ಹಾಲು ತಂದುಕೊಟ್ಟದ್ದು ಹೌದು. ಕೆಲ್ಲಿಗೆ ದೇವರಲ್ಲಿ ಆವತ್ತೇ ನಂಬಿಕೆ ಹುಟ್ಟಿತು ಎನ್ನುವುದು ಉತ್ಪ್ರೇಕ್ಷೆ, ಏಕೆಂದರೆ ಮೊದಲಿಂದಲೂ ಆತ ಪಕ್ಕಾ ಆಸ್ತಿಕನೂ ಧರ್ಮಭೀರುವೂ ಆಗಿದ್ದನಂತೆ. ಅಂತೆಯೇ ಮುಂದೆ ಅವನ ಆಸ್ಪತ್ರೆಗೆ ಆ ರೋಗಿ ಹೆಂಗಸು ಬಂದದ್ದು ಹೌದಾದರೂ ಆಕೆ ಜೀವನ್ಮರಣ ಹೋರಾಟದಲ್ಲಿದ್ದಳು ಎನ್ನುವುದೆಲ್ಲ ಬುರುಡೆ. ಬಿಲ್ ಮೇಲೆ 'ಈಗಾಗಲೇ ಪಾವತಿಯಾಗಿದೆ' ಎಂದು ಡಾ. ಕೆಲ್ಲಿ ಷರಾ ಬರೆದದ್ದೇನೊ ಹೌದು. ಆದರೆ ಅವರು ಆಕೆಗಷ್ಟೇ ಶುಲ್ಕವಿನಾಯಿತಿ ಮಾಡಿದ್ದಲ್ಲ, ಬಡ ರೋಗಿಗಳಿಂದ ಅವರು ಸೇವಾಶುಲ್ಕ ಪಡೆಯುತ್ತಿರಲಿಲ್ಲ. ತಾನೇ ಸಂಬಳ ಕೊಟ್ಟು ದಾದಿಯೊಬ್ಬಳನ್ನು ನೇಮಿಸಿ ಅವರ ಆರೈಕೆಯ ವ್ಯವಸ್ಥೆ ಮಾಡುತ್ತಿದ್ದರು. ದಣಿವಾಗಿದ್ದಾಗ ಬಿಸಿಹಾಲು ಕೊಟ್ಟು ಸತ್ಕರಿಸಿದ್ದ ಹುಡುಗಿಗೆ ವರ್ಷಗಳ ನಂತರ ಚಿಕಿತ್ಸೆ ಮಾಡಬೇಕಾಗಿ ಬಂದಾಗ ಮಾತ್ರ ಡಾ. ಕೆಲ್ಲಿ ಚಿಕಿತ್ಸಾಶುಲ್ಕ ಮನ್ನಾ ಮಾಡಿದ್ದಷ್ಟೇ ಅಲ್ಲ 'ಒಂದು ಲೋಟ ಹಾಲಿನ ರೂಪದಲ್ಲಿ ಈಗಾಗಲೆ ಪಾವತಿಯಾಗಿದೆ' ಎಂಬ ಷರಾ ಬರೆದರು, ಮಾನವೀಯತೆಯನ್ನು ಮೆರೆದರು; ಕೃತಜ್ಞತೆಯ ಮೂರ್ತರೂಪ ಆದರು.

ಕೃತಜ್ಞತೆ ಸಲ್ಲಿಕೆಯ, ಅದರಲ್ಲೂ ನಾನೇ ಕೃತಜ್ಞತೆಗೆ ಪಾತ್ರನಾದ, ಇತ್ತೀಚಿನ ಕೆಲವು ಚಿಕ್ಕಚಿಕ್ಕ ನಿದರ್ಶನಗಳನ್ನೂ ಇಲ್ಲಿ ಸಂದರ್ಭೋಚಿತವಾಗಿ, ಸಂಕ್ಷಿಪ್ತವಾಗಿ ಉಲ್ಲೇಖಿಸುತ್ತೇನೆ. ಇವೆಲ್ಲವೂ ಅಂಕಣ ಬರವಣಿಗೆಯಿಂದಾಗಿ ಆದಂಥವು. ''ಬೈಂದೂರಿನ ಸುರಭಿ ಕಲಾಸಂಸ್ಥೆ ನಡೆಸುವ ರಾಜ್ಯಮಟ್ಟದ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದೆ. ನಾನು ಬರೆದ ಕಥೆಯಲ್ಲಿ ಯುರೋಪ್‌ನ ಡೆನ್ಯುಬ್ ನದಿಯ ವಿಚಾರ ಬರುತ್ತದೆ. ಹಿಂದೊಮ್ಮೆ ನದಿಗಳ ಬಗೆಗೆ ನೀವು ಬರೆದಿದ್ದ ಅಂಕಣವೊಂದರಿಂದ ಆ ಎಳೆಯನ್ನು ಕಥೆಯಲ್ಲಿ ತರುವುದು ನನಗೆ ಸಾಧ್ಯವಾಯಿತು. ಹಾಗಾಗಿ ನಿಮಗೊಂದು ಥ್ಯಾಂಕ್ಸ್!'' ಎಂದು ಮೊನ್ನೆ ಬೆಂಗಳೂರಿನಿಂದ ಶ್ರೀರಂಜನಿ ಅಡಿಗ ಬರೆದಿದ್ದಾರೆ. ಹಾಗೆಯೇ, ''ನಮ್ಮ ಕಂಪನಿಯಲ್ಲಿ ನಡೆದ ಎಐ ಪ್ರಾಜೆಕ್ಟ್ ಸ್ಪರ್ಧೆಯಲ್ಲಿ ನಾನು ನಿರ್ಮಿಸಿದ 'ರೈತರ ಸಾಲಮಂಜೂರಾತಿಗೆ ಎಐ ನೆರವು' ಪ್ರಾಜೆಕ್ಟ್ ಜಯಗಳಿಸಿದೆ. ನಿಮ್ಮ ಅಂಕಣಬರಹಗಳಲ್ಲಿನ ಪಾಸಿಟಿವಿಟಿ ನನಗೆ ಯಾವಾಗಲೂ ಒಂದು ಟಾನಿಕ್ ಮತ್ತು ಒಳ್ಳೆಯ ಕೆಲಸಕ್ಕೆ ಸ್ಫೂರ್ತಿ. ಆದ್ದರಿಂದ ಈ ಖುಷಿಯನ್ನು ನಿಮ್ಮೊಡನೆ ಹಂಚಿಕೊಳ್ಳಬೇಕೆನಿಸಿತು'' ಎಂದು ಬೆಂಗಳೂರಿನಲ್ಲಿ ಐಟಿ ಉದ್ಯೋಗಿಯಾಗಿರುವ ಕುಮಾರ್ ಜಕ್ಕಲಿ ಬರೆದಿದ್ದಾರೆ. ''ಕನ್ನಡ ಪದಗಳನ್ನು ಕಟ್ಟುವ ನಿಮ್ಮ ಅಂಕಣವನ್ನು ಮೊನ್ನೆ ಇಲ್ಲಿ ನೃಪತುಂಗ ಕನ್ನಡಸಂಘದ ರಾಜ್ಯೋತ್ಸವ ಸಮಾರಂಭದ ನಿರೂಪಣೆ ಮಾಡುವಾಗ ಪ್ರೇಕ್ಷಕರೊಡನೆ ಸಂವಾದಕ್ಕಾಗಿ ಬಳಸಿಕೊಂಡೆ. ತುಂಬ ಇಷ್ಟಪಟ್ಟರು. ನಿಮಗೆ ವಿಶೇಷ ಧನ್ಯವಾದಗಳು'' ಎಂದು ಅಟ್ಲಾಂಟಾದಿಂದ ಶ್ರುತಿ ಪ್ರದೀಪ್ ಒಂದು ಧ್ವನಿಸಂದೇಶ ಕಳಿಸಿದ್ದಾರೆ.

''ಉಡುಪಿಗೆ ಹೋಗಿದ್ದೆ. ಕೋಟಿಗೀತಾಲೇಖನಯಜ್ಞದಲ್ಲಿ ಕಳೆದೊಂದು ವರ್ಷದಲ್ಲಿ ದಿನಕ್ಕೆರಡು ಶ್ಲೋಕಗಳಂತೆ ಇಡೀ ಭಗವದ್ಗೀತೆಯನ್ನು ಕನ್ನಡ ಅಕ್ಷರಗಳಲ್ಲಿ ನಾನು ಬರೆದ ಪುಸ್ತಕವನ್ನು ಸಮರ್ಪಿಸಿದೆ. ಪುತ್ತಿಗೆ ಶ್ರೀ ಸುಗುಣೇಂದ್ರತೀರ್ಥ ಸ್ವಾಮೀಜಿಯವರಿಂದ ಪ್ರಮಾಣಪತ್ರ ಪಡೆದು ಧನ್ಯನಾದೆ. ಕೋಟಿಗೀತಾಲೇಖನಯಜ್ಞದ ಬಗ್ಗೆ ನನಗೆ ಗೊತ್ತಾದದ್ದು ಕಳೆದ ವರ್ಷ ನೀವು ಬರೆದಿದ್ದ ಅಂಕಣಬರಹದಿಂದ, ಆದ್ದರಿಂದ ಪುಣ್ಯದಲ್ಲಿ ನಿಮ್ಮ ಪಾಲೂ ಇದೆ!'' ಎಂದು ಭಾವಚಿತ್ರ ಸಹಿತ ಸಂದೇಶ ಕಳಿಸಿದ್ದಾರೆ ಇಲ್ಲೇ ಅಮೆರಿಕದಲ್ಲಿ ನಿವೃತ್ತ ವೈದ್ಯರಾದ, ಮೂಲತಃ ಮೈಸೂರಿನ ಡಾ.ಪದ್ಮನಾಭ ರಾವ್. ಅವರಿಗೀಗ 90ರ ವಯಸ್ಸು. ಸುಮಾರು 60 ವರ್ಷಗಳ ಹಿಂದೆಯೇ (ಅಂದರೆ ನಾನಿನ್ನೂ ಆಗ ಹುಟ್ಟಿರಲೂ ಇಲ್ಲ!) ಅಮೆರಿಕಕ್ಕೆ ಬಂದ ಅವರಿಗೆ ಕನ್ನಡ ಓದು-ಬರಹ ಎಲ್ಲ ಮರೆತೇ ಹೋಗಿತ್ತಂತೆ. ಕನ್ನಡ ಕೈಬರಹ ಮತ್ತೊಮ್ಮೆ ಅಭ್ಯಾಸವಾದಂತೆಯೂ ಆಯ್ತು, ಇಡೀ ಭಗವದ್ಗೀತೆ ಬರೆದಂತೆಯೂ ಆಯ್ತು ಎನ್ನುವುದಕ್ಕಾಗಿಯೇ ಅವರಿದನ್ನು ಕೈಗೊಂಡಿದ್ದಂತೆ. ದಶಕಗಳ ಬಳಿಕ ಕನ್ನಡ ಅಕ್ಷರಗಳನ್ನು ಬರೆದ ಧನ್ಯತೆಯ ಪುಳಕ ಅವರ ಸಂದೇಶದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತಿತ್ತು. ಈ ನಾಲ್ಕೂ ನಿದರ್ಶನಗಳು ಕಳೆದೊಂದು ವಾರದ ಅವಧಿಯಲ್ಲಿ ಘಟಿಸಿದಂಥವು. ಉಳಿದಂತೆ ಬೇರೆ ಕೆಲವು ಓದುಗರು, ವಿಶೇಷವಾಗಿ ಶಿಕ್ಷಕ ವೃತ್ತಿಯಲ್ಲಿರುವವರು, ''ನಿಮ್ಮ ಅಂಕಣಬರಹಗಳನ್ನು ನಮ್ಮ ತರಗತಿಯಲ್ಲಿ ಉಪಯೋಗಿಸುತ್ತೇವೆ. ಮಕ್ಕಳಿಗೂ ಇಷ್ಟವಾಗುತ್ತದೆ'' ಎಂದು ಆಗಾಗ ತಿಳಿಸುತ್ತಿರುತ್ತಾರೆ. ಇದನ್ನು ನಾನಿಲ್ಲಿ ಕಾಲರ್ ಎತ್ತಿಕೊಳ್ಳಲಿಕ್ಕೆ ಬರೆದಿದ್ದಲ್ಲ, ಬದಲಿಗೆ ಇವರೆಲ್ಲರಿಂದ ನಾನು ಕಲಿತದ್ದು '1. ಕೃತಜ್ಞನಾಗಿರು; 2. ಯಾರಿಗೆ ತಿಳಿಸಬೇಕೋ ಅವರಿಗೆ ನಿನ್ನ ಕೃತಜ್ಞತೆಯನ್ನು ಕ್ಲಪ್ತವಾಗಿ ಎದೆತುಂಬಿ ತಿಳಿಸು' ಎಂಬುದನ್ನು. ಏಕೆಂದರೆ ಈ ಎರಡನೆಯ ಭಾಗವನ್ನು ನಾವೆಲ್ಲ ಹೆಚ್ಚಾಗಿ ಮರೆಯುತ್ತೇವೆ; ಇನ್ನುಮುಂದೆ ಮರೆಯಬಾರದು.

ತುತ್ತು ಅನ್ನಕ್ಕಿರುವಷ್ಟೇ ಗೌರವ ಕವಳಕ್ಕೂ ಇದೆ



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

ಕಳೆದ ವಾರ, 'ಕವಳಾ ಕೊಡೆ ತಾಯಿ ಕವಳಾ ಕೊಡು ಅಮ್ಮಾ' ಎನ್ನುವುದರ ಬಗ್ಗೆ ಬರೆದಿದ್ದೆ. ಈ ವಾರ 'ಕವಳಾ ಬೇಡಪ್ಪಾ ಕವಳಾ ಸಾಕಪ್ಪಾ' ಎನ್ನುವ ಅಮ್ಮನ ಮಾತಿನ ಬಗ್ಗೆ ಸ್ವಲ್ಪ ಬರೆಯಬೇಕಾಗಿದೆ. ಇದೇನಿದು ಎಂದು ನಿಮಗನಿಸುತ್ತಿರಬಹುದು. ಹೌದು, ಕರ್ನಾಟಕದ ಕರಾವಳಿ, ಮಲೆನಾಡು ಮುಂತಾದ ಪ್ರದೇಶಗಳಲ್ಲಿ ತಾಂಬೂಲಕ್ಕೆ 'ಕವಳ' ಎನ್ನುತ್ತಾರೆ. ಬೇರೆ ಬೇರೆ ಪ್ರದೇಶಗಳಲ್ಲಿ, ತಾಂಬೂಲಕ್ಕೆ ಬೀಡಾ, ಎಲೆಯಡಿಕೆ, ಪಾನ್ ಮುಂತಾದ ಹೆಸರುಗಳಿವೆ. ಆದರೆ ಮಲೆನಾಡು ಹಾಗೂ ಕರಾವಳಿ ಪ್ರದೇಶದಲ್ಲಿ ಮಾತ್ರ ತಾಂಬೂಲಕ್ಕೆ ಕವಳ ಅಂತ ಇರುವುದು ವಿಶೇಷ. ಈ ಭಾಗದ ಜನರನ್ನು ಈ ಕವಳ ಎಷ್ಟು ಆವರಿಸಿದೆಯೆಂದರೆ, ಬೆಳಗ್ಗೆ ಬಹಿರ್ದೆಸೆಗೆ ಹೋಗುವುದರಿಂದ ಹಿಡಿದು, ಯಾವುದೇ ಕೆಲಸ ಕವಳವಿಲ್ಲದೇ ಮುಂಬರಿಯುವುದಿಲ್ಲ. ತಾಯಿ, 'ತೋಟಕ್ಕೆ ಹೋಗ್ತಾರೋ ಮಗನೇ' ಅಂದ್ರೆ, 'ಒಂದು ಕವಳ ಹಾಕಿ ಹೋಗುತ್ತೇನಮ್ಮಾ' ಅಂತಾರೆ; 'ಸ್ನಾನ ಮಾಡ್ತಾರೋ' ಅಂದರೆ, 'ಒಂದೊಳ್ಳೆ ಕವಳ ಹಾಕಿ ಸ್ನಾನಕ್ಕೆ ಹೋಗುತ್ತೇನೆ' ಎನ್ನುತ್ತಾರೆ ಅಲ್ಲಿನ ಗಂಡಸರು. ಕಾರು ಬೈಕುಗಳಿಗೆ ಪೆಟ್ರೋಲ್ ಡೀಸೆಲ್ ಇದ್ದಂತೆ, ಅಲ್ಲಿನ ಪುರುಷರ ನಿತ್ಯಜೀವನ ಪ್ರಯಾಣಕ್ಕೆ ಕವಳವೇ ಇಂಧನವಾಗಿ ಕೆಲಸಮಾಡುತ್ತದೆ. ಊಟ-ತಿಂಡಿ ಮಾಡಿದ ಮೇಲೆ ಒಂದು ಎಲೆ-ಅಡಕೆ ಹಾಕುವುದಲ್ಲ, ಊಟ-ತಿಂಡಿ ಮಾಡುವುದೇ ಆಮೇಲೆ ಕವಳ ಹಾಕುವುದಕ್ಕೆ ಎಂಬಂತಾಗಿಬಿಟ್ಟಿದೆ. ಹೀಗೆ ತಾಂಬೂಲ ಅಗಿಯುವ ಗಂಡಸರ ತುಟಿಗಳು ಹೆಚ್ಚಾಗಿ ಕೆಂಪಡರಿದರೆ, ಆತ ತನ್ನ ಹೆಂಡತಿಯನ್ನು ಅಧಿಕವಾಗಿ ಪ್ರೀತಿಸುತ್ತಾನೆ ಎನ್ನುವ ಮಾತೂ ಇದೆ. 'ಯಾಕೋ ನಿಮ್ಮ ಕವಳ ಜಾಸ್ತಿಯಾಗಿದೆ, ಸ್ವಲ್ಪ ಕಡಿಮೆ ಮಾಡಿ'- ಇದು ಮಲೆನಾಡಿನ ತಾಯಿ, ಹೆಂಡತಿಯಿಂದ ಗಂಡಸರು ನಿತ್ಯ ಕೇಳಿಸಿಕೊಳ್ಳುವ ಸಲಹೆ!

ಮಲೆನಾಡಿನ ಪ್ರತಿ ಮನೆಯಲ್ಲಿ ನಾವು ಕವಳದ ಬಟ್ಟಲನ್ನು ನೋಡಬಹುದು. ಮಲೆನಾಡಿನಲ್ಲಿ 'ಬಟ್ಟಲು' ಎಂದರೆ ಬೆಂಗಳೂರಿನ 'ತಟ್ಟೆ'. ಬೆಂಗಳೂರಿನ ತಟ್ಟೆಯೆಂದರೆ ಅಲ್ಲಿ ಅದು ಬಟ್ಟಲು. ಊಟ ಮಾಡುವುದು ಬಟ್ಟಲಲ್ಲಿ, ನೀರು ಕುಡಿಯುವುದು ತಟ್ಟೆಯಲ್ಲಿ ಅಂದರೆ ನಿಮಗೆ ಅರ್ಥವಾದೀತು. ಇರಲಿ, ಸಾಂಪ್ರದಾಯಿಕ ಕವಳದ ಬಟ್ಟಲನ್ನು ಸ್ವಲ್ಪ ವಿವರಿಸೋಣ. ಸಾಮಾನ್ಯವಾಗಿ ಕವಳದ ಬಟ್ಟಲು ಮರದಿಂದ ಅಥವಾ ಹಿತ್ತಾಳೆಯಿಂದ ಮಾಡಿರುವಂಥದ್ದಾಗಿರುತ್ತದೆ. ಒಂದಷ್ಟು ಎಲೆ-ಅಡಕೆ, ಅಡಕೆ ಕತ್ತರಿಸಲು ಬಳಸುವ ಅಡಕತ್ತರಿ, ಸುಣ್ಣ ಮತ್ತು ತಂಬಾಕಿನ ಎಸಳನ್ನು ತುಂಬುವ ಅಂಡೆಯಾಕಾರಾದ ಬೆಳ್ಳಿಯ ಅಥವಾ ಸ್ಟೀಲಿನ ವಸ್ತು (ಸುಣ್ಣದಂಡೆ) ಇವಿಷ್ಟು ಕವಳದ ಬಟ್ಟಲಿನಲ್ಲಿರುತ್ತವೆ. ಆ ತಂಬಾಕಿಗೂ ಒಂದು ವ್ಯವಸ್ಥೆಯಿದೆ. ಒಣಗಿಸಿದ ತಂಬಾಕಿನ ಉದ್ದನೆಯ ಎಲೆಯನ್ನು ಬಿಸಿನೀರಿನಲ್ಲಿ ತೊಳೆದು, ಹದಬರಿಸಿ, ಹುರಿ ಹೊಸೆದು, ಸುಣ್ಣದ ಡಬ್ಬಿಯ ಒಂದು ಬದಿಗೆ ತುಂಬಲಾಗುತ್ತದೆ. ಕವಳದ ಬಟ್ಟಲಿಗೆ ಒಂದು ಪಾವಿತ್ರ್ಯವೂ ಇದೆ. ಅಪ್ಪಿ ತಪ್ಪಿ ಕಾಲು ತಾಕಿದರೆ ಮನುಷ್ಯರಿಗೆ ನಮಸ್ಕಾರ ಮಾಡುತ್ತಾರೋ ಇಲ್ಲವೋ, ಆದರೆ ಕವಳದ ಬಟ್ಟಲಿಗೆ ಕಾಲು ತಾಕಿದರೆ ನಮಸ್ಕಾರ ಮಾಡಬೇಕು. ಇನ್ನು, ಎಲೆ-ಅಡಕೆ ಅತಿ ಅಭ್ಯಾಸವಿದ್ದ ಜನ, ಬಟ್ಟೆಯಿಂದ ಹೊಲಿದ 'ಎಲೆ ಸಂಚಿ' (ಸಣ್ಣ ಚೀಲ) ಯನ್ನು ಪ್ರಯಾಣ ಕಾಲದ ಸೌಕರ್ಯವಾಗಿ ತಮ್ಮ ಜತೆಗೆ ತೆಗೆದುಕೊಂಡು ಹೋಗುವ ಅಭ್ಯಾಸವೂ ಇತ್ತು. ಆದರೆ, ಕವಳದ ಬಟ್ಟಲಿಗಿರುವ ಮಾನ, ಕವಳದ ಸಂಚಿಗೆ ಸಿಗುವುದಿಲ್ಲ.

ಹೀಗೆ ಕವಳದ ಬಟ್ಟಲಿನ ನಿರ್ವಹಣೆಗೆ ಒಂದಷ್ಟು ನಿಯಮಗಳೂ ಇವೆ. ಸುಣ್ಣದ ಡಬ್ಬಿಗೆ ರಾತ್ರಿ ಸುಣ್ಣ ತುಂಬುವ ಹಾಗಿಲ್ಲ, ಹಾಗೊಮ್ಮೆ ತುಂಬಲೇಬೇಕಾದರೆ, ಸುಣ್ಣ ತುಂಬಿದ ದೊಡ್ಡ ಡಬ್ಬಿಗೆ 'ನೆಂಟರು ಬಂದಿದ್ದಾರೆ' ಎಂದು ಸುಳ್ಳು ಹೇಳಿ 'ರಿಕ್ವೆಸ್ಟ್' ಮಾಡಿ ಸುಣ್ಣ ತರಬೇಕು. ಕೌಳಿಗೆಯಿಂದ ವೀಳ್ಯದೆಲೆ ತಂದು ಕವಳದ ಬಟ್ಟಲಿಗೆ ಹಾಕುವಾಗ, ಬೋರಲಾಗಿ ಬೀಳದಂತೆ ಎಚ್ಚರ ವಹಿಸಬೇಕು, ಅಂಗಾತವಾಗಿಯೇ ಕವಳದ ಬಟ್ಟಲಿಗೆ ಬೀಳಬೇಕು. ಅಲ್ಲದಿದ್ದರೆ ಅಪಶಕುನ ಎಂದು ಪರಿಗಣಿಸುತ್ತಾರೆ ಅಲ್ಲಿನ ಹಿರಿಯರು. ವೀಳ್ಯದೆಲೆಯ ತೊಟ್ಟನ್ನು ದರಿದ್ರ ಎಂದು ಪರಿಭಾವಿಸಿ ದೂರ ಎಸೆಯುತ್ತಾರೆ. ಎಲೆಯ ಅಗ್ರಭಾಗವನ್ನು 'ಲಕ್ಷ್ಮಿ' ಎಂದು ಪರಿಗಣಿಸಿ ಆಡುಗೆನ್ನೆಗೆ ಹಚ್ಚಿಕೊಳ್ಳುತ್ತಾರೆ. ಇನ್ನು, ಮದುವೆಗೋ ಮುಂಜಿಗೋ ಆಮಂತ್ರಣ ನೀಡಲು ಮನೆಗೆ ಬಂದವರಿಗೆ ಊಟ ತಿಂಡಿ ಮಾಡಲು ಪುರುಸೊತ್ತಿಲ್ಲದಿದ್ದರೆ, 'ಒಂದು ಕವಳನಾದರೂ ಹಾಕಿ ಹೋಗಿ' ಎನ್ನುವುದು ವಾಡಿಕೆ. ಒಂದು ತಾಂಬೂಲಕ್ಕೆ ತುತ್ತು ಊಟಕ್ಕಿರುವ ಮರ್ಯಾದೆಯಿದೆ ಈ ಭಾಗದಲ್ಲಿ. ಹಾಗಾಗಿಯೇ ತಾಂಬೂಲಕ್ಕೆ 'ಕವಳ' ಎನ್ನುವ ಹೆಸರು ಬಂದಿರಬಹುದು ಎನಿಸುತ್ತದೆ.

ಹಿಂದೂ ನಂಬಿಕೆಯಲ್ಲಿ ತಾಂಬೂಲಕ್ಕೆ ಬಹಳ ಮಹತ್ವವನ್ನು ಹೇಳಲಾಗಿದೆ. ದೇವರಿಗೆ ಪೂಜೆ ಮಾಡುವಾಗ ಹದಿನಾರು ಬಗೆಯ ಉಪಚಾರಗಳನ್ನು ಹೇಳುತ್ತಾರೆ. ಆವಾಹನೆ, ಪಾದ ಪ್ರಕ್ಷಾಳನೆ ಅರ್ಘ್ಯ, ಆಚಮನ, ಸ್ನಾನ/ಅಭಿಷೇಕ, ವಸ್ತ್ರಗಳನ್ನು ಅರ್ಪಿಸುವುದು, ಯಜ್ಞೋಪವೀತವನ್ನು ಅರ್ಪಿಸುವುದು, ಗಂಧ-ಚಂದನಗಳನ್ನು ಹಚ್ಚುವುದು, ಹೂವುಗಳನ್ನು ಅರ್ಪಿಸುವುದು, ಧೂಪವನ್ನು, ದೀಪವನ್ನು ಬೆಳಗಿಸುವುದು, ನೈವೇದ್ಯ ಅರ್ಪಿಸುವುದು. ಆಮೇಲೆ, ಹಣ್ಣು ಸಮರ್ಪಿಸಿ ಮಂಗಳಾರತಿ, ನಮಸ್ಕಾರ ಮಾಡುವ ಮೊದಲು 'ಮುಖ (ಬಾಯಿ) ಶುದ್ಧ್ಯರ್ಥೇ ತಾಂಬೂಲಂ ಸಮರ್ಪಯಾಮಿ' ಎಂದು ತಾಂಬೂಲವನ್ನು ಅರ್ಪಿಸುವುದೂ ಪೂಜಾವಿಧಿಯ ಭಾಗವೇ ಆಗಿದೆ.

ಹೆಣ್ಣು ದೇವರಾಗಲಿ ಅಥವಾ ಗಂಡು ದೇವರಾಗಲಿ, ಪೂಜೆಯಲ್ಲಿ ತಾಂಬೂಲ ಸಮರ್ಪಣೆಯಂತೂ ಆಗಲೇಬೇಕು. ಸಾಮಾನ್ಯವಾಗಿ ಹೆಂಗಸರು ತಾಂಬೂಲ ಚರ್ವಣ ಮಾಡುವುದು ಕಡಿಮೆಯೇ, ಆದರೆ ಹೆಣ್ಣು ದೇವರು ಎಲೆ-ಅಡಕೆ ಹಾಕುತ್ತಾಳೆಯೇ ಎಂದರೆ, ಹೌದು ಎನ್ನುವುದೇ ಉತ್ತರವಾಗಿದೆ. 'ತಾಂಬೂಲ ಪೂರಿತ ಮುಖೀ ದಾಡಿಮೀ ಕುಸುಮಪ್ರಭಾ' ಎಂದು ಶ್ರೀ ಲಲಿತಾ ಸಹಸ್ರನಾಮದಲ್ಲಿ ದೇವಿಯನ್ನು ಸ್ತುತಿಸಲಾಗಿರುವುದನ್ನು ನೋಡುವಾಗ, ಹೆಣ್ಣು ದೇವರೂ ತಾಂಬೂಲವನ್ನು ಬಳಸುತ್ತಾಳೆ ಎನ್ನುವುದು ತಿಳಿದುಬರುತ್ತದೆ. ಈ ನಾಮವು ದೇವಿಯ ಮುಖವು ತಾಂಬೂಲದಿಂದ ಕಂಗೊಳಿಸುತ್ತದೆ ಎನ್ನುತ್ತದೆ. ತಾಂಬೂಲವನ್ನು ಅಗಿಯುವುದರಿಂದ ಕೆಂಪಾದ ರಸವು ಉತ್ಪನ್ನವಾಗುತ್ತದೆ. ಕೆಂಪು ಬಣ್ಣವು ಕರುಣೆಯ ಸಂಕೇತವಾಗಿರುವುದರಿಂದ, ದೇವಿಯ ಮುಖವು ಕರುಣಾರಸ ಪೂರಿತವಾಗಿದೆ ಎನ್ನುವುದನ್ನು ಈ ನಾಮವು ಪರೋಕ್ಷವಾಗಿ ಹೇಳುತ್ತದೆ ಎನ್ನುವುದು ಬೇರೆ ಮಾತು. ಶಾಸ್ತ್ರಾನುಸಾರ ವಿದ್ಯಾರ್ಥಿಗಳಿಗೆ (ಬ್ರಹ್ಮಚಾರಿಗಳಿಗೆ) ಹಾಗೂ ಸನ್ಯಾಸಾಶ್ರಮಿಗಳಿಗೆ ತಾಂಬೂಲ ಚರ್ವಣ ನಿಷಿದ್ಧ. ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ 'ತಾಂಬೂಲ' ಹಾಸುಹೊಕ್ಕಾಗಿದೆ. ಮನುಷ್ಯ-ದೈವ, ಅತಿಥಿ-ಆತಿಥೇಯ, ಗಂಡು-ಹೆಣ್ಣು ಹೀಗೆ ಜೀವನದ ವಿವಿಧ ಸಂಬಂಧಗಳನ್ನು ತಾಂಬೂಲವೇ ಬೆಸೆಯುತ್ತದೆ.

ದಕ್ಷಿಣ ಕನ್ನಡ ಸೇರಿದಂತೆ ಕರಾವಳಿ ಭಾಗದಲ್ಲಿ ಅಷ್ಟಮಂಗಳ, ಆರೂಢ ಪ್ರಶ್ನೆಗಳಿದ್ದಂತೆ 'ತಾಂಬೂಲ ಪ್ರಶ್ನೆ' ಎಂತಲೂ ಇದೆ. ತಾಂಬೂಲ ಪ್ರಶ್ನೆ ಎನ್ನುವುದು ಜ್ಯೋತಿರ್ವಿಜ್ಞಾನದಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಒಂದು ವಿಧಾನವಾಗಿದೆ. ಕೇರಳ, ದಕ್ಷಿಣ ಕನ್ನಡ ಸೇರಿದಂತೆ ಕರಾವಳಿ ಭಾಗದಲ್ಲಿ ತಾಂಬೂಲ ಪ್ರಶ್ನೆಯನ್ನು ತುಂಬಾ ಜನ ಇಂದಿಗೂ ನಂಬುತ್ತಾರೆ. ಮುಖ್ಯವಾಗಿ ವೀಳ್ಯದೆಲೆಯ ಸಂಖ್ಯೆ, ಸ್ವರೂಪದ ಆಧಾರದಲ್ಲಿ ಪ್ರಶ್ನೆಗೆ ಫಲ ಹೇಳುವ ವ್ಯವಸ್ಥೆಯನ್ನು ತಾಂಬೂಲ ಪ್ರಶ್ನೆ ಎಂದು ಹೇಳಲಾಗುತ್ತದೆ. ಪ್ರಶ್ನೆಕರ್ತ ಕೊಡುವ ತಾಂಬೂಲದ ಸಹಾಯದಿಂದ ಶುಭಾಶುಭ ಫಲಗಳನ್ನು ಹೇಳಲಾಗುತ್ತದೆ.

ಮದುವೆಯ ನಿಶ್ಚಿತಾರ್ಥಕ್ಕೂ ತಾಂಬೂಲದ ಬಟ್ಟಲನ್ನೇ ವಿನಿಮಯ ಮಾಡಿಕೊಳ್ಳುವ ಶಿಷ್ಟಾಚಾರ ಇಂದಿಗೂ ಇದೆ. ಹಿಂದೆ ಯುದ್ಧಕ್ಕಾಗಿ ವಿರೋಧಿಗಳನ್ನು ಆಮಂತ್ರಿಸಲೂ 'ತಾಂಬೂಲ'ದ ಬಳಕೆಯಾಗುತ್ತಿತ್ತು; ಸಂಧಾನದ ನೆಪದಿಂದ ಹಸ್ತಿನಾಪುರಕ್ಕೆ ಬಂದ ಶ್ರೀ ಕೃಷ್ಣನಿಗೆ, ಕೊನೆಯಲ್ಲಿ ದುರ್ಯೋಧನ ಬಂಗಾರದ ಬಟ್ಟಲಿನಲ್ಲಿ ಧುರ ವೀಳ್ಯವನ್ನು (ರಣವೀಳ್ಯ) ಕೊಟ್ಟು ಯುದ್ಧಕ್ಕೆ ಆಮಂತ್ರಿಸಿದ ಕಥೆಯನ್ನು ನಾವು ಕೇಳುತ್ತೇವೆ. ಕೊಲ್ಲಲೂ ತಾಂಬೂಲವೇ ಸಾಕ್ಷಿ (ಸುಪಾರಿ); ಕಾಯುವಂತೆ ದೇವರನ್ನು ಪ್ರಾರ್ಥಿಸಲೂ ತಾಂಬೂಲದ ಸಮರ್ಪಣೆ, ಕೆಲಸ ಶುಭವಿರಲಿ ಅಥವಾ ಅಶುಭವಿರಲಿ, ಸಾಕ್ಷೀಭಾವದಿಂದ ತಾಂಬೂಲ ಅಲ್ಲಿ ಇರಲೇಬೇಕು. ಹಾಗೆ ತಾಂಬೂಲ ತನ್ನ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡಿದೆ ಎನ್ನಬಹುದು. ವೀಳ್ಯ ಸ್ವೀಕರಿಸಿದವ, ಯಾವುದೇ ಕಾರಣಕ್ಕೆ ಮಾತು ತಪ್ಪುವ ಹಾಗಿಲ್ಲ.

ಈಗೀಗ ತಾಂಬೂಲದ ಮೂಲರೂಪ ವಿರೂಪಗೊಂಡು, ತಂಬಾಕು, ಖೈನಿ, ಅನೇಕ ಮಸಾಲೆ ಪದಾರ್ಥಗಳು ಗುಟಕಾ ಮೂಲಸ್ವರೂಪಕ್ಕೆ ಸೇರಿಕೊಂಡುಬಿಟ್ಟಿವೆ. ವಾಸ್ತವಿಕವಾಗಿ ತಾಂಬೂಲದ 'ಡೆಫಿನಿಶನ್' ಇರುವುದು 'ಪೂಗೀಫಲ ಸಮಾಯುಕ್ತಂ ನಾಗವಲ್ಲೀ ದಲೈರುತಮ್, ಚೂರ್ಣಂಕರ್ಪೂರ ಸಮ್ಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಮ್' ಎಂದಿರುವುದಾಗಿದೆ. ಅಡಕೆ, ನಾಗವಲ್ಲಿ ಜಾತಿಯ ವೀಳ್ಯದೆಲೆ, ಕರ್ಪೂರ ಹಾಗೂ ಲವಂಗ ಇವಷ್ಟು ಸೇರಿದರೆ ತಾಂಬೂಲವಾಗುತ್ತದೆ. ಅಡಕೆ, ನಾಗವಲ್ಲಿ ಎಲೆ, ಕರ್ಪೂರ ಹಾಗೂ ಲವಂಗ ಈ ನಾಲ್ಕೂ ದ್ರವ್ಯಗಳಿಗೆ ಪ್ರತ್ಯೇಕವಾಗಿ ವಿಶೇಷವಾದ ಔಷಧೀಯ ಗುಣಗಳಿವೆ. ಇನ್ನು, ನಾಲ್ಕೂ ಸೇರಿದರಂತೂ ಅದು ಅದ್ಭುತವಾದ ಔಷಧಿಯ ಸತ್ವವನ್ನು ಪಡೆಯುತ್ತದೆ. ತಾಂಬೂಲಕ್ಕೆ ಬಳಸುವ ನಾಗವಲ್ಲಿ ಅಥವಾ ನಾಗಬಳ್ಳಿ ಎಲೆ ಇಂದಿಗೂ ಮಲೆನಾಡು ಕರಾವಳಿಗಳಲ್ಲಿ ಹೇರಳವಾಗಿ ದೊರೆಯುತ್ತದೆ. ಕುಮಟಾ, ಹೊನ್ನಾವರ ಭಾಗದ ಈ ನಾಗಬಳ್ಳಿ ಎಲೆಗೆ ಎಲ್ಲಿಲ್ಲದ ಬೇಡಿಕೆಯಿದೆ. ವಿದೇಶಕ್ಕೂ ರಫ್ತಾಗುತ್ತದೆ. ಈ ಭಾಗದ ಜನರಿಗೆ ವೀಳ್ಯದೆಲೆ ಆದಾಯದ ಒಂದು ಪ್ರಮುಖ ಮೂಲವಾಗಿದೆ.

ಕುರುಕ್ಷೇತ್ರ ಯುದ್ಧದ ನಂತರ ಹಸ್ತಿನಾಪುರದಲ್ಲಿ 'ಧರ್ಮ ಸಾಮ್ರಾಜ್ಯ' ಸ್ಥಾಪನೆಯಾಯಿತು. ತಾಂಬೂಲಪ್ರಿಯರಾದ ಪಾಂಡವರಿಗೆ ವೀಳ್ಯದೆಲೆ ದೊರಕದೆ ಇದ್ದಾಗ ಪಾತಾಳ ಲೋಕದಿಂದಲಾದರೂ ಅದನ್ನು ತರಬೇಕೆಂದು ದೂತನೊಬ್ಬನನ್ನು ಪಾತಾಳಕ್ಕೆ ಅಟ್ಟಲಾಯಿತು. ಪಾತಾಳದಲ್ಲಿದ್ದ ಅರ್ಜುನನ ಪ್ರೇಯಸಿಯಾದ ಉಲೂಚಿ ತನ್ನ ಕಿರುಬೆರಳ ತುದಿಯನ್ನು ಕತ್ತರಿಸಿ ಹಸ್ತಿನಾಪುರದಲ್ಲಿ ಅದನ್ನು ನೆಡುವಂತೆ ತಿಳಿಸುತ್ತಾಳೆ. ಹಸ್ತಿನಾಪುರದಲ್ಲಿ ಅದನ್ನು ನೆಟ್ಟಾಗ ಅದರಿಂದ ಬಳ್ಳಿಯೊಂದು ಹುಟ್ಟಿಕೊಂಡಿತು. ನಾಗಲೋಕದಿಂದ ಭೂಲೋಕಕ್ಕೆ ಬಂದ ಈ ಬಳ್ಳಿಯನ್ನು 'ನಾಗವಲ್ಲಿ'ಯೆಂದು ಕರೆಯಲಾಯಿತು. ಈ ಬಳ್ಳಿಗೆ ಹಬ್ಬುವುದಕ್ಕೆ ಆಸರೆ ಬೇಕಲ್ಲ! ಈ ಬಳ್ಳಿಯ ಸೌಂದರ್ಯಕ್ಕೆ ಮಾರುಹೋದ ಪೂಗವೃಕ್ಷ (ಅಡಕೆ ಮರ) ಅದಕ್ಕೆ ಆಸರೆಯನ್ನು ನೀಡಿತು. ಪೂಗವೃಕ್ಷವನ್ನು ತಬ್ಬಿ ಆವರಿಸುವ ನಾಗವಲ್ಲಿಗೆ ಎತ್ತರೆತ್ತರಕ್ಕೇರಿ ಅದನ್ನು ಚುಂಬಿಸುವ ಬಯಕೆ! ಹೀಗೆ, ನಾಗಲೋಕದ ಬಳ್ಳಿಯು ಭೂಮಿಗೆ ಬಂದು ಪೂಗವೃಕ್ಷದ ಜತೆ ಅಮರಪ್ರೇಮ ಸಾಧಿಸಿದ ಕಥೆಯೂ ಜನಪದದಲ್ಲಿದೆ. ಅಂಬಾಡಿ, ಬನಾರಸ್, ಕಲ್ಕತ್ತಾ ಮುಂತಾದ, ಭಾರತದಲ್ಲಿ ಮೂವತ್ತಕ್ಕೂ ಮಿಕ್ಕಿ ವೀಳ್ಯದೆಲೆಯ ತಳಿಗಳಿವೆ. ಕೆಲವು ಬಗೆಯ ವೀಳ್ಯದೆಲೆಯನ್ನು ಪಾಕಿಸ್ತಾನದಿಂದಲೂ ಆಮದು ಮಾಡಿಕೊಳ್ಳಲಾಗುತ್ತದೆ.

ತಾಂಬೂಲದ ಸೃಷ್ಟಿಯ ಕುರಿತಂತೆ ಇನ್ನೊಂದು ಕಥೆಯಿದೆ. ಸಮುದ್ರ ಮಥನಾನಂತರ ಸಮುದ್ರದಿಂದ ಉದ್ಭವಿಸಿದ ಅಮೃತವನ್ನು ಮಹಾವಿಷ್ಣು ಮೋಹಿನಿಯ ರೂಪಧರಿಸಿ ದೇವತೆಗಳಿಗೆ ಹಂಚುತ್ತಾನೆ. ಹಂಚಿ ಮಿಕ್ಕುಳಿದ ಅಮೃತದ ಪಾತ್ರೆಯನ್ನು ಮೋಹಿನಿ ಇಂದ್ರನ ಪಟ್ಟದಾನೆ ಐರಾವತದ ಬಳಿಯಿರಿಸುತ್ತಾಳೆ. ಐರಾವತದ ಸೊಂಡಿಲ ಬೀಸುವಿಕೆಗೆ ಅಮೃತವು ಭೂಮಿಯ ಮೇಲೆ ಚೆಲ್ಲಲ್ಪಟ್ಟು, ಅಲ್ಲಿ ಬಳ್ಳಿಯೊಂದು ಸೃಷ್ಟಿಯಾಗುತ್ತದೆ. ಆ ಬಳ್ಳಿಯ ಮಹತ್ವವನ್ನು ತಿಳಿಸಬೇಕೆಂದು ದೇವೇಂದ್ರನು ದೇವವೈದ್ಯ ಧನ್ವಂತರಿಯನ್ನು ಕೇಳಿಕೊಂಡಾಗ ಧನ್ವಂತರಿಯು ಅದರ ಔಷಧಯುಕ್ತ ಗುಣಗಳು ಮತ್ತು ಮಹತ್ವವನ್ನು ದೇವತೆಗಳಿಗೆ ತಿಳಿಸುತ್ತಾನೆ. ಸಾರಾಂಶವಾಗಿ, ವೀಳ್ಯದೆಲೆ ಅಥವಾ ತಾಂಬೂಲ ಅಮೃತ ಸಮಾನ ಗುಣಗಳನ್ನು ಹೊಂದಿದೆ ಎನ್ನುವುದನ್ನು ತಿಳಿಸಲು ಈ ಕಥೆಯ ಸೃಷ್ಟಿಯಾಗಿರಲೂಬಹುದು.

ತಾಂಬೂಲದ ಹದಿಮೂರು ಗುಣಗಳನ್ನು ವರ್ಣಿಸುವ ಸಂಸ್ಕೃತದ ಶ್ಲೋಕವೊಂದು ಹೀಗಿದೆ. 'ತಾಂಬೂಲಂ ಕಟುತಿಕ್ತಮುಷ್ಣ ಮಧುರಂ ಕ್ಷಾರಂ ಕಷಾಯಾನ್ವಿತಂ, ವಾತಘ್ನಂ ಕ್ರಿಮಿನಾಶನಂ ಕಫಹರಂ ದುರ್ಗಂಧ ನಿರ್ನಾಶನಂ, ವಕ್ತಸ್ಯಾಭರಣಂ ವಿಶುದ್ಧಿಕರಣಂ ಕಾಮಾಗ್ನಿ ಸಂದೀಪನಂ, ತಾಂಬೂಲಸ್ಯ ಸಖೇ ತ್ರಯೋದಶ ಗುಣಾಃ ಸ್ವರ್ಗೇಪಿ ತೇ ದುರ್ಲಭಃ' ತಾಂಬೂಲವು ಖಾರ, ಹುಳಿ, ಉಷ್ಣ, ಮಧುರ, ಕ್ಷಾರ ಮತ್ತು ಒಗರೆಂಬ ರುಚಿಗಳುಳ್ಳದ್ದು. ವಾತ, ಕಫಗಳನ್ನು ಪರಿಹರಿಸುವ, ಬಾಯಿ ವಾಸನೆಯನ್ನು ಹೋಗಲಾಡಿಸುವ, ಉದರದಲ್ಲಿ ಅನಾರೋಗ್ಯಕ್ಕೆ ಕಾರಣವಾದ ಕ್ರಿಮಿಗಳನ್ನು ನಾಶಮಾಡುವ, ಮುಖಕ್ಕೆ ಆಭರಣವಾಗಿರುವ, ವಿಶುದ್ಧಕಾರಕವಾಗಿಯೂ ಇರುವ ಈ ತಾಂಬೂಲವು ಗಂಡು-ಹೆಣ್ಣುಗಳ ಮಿಲನವನ್ನು ಪ್ರಚೋದಿಸುವಂಥದ್ದಾಗಿದೆ. ಹದಿಮೂರು ಗುಣಗಳಿಂದ ಸಮೃದ್ಧವಾಗಿರುವ ಭೂಮಿಯಲ್ಲಿ ದೊರೆಯುವ ತಾಂಬೂಲದಂಥ ವಸ್ತು ಸ್ವರ್ಗದಲ್ಲಿಯೂ ಸಿಗಲಾರದು ಎನ್ನುವುದು ಈ ಶ್ಲೋಕದ ಭಾವಾರ್ಥ. ಬೆಣ್ಣೆ ಕಾಸಿ ತುಪ್ಪ ತಯಾರಿಸುವ ಪ್ರಕ್ರಿಯೆಯಲ್ಲಿ ವೀಳ್ಯದೆಲೆಯನ್ನು ಹಾಕಿ ಅದನ್ನು ಸುಗಂಧಯುಕ್ತವಾಗಿಸುವ ಕ್ರಮವಿದೆ. ಹಾಗೆ ತಯಾರಿಸಿದ ತುಪ್ಪ ಬಹಳ ಕಾಲ ಬಾಳಿಕೆಯೂ ಬರುತ್ತದೆ. ಬಾಣಂತಿಯರಿಗೆ ಔಷಧಯುಕ್ತವಾದ ತಾಂಬೂಲವನ್ನು ನೀಡುವುದನ್ನು, ಸಣ್ಣ ಮಕ್ಕಳಿಗ ಕಫ ಕಟ್ಟಿದಾಗ ವೀಳ್ಯದೆಲೆಯ ರಸದ ಜತೆಗೆ ಜೇನುತುಪ್ಪವನ್ನು ಬೆರೆಸಿ ಕುಡಿಸುವ ಕ್ರಮವೂ ಇದೆ. ಆಯುರ್ವೇದದಲ್ಲಿ ಉಕ್ತವಾದ ತಾಂಬೂಲದ ಗುಣಗಳ ಕುರಿತು 'ವಿಶ್ವವಾಣಿ'ಯ ಸಹ ಅಂಕಣಕಾರ್ತಿ ಡಾ. ಸಾಧನಶ್ರೀ ಇನ್ನೂ ಹೆಚ್ಚಿನ ಬೆಳಕು ಚೆಲ್ಲಬಲ್ಲರು.

ವ್ಯಾಪಾರದ ದೃಷ್ಟಿಯಿಂದಲೂ, ತಾಂಬೂಲವನ್ನು ಮೀರಿಸಿ ಲಾಭಕೊಡುವ ಇನ್ನಾವ ವ್ಯವಹಾರವೂ ಇಲ್ಲವೇನೋ! ಸರಿಸುಮಾರು 60ರಿಂದ 70 ಪ್ರತಿಶತ ಲಾಭವನ್ನು ಪಾನ್ ಬೀಡಾ ಅಂಗಡಿಗಳು ಗಳಿಸುತ್ತವೆಯಂತೆ. ಅಡಕೆ, ಏಲಕ್ಕಿ, ನಾಗವಲ್ಲಿ ಎಲೆಗಳನ್ನು ಬೆಳೆಯುವವರು ಹೆಚ್ಚಾಗಿ ಕರ್ನಾಟಕದವರಾದರೂ, ಇಲ್ಲಿನ ಪ್ರಮುಖ ನಗರಗಳಲ್ಲಿನ ಬೀಡಾ ಅಂಗಡಿಗಳನ್ನು ನಡೆಸುವವರು ಮಾತ್ರ ಉತ್ತರ ಪ್ರದೇಶ ಅಥವಾ ಬಿಹಾರದ ಪಂಡಿತರುಗಳೇ ಆಗಿದ್ದಾರೆ. ಅವರು ತಯಾರಿಸುವ ಚಿತ್ರ ವಿಚಿತ್ರ, ಸ್ವಾದಿಷ್ಟ, ತ್ರಿಕೋನಾಕಾರದ ತಾಂಬೂಲದ ರುಚಿಯೇ ಬೇರೆ.

ಅಂತೂ, ತಾಂಬೂಲವಿಲ್ಲದೆ ಪೂಜೆಯಿಲ್ಲ, ದಾನ-ಧರ್ಮವಿಲ್ಲ, ಅತಿಥಿ ಸತ್ಕಾರವಿಲ್ಲ, ಸಂಧಾನವಿಲ್ಲ, ಸಮರವೂ ಇಲ್ಲ, ವಿವಾಹವಿಲ್ಲ, ಸರಸ-ಸಲ್ಲಾಪ, ಪ್ರೇಮ-ಕಾಮಗಳಿಲ್ಲ. ಹೀಗೆ ಭಾರತೀಯ ಬದುಕಿನ ಅವಿಭಾಜ್ಯ ಅಂಗವಾದ ಯಾವುದಾದರೂ ವಸ್ತುವಿದ್ದರೆ ಅದು ತಾಂಬೂಲವೆನ್ನಬಹುದಾಗಿದೆ. ಆಯುರ್ವೇದ, ಪುರಾಣ ಇತಿಹಾಸದಲ್ಲಿ ಇಷ್ಟೆಲ್ಲಾ ಗೌರವಿಸಲ್ಪಟ್ಟ ತಾಂಬೂಲದ ಮೂಲ ಮಾಲಾದ ಅಡಕೆಯ ಬಳಕೆಯನ್ನು (ಪೂಗೀಫಲ) ನಿಷೇಧಿಸುವ ಮಾತುಗಳು ಕೇಳಿಬರುತ್ತಿವೆ. ರೋಗಗಳನ್ನು ತರಬಲ್ಲ ತಾಂಬೂಲದ ವಿರೂಪಗಳನ್ನು ನಿಷೇಧಿಸಬಹುದು, ರೋಗನಿವಾರಕವಾದ ತಾಂಬೂಲದ ಮೂಲಸ್ವರೂಪವನ್ನು ಅಥವಾ ತಾಂಬೂಲದ ಪ್ರಮುಖ ಅಂಗವಾದ ಅಡಕೆಯನ್ನು ನಿಷೇಧಮಾಡುವುದರಲ್ಲಿ ಯಾವ ಅರ್ಥವೂ ಇಲ್ಲ. ಹಾಗೆ ನೋಡಿದರೆ ಯೋಗ, ಆಯುರ್ವೇದಗಳಂತೆ, ಪುರಾತನ ತಾಂಬೂಲ ಚರ್ವಣದ ಮಹಾತ್ಮೆಯನ್ನು ವಿದೇಶಗಳಲ್ಲೂ ಪ್ರಚಾರ ಮಾಡುವ ಅಗತ್ಯವಿದೆ.

ಮನೆ ಕೆಲಸದವಳ ಕಿವಿಮಾತು: ಅದು ಬಾಯಿ ಮಾತು

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಇತ್ತೀಚೆಗೆ ಕೆಲವು ಚಿತ್ರಗಳು ಥಿಯೇಟರ್‌ನಲ್ಲಿ ಬಿಡುಗಡೆ ಆದ ತಿಂಗಳಿಗೇ ಅಮೆಜಾನ್ ಪ್ರೈಮ್ ವಿಡಿಯೋ ಓಟಿಟಿಯಲ್ಲಿ ಬಿಡುಗಡೆಯಾಗುತ್ತವೆ. ಆದರೆ ಅದು ರೆಂಟ್ ಬೇಸಿಸ್ ಮೇಲೆ. ಅದಕ್ಕೆ ನಮ್ಮ ಸಿನಿಪ್ರಿಯರು, ವಾರ್ಷಿಕ ಚಂದಾದಾರರಾದ ಮೇಲೂ ಮತ್ತೆ ದುಡ್ಡು ಕೊಟ್ಟು ನೋಡಬೇಕಾ ಅಂತ ವರಾತ ತೆಗೆಯುತ್ತಾರೆ. ಅದು ಸಹಜ ಕೂಡಾ. ಆದರೆ ರೆಂಟ್ ಬೇಸಿಸ್‌ನಲ್ಲಿ ಇದ್ದ ಚಿತ್ರಗಳು ಕೆಲವೇ ದಿನಗಳ ನಂತರ ಉಚಿತ ವೀಕ್ಷಣೆಗೆ ಲಭ್ಯವಾಗುತ್ತವೆ. ಇಲ್ಲಿ ಅಮೆಜಾನ್ ಅವರ ಪಾಲಿಸಿ ಮತ್ತು ಆಲೋಚನೆ ಹೇಗಿದೆ ಅನ್ನೋದನ್ನ ಅರ್ಥ ಮಾಡಿಕೊಳ್ಳೋದೇ ಕಷ್ಟ. ಹೀಗೆ ಮೂರು ದಿನಕ್ಕೆ ಇವರು ತಮ್ಮ ಪ್ಲ್ಯಾನ್ ಚೇಂಜ್ ಮಾಡಿದರೆ ಯಾವ ಗ್ರಾಹಕ ತಾನೆ ರೆಂಟ್ ಕೊಟ್ಟು ಇವರು ಹಾಕುವ ಸಿನಿಮಾಗಳನ್ನು ನೋಡುತ್ತಾನೆ? ಚಿತ್ರವೊಂದು ಸಿನಿಮಾ ಥಿಯೇಟರ್‌ನಲ್ಲಿ ಸದ್ದು ಮಾಡುತ್ತಿದ್ದರೂ, 'ಅಯ್ಯೋ, ಓಟಿಟಿಯಲ್ಲಿ ಬಂದಾಗ ನೋಡೋಣ ಬಿಡಿ' ಅಂತ ತಿಂಗಳುಗಟ್ಟಲೆ ಕಾಯುವ ನಮ್ಮ ಮಂದಿ, ಒಂದು ವಾರ ಕಾಯದೇ, ಇವರಿಗೆ ರೆಂಟ್ ಕೊಟ್ಟು ಸಿನಿಮಾ ನೋಡುತ್ತಾರಾ? ಯಾವೋ ಕೆಲವು ದೊಡ್ಡ ಬಜೆಟ್‌ನ ಅತಿಯಾದ ನಿರೀಕ್ಷೆ ಇದ್ದ ಚಿತ್ರಗಳು ಅನ್ನೋ ಕಾರಣಕ್ಕೆ ಹಾಗೆ ಮಾಡಿರಬಹುದು ಅಂದುಕೊಂಡರೆ ಅದು ತಪ್ಪು. ಯಾಕಂದ್ರೆ, ಇವರು ಮಾಮೂಲಿ ಸ್ಟಾರ್ ಇಲ್ಲದೆ ಲೋ ಬಜೆಟ್ ಚಿತ್ರಗಳನ್ನೂ ಬಾಡಿಗೆಗೆ ಕೊಡುತ್ತಾರೆ. ಅವೇನೂ ದೊಡ್ಡ ಸಿನಿಮಾ ಆಗಿರೊಲ್ಲ, ಚಿತ್ರಮಂದಿರಗಳಲ್ಲಿ ಯಶಸ್ವಿ ಪ್ರದರ್ಶನ ಕಂಡ ಚಿತ್ರಗಳೂ ಅಲ್ಲ. ಅಲ್ಲದೆ, ಅದು ಕೂಡಾ ಇನ್ನೊಂದು ಮೂರು ದಿನದಲ್ಲಿ ಫ್ರೀ ಆಗಿ ಸಿಗುತ್ತೆ ಅಂತ ಗೊತ್ತಿರೋ ಗ್ರಾಹಕರು ಈಗಲೇ ರೆಂಟ್ ಕೊಟ್ಟು ನೋಡ್ತಾರೆ ಅಂತ ಪ್ರೈಮ್ ವಿಡಿಯೋದವರಿಗೆ ಅದೇನು ನಂಬಿಕೆಯೋ ಗೊತ್ತಿಲ್ಲ. ಈ ನಡುವೆ ದುಡ್ಡು ಕೊಟ್ಟು ವಾರ್ಷಿಕ ಚಂದಾದಾರರಾದ ಮೇಲೂ ಪ್ರೈಮ್‌ನಲ್ಲಿ ಮತ್ತೆ ಜಾಹೀರಾತುಗಳು ಬರುತ್ತವೆ. ಇವು ಬೇಡ ಅಂದ್ರೆ, ಅವರಿಗೆ ಮತ್ತೆ 700 ರುಪಾಯಿ ಕೊಡಬೇಕಂತೆ. ಈ ಓಟಿಟಿಗಳ ಅಧ್ವಾನಗಳು ಇನ್ನೂ ಎಲ್ಲಿಗೆ ಹೋಗಿ ಮುಟ್ಟುತ್ತವೋ ಏನೋ.

ಲೂಸ್ ಟಾಕ್ ▶▶ ನರಭಕ್ಷಕ ಹುಲಿ

- **ಅಲ್ಲಪ್ಪಾ, ಊರೊಳಗೆ ನುಗ್ಗಿ ಮನುಷ್ಯರನ್ನ ಕೊಂದು ತಿನ್ನೋದು ತಪ್ಪಲ್ವಾ?**
– ಏನ್ ತಪ್ಪು, ಹುಲಿ ಮುಪ್ಪಾದರೆ, ಹುಲ್ಲು ತಿಂತದಾ? ಉಪ್ಪು, ಹುಳಿ, ತಿಂದು ಬೆಳೆದಿರೋ ದೇಹ. ಹುಲಿ ಕಾಡಲ್ಲಿದ್ರೂ ಹುಲೀನೇ, ರೋಡಲ್ಲಿದ್ರೂ ಹುಲೀನೇ ಗೊತ್ತಾ, ಈಗ ನೀನ್ ಸಿಕ್ಕಿದೀಯಾ.. ಕುತ್ತೇ ಮೇ ತೇರಾ ಖೂನ್ ಪೀ ಜಾವೂಂಗ
- **ಓ... ನೀನು ಧರ್ಮೇಂದ್ರನ ಅಭಿಮಾನಿ ಅನ್ನುತ್ತೆ, ಒಂದ್ ಸ್ವಲ್ಪ ಹೊತ್ತು ಇರು. ಇವತ್ತಿನ ಇಂಟರ್‌ವ್ಯೂ ಮುಗೀಲಿ, ಆಮೇಲ್ ತಿನ್ನುವಂತೆ**
– ಮಗಾ, ಪುಣ್ಯಕೋಟಿ ಕಾಲ ಎಲ್ಲಾ ಈವಾಗಿಲ್ಲಮ್ಮಾ, ಇದು ಕಲಿಗಾಲ.
- **ನಿಜ ಹೇಳಬೇಕೂಂದ್ರೆ, ಇದು ಹುಲಿಗಾಲ. ಅದ್ಸರಿ, ಈಗ ಬೋನೊಳಗೆ ಹಾಕಿದ್ದಾರಲ್ಲ ನಿನ್ನ, ಈಗ ಹೇಳು, ನಿನ್ನ ಪ್ರಕಾರ ಯಾರು ಜಾಸ್ತಿ ಸ್ಟ್ರಾಂಗ್? ಮನುಷ್ಯನಾ ಅಥವಾ 'ಹುಲಿಯಾ'?**
– ಗೊತ್ತಿಲ್ಲ, ಕೆ.ವಿ.ರಾಜು ಅವರನ್ನೇ ಕೇಳಬೇಕು.
- **ಸರಿ, ಸರಿ. ಆದ್ರೆ, 'ಕಾಡು ಹೋಗು ಅಂತಿದೆ, ಊರು ಬಾ ಅಂತಿದೆ' ಅನ್ನೋ ನಿನ್ನ ಸಾಯಿಸ್ಬೇಕೂಂತ ಕೆಲವರು ಹೇಳಿದಾರೆ, ಏನಂತೀಯಾ?**
– ಟೈಗರ್ ಪ್ರಭಾಕರ್, ಬಾಳಾ ಠಾಕ್ರೆ, ಪಟೌಡಿ ಹೀಗೆ ಹುಲಿಗಳ ಸಂತತಿ ಕಡಿಮೆಯಾಗಿದೆ. ಹಂಗಾಗಿ ನನ್ನನ್ನ ಕೊಲ್ಲಲ್ಲ ಅಂತ ಭರವಸೆ ಇದೆ.
- **ಸಿಕ್ಕಾಕ್ಕೊಂಡಿರೋ ಬೋನಿನಲ್ಲಿ ತಿನ್ನೋಕೆ ಬೋನ್ ಸಿಗ್ತಿಲ್ಲ, ಹಂಗೇ ಸತ್ರೂ ಸಾಯಬಹುದು ನೀನು. ಹಂಗೇನಾದ್ರೂ ಆದ್ರೆ, ನಿನ್ ಕೊನೇ ಆಸೆ ಏನು?**
– ನೀವ್ಯಾರೂ ನಮ್ಮ ಹುಲಿಗಳ ಆಸೆ ತೀರ್ಸಲ್ಲ ಬಿಡ್ರಪ್ಪಾ. ಒಂದಷ್ಟು ವರ್ಷಗಳ ಹಿಂದೆ 'ಹುಲಿ ಹಿಡಿದವರು ಕಂಡಂತೆ' ಅಂತ ನನ್ ಮೇಲೊಂದ್ ಸಿನಿಮಾ ಮಾಡ್ತೀನಿ ಅಂತ ಹೇಳಿದ್ರು, ಆದ್ರೆ ಮಾಡದೇ ನನ್ನ ಆಸೆಗೆ ಹುಳಿ ಹಿಂಡಿಬಿಟ್ರು.

(ಕಾಲ್ಪನಿಕ ಸಂದರ್ಶನ)

ಕೆಂಪು ಕಾರಿಡಾರಿನ ಅಂತ್ಯ ಎಂದಿದ್ದೇಕೆ ಪ್ರಧಾನಿ ಮೋದಿ?

ಬಿಹಾರ ಚುನಾವಣೆಯ ಪಾಠ ಬಹಳ ಸ್ಪಷ್ಟ. ಕೆಂಪು ಕಾರಿಡಾರ್ ಈಗ ಭಾರತದಲ್ಲಿ ತನ್ನ ಅಂತಿಮ ಉಸಿರಿನಲ್ಲಿದೆ. ಹಲವು ದಶಕಗಳ ಕಾಲ ಕ್ರಾಂತಿ ಹೆಸರಿನಲ್ಲಿ ದಾರಿದ್ರ್ಯ, ಹಿಂಸೆ, ಭಯ ಮತ್ತು ಪ್ರತ್ಯೇಕತೆಯನ್ನು ಬೆಳೆಸಿದ ಎಡಪಂಥೀಯ ವ್ಯವಸ್ಥೆಯು ಜನರ ಜಾಗೃತಿಯಿಂದಾಗಿ ಬಿರುಕು ಬಿಟ್ಟಿದೆ. ಬಿಹಾರದಲ್ಲಿ ಜನರು ಅಭಿವೃದ್ಧಿಯನ್ನೇ ಆರಿಸಿಕೊಂಡರು, ತುಷ್ಟೀಕರಣಕ್ಕೆ 'ಇಲ್ಲ' ಎಂದರು.

ವಿಶ್ಲೇಷಣೆ
ಜನಮೇಜಯ ಉಮರ್ಜಿ
vveditoped@gmail.com

ಇತ್ತೀಚೆಗಷ್ಟೇ ಬಿಹಾರ ವಿಧಾನಸಭಾ ಚುನಾವಣೆ ಮುಗಿದಿದೆ. ಅದರ ಫಲಿತಾಂಶವು ಹಲವು ಅಚ್ಚರಿಗಳಿಗೆ ಸಾಕ್ಷಿಯಾಗಿದೆ. ಗೆದ್ದವರು ಮತ್ತು ಸೋತವರು ಅವರವರದೇ ರೀತಿಯಲ್ಲಿ ಅದನ್ನು ವಿಶ್ಲೇಷಣೆ ಮಾಡಿಕೊಳ್ಳುತ್ತಿದ್ದಾರೆ. ಕರ್ನಾಟಕದಲ್ಲಂತೂ ಫಲಿತಾಂಶಕ್ಕಿಂತ ಅದು ತರುವ ಪರಿಣಾಮಗಳ ಕುರಿತೇ ಹೆಚ್ಚು ಚರ್ಚೆ ನಡೆದಿದೆ. ''ಮತಗಳವಿನ ಆರೋಪಕ್ಕೆ ಜನರಿಂದ ಉತ್ತರ ದೊರೆತಿದೆ. 'ಮತಾಧಿಕಾರ ಯಾತ್ರೆ' ಯಶಸ್ಸು ಕಂಡಿಲ್ಲ. ಮಹಿಳಾ ಮತ್ತು ಯುವ ಮತದಾರರ ಮೇಲೆ 'ನಿಮೋ' ಎಫೆಕ್ಟ್ ಕೆಲಸ ಮಾಡಿದೆ. ಡಬಲ್ ಎಂಜಿನ್ ಸರಕಾರಕ್ಕೆ ಜನ ಜೈ ಎಂದಿದ್ದಾರೆ'' ಎಂಬೆಲ್ಲ ವಿಶ್ಲೇಷಣೆಗಳು ಎನ್‌ಡಿಎ ಒಕ್ಕೂಟದ ಕಡೆಯಿಂದ ಬರುತ್ತಿವೆ. ''ಇದು ಹತ್ತು ಸಾವಿರ ರುಪಾಯಿ ಕೊಟ್ಟ ಗೆಲುವು'' ಎಂಬ ಟೀಕೆಗಳು ಮಹಾಘಟಬಂಧನದ ಕಡೆಯಿಂದ ಬರುತ್ತಿವೆ. ಇವೆಲ್ಲದರ ನಡುವೆ ಮಾನ್ಯ ಪ್ರಧಾನ ಮಂತ್ರಿಗಳು ವಿಜಯೋತ್ಸವದಲ್ಲಿ ಆಡಿದ ಒಂದು ಮಾತು ದೇಶದ ಗಮನ ಸೆಳೆದಿದೆ. ''ಬಿಹಾರದ ಗೆಲುವು ಕೆಂಪು ಕಾರಿಡಾರಿಗೆ ಅಂತ್ಯ ಹಾಡಿದೆ'' ಎಂಬ ಪ್ರಧಾನಿಗಳ ಮಾತು ಆಶ್ಚರ್ಯ ಎನಿಸಿದರೂ ಸತ್ಯವಾಗಿದೆ. ಕೇರಳ, ಬಂಗಾಳ, ಛತ್ತೀಸ್‌ಗಢ, ತ್ರಿಪುರಾಗಳಲ್ಲಿ ಈ ಮಾತು ಹೇಳಿದರೆ ಹೌದು ಎನ್ನಬಹುದು. ಅಲ್ಲಿ ಮಾವೋವಾದಿಗಳಿದ್ದಾರೆ, ನಕ್ಸಲರಿದ್ದಾರೆ, ಅವರು ಬಲವಾಗಿದ್ದಾರೆ. ಬಿಹಾರದಲ್ಲಿ ಏನು? ಎಂದು ಕುತೂಹಲ ಮೂಡಬಹುದು. ಕಮ್ಯುನಿಸ್ಟರಿಗೆ ದೇಶ, ರಾಜ್ಯ, ಲಿಂಗ, ವರ್ಗ ಕೊನೆಗೆ ಪಕ್ಷಗಳ ಹಂಗೂ ಇಲ್ಲ; ಒಟ್ಟಿನಲ್ಲಿ ಪ್ರತ್ಯಕ್ಷವೋ ಪರೋಕ್ಷವೋ ಅವರ ಸಿದ್ಧಾಂತ ಆಳಿದರೆ ಆಯಿತು.

ಭಾರತದ ಮಧ್ಯ ಮತ್ತು ಪೂರ್ವ ಭಾಗಗಳಲ್ಲಿ ಎಡಪಂಥೀಯ ಉಗ್ರವಾದದಿಂದ, ಮುಖ್ಯವಾಗಿ ನಕ್ಸಲ್/ಮಾವೋವಾದಿಗಳಿಂದ ಶೋಷಣೆಗೊಳಗಾದ ಜಿಲ್ಲೆಗಳ ದೊಡ್ಡ ಭಾಗವೇ ಕೆಂಪು ಕಾರಿಡಾರ್. ಛತ್ತೀಸ್‌ಗಢ, ಜಾರ್ಖಂಡ್, ಒಡಿಶಾ, ಬಿಹಾರ, ಆಂಧ್ರಪ್ರದೇಶ (ಅಖಂಡ), ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಈ ರಾಜ್ಯಗಳ ಹಲವು ಜಿಲ್ಲೆಗಳು ಹಿಂದೆ ಈ ಕೆಂಪು ಕಾರಿಡಾರಿನ ಭಾಗವಾಗಿದ್ದವು. ಬಡತನ, ಸರಕಾರದ ನಿರ್ಲಕ್ಷ್ಯ, ಬುಡಕಟ್ಟು ಪ್ರದೇಶಗಳಲ್ಲಿ ಕಾಣದ ಅಭಿವೃದ್ಧಿ, ಕಾನೂನು ಸುವ್ಯವಸ್ಥೆಯ ಕೊರತೆ ಇವೆಲ್ಲವುಗಳನ್ನು ಬಂಡವಾಳ ಮಾಡಿಕೊಂಡು, ಕಾನೂನು ಕೈಗೆತ್ತಿಕೊಳುವಂತೆ ಜನರನ್ನು ಪ್ರೇರೇಪಿಸುವ ಚಳವಳಿ ಇಲ್ಲಿ ಜೋರಾಗಿ ಇತ್ತು. ಹಲವು ದಶಕಗಳಿಂದ ಕೆಂಪು ಕಾರಿಡಾರ್ ಎಡಪಂಥೀಯ ಸಿದ್ಧಾಂತಕ್ಕೆ ಸಹಾನುಭೂತಿಯ ರಾಜಕೀಯ ಸಂಸ್ಕೃತಿಯನ್ನು ಸೃಷ್ಟಿಸಿತ್ತು, ಇದು ಮತದಾನದ ಮಾದರಿಗಳ ಮೇಲೆ ಪ್ರಭಾವ ಬೀರುತ್ತಿತ್ತು.

ಕೆಂಪು ಕಾರಿಡಾರ್ ಹಿಂಸಾಪೀಡಿತ ವಲಯಗಳಲ್ಲಿ ಒಂದಾಗಿತ್ತು. ಸ್ಥಳೀಯ ಚುನಾವಣೆಗಳು, ಅಭ್ಯರ್ಥಿ ಆಯ್ಕೆ, ಮತದಾನದ ಮಾದರಿಗಳು, ಗ್ರಾಮ ಮಟ್ಟದ ಆಡಳಿತಾತ್ಮಕ ನಿಯಂತ್ರಣ ಎಲ್ಲವೂ ಇತ್ತು. ಈ ಹಿಡಿತವು ಸಹಜವಾಗಿಯೇ ಬಿಜೆಪಿ ವಿರೋಧಿ ಸೈದ್ಧಾಂತಿಕ ವಾತಾವರಣವನ್ನು ಸೃಷ್ಟಿಸಿತ್ತು. ಏಕೆಂದರೆ ಮಾವೋವಾದಿಗಳು ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನ್ನು ತಮ್ಮ ಸೈದ್ಧಾಂತಿಕ ಶತ್ರುಗಳು ಎಂದು ಪರಿಗಣಿಸಿವೆ. ಕಳೆದ 20-25 ವರ್ಷಗಳಲ್ಲಿ ಕೆಂಪು ಚಳವಳಿ ಜನರ ನಂಬಿಕೆ ಕಳೆದುಕೊಳ್ಳುತ್ತಾ ಬಂದಿದೆ. ಒಂದೊಂದೇ ಜಿಲ್ಲೆಗಳು ಕೆಂಪು ಕಾರಿಡಾರಿನಿಂದ ಹೊರಬಂದು ಅಭಿವೃದ್ಧಿಯ ಹೆದ್ದಾರಿ ಹಿಡಿಯಹತ್ತಿವೆ. ಮೋದಿ ಸರಕಾರವು ತನ್ನ ಪ್ರಸಕ್ತ ಅವಧಿಯಲ್ಲಿ ಕೆಂಪು ಉಗ್ರವಾದವನ್ನು ಶೂನ್ಯಗೊಳಿಸುವ ಗುರಿ ಹೊಂದಿದೆ.

ಬಿಹಾರದಲ್ಲಿ ಅದರ ದಕ್ಷಿಣ ಭಾಗವು ಕೆಂಪು ಉಗ್ರವಾದದಿಂದ ಹೆಚ್ಚು ಪೀಡಿತವಾಗಿತ್ತು. ಗಯಾ, ಅರವಲ್, ಔರಂಗಾಬಾದ್, ಕಯಮೂರು, ಭೋಜಪುರ ಮುಂತಾದ ಜಿಲ್ಲೆಗಳಲ್ಲಿ ಅದರ ಪ್ರಭಾವ ದಟ್ಟವಾಗಿತ್ತು. ಬಿಹಾರದ ಜಾತಿ ಸಮೀಕರಣ ವಿಚಿತ್ರವಾಗಿದೆ. ಸಣ್ಣ ಪುಟ್ಟ ಜನಸಂಖ್ಯೆಯ ಬಹಳ ಜಾತಿಗಳಿವೆ. ಇಲ್ಲಿನ ಜಾತಿ ಜಗಳಗಳನ್ನು ವರ್ಗ ಸಂಘರ್ಷವಾಗಿ ಒಂದು ಕಡೆ ಕಮ್ಯುನಿಸ್ಟರು ಒಡೆಯುತ್ತಿದ್ದರೆ, ಇನ್ನೊಂದು ಕಡೆ ಮುಸ್ಲಿಂ-ಯಾದವ ಸಮೀಕರಣ ಜೋರಾಗಿ ಇತ್ತು. 1980-2005ರ ಅವಧಿಯಲ್ಲಿ, ರಸ್ತೆಗಳಿಲ್ಲ, ಶಾಲೆಗಳಿಲ್ಲ, ಆಸ್ಪತ್ರೆಗಳಿಲ್ಲ ಎಂಬುದಕ್ಕಿಂತ ಜಾತಿಗಳ ನಡುವಿನ ಜಗಳ, ದುರ್ಬಲ ಕಾನೂನು ಮತ್ತು ಸುವ್ಯವಸ್ಥೆಯ ಶೂನ್ಯವನ್ನು ನಕ್ಸಲರು ಆವರಿಸಿದರು. ವಾಸ್ತವದಲ್ಲಿ ಸಮಾನಾಂತರ ವ್ಯವಸ್ಥೆ ಇವರದೇ ಇರುತ್ತಿತ್ತು. ಬಿಹಾರದಲ್ಲಿನ 'ಜಂಗಲ್ ರಾಜ್'ಗೆ ಇವರ ಕೊಡುಗೆಯೂ ಇದೆ. 2020ರ ಚುನಾವಣೆಯಲ್ಲಿ 'ಸಿಪಿಐ-ಎಂಎಲ್' ಗೆದ್ದುದು 12 ಸ್ಥಾನಗಳು, ಅದು ಹಿಂದೆಂದೂ ಆಗಿರದ ಬೃಹತ್ ಗೆಲುವಾಗಿತ್ತು. ಸಮಾಜವಾದದ ಹೆಸರಿನ ಮತಗಳು ಬಿಜೆಪಿ ವಿರೋಧಿಯಾಗಿ ಬರುತ್ತಿದ್ದುದು ಈವರೆಗಿನ ವಾಸ್ತವವಾಗಿತ್ತು. ಅದು 'ಇಂಡಿಯ' ಮೈತ್ರಿಕೂಟಕ್ಕೆ ಲಾಭ. ಅವಧಿ ಮೀರಿಯೂ ಕಲಿಕೆಯಲ್ಲಿರುವ ಜೆಎನ್‌ಯು, ಪಟನಾ ವಿಶ್ವವಿದ್ಯಾಲಯದ ಎಡ ವಿದ್ಯಾರ್ಥಿಗಳ ದಂಡು ಚುನಾವಣೆಯಲ್ಲಿ ಬೆವರು ಹರಿಸುತ್ತಿತ್ತು. ಖಟಾಖಟ್ ಗ್ಯಾರಂಟಿ ಘೋಷಣೆಯ ಮೂಲಕ ಕೆಂಪು ಗುಂಪು ಚುನಾವಣೆಗೆ ತಯಾರಾಗಿತ್ತು ಜತೆಗೆ 'ಎಂ-ವೈ' ಘಟಬಂಧನದಲ್ಲಿ ಗೆಲುವಿನ ಹುಮ್ಮಸ್ಸು ತಂದಿತ್ತು.

ಜಂಗಲ್ ರಾಜ್‌ನ ಹಿಂದಿನ ಆಡಳಿತವೂ ನೆನಪಾಯಿತು. ಜನರು ಜಾಗೃತರಾದರು. ಈ ಬಾರಿಯ ಚುನಾವಣೆಯು ತುಷ್ಟೀಕರಣದ ಸೆಕ್ಯುಲರಿಸಮ್ಮಿನ ಮೇಲೆ ಜಾತಿಗಳನ್ನು ಜೋಡಿಸುವ ಹಿಂದೂ ಸಮಾಜವಾದದ ಗೆಲುವೆಂದೇ ಹೇಳಬಹುದು. ಕಮ್ಯುನಿಸ್ಟ್ ನಾಟಕಕ್ಕೆ ಜನ ಸ್ಪಷ್ಟವಾಗಿ 'ಇಲ್ಲ' ಎಂದರು. ಮಾವೋವಾದಿಗಳ ಪೀಡಿತ ಜಿಲ್ಲೆಗಳಲ್ಲೂ ಎನ್‌ಡಿಎಗೆ ದಂಡಿಯಾಗಿ ವೋಟುಗಳು ಬಂದಿವೆ. ಜನ ಅಭಿವೃದ್ಧಿಗೆ ಮತ ಹಾಕಿದ್ದಾರೆ. ಈ ಫಲಿತಾಂಶವು ನೇರವಾಗಿ ಸೋತವರಿಗಿಂತ ಎಡಪಂಥೀಯರಿಗೆ ಕಸಿವಿಸಿ ತಂದಿದೆ. ಹೀಗಾಗಿ ಫಲಿತಾಂಶ ವಿಶ್ಲೇಷಣೆ, ಮತಚೋರಿ ಆಂದೋಲನ, ಚುನಾವಣಾ ಆಯೋಗದ ಮೇಲೆ ಗೂಬೆ ಕೂರಿಸುವುದು, ಎಸ್‌ಐಆರ್ ವಿರೋಧಗಳಲ್ಲಿ ಕಮ್ಯುನಿಸ್ಟರೇ ಮುಂಚೂಣಿಯಲ್ಲಿದ್ದಾರೆ.

ರಾಜ್ಯದ ಮೇಲೆ ಇದರ ಪರಿಣಾಮ ಏನಾಗಬಹುದು ಎಂಬ ಕುತೂಹಲವಂತೂ ಇದೆ. ಇಲ್ಲಿನ ಕಮ್ಯುನಿಸ್ಟರು ಸಾಮಾಜಿಕ ಜಾಲತಾಣಗಳಲ್ಲಿ, ವೇದಿಕೆಗಳಲ್ಲಿ ಸಾಂತ್ವನ ಹೇಳಿಕೊಳ್ಳುತ್ತಿದ್ದಾರೆ. ಈ ಚುನಾವಣಾ ಫಲಿತಾಂಶವನ್ನು, ಪ್ರಭಾವಿ ಮಾಜಿ ಪತ್ರಕರ್ತರೊಬ್ಬರು ಬಹಳ ತಲೆಗೆ ಹಚ್ಚಿಕೊಂಡಂತೆ ಕಾಣುತ್ತಿದೆ. ಅದು ಅವಶ್ಯವೂ ಆಗಿದೆ. ಏಕೆಂದರೆ, ಕರ್ನಾಟಕದ ಮುಖ್ಯಮಂತ್ರಿಗಳನ್ನು ಇದೇ ಬಿಹಾರ ಚುನಾವಣೆ ಹಿಂದೆ ಮುಂದೆ ದೇಶದ ಅಹಿಂದ ನಾಯಕರಾಗಿ ಬಿಂಬಿಸಲು 'ಇಂಡಿಯ' ಕೂಟ ಪ್ರಯತ್ನಪಟ್ಟಿದೆ. ಬಿಹಾರದ ಫಲಿತಾಂಶವು ನವೆಂಬರ್ ಕ್ರಾಂತಿಯನ್ನು ಇಲ್ಲವಾಗಿಸಿದೆ ಎಂದು ಒಂದು ಬಣ ಹೇಳುತ್ತಿದ್ದರೆ, 'ಹಿಂದುತ್ವದ ಬಗ್ಗೆ ಎಚ್ಚರಗೊಳ್ಳದಿದ್ದರೆ ಎಲ್ಲ ಕಡೆ ಇದೇ ಗತಿ. ಮಾತು ಕೊಟ್ಟಂತೆ ಅಧಿಕಾರ ಬಿಟ್ಟುಕೊಡಿ' ಎಂದು ಇನ್ನೊಂದು ಬಣ ಹಟ ಹಿಡಿದಿದೆ. ಬಿಹಾರದ ಸೋಲಿಗೆ ಪ್ರತಿಕ್ರಿಯೆ ನೀಡಿದ ಪ್ರಭಾವಿ ಮಂತ್ರಿಗಳು, 'ಕರ್ನಾಟಕದಲ್ಲಿ ಹಾಗಾಗಲು ಸಾಧ್ಯವಿಲ್ಲ; ಏಕೆಂದರೆ ಇಲ್ಲಿ ಅಹಿಂದ ಕೋಟೆ ಭದ್ರವಾಗಿದೆ' ಎಂಬ ಸಂದೇಶವನ್ನು ಪದೇ ಪದೇ ನೀಡುತ್ತಿದ್ದಾರೆ.

ಕರ್ನಾಟಕದಲ್ಲಿ ಕಮ್ಯುನಿಸ್ಟರ ಕೈಲಾಡುವ ಸರಕಾರವಿದೆ ಮತ್ತು ಅವಧಿಪೂರ್ಣವೂ ಇದುವೇ ಇರಬೇಕಾಗಿದೆ. ಕಮ್ಯುನಿಸ್ಟರ ಪ್ರಭಾವಕ್ಕೆ ಉದಾಹರಣೆ ನೀಡಬಹುದು ಎಂದಾದರೆ, ಇತ್ತೀಚೆಗೆ ಮಂತ್ರಿಯೊಬ್ಬರು ಆರ್‌ಎಸ್‌ಎಸ್ ನಿಷೇಧಿಸಲು ಪತ್ರ ಬರೆಯುತ್ತಾರೆ. ತಕ್ಷಣ ಅದನ್ನು ಸರಕಾರ ಜಾರಿಗೊಳಿಸುತ್ತದೆ. ಅದಕ್ಕೆ ನ್ಯಾಯಾಲಯ ನಂತರ ತಡೆ ನೀಡುತ್ತದೆ. ಅಷ್ಟರವರೆಗೆ ಕಮ್ಯುನಿಸ್ಟರದು ನಡೆಯುತ್ತದೆ. ಬುರುಡೆ ಹಿಡಿದುಕೊಂಡು ಒಬ್ಬ ಬರುತ್ತಾನೆ, ಆತನ ಪೂರ್ವಾಪರ ವಿಚಾರಿಸದೇ 'ಎಸ್‌ಐಟಿ'ಯ ರಚನೆಯಾಗುತ್ತದೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಈ ಮೊದಲು ಏನು ನಡೆದಿತ್ತು ಎಂಬ ಗೋಜಿಗೆ ಹೋಗದೆ ಇದು ರಚನೆಯಾಗುತ್ತದೆ. ತಂಡದಲ್ಲಿ ಯಾರಿರಬೇಕು ಎನ್ನುವಷ್ಟರ ಮಟ್ಟಿಗೆ ಕಮ್ಯುನಿಸ್ಟರದು ನಡೆಯುತ್ತದೆ. ಈಗ ಮಧ್ಯಂತರ ವರದಿ ಸಲ್ಲಿಕೆಯಾಗಿದೆ. ಇನ್ನೊಂದು ಕನೇರಿ ಸ್ವಾಮಿಗಳ ಪ್ರಕರಣ. ಎಂಟು ಜನ ಕಮ್ಯುನಿಸ್ಟರು ನೀಡುವ ಮನವಿಯ ಮೇರೆಗೆ ಜಿಲ್ಲಾಡಳಿತವು ಕಾಗದ ಪತ್ರಗಳನ್ನು ಸಿದ್ಧಪಡಿಸಿಕೊಂಡು ತಕ್ಷಣ ನಿರ್ಬಂಧವನ್ನು ನಿಶ್ಚಯಿಸುತ್ತದೆ. ಈ ಘಟನೆಗಳನ್ನು ನೋಡಿದಾಗ ಕರ್ನಾಟಕದಲ್ಲಿ ರೆಡ್ ಕಾರಿಡಾರಿನದ್ದೇ ಕಾರುಬಾರು ಎನಿಸದೇ ಇರದು.

ಬಿಹಾರ ಚುನಾವಣೆಯ ಪಾಠ ಬಹಳ ಸ್ಪಷ್ಟ. ಕೆಂಪು ಕಾರಿಡಾರ್ ಈಗ ಭಾರತದಲ್ಲಿ ತನ್ನ ಅಂತಿಮ ಉಸಿರಿನಲ್ಲಿದೆ. ಹಲವು ದಶಕಗಳ ಕಾಲ ಕ್ರಾಂತಿ ಹೆಸರಿನಲ್ಲಿ ದಾರಿದ್ರ್ಯ, ಹಿಂಸೆ, ಭಯ ಮತ್ತು ಪ್ರತ್ಯೇಕತೆಯನ್ನು ಬೆಳೆಸಿದ ಎಡಪಂಥೀಯ ವ್ಯವಸ್ಥೆಯು ಜನರ ಜಾಗೃತಿಯಿಂದಾಗಿ ಬಿರುಕು ಬಿಟ್ಟಿದೆ. ಬಿಹಾರದಲ್ಲಿ ಜನರು ಅಭಿವೃದ್ಧಿಯನ್ನೇ ಆರಿಸಿಕೊಂಡರು, ತುಷ್ಟೀಕರಣಕ್ಕೆ 'ಇಲ್ಲ' ಎಂದರು, ಜಾತಿ-ವರ್ಗ-ವೋಟು ಬ್ಯಾಂಕ್‌ಗಳ ಮೇಲೆ ನಿಂತಿದ್ದ ಕಮ್ಯುನಿಸ್ಟ್-ಸೆಕ್ಯುಲರ್ ರಾಜಕಾರಣವನ್ನು ನಿರಾಕರಿಸಿದರು. ಪ್ರಧಾನಿಯವರು ಹೇಳಿದ ''ಬಿಹಾರದ ಗೆಲುವು ಕೆಂಪು ಕಾರಿಡಾರಿನ ಅಂತ್ಯ'' ಎಂಬ ವಾಕ್ಯವು ತಾತ್ವಿಕವಾಗಿ ನಿಖರವಾಗಿದೆ: ಅದು ಕೇವಲ ಚುನಾವಣಾ ಫಲಿತಾಂಶವಲ್ಲ, ಜತೆಗೆ ಒಂದು ಸೈದ್ಧಾಂತಿಕ ಸೋಲಿನ ಘೋಷಣೆ. ಕರ್ನಾಟಕದಲ್ಲಿ ಕೆಂಪು ಕಾರಿಡಾರಿನಂಥ ಗಂಭೀರ ವ್ಯವಸ್ಥೆ ಇಲ್ಲದಿದ್ದರೂ, ಕಮ್ಯುನಿಸ್ಟರಿಗೆ ಇನ್ನೂ ಹುಲ್ಲುಗಾವಲಾಗಿ ಇದು ಉಳಿದಿದೆ. ಇದು ಇಲ್ಲಿಗೇ ಮುಗಿಯುವುದಿಲ್ಲ, ಇನ್ನೂ ನಾಲ್ಕು ರಾಜ್ಯಗಳ ಚುನಾವಣೆ ಬಂದಿದೆ. ಅಲ್ಲಿ ಮತ್ತೆ ಬೇರೆ ಬಣ್ಣವನ್ನು ಅದು ಪಡೆದುಕೊಳ್ಳಬಹುದು. ಜನತೆಯ ಜಾಗೃತಿ, ಬಿಹಾರದಲ್ಲಿ ಬದಲಾವಣೆಯನ್ನು ತಂದದ್ದು- ಕರ್ನಾಟಕದ ಭವಿಷ್ಯವನ್ನೂ ಅದೇ ರಕ್ಷಿಸಬಲ್ಲದು.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ನೆಟ್ ಪಿಕ್ಸ್

ಖೇಮು ಮತ್ತು ಖೇಮುಶ್ರೀ ಮದುವೆ ಆಗಿ 5 ವರ್ಷ ಆಗಿದ್ರೂ ಅವರಿಗೆ ಮಕ್ಕಳಾಗಿರಲಿಲ್ಲ. ಈ ವಿಷಯಕ್ಕೆ ಇಬ್ಬರೂ ತುಂಬಾ ಬೇಸರದಲ್ಲಿದ್ದರು. ಇಬ್ಬರೂ ತಮಗೆ ಗೊತ್ತಿರೋ ಎಲ್ಲಾ ಡಾಕ್ಟರ್‌ಗಳು, ಎಲ್ಲಾ ದೇವರುಗಳನ್ನೂ ಸಂಪರ್ಕ ಮಾಡಿದ್ದರು. ಆದರೆ ಮಕ್ಕಳು ಮಾತ್ರ ಆಗಲೇ ಇಲ್ಲ. ಹೀಗೆ ಒಂದು ದಿನ ಇಬ್ಬರೂ ಮಾರ್ಕೆಟ್‌ನಲ್ಲಿ ಹೋಗುತ್ತಿರುವಾಗ ಅಲ್ಲಿ ಖೇಮುಶ್ರೀಯ ತವರುಮನೆಗೆ ಬರುತ್ತಿದ್ದ ಪೂಜಾರಿಯೊಬ್ಬ ಆಕೆಯನ್ನು ಗುರುತು ಹಿಡಿದು ಮಾತನಾಡಿಸಿದರು. ''ಎಲ್ಲಾ ಸೌಖ್ಯನೇನಮ್ಮ?'' ಎಂದು ಅವರು ಕೇಳಿದಾಗ ಖೇಮುಶ್ರೀ, ''ಜೀವನದಲ್ಲಿ ಎಲ್ಲವೂ ಸರಿ ಇದೆ, ಆದ್ರೆ ಇನ್ನೂ ಮಕ್ಕಳಾಗಿಲ್ಲ'' ಎಂಬ ಕೊರಗನ್ನು ಹೇಳಿಕೊಂಡಳು. ಅದಕ್ಕೆ ಪೂಜಾರಿ, ''ಯೋಚನೆ ಮಾಡಬೇಡಮ್ಮ, ನಾನು ಕಾಶಿಗೆ ಹೋಗ್ತಾ ಇದ್ದೀನಿ, ಅಲ್ಲಿ ದೇವರ ಸನ್ನಿಧಿಯಲ್ಲಿ ನಿನ್ನ ಹೆಸರಲ್ಲಿ ಒಂದು ದೀಪ ಹಚ್ತೀನಿ. ಎಲ್ಲ ಸರಿ ಹೋಗುತ್ತೆ'' ಅಂದ್ರು. ಅದಾಗಿ 5 ವರ್ಷ ಆಯ್ತು. ಒಂದು ದಿನ ಆ ಪೂಜಾರಿಯ ಮನೆ ಬಾಗಿಲು ಯಾರೋ ಬಡಿದಂತಾಯ್ತು. ಪೂಜಾರಿ ಎದ್ದು ಹೋಗಿ ಬಾಗಿಲು ತೆರೆದರೆ ಖೇಮು ನಿಂತಿದ್ದ. ಗುರುತು ಹಿಡಿದ ಪೂಜಾರಿ ಒಳಗೆ ಕರೆದು ಮಾತನಾಡಿಸಿದರು. ''ಮಕ್ಕಳಾದ್ವಾ?'' ಅಂತ ಪೂಜಾರ್ರು ಕೇಳಿದ ತಕ್ಷಣ ಖೇಮು ಪೂಜಾರ್ರ ಕೈಯಲ್ಲಿ 25 ಸಾವಿರ ಹಣ ಇಟ್ಟು, ''ದಯವಿಟ್ಟು ಇನ್ನೊಮ್ಮೆ ಕಾಶಿಗೆ ಹೋಗಿ ಬನ್ನಿ ಪೂಜಾರ್ರೇ'' ಅಂದ. ''ಯಾಕಪ್ಪಾ, ಇನ್ನೂ ಮಕ್ಕಳಾಗಲಿಲ್ವಾ?'' ಅಂತ ಪೂಜಾರ್ರು ಕೇಳಿದ್ದಕ್ಕೆ ಖೇಮು ಹೇಳಿದ: ''ನೀವೇನೋ ಕಾಶಿಗೆ ಹೋಗಿ ದೀಪ ಹಚ್ಚಿ ಬಂದ್ರಿ, ಆದ್ರೆ ಯಾವನೋ ಬಡ್ಡೀಮಗ ಇನ್ನೂ ಅದಕ್ಕೆ ಡೈಲಿ ಎಣ್ಣೆ ಹಾಕ್ತಾ ಇದ್ದಾನೆ ಅನ್ಸುತ್ತೆ. ಖೇಮುಶ್ರೀ ಈಗಾಗ್ಲೇ 3 ಸಲ ಅವಳಿ-ಜವಳಿ ಮಕ್ಕಳನ್ನ ಹೆತ್ತಿದ್ದಾಳೆ. ಇನ್ನು ನನ್ನ ಕೈಲಿ ತಡ್ಕೊಳ್ಳೋಕಾಗಲ್ಲ. ಮೊದ್ಲು, ಅಲ್ಲಿಗೆ ಹೋಗಿ ಆ ದೀಪ ಆರಿಸಿ ಬನ್ನಿ''.

ಲೈನ್‌ಮ್ಯಾನ್

- **ಯಾರನ್ನಾದ್ರೂ ಪರೀಕ್ಷೆ ಮಾಡಬೇಕು ಅಂತ ಅವರಿಗೆ ಸಚಿವ ಸ್ಥಾನ ಕೊಟ್ರೆ ಅದು**
– ಸಂ'ಪುಟಕ್ಕಿಟ್ಟ ಚಿನ್ನ'
- **ಹೋಮ್ ಮಿನಿಸ್ಟರ್‌ನ ಕನ್ನಡದಲ್ಲಿ ಗೃಹ ಮಂತ್ರಿ ಅಂತಾರೆ.**
– ಆಕ್ಚುವಲಿ, ಅದು ವಸತಿ ಸಚಿವ ಆಗಬೇಕಲ್ವಾ?
- **ಮಿರರ್ ಮಾರುವವನಿಗೆ ಒಂದು ಹೆಸರು**
– 'ಕನ್ನಡಿ'ಗ
- ಮಿತಿಮೀರಿದ ಆಭಾಸ
– ನಿದ್ದೆ ಮಾಡುವಾಗ ಕನಸಲ್ಲೂ ನಿದ್ದೆ ಮಾಡೋ ಥರ ಕನಸು ಬೀಳೋದು.
- Heights of curiosity
– ಸೆಲೆಬ್ರಿಟಿ ಶೋ ಮುಗಿದಮೇಲೆ ಸಿನಿಮಾ ನೋಡಿದ ಸೆಲೆಬ್ರಿಟಿಗಳು ಆ ಸಿನಿಮಾ ಬಗ್ಗೆ ಏನ್ ಹೇಳ್ತಾರೆ ಅಂತ ಕುತೂಹಲ ಇಟ್ಕೊಳ್ಳೋದು.
- **ಭೂಗೋಳ ರಹಸ್ಯ**
– ಭೂಮಿ 'ಗುಂಡು' ಗುಂಡಾಗಿದೆಯಂತೆ... ಅದಕ್ಕೇ ಬಡ್ಡಿಮಗಂದು ಟೈಟ್ ಆಗಿ 'ತಿರುಗುತ್ತೆ'.
- **ನಶೆದಾತರಿಗೆ ತೋರಿಸೋ ತಾರತಮ್ಯ**
– ಎಣ್ಣೆನ 'ಪರಮಾತ್ಮ' ಅಂತ ಗೌರವದಿಂದ ಕರೀತೀವಿ. ಆದ್ರೆ, ಸಿಗರೇಟ್‌ನ ಮಾತ್ರ ಸೇದಿದ ಮೇಲೆ ಕಾಲಲ್ಲಿ ಹೊಸಕಿ ಹಾಕ್ತೀವಿ.
- **ಕುಡುಕರ ಸ್ವಗತ**
– ಕುಡುಕರಿಗೆ ಒಂದು ಸಪರೇಟ್ ಧರ್ಮ ಬೇಕು.. 'ಪ್ರಜ್ಞಾವಂತ'ರ ಲೋಕ ನಮಗೆ ಪರಮ ಬೋರು.
- **ಮನೆ ಕೆಲಸದವಳು ಪಕ್ಕದ ಮನೆಯವರ ಬಗ್ಗೆ 'ಕಿವಿ' ಊದಿದರೂ ಅದು..**
– 'ಬಾಯಿ' ಮಾತು
- **ಬ್ರೇಕ್ ಅಪ್, ಡೈವೋರ್ಸ್ ಆಗಿ ಬಿಟ್ಟು ಹೋಗುವಾಗ ಒಬ್ಬರ ಮೇಲೆ ಒಬ್ಬರು ಸಿಟ್ಟಿನಿಂದ** ಆಡುವ ಮಾತುಗಳು
– Byeಗುಳ

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:312

ಸಮಾಚಾರ ಸಣ್ಣದಲ್ಲ

ನಾಳೆ ನೂತನ ಸಿಜೆಐ ಅಧಿಕಾರ ಸ್ವೀಕಾರ

ದೆಹಲಿ: ಸುಪ್ರೀಂ ಕೋರ್ಟ್‌ನ ನೂತನ ಹಾಗೂ ಭಾರತದ 53ನೇ ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾ.ಸೂರ್ಯಕಾಂತ್ ಸೋಮವಾರ ಅಧಿಕಾರ ಸ್ವೀಕರಿಸಲಿದ್ದಾರೆ. ನ್ಯಾ. ಸೂರ್ಯಕಾಂತ್ ಅವರಿಗೆ 'ಸಿಜೆಐ' ಹುದ್ದೆಯಲ್ಲಿ ಒಟ್ಟು 14 ತಿಂಗಳ ಸೇವಾವಧಿ ಇರಲಿದೆ. 2027ರ ಫೆ.9ರಂದು ಅವರು ಸಿಜೆಐ ಹುದ್ದೆಯಿಂದ ತಮ್ಮ 65ನೇ ವಯಸ್ಸಿಗೆ ನಿವೃತ್ತರಾಗುವರು. 2000ನೇ ಇಸವಿಯಲ್ಲಿ ಹರಿಯಾಣ ಸರಕಾರದ ಅಡ್ವೊಕೇಟ್ ಜನರಲ್ ಆಗಿ ತಮ್ಮ 38ನೇ ವಯಸ್ಸಿನಲ್ಲಿ ಸೇವೆ ಸಲ್ಲಿಸಿದ ನ್ಯಾ. ಸೂರ್ಯಕಾಂತ್ ಅವರು, 2004ರಲ್ಲಿ ಪಂಜಾಬ್-ಹರಿಯಾಣ ಹೈಕೋರ್ಟ್‌ಗೆ ಖಾಯಂ ನ್ಯಾಯಮೂರ್ತಿಯಾಗಿ ನೇಮಕಗೊಂಡರು. ಆ ಬಳಿಕ ಹಿಮಾಚಲ ಪ್ರದೇಶ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾದರು. 2019ರಲ್ಲಿ ಸುಪ್ರೀಂ ಕೋರ್ಟ್‌ಗೆ ಬಡ್ತಿ ಪಡೆದರು.

ನಿವೃತ್ತರಾದ ಸಿಜೆಐ ಬಿ.ಆರ್.ಗವಾಯಿ

ದೆಹಲಿ: ಭಾರತದ 52ನೇ ಮುಖ್ಯ ನ್ಯಾಯಮೂರ್ತಿಯಾಗಿದ್ದ ನ್ಯಾ.ಬಿ.ಆರ್. ಗವಾಯಿ ಅವರು ನ್ಯಾಯಾಲಯಕ್ಕೆ ರಜಾದಿನವಾದ ಭಾನುವಾರವೇ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಹುದ್ದೆಯಿಂದ ನಿವೃತ್ತರಾದರು. ಶನಿವಾರ ಅವರ ನ್ಯಾಯಾಲಯ ಕಲಾಪದ ಕಡೆ ದಿನವಾಗಿತ್ತು. ಶುಕ್ರವಾರ ಅವರಿಗೆ ಸುಪ್ರೀಂ ಕೋರ್ಟ್ ವಕೀಲರ ಸಂಘ 'ಬೀಳ್ಕೊಡುಗೆ' ನೀಡಿದೆ. ಈ ಕಾರ್ಯಕ್ರಮದಲ್ಲಿ ಮಾತನಾಡಿದ ಸಿಜೆ ಐ ಬಿ.ಆರ್.ಗವಾಯಿ ಅವರು, ಸುಪ್ರೀಂ ಕೋರ್ಟ್‌ನಲ್ಲಿ ತಮ್ಮ ಸೇವಾವಧಿಯಲ್ಲಿ ತಾವು ನೀಡಿದ ಆದೇಶಗಳಲ್ಲಿ 2 ಬಹಳ ಪ್ರಮುಖವಾದವು ಎಂದು ಪಟ್ಟಿ ಮಾಡಿದರು. ಮೊದಲನೆಯದು 'ಬುಲ್ಡೋಜರ್ ನ್ಯಾಯದಾನ' ವಿಧಾನಕ್ಕೆ ತಡೆ ಒಡ್ಡಿದ್ದು, ಎರಡನೇ ಮಹತ್ವದ ತೀರ್ಪು, 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಒಳ ಪಂಗಡಗಳಲ್ಲಿ ಉದ್ಯೋಗ ವಿಚಾರದಲ್ಲಿ ಒಳ ಮೀಸಲು ನೀಡುವುದಕ್ಕೆ ರಾಜ್ಯ ಸರಕಾರಗಳಿಗೆ ಅವಕಾಶ ಮಾಡಿಕೊಟ್ಟಿದ್ದು' ಎಂದು ವಿವರಿಸಿದರು. ಆದ ಕಾರಣ, ಬಹಳ ಸಮಾಧಾನ ಚಿತ್ತದಿಂದಲೇ ನಿವೃತ್ತನಾಗುತ್ತಿರುವೆ ಎಂದೂ ಸಿಜೆ ಐ ಬಿಆರ್ ಗವಾಯಿ ಹೇಳಿದರು.

ಅಮೆಜಾನ್ 1800 ಉದ್ಯೋಗ ಕಡಿತ

ವಾಷಿಂಗ್ಟನ್: ಅಮೆರಿಕ ಮೂಲದ 'ಅಮೆಜಾನ್' ಕಂಪನಿ ಮತ್ತೊಮ್ಮೆ ಅಕ್ಟೋಬರಲ್ಲಿ 1800ಕ್ಕೂ ಅಧಿಕ ಇಂಜಿನಿಯರ್‌ಗಳ ಉದ್ಯೋಗಕ್ಕೆ ಕತ್ತರಿ ಹಾಕಿದೆ. ಕಂಪನಿ ಇತ್ತೀಚೆಗೆ ಕೈಗೊಂಡು ಪುನರ್ರಚನೆ ಪ್ರಕ್ರಿಯೆಯು ಅತಿದೊಡ್ಡ ಸಿಬ್ಬಂದಿ ಕಡಿತಕ್ಕೆ ಕಾರಣವಾಗಿದೆ. 2025ನೇ ವರ್ಷದಲ್ಲಿಯೇ ಒಟ್ಟು 14,000ಕ್ಕೂ ಹೆಚ್ಚು ಉದ್ಯೋಗಿಗಳನ್ನು ಮನೆಗೆ ಕಳುಹಿಸಿದಂತಾಗಿದೆ. ಕ್ಲೌಡ್ ಸೇವೆಗಳು ಮತ್ತು ಸಾಧನಗಳಿಂದ ಹಿಡಿದು ಚಿಲ್ಲರೆ ವ್ಯಾಪಾರ, ಜಾಹೀರಾತು ಮತ್ತು ದಿನಸಿ ವಿಭಾಗದವರೆಗೂ ಈ ಉದ್ಯೋಗ ಕಡಿತದ ಪರಿಣಾಮವಾಗಿದೆ. ಅಮೆಜಾನ್ ಸಂಸ್ಥೆ ವಜಾ ಪ್ರಕ್ರಿಯೆ ಜನವರಿಯಲ್ಲಿಯೂ ಮುಂದುವರಿ ಯುವ ಸಾಧ್ಯತೆ ಇದೆ ಎನ್ನಲಾಗಿದೆ. ವರ್ಕರ್ಸ್ ಅಡ್ಜೆಸ್ಟ್‌ಮೆಂಟ್ ಮತ್ತು ಮರು ತರಬೇತಿ ಅಧಿಸೂಚನೆ ಆಧರಿಸಿ ಈ ವರದಿ ಪ್ರಕಟವಾಗಿದೆ. ವಜಾ ಪ್ರಕ್ರಿಯೆ ಗೆ ಎಐ ಕಾರಣವಲ್ಲ ಎಂದು ಅಮೆಜಾನ್ ಸ್ಪಷ್ಟನೆ ನೀಡಿದೆ. ಆದರೆ ಎಐ ಕೆಲಸ ದಲ್ಲಿ ದಕ್ಷತೆ ಹೆಚ್ಚಿರುವುದರಿಂದ ವೈಟ್-ಕಾಲರ್ ಕೆಲಸ ಪ್ರಮಾಣ ಕಡಿಮೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

ಡಿ.14ಕ್ಕೆ ರಾಮಲೀಲಾ ಮೈದಾನ ಮಹಾರ‍್ಯಾಲಿ

ದೆಹಲಿ: ಭಾರತೀಯ ಚುನಾವಣಾ ಆಯೋಗ (ಇಸಿಐ) ಪಕ್ಷಪಾತಿಯಾಗಿದ್ದು, ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳ ಸಮಾನ ಹೋರಾಟದ ಪರಿಕಲ್ಪನೆಯನ್ನೇ ಪೂರ್ಣ ನಾಶಪಡಿಸುತ್ತಿದೆ. ಅದರಿಂದಾಗುತ್ತಿರುವ 'ಮತ ಕಳವು' ಅಕ್ರಮದ ವಿರುದ್ಧ ಡಿ.14ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಮಹಾ ರ‍್ಯಾಲಿ ನಡೆಸಲಾಗುವುದು ಎಂದು ಕಾಂಗ್ರೆಸ್ ಪಕ್ಷ ಶನಿವಾರ ಘೋಷಿಸಿದೆ. ಮತ ಕಳವು ಎಂಬ ಭೂತ ಪ್ರಜಾಪ್ರಭುತ್ವ ಮೇಲೆರಗಿದ ದೊಡ್ಡ ಅಪಾಯವಾಗಿದೆ. ಸಂವಿಧಾನವನ್ನೇ ನಾಶ ಮಾಡುವ ಪ್ರಯತ್ನಗಳ ನಡೆಯುತ್ತಿದ್ದು, ಅದರ ವಿರುದ್ಧ ದೇಶದೆಲ್ಲೆಡೆಗೆ ಸಂದೇಶ ನೀಡಲು 'ಓಟ್ ಚೋರ್ ಗಡ್ಡಿ ಛೋಡ್' ಮಹಾರ‍್ಯಾಲಿ ನಡೆಸಲಾ ಗುತ್ತಿದೆ ಎಂದು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ. ಮತದಾರರ ಪಟ್ಟಿಗೆ ನಕಲಿ ಮತದಾರರ ಹೆಸರು ಸೇರಿಸುವುದು, ಪ್ರತಿಪಕ್ಷಗಳತ್ತ ಒಲವಿರುವ ಮತದಾರರ ಹೆಸರನ್ನು ಪಟ್ಟಿಯಿಂದ ಅಳಿಸಿ ಹಾಕುವುದು ಮತ್ತು ಮತದಾರರ ಪಟ್ಟಿಯನ್ನೇ ತಿರುಚುವುದು ಬಿಜೆಪಿ ಮತ್ತು ಚುನಾವಣಾ ಆಯೋಗದ ದುಷ್ಟ ತಂತ್ರಗಳಾ ಗಿವೆ. ಅವೆಲ್ಲವನ್ನೂ ವಿರೋಧಿಸಿ, ಭಾರತದ ಮೂಲೆ ಮೂಲೆಗಳಿಂದ ನಮಗೆ ಕೋಟ್ಯಂತರ ಜನರು ಮಾಡಿದ ಸಹಿಗಳು ಬಂದಿವೆ' ಎಂದು ವೇಣುಗೋಪಾಲ್ ಸಂದೇಶದಲ್ಲಿ ಬರೆದಿದ್ದಾರೆ.



ರಾಜತಾಂತ್ರಿಕ ಬಿಕ್ಕಟ್ಟಿನ ನೆಪ ಹೇಳಿ ಶೃಂಗಸಭೆ ಬಹಿಷ್ಕರಿಸಿರುವ ಅಮೆರಿಕ ಅಧ್ಯಕ್ಷ ಟ್ರಂಪ್

ಹವಾಮಾನ ಬದಲಾವಣೆ ನಿರ್ಣಯ ಮಂಡನೆ ಆಗದಂತೆ ತಡೆಯಲೆತ್ನಿಸಿದ ಡೊನಾಲ್ಡ್

ಒತ್ತಡಕ್ಕೆ ಮಣಿಯದೇ ಶೃಂಗದ ಮೊದಲ ದಿನವೇ ನಿರ್ಣಯ ಮಂಡಿಸಿದ ರಾಮಪೋಸಾ

ಅಮೆರಿಕವನ್ನೇ ಲೆಕ್ಕಿಸದೇ ಜಿ-20 ಶೃಂಗ ನಿರ್ಣಯ ಅನುಮೋದನೆ

ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿ ಶನಿವಾರ ಆರಂಭಗೊಂಡ ಜಿ-20 ಶೃಂಗಸಭೆಯಲ್ಲಿ ಹವಾಮಾನ ಬದಲಾವಣೆ ಕುರಿತ ನಿರ್ಣಯ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ಜೋಹಾನ್ಸ್‌ಬರ್ಗ್: 'ದೊಡ್ಡಣ್ಣ' ಎಂಬಂತೆ ಮೆರೆಯುತ್ತಿರುವ ಅಮೆರಿಕವನ್ನು ಪೂರ್ಣ ನಿರ್ಲಕ್ಷ್ಯ ಮಾಡಿರುವ 'ಜಿ-20' ಶೃಂಗಸಭೆಯ ಪ್ರಮುಖ ಸದಸ್ಯ ದೇಶಗಳು 'ಜಾಗತಿಕ ಹವಾಮಾನ ಬದಲಾವಣೆ ಕುರಿತು ಮಹತ್ವದ ನಿರ್ಣಯ'ವನ್ನು ಮಂಡಿಸಿ ಅನುಮೋದನೆಯನ್ನೂ ನೀಡಿರುವುದು ಮಹತ್ವದ ಮೈಲುಗಲ್ಲು ಎನಿಸಿಕೊಂಡಿದೆ.

ಸಾಮಾನ್ಯವಾಗಿ ಶೃಂಗಸಭೆಯ ಕೊನೆಯ ದಿನ, ಸಮಾರೋಪಕ್ಕೆ ಮುನ್ನ 'ನಿರ್ಣಯ' ಮಂಡಿಸಿ ಅನುಮೋದನೆ ಪಡೆಯುವುದು ನಡೆದುಕೊಂಡು ಬಂದಿದೆ. ಆದರೆ, ಈ ಬಾರಿ ಜಿ-20 ಶೃಂಗಸಭೆಯ ಅಧ್ಯಕ್ಷತೆ ವಹಿಸಿಕೊಂಡಿರುವ ದಕ್ಷಿಣ ಆಫ್ರಿಕಾ ದೇಶದ ಅಧ್ಯಕ್ಷ ಸಿರಿಲ್ ರಾಮಪೋಸಾ ಅವರು, ಶೃಂಗಸಭೆಯ ಆರಂಭದ ದಿನವೇ 'ಜಾಗತಿಕ ಹವಾಮಾನ ಬದಲಾವಣೆ ಕುರಿತು ಮಹತ್ವದ ನಿರ್ಣಯ'ವನ್ನು ಮಂಡಿಸಿದರು.

ತಾವು ಮಂಡಿಸಿದ ಹವಾಮಾನ ಬದಲಾವಣೆ ಕುರಿತ ಜಾಗತಿಕ ನಿರ್ಣಯಕ್ಕೆ ನಿರೀಕ್ಷೆ ಮೀರಿದ ಬೆಂಬಲ ಜಿ-20 ಸದಸ್ಯ ರಾಷ್ಟ್ರಗಳಿಂದ ವ್ಯಕ್ತವಾಗಿದೆ. ಈ ನಿರ್ಣಯ ಆಧರಿಸಿದ ಒಪ್ಪಂದಗಳಿಗೆ ಎಲ್ಲಾ ಸದಸ್ಯ ದೇಶಗಳೂ ಸಹಿ ಹಾಕಿರುವುದು ಬಹಳ ಸಂತಸ ಉಂಟು ಮಾಡಿದೆ ಎಂದು ಶೃಂಗಸಭೆಯ ಅಧ್ಯಕ್ಷತೆ ವಹಿಸಿರುವ ಸಿರಿಲ್ ರಾಮಪೋಸಾ ತುಸು ಭಾವೋದ್ವೇಗದಿಂದಲೇ ಶೃಂಗಸಭೆಯಲ್ಲಿ ಭಾಷಣ ಮಾಡಿದರು.

ನಿರ್ಣಯ ಬದಲಿಸಲು ಒಪ್ಪದ ಅಧ್ಯಕ್ಷ!

ಶೃಂಗಸಭೆಯ ಮೊದಲ ದಿನವೇ ಮಂಡಿಸಿದ ನಿರ್ಣಯದಲ್ಲಿನ ಕೆಲವು ಪದಗಳ ಬಗೆಗೆ ಅಮೆರಿಕ ಸರಕಾರ ಆಕ್ಷೇಪಣೆ ವ್ಯಕ್ತಪಡಿ ಸಿತ್ತು. ಆದರೆ, ಆ ಪದಗಳನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಅಮೆರಿಕಕ್ಕೆ ಸ್ಪಷ್ಟಪಡಿಸಲಾಯಿತು ಎಂಬುದಾಗಿ ದಕ್ಷಿಣ ಆಫ್ರಿಕಾ ಅಧ್ಯಕ್ಷ ಸಿರಿಲ್ ರಾಮಪೋಸಾ ಅವರೇ ತಿಳಿಸಿದರು. ಇದರಿಂದಾಗಿ ವಾಷಿಂಗ್ಟನ್ ಮತ್ತು ಪ್ರೆಟೋರಿಯಾ ಮಧ್ಯದ ರಾಜತಾಂತ್ರಿಕ ಬಿಕ್ಕಟ್ಟು ಇನ್ನಷ್ಟು ಹೆಚ್ಚಿದಂತಾಗಿದೆ ಎಂದು 'ರಾಯಿಟರ್ಸ್' ಸುದ್ದಿಸಂಸ್ಥೆ ವರದಿ ಪ್ರಕಟಿಸಿದೆ. ದಕ್ಷಿಣ ಆಫ್ರಿಕಾ ದೇಶದ ಜತೆಗಿನ ರಾಜತಾಂತ್ರಿಕ ಬಿಕ್ಕಟ್ಟಿನ ಕಾರಣದಿಂದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಜೋಹಾನ್ಸ್‌ಬರ್ಗ್ ಜಿ-20 ಶೃಂಗಸಭೆಯನ್ನು ಬಹಿಷ್ಕರಿಸಿದ್ದಾರೆ ಎಂದೂ ವರದಿಯಾಗಿದೆ.

ಒತ್ತಡ ಹೇರಿದ್ದ ಡೊನಾಲ್ಡ್ ಟ್ರಂಪ್

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ ಅನುಪಸ್ಥಿತಿಯಲ್ಲಿ ಯಾವುದೇ ನಿರ್ಣಯ ಮಂಡಿಸಬಾರದು, ಒಂದೊಮ್ಮೆ ಮಂಡನೆಯಾದರೂ ಅನುಮೋದನೆ ಪಡೆಯಲು ಅವಕಾಶ ಮಾಡಿಕೊಡಬಾರದು ಎಂಬ ಒತ್ತಡವನ್ನು ಹೇರಿದ್ದರು ಎಂಬುದನ್ನೂ ದಕ್ಷಿಣ ಆಫ್ರಿಕಾದ ಅಧಿಕಾರಿಗಳು ತಿಳಿಸಿದ್ದಾರೆ. ಜಿ-20 ಶೃಂಗಸಭೆಯಲ್ಲಿ ಮಂಡನೆಯಾಗಲಿರುವ 'ಹವಾಮಾನ ಬದಲಾವಣೆಗೆ ಕೈಗೊಳ್ಳಬೇಕಾದ ಮಹತ್ವದ ಕ್ರಮಗಳ ನಿರ್ಣಯದಿಂದ ಅಮೆರಿಕದ ಹಿತಕ್ಕೆ ಧಕ್ಕೆಯಾಗುತ್ತದೆ. ಅಮೆರಿಕದ ಇಂಧನ ವರ್ಗಾವಣೆ ಪ್ರಕ್ರಿಯೆಗಳಿಗೆ ಈ ನಿರ್ಣಯ ಪರವಾದ ನಿಲುವು ಹೊಂದಿಲ್ಲ ಎಂಬುದೇ ಡೊನಾಲ್ಡ್ ಟ್ರಂಪ್ ಅವರ ವಿರೋಧಕ್ಕೆ ಹಾಗೂ ಜಿ-20 ಶೃಂಗಸಭೆಯನ್ನು ಅವರು ಬಹಿಷ್ಕರಿಸುವುದಕ್ಕೆ ಕಾರಣವಾಗಿದೆ ಎಂಬುದನ್ನೂ ದ.ಆಫ್ರಿಕಾ ಅಧಿಕಾರಿಗಳು ತಿಳಿಸಿದ್ದಾರೆ.



ವಾಡಿಕೆ ಮುರಿದ ಅಧ್ಯಕ್ಷ

ವಾಡಿಕೆಯಂತೆ ಶೃಂಗಸಭೆಯಲ್ಲಿ ನಿರ್ಣಯವನ್ನು ಸಭೆಯ ಕೊನೆಯ ದಿನ ಮಂಡಿಸಿ ಅನುಮೋದನೆ ಪಡೆಯಲಾಗುತ್ತದೆ. ಆದರೆ ಈ ಬಾರಿ ಆತಿಥೇಯ ದೇಶದ ಅಧ್ಯಕ್ಷರಾದ ಸಿರಿಲ್ ರಾಮಪೋಸಾ ಅವರು ಬದಲಾವಣೆ ಎನ್ನುವಂತೆ ಶೃಂಗಸಭೆ ಆರಂಭದ ದಿನವೇ ನಿರ್ಣಯ ಮಂಡಿಸಿದರು. ಅದನ್ನು ಎಲ್ಲಾ ಸದಸ್ಯ ರಾಷ್ಟ್ರಗಳೂ ಅನುಮೋದಿಸಿರುವುದು ಈ ದಿಶೆಯಲ್ಲಿನ ಒಂದು ಒಳ್ಳೆಯ ಸಂಕೇತದಂತೆ ಕಂಡಿದೆ ಎಂದು ಸಿರಿಲ್ ರಾಮಪೋಸಾ ಅವರ ವಕ್ತಾರ ವಿನ್ಸೆಂಟ್ ಮಗವೇನ್ಯಾ ಪ್ರತಿಕ್ರಿಯಿಸಿದ್ದಾರೆ.

ಸದಸ್ಯರಲ್ಲಿ 19 ದೇಶ, 2 ಒಕ್ಕೂಟ

'ಜಿ-20' ಶೃಂಗದ ಸದಸ್ಯ ದೇಶಗಳ ಪಟ್ಟಿಯಲ್ಲಿ 19 ದೇಶಗಳು ಹಾಗೂ ಯೂರೋಪ್ ಒಕ್ಕೂಟ ಸೇರಿವೆ. 2023ರಿಂದ ಹೊಸದಾಗಿ ಆಫ್ರಿಕಾ ಒಕ್ಕೂಟವೂ ಸೇರಿಕೊಂಡಿದೆ. 19 ದೇಶಗಳಲ್ಲಿ ಅರ್ಜೆಂಟಿನಾ, ಆಸ್ಟ್ರೇಲಿಯ, ಬ್ರೆಜಿಲ್, ಕೆನಡಾ, ಚೀನಾ, ಫ್ರಾನ್ಸ್, ಜರ್ಮನಿ, ಭಾರತ, ಇಂಡೋನೇಷ್ಯಾ, ಇಟಲಿ, ಜಪಾನ್, ಕೊರಿಯ ಗಣರಾಜ್ಯ, ಮೆಕ್ಸಿಕೊ, ರಷ್ಯಾ, ಸೌದಿ ಅರೇಬಿಯ, ದಕ್ಷಿಣ ಆಫ್ರಿಕಾ, ಟರ್ಕಿ, ಯುನೈಟೆಡ್ ಕಿಂಗ್ಡಂ ಮತ್ತು ಅಮೆರಿಕ ಸೇರಿವೆ. ಈ ಬಾರಿಯ ಶೃಂಗಸಭೆ ದಕ್ಷಿಣ ಆಫ್ರಿಕಾ ದೇಶದ ಆತಿಥ್ಯದಲ್ಲಿ ನಡೆದಿದೆ.

ಸಿಂದೂರ್ ವೇಳೆ ಪಾಕ್ ಮೂಲಕ ಚೀನಾ ಶಸ್ತ್ರಾಸ್ತ್ರ ಸಾಮರ್ಥ್ಯ ಪರೀಕ್ಷೆ

ಅಮೆರಿಕ-ಚೀನಾ ಆರ್ಥಿಕ-ಭದ್ರತಾ ಪರಿಶೀಲನಾ ಆಯೋಗ ವರದಿ

ವಾಷಿಂಗ್ಟನ್: ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರಣವಾಗಿ ಭಾರತ ದೇಶವು ಪಾಕಿಸ್ತಾನದ ಮೇಲೆ ಮೇ 7ರಿಂದ 10ರವರೆಗೆ 'ಆಪರೇಷನ್ ಸಿಂದೂರ್' ಸೇನಾ ಕಾರ್ಯಾಚರಣೆ ನಡೆಸಿತು. ಈ ಸಂದರ್ಭವನ್ನು ಚೀನಾ ತನ್ನ ಶಸ್ತ್ರಾಸ್ತ್ರಗಳ ಪ್ರಯೋಗಕ್ಕೆ ಬಳಸಿಕೊಂಡಿದೆ ಎಂದು ಅಮೆರಿಕ ಗಂಭೀರ ಆರೋಪ ಮಾಡಿದೆ.

ಭಾರತ ಆರಂಭಿಸಿದ 'ಆಪರೇಷನ್ ಸಿಂದೂರ್' ಯುದ್ಧದ ಸಂದರ್ಭವನ್ನೇ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳ ನೆರವು ನೀಡುವ ನೆಪದಲ್ಲಿ ಚೀನಾ ತಾನು ತಯಾರಿಸಿದ 'ಶಸ್ತ್ರಾಸ್ತ್ರಗಳ ಗುಣಮಟ್ಟ ಪರೀಕ್ಷೆ'ಗೆ ಬಳಸಿಕೊಂಡಿದೆ ಎಂದು ಅಮೆರಿಕದ ಸಂಸತ್ ಸಮಿತಿಯು ಸಂಸತ್ತಿಗೆ ವರದಿ ಮಂಡಿಸಿದೆ.

'ಅಮೆರಿಕ-ಚೀನಾ ಆರ್ಥಿಕ ಮತ್ತು ಭದ್ರತಾ ಪರಿಶೀಲನಾ ಆಯೋಗ' (ಯುಎಸ್‌ಸಿ) ಅಮೆರಿಕದ ಸಂಸತ್ತಿಗೆ ಶುಕ್ರವಾರ ಸಲ್ಲಿಸಿದ 2025ರ ವಾರ್ಷಿಕ ವರದಿಯಲ್ಲಿಯೇ ಈ ಉಲ್ಲೇಖ ಮಾಡಲಾಗಿದೆ. ಅಲ್ಲದೇ, ಆ ಪ್ರದೇಶದಲ್ಲಿ ಚೀನಾದ ಸೇನಾ ಚಟುವಟಿಕೆಗಳು ವಿಸ್ತರಿಸುತ್ತಿರುವ ಬಗೆಗೂ ವರದಿಯಲ್ಲಿ ತೀವ್ರ ಕಳವಳವನ್ನು ವ್ಯಕ್ತಪಡಿಸಲಾಗಿದೆ.

ಭಾರತ-ಪಾಕ್ ನಡುವಿನ ಸೇನಾ ಸಂಘರ್ಷವು ಚೀನಾ ಸೇನೆಗೆ ತನ್ನ ಹೊಸ ಶಸ್ತ್ರಾಸ್ತ್ರಗಳ ಸಾಮರ್ಥ್ಯ ಪರೀಕ್ಷೆಗೆ ಮತ್ತು ಭಾರತದ ವಿರುದ್ಧದ ತನ್ನ ಗುಪ್ತಚರ ಸಂಸ್ಥೆಯ ಸಾಮರ್ಥ್ಯದ ನೇರ ಪರೀಕ್ಷೆಗೆ ಉತ್ತಮ ಅವಕಾಶವಾಗಿ ಕಂಡಿದೆ ಎಂದೂ ವರದಿ ಬೊಟ್ಟು ಮಾಡಿದೆ.

ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನಲ್ಲಿ 25 ಪ್ರವಾಸಿಗರು, ಒಬ್ಬ ನಾಗರಿಕನನ್ನು ಹತ್ಯೆ ಮಾಡಿದ ಭಯೋತ್ಪಾದ ದಾಳಿಯಲ್ಲೂ ಚೀನಾದ ಶಸ್ತ್ರಾಸ್ತ್ರಗಳು ಬಳಕೆ ಆಗಿರಬಹುದು ಎಂಬ ಶಂಕೆಯನ್ನೂ ವ್ಯಕ್ತಪಡಿಸಲಾಗಿದೆ. ಭಾರತ-ಪಾಕ್ ನಡುವಿನ ಬಿಕ್ಕಟ್ಟಿನ ಉದ್ದಕ್ಕೂ ಭಾರತದ ಸೇನಾಪಡೆಗಳ ಚಟುವಟಿಕೆ, ನೆಲೆಗಳ ಕುರಿತು ಆಯಾ ಕ್ಷಣದ ಮಾಹಿತಿಗಳನ್ನು ಚೀನಾ ಪಾಕಿಸ್ತಾನಕ್ಕೆ ಒದಗಿಸಿದೆ. ಈ ಬಗ್ಗೆ ಭಾರತೀಯ ಸೇನೆಗೂ ಮಾಹಿತಿ ಇದೆ ಎಂದು ಅಮೆರಿಕದ ವರದಿ ಹೇಳಿದೆ.

ಚೀನಾ ದೇಶದ ಪಿಕ್ಯು ಎರ್ ಡಿಫೆನ್ಸ್‌ಸಿಸ್ಟಂ

ಚೀನಾದ ಪಿಎಲ್ 15 ಕ್ಷಿಪಣಿ

ಪಾಕ್ ಬಳಸಿದ ಚೀನಾ ಶಸ್ತ್ರಾಸ್ತ್ರ

ಚೀನಾದ ಆಧುನಿಕ ಯುದ್ಧೋಪಕರಣಗಳಾದ ಎಚ್‌ಕ್ಯು-9 ವಾಯು ರಕ್ಷಣಾ ವ್ಯವಸ್ಥೆ (ಭಾರತದ ವಾಯು ದಾಳಿ ತಡೆಯುವ ಯತ್ನಕ್ಕೆ), ಪಿಎಲ್-15 ಏರ್-ಟು-ಏರ್ ಮಿಸೈಲ್ಸ್ ಮತ್ತು ಜೆ-10 ಯುದ್ಧ ವಿಮಾನಗಳನ್ನು ಪಾಕ್‌ಗೆ ಬಳಸಿಕೊಳ್ಳಲು ನೀಡಲಾಗಿತ್ತು. ಬಳಿಕ, ಜೂನ್‌ನಲ್ಲಿ 5ನೇ ತಲೆಮಾರಿನ ಫೈಟರ್ ಜೆಟ್‌ಗಳಾದ ಜೆ-35, ಕೆಜೆ-500 ವಿಮಾನಗಳು ಮತ್ತು ಬ್ಯಾಲಿಸ್ಟಿಕ್ ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳನ್ನು ಮಾರಾಟ ಮಾಡಲೂ ಚೀನಾ ಮುಂದಾಗಿತ್ತು.

ನೈಜೀರಿಯ: 303 ವಿದ್ಯಾರ್ಥಿಗಳ ಅಪಹರಣ

ಶಾಲೆಗೇ ನೇರ ನುಗ್ಗಿದ ಬಂದೂಕುಧಾರಿಗಳು | ನೈಜೀರಿಯದಲ್ಲಿ ಮಕ್ಕಳ ನಿರಂತರ ಅಪಹರಣ

ನೈಜರ್: ನೈಜೀರಿಯ ದೇಶದ ಉತ್ತರ ಮಧ್ಯ ಭಾಗದಲ್ಲಿನ ರಾಜ್ಯ 'ನೈಜರ್'ನ ಅಗ್ವಾರ ಪ್ರದೇಶದಲ್ಲಿನ ಪಾಪಿರಿ ಸಮುದಾಯದ ಸೇಂಟ್ ಮೇರಿ ಕ್ಯಾಥೋಲಿಕ್ ಶಾಲೆಯಿಂದ ಪ್ರಾಥಮಿಕ ಹಂತದ 303 ವಿದ್ಯಾರ್ಥಿಗಳು ಮತ್ತು 12 ಶಿಕ್ಷಕರನ್ನು ಬಂದೂಕುಧಾರಿಗಳು ಅಪಹರಿಸಿದ್ದಾರೆ. ಆದರೆ, ಯಾವುದೇ ಬಂಡುಕೋರ ಬಣವೂ ವಿದ್ಯಾರ್ಥಿಗಳ ಅಪಹರಣದ ಹೊಣೆಯನ್ನು ಹೊತ್ತುಕೊಂಡಿಲ್ಲ. ಹಾಗಾಗಿ ಸರಕಾರಕ್ಕೆ ಮಕ್ಕಳ ರಕ್ಷಣೆ ಕಾರ್ಯ ದೊಡ್ಡ ಸವಾಲಾಗಿದೆ.

ಈ ಭಾಗದಲ್ಲಿ ಇತ್ತೀಚಿನ ವರ್ಷಗಳಲ್ಲೇ ಇದು ಅತಿದೊಡ್ಡ ಮಟ್ಟದ ಶಾಲಾ ವಿದ್ಯಾರ್ಥಿಗಳ ಅಪಹರಣ ಕೃತ್ಯ ಎನಿಸಿಕೊಂಡಿದೆ. ಇಡೀ ಪ್ರಾಂತ್ಯವನ್ನು ಈ ಘಟನೆ ಆತಂಕದ ಮಡುವಿಗೆ ದೂಡಿದೆ. 'ಕ್ರಿಶ್ಚಿಯನ್ ಅಸೋಸಿಯೇಷನ್ ಫಾರ್ ನೈಜೀರಿಯ'(ಸಿಎಎನ್)ನ ನೈಜರ್ ರಾಜ್ಯ ಘಟಕದ ಅಧ್ಯಕ್ಷರಾದ ಮೋಸ್ಟ್ ರೆವರೆಂಡ್ ಬುಲೂಸ್ ಧೌವಾ ಯೊಹಾನ್ನಾ ಅವರೂ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಪ್ರದೇಶದಲ್ಲಿ ಭಯದ ವಾತಾವರಣವಿದೆ. ಮಕ್ಕಳ ಪತ್ತೆಗಾಗಿ ಶೋಧ ಕಾರ್ಯ ನಡೆಯುತ್ತಿದೆ. ಪೋಷಕರಿಗೆ ಮಾಹಿತಿ ನೀಡಿದ್ದೇವೆ. ಮಕ್ಕಳನ್ನು ರಕ್ಷಿಸಲು ಸರಕಾರ ಮತ್ತು ಭದ್ರತಾ ಸಂಸ್ಥೆಗಳ ಜತೆ ಕೆಲಸ ಮಾಡುತ್ತಿದ್ದೇವೆ ಎಂದು 'ಸಿಎಎನ್' ವಕ್ತಾರ ಡೇನಿಯಲ್ ಅಟೋರಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಶುಕ್ರವಾರದ ಈ ಘಟನೆಯು ಪೋಷಕರನ್ನು ಆತಂಕದ ಮಡುವಿಗೆ ದೂಡಿದೆ. ಸ್ಥಳೀಯರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. 'ಶಾಲೆಗಳಿಗೆ ಬಂಡುಕೋರರಿಂದ ಬೆದರಿಕೆ ಹೆಚ್ಚಿದೆ ಎಂಬ ಗುಪ್ತಚರ ಮಾಹಿತಿ ಇದ್ದರೂ ಶಾಲೆಯನ್ನು ಮತ್ತೆ ತೆರೆಯಲಾಗಿದೆ. ಸರಕಾರ ಮತ್ತು ಶಾಲಾ ಆಡಳಿತ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯನ್ನು ಅಪಾಯಕ್ಕೆ ಸಿಲುಕಿಸಿವೆ' ಎಂದು ಸಾರ್ವಜನಿಕರು ಕಿಡಿಕಾರಿದ್ದಾರೆ.

62 ವರ್ಷದ ದವುದಾ ಛೆಕುಲಾ ಎಂಬವರು ಶಾಲೆ ಬಳಿ ಬಂದು '7ರಿಂದ 10 ವರ್ಷ ಪ್ರಾಯದ ನನ್ನ ನಾಲ್ವರು ಮೊಮ್ಮಕ್ಕಳನ್ನೂ ಅಪಹರಿಸಲಾಗಿದೆ. ಅವರನ್ನು ರಕ್ಷಿಸಿ ತಂದು ನಮಗೆ ಒಪ್ಪಿಸುವವರು ಯಾರು?' ಎಂದು ಗೋಳಾಡುತ್ತಿದ್ದಾರೆ. ಶಾಲೆ ಪುನಾರಂಭಕ್ಕೆ ಮೊದಲು ಅನುಮತಿ ಪಡೆದೇ ಇಲ್ಲ ಎಂದು ಶಾಲಾ ಆಡಳಿತದ ಮೇಲೆ ಕಿಡಿಕಾರಿರುವ ಸರಕಾರ, ಮಕ್ಕಳು ಮತ್ತು ಶಿಕ್ಷಕರ ರಕ್ಷಣೆಗಾಗಿ ಕಾರ್ಯಾಚರಣೆ ನಡೆದಿದೆ ಎಂದು ಹೇಳಿದೆ.

1) ನೈಜಿರಿಯ ದೇಶದ ನೈಜರ್ ರಾಜ್ಯದಲ್ಲಿನ ಶಾಲೆಯ ವಸತಿ ನಿಲಯದಿಂದ ಮಕ್ಕಳ ಅಪಹರಣವಾಗಿರುವುದು.
2) ಶಾಲೆಯ ಆವರಣದಲ್ಲಿ ಆತಂಕದಿಂದ ನಿಂತಿರುವ ಮಕ್ಕಳ ಪೋಷಕರು.

ವಿದ್ಯಾರ್ಥಿ ಅಪಹರಣ ಸರಣಿ

ಇದಕ್ಕೂ ಮುನ್ನ ಸೋಮವಾರ ಬೆಳಗ್ಗೆ ನೆರೆಯ ಕೆಬ್ಬಿ ರಾಜ್ಯದಲ್ಲಿರುವ, ನೈಜರ್ ರಾಜ್ಯದಿಂದ 170 ಕಿಮೀ ದೂರದಲ್ಲಿರುವ ಮಗಾ ಟೌನ್‌ನಲ್ಲಿನ ಪ್ರೌಢಶಾಲೆಯಿಂದ 25 ವಿದ್ಯಾರ್ಥಿನಿಯರನ್ನು ಬಂದೂಕುಧಾರಿಗಳು ಅಪಹರಿಸಿದ್ದಾರೆ. ಅವರಲ್ಲಿ ಒಬ್ಬಳು ವಿದ್ಯಾರ್ಥಿನಿ ಅಪಹರಣಕಾರರ ಹಿಡಿತದಿಂದ ತಪ್ಪಿಸಿಕೊಂಡು ಬಂದಿದ್ದಾಳೆ. ಆದರೆ, 24 ವಿದ್ಯಾರ್ಥಿನಿಯರು ಈಗಲೂ ಅಪಹರಣಕಾರರ ವಶದಲ್ಲೇ ಇದ್ದಾರೆ. ಮತ್ತೊಂದೆಡೆ, ಕ್ವಾರಾ ರಾಜ್ಯದಲ್ಲಿಯೂ ಇಬ್ಬರನ್ನು ಕೊಂದು 38 ಜನರನ್ನು ಅಪಹರಿಸಿರುವ ಘಟನೆ ವರದಿಯಾಗಿದೆ.

ಅಧ್ಯಕ್ಷರ ಜಿ-20 ಹಾಜರಿ ರದ್ದು

303 ವಿದ್ಯಾರ್ಥಿಗಳು, 12 ಶಿಕ್ಷಕರ ಅಪಹರಣ ಸುದ್ದಿ ತಿಳಿದ ಬಳಿಕ ಅಧ್ಯಕ್ಷ ಬೋಲಾ ಟಿನುಬು ಅವರು ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಜಿ20 ಶೃಂಗಸಭೆಗೆ ಹೋಗುವುದನ್ನು ಕೈಬಿಟ್ಟಿದ್ದಾರೆ. ಹೆಚ್ಚಿನ ಅಪಾಯದ ಪ್ರದೇಶಗಳಲ್ಲಿರುವ 47 ಶಿಕ್ಷಣ ಸಂಸ್ಥೆಗಳನ್ನು ಮುಚ್ಚಲು ಶಿಕ್ಷಣ ಸಚಿವಾಲಯ ಆದೇಶಿಸಿದೆ.

ಡಿ.18ಕ್ಕೆ ಖುದ್ದು ಹಾಜರಾಗಿ: ರಾಗಾಗೆ ಕೋರ್ಟ್ ಆದೇಶ

ವಾರಾಣಸಿ: ಶ್ರೀರಾಮಚಂದ್ರ ಭಗವಾನರ ಕುರಿತು ವಿವಾದಾತ್ಮಕ ಹೇಳಿಕೆ ನೀಡಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದಾರೆ ಎಂದು ಕಾಂಗ್ರೆಸ್ ನಾಯಕ, ರಾಯ್‌ಬರೇಲಿ ಕ್ಷೇತ್ರದ ಲೋಕಸಭಾ ಸದಸ್ಯ ರಾಹುಲ್ ಗಾಂಧಿ ವಿರುದ್ಧ ವಕೀಲ ಹರಿಶಂಕರ್ ಪಾಂಡೆ ಎಂಬವರು ಹೂಡಿರುವ ದಾವೆಯನ್ನು ಶನಿವಾರ ವಿಚಾರಣೆಗೆ ತೆಗೆದುಕೊಂಡ ವಾರಾಣಸಿ ಜನಪ್ರತಿನಿಧಿಗಳ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ಯಜುರ್ವೇದ್ ವಿಕ್ರಂ ಸಿಂಗ್ ಅವರು, ಆರೋಪಿ ರಾಹುಲ್ ಗಾಂಧಿ ಖುದ್ದಾಗಿ ಡಿ.18ರಂದು ವಿಚಾರಣೆಗೆ ಹಾಜರಾಗಬೇಕು ಎಂದು ನಿರ್ದೇಶನ ನೀಡಿದ್ದಾರೆ.

ಶನಿವಾರದ ವಿಚಾರಣೆ ವೇಳೆ ರಾಹುಲ್ ಗಾಂಧಿಯಾಗಲೀ, ಅವರ ಪರ ವಕೀಲರಾಗಲೀ ಹಾಜರಾಗದೇ ಇರುವುದನ್ನು ಗಮನಿಸಿದ ನ್ಯಾಯಾಧಶೀರು, ವಿಚಾರಣೆಯನ್ನು ಡಿ.18ಕ್ಕೆ ಮುಂದೂಡಿ, ಆರೋಪಿ ರಾಹುಲ್ ಖುದ್ದು ಹಾಜರಿಗೆ ನಿರ್ದೇಶನ ನೀಡಿದರು.

ಲೋಕಸಭೆ ಪ್ರತಿಪಕ್ಷ ನಾಯಕರೂ ಆಗಿರುವ ರಾಹುಲ್ ಗಾಂಧಿ ಏ.21ರಂದು ಅಮೆರಿಕದ ಬ್ರೌನ್ ವಿಶ್ವವಿದ್ಯಾಲಯದಲ್ಲಿ ನಡೆಸಿದ ಸಂವಾದದಲ್ಲಿ ಶ್ರೀರಾಮಚಂದ್ರ ಪೌರಾಣಿಕ ವ್ಯಕ್ತಿ. ಅವರನ್ನು ಕುರಿತು ವಿಚಾರಗಳೆಲ್ಲವೂ ಕಾಲ್ಪನಿಕ ಕಥೆಗಳು ಎಂದು ಹೇಳಿದ್ದರು ಎಂದು ಆರೋಪಿಸಿರುವ ಪಾಂಡೆ ಮೇ 12ರಂದು ದಾವೆ ಹೂಡಿದ್ದರು. ವಿಶೇಷ ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಅರ್ಜಿಯನ್ನು ಮೇ 17ರಂದು ವಜಾಗೊಳಿಸಿದ್ದರು. ನಂತರ ಪಾಂಡೆ ಸೆ.26ರಂದು ವಿಶೇಷ ಜನಪ್ರತಿನಿಧಿ ನ್ಯಾಯಾಲಯದಲ್ಲಿ ಪರಿಷ್ಕರಣಾ ಅರ್ಜಿ ಸಲ್ಲಿಸಿದರು. ರಾಹುಲ್ ಮತ್ತು ಕಾಂಗ್ರೆಸ್ ಪಕ್ಷದ ನಾಯಕರು ಹಿಂದೂಗಳನ್ನು ಮತ್ತು ಸನಾತನ ಧರ್ಮವನ್ನೂ ಅದರ ಚಿಹ್ನೆಗಳನ್ನು ಪದೇ ಪದೇ ಅವಮಾನಿಸಿದ್ದಾರೆ. ಈಗ ರಾಹುಲ್ ಶ್ರೀರಾಮನ ಅಸ್ತಿತ್ವವನ್ನೇ ಕಾಲ್ಪನಿಗೆ ಎನ್ನುವ ಮೂಲಕ ಕೋಟ್ಯಂತರ ಜನರ ಭಾವನೆಗಳಿಗೆ ನೋವುಂಟು ಮಾಡಿದ್ದಾರೆ ಎಂದು ದಾವೆಯಲ್ಲಿ ಪಾಂಡೆ ಆರೋಪಿಸಿದ್ದಾರೆ.



- ರಾಮ ಕಾಲ್ಪನಿಕ ವ್ಯಕ್ತಿ ಎಂದಿದ್ದ ಕೈ ಮುಖಂಡಗೆ ಕಾನೂನು ಸಂಕಷ್ಟ
- ಅಮೆರಿಕ ಬ್ರೌನ್ ವಿವಿ ಏ.21ರ ಭಾಷಣ ವಿರುದ್ಧ ವಕೀಲರ ದಾವೆ

ಭಾರತ-ಇಟಲಿ ಪ್ರಧಾನಿಗಳ ಆತ್ಮೀಯ ಸಂವಾದ

ಮೋದಿ ಲಘುಹಾಸ್ಯಕ್ಕೆ ನಗೆ ಚೆಲ್ಲಿದ ಮೆಲೊನಿ

ಜೋಹಾನ್ಸ್‌ಬರ್ಗ್: ದಕ್ಷಿಣ ಆಫ್ರಿಕಾ ದೇಶದ ರಾಜಧಾನಿ ಜೋಹಾನ್ಸ್‌ಬರ್ಗ್‌ನಲ್ಲಿ ನಡೆಯುತ್ತಿರುವ ಜಿ-20 ಶೃಂಗಸಭೆಯ ನೇಪಥ್ಯದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ- ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಕುಶಲೋಪರಿ ನಡೆಸುತ್ತಿದ್ದಾಗ, ಮೋದಿ ಅವರ ಹಾಸ್ಯ ಚಟಾಕಿಯೊಂದಕ್ಕೆ ಮೆಲೊನಿ ಬಿದ್ದು ಬಿದ್ದು ನಕ್ಕಿದ್ದಾರೆ. ಈ ದೃಶ್ಯಗಳಿಗೆ ಕಾಯುತ್ತಿದ್ದಂತೆ ಹತ್ತಾರು ಕ್ಯಾಮೆರಾಗಳು ಅಪರೂಪದ ಸಂದರ್ಭವನ್ನು ಪೈಪೋಟಿಗೆ ಬಿದ್ದಂತೆ ದಾಖಲಿಸಿಕೊಂಡಿವೆ. ಈ ಸಂದರ್ಭದ ವಿಡಿಯೊ ಜಾಲತಾಣಗಳಲ್ಲಿ ಭಾರೀ ವೈರಲ್ ಆಗಿದೆ.

ಮೋದಿ ಅವರ ತಮಾಷೆಯ ಮಾತಿಗೆ ಮೆಲೊನಿ ಅವರು ಜೋರಾಗಿ ನಗುತ್ತಿರುವುದು, ಇಬ್ಬರೂ ಆತ್ಮೀಯತೆಯಿಂದ ಹಸ್ತಲಾಘವ ಮಾಡಿರುವುದು, ಉಭಯ ಕುಶಲೋಪರಿ ನಡೆಸಿರುವುದು ವಿಡಿಯೋದಲ್ಲಿದೆ. ಇತ್ತೀಚೆಗೆ ಕೆನಡಾದಲ್ಲಿಯೂ ಜಿ-7 ಶೃಂಗಸಭೆಯಲ್ಲಿ ಮೋದಿ ಮತ್ತು ಮೆಲೋನಿ ಭೇಟಿಯಾಗಿದ್ದಾಗ ಮೆಲೊನಿ ಸೆಲ್ಫಿ ತೆಗೆದಿದ್ದರು. 'ನೀವೊಬ್ಬ ಶ್ರೇಷ್ಠ ವ್ಯಕ್ತಿತ್ವದವರು. ನಿಮ್ಮ ನಡೆ ನುಡಿಯನ್ನೇ ನಾನೂ ಅನುಸರಿಸಲು ಯತ್ನಿಸುವೆ' ಎಂದು ಮೋದಿ ಅವರನ್ನು ಮೆಲೊನಿ ಪ್ರಶಂಸಿಸಿದ್ದರು.

ಮೆಲೊನಿ ಅವರ ಜತೆಗಿನ ಕುಶಲೋಪರಿ ನಂತರ ಪ್ರಧಾನಿ ಮೋದಿ, ಬ್ರೆಜಿಲ್ ಅಧ್ಯಕ್ಷ ಡಿ,ಸಿಲ್ವಾ ಸೇರಿದಂತೆ ವಿಶ್ವದ ಅನೇಕ ನಾಯಕರನ್ನು ಆಲಂಗಿಸಿ ಶುಭ ಕೋರಿ ಮಾತುಕತ ನಡೆಸಿದರು.



ದ.ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿ ಜಿ-20 ಶೃಂಗದ ವೇಳೆ ಮೋದಿ-ಮೆಲೊನಿ ಕುಶಲ ಸಂವಾದ.

ಸ್ಪೀಕರ್ ಹುದ್ದೆಗಾಗಿ ಬಿಜೆಪಿ-ಜೆಡಿಯು ಪೈಪೋಟಿ

ಪಟನಾ: ಬಿಹಾರ ವಿಧಾನಸಭೆ ಸ್ಪೀಕರ್ ಹುದ್ದೆಗಾಗಿ ಎನ್‌ಡಿಎ ಮೈತ್ರಿಕೂಟದ ಅತಿದೊಡ್ಡ ಪಕ್ಷಗಳ ಮಧ್ಯೆಯೇ ತೀವ್ರ ಪೈಪೋಟಿ ನಡೆದಿದೆ.

ಗಯಾ ಟೌನ್ ವಿಧಾನಸಭಾ ಕ್ಷೇತ್ರದಿಂದ ಸತತ 9ನೇ ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಬಿಜೆಪಿಯ ಹಿರಿಯ ಶಾಸಕ, ಮಾಜಿ ಸಚಿವ ಪ್ರೇಮ್ ಕುಮಾರ್ ಅವರ ಹೆಸರು ಸ್ಪೀಕರ್ ಹುದ್ದೆಗೆ ಮುಂಚೂಣಿಯಲ್ಲಿದೆ. ಇನ್ನೊಂದೆಡೆ, ಜೆಡಿಯು ಪಕ್ಷದ ಝೂಝಾ ಕ್ಷೇತ್ರದ ಶಾಸಕ ದಾಮೋದರ್ ರಾವತ್ ಹೆಸರೂ ಕೇಳಿಬರುತ್ತಿದೆ. ಕಳೆದ ವಿಧಾನಸಭೆಯಲ್ಲಿ ಬಿಜೆಪಿ ನಾಯಕ ನಂದ ಕಿಶೋರ್ ಯಾದವ್ ಸ್ಪೀಕರ್ ಆಗಿದ್ದರೆ, ಜೆಡಿಯುನ ನರೇಂದ್ರ ನಾರಾಯಣ್ ಯಾದವ್ ಉಪ ಸ್ಪೀಕರ್ ಆಗಿದ್ದರು.

ಸದ್ಯದಲ್ಲೇ ವಿಧಾನಸಭೆಯ ವಿಶೇಷ ಅಧಿವೇಶನ ಕರೆಯಲಾಗುವುದು. ಅಧಿವೇಶನದ ದಿನಾಂಕ ನ.25ರ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರವಾಗಲಿದೆ. ನೂತನ ಶಾಸಕರು ಪ್ರಮಾಣ ವಚನ ಸ್ವೀಕರಿಸಲು ಅನುವಾಗುವಂತೆ ರಾಜ್ಯಪಾಲರು ಹಂಗಾಮಿ ಸ್ಪೀಕರ್ ನೇಮಿಸುತ್ತಾರೆ. ನೂತನ ಶಾಸಕರ ಪ್ರಮಾಣ ವಚನ ಸ್ವೀಕಾರ ನಂತರ ಸ್ಪೀಕರ್ ಚುನಾವಣೆ ನಡೆಯಲಿದೆ. ಬಿಜೆಪಿ ಮತ್ತು ಜೆಡಿಯು ಎರಡೂ ಪಕ್ಷಗಳೂ ಸ್ಪೀಕರ್ ಹುದ್ದೆ ಮೇಲೆ ಕಣ್ಣಿಟ್ಟಿದ್ದು, ಲಾಬಿ ತೀವ್ರಗೊಂಡಿದೆ ಎಂದು ಜೆಡಿಯು ನಾಯಕರೊಬ್ಬರು ಹೇಳಿದ್ದಾರೆ.

ನಮ್ಮ ಪಕ್ಷದ ಹಿರಿಯ ಶಾಸಕ ಪ್ರೇಮ್ ಕುಮಾರ್ ಸ್ಪೀಕರ್ ಹುದ್ದೆಗೆ ಮುಂಚೂಣಿಯಲ್ಲಿದ್ದಾರೆ ಎಂದು ಬಿಜೆಪಿ ನಾಯಕರೊಬ್ಬರು ತಿಳಿಸಿದ್ದಾರೆ. ಜೆಡಿಯು ಮೂಲಗಳ ಪ್ರಕಾರ ಝೂಝಾ ಶಾಸಕ ದಾಮೋದರ್ ರಾವತ್ ಮುಂಚೂಣಿಯಲ್ಲಿದ್ದಾರೆ.

ಹಿಂದಿನ ಸರಕಾರದಲ್ಲಿ ಸಹಕಾರಿ ಸಚಿವರಾಗಿದ್ದ ಪ್ರೇಮ್ ಕುಮಾರ್, 2015-17ರ ಅವಧಿಯಲ್ಲಿ ಪ್ರತಿಪಕ್ಷ ನಾಯಕರಾಗಿದ್ದರು. ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್‌ನ ಅಖೌರಿ ಓಂಕಾರ್ ನಾಥರನ್ನು 26,423 ಮತಗಳಿಂದ ಸೋಲಿಸಿದ್ದಾರೆ.

ದಾಮೋದರ್

ಪ್ರೇಮ್‌ಕುಮಾರ್

ಸಮಾಚಾರ ಸಣ್ಣದಲ್ಲ

26 ರಂದು ಪಟೇಲ್ ಶಿವಪ್ಪಗೆ ಸನ್ಮಾನ

ಹಾಸನ: ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿರುವ ಪಟೇಲ್ ಶಿವಪ್ಪ ಅವರಿಗೆ ಇದೇ ತಿಂಗಳ 26 ರಂದು ನಗರದ ಕನಕ ಭವನದಲ್ಲಿ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಕುರುಬರ ಸಂಘದ ಅಧ್ಯಕ್ಷ ಸಿದ್ದೇಗೌಡ ತಿಳಿಸಿದರು. ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತಾಲೂಕು-ಜಿಲ್ಲಾ ಕುರುಬರ ಸಂಘದ ಆಶ್ರಯದಲ್ಲಿ ಕಾರ್ಯಕ್ರಮ ನೆರವೇರುತ್ತಿದ್ದು, ಕಾಗಿನೆಲೆ ಕನಕ ಗುರು ಪೀಠದ ಕೆ.ಆರ್.ನಗರ ಶಾಖಾ ಮಠದ ಶ್ರೀ ಶಿವಾನಂದಪುರಿ ಮಹಾಸ್ವಾಮೀಜಿಗಳ ಕೃಪಾಶೀರ್ವಾದಗಳೊಂದಿಗೆ ಸಮಾರಂಭ ನಡೆಯಲಿದೆ. ಜಿಲ್ಲೆಯ ಸಮುದಾಯದ ಎಲ್ಲ ಮುಖಂಡರು ಕಾರ್ಯಕ್ರಮದಲ್ಲಿ ಭಾಗಿಯಾಗುವಂತೆ ಮನವಿ ಮಾಡಿದರು. ತಾಲೂಕು ಸಂಘದ ವಿವಿಧ ಪದಾಧಿಕಾರಿಗಳು ಇದ್ದರು.

ಮಾಜಿ ಸ್ಪೀಕರ್ ಹುಟ್ಟು ಹಬ್ಬ ಆಚರಣೆ

ಕೋಲಾರ: ಮಾಜಿ ಸ್ಪೀಕರ್‌ಕೆ.ಆರ್‌ರಮೇಶ್ ಕುಮಾರ್ ಹುಟ್ಟುಹಬ್ಬದ ಪ್ರಯುಕ್ತ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ನಗರದ ಎಸ್.ಎನ್.ಆರ್‌ಜಿಲ್ಲಾ ಆಸ್ಪತ್ರೆಯ ರೋಗಿಗಳಿಗೆ ಹಣ್ಣುಹಂಪಲು ವಿವರಿಸಿದರು.

ಕಾಂಗ್ರೆಸ್ ಎಸ್ಸಿ ಘಟಕದ ಜಿಲ್ಲಾಧ್ಯಕ್ಷ ಎನ್.ಅಂಬರೀಷ್ ಮಾತನಾಡಿ ರಮೇಶ್ ಕುಮಾರ್‌ಅವರು ಕೋಲಾರ ಮತ್ತು ಚಿಕ್ಕಬಳ್ಳಾಪುರ ಅವಳಿ ಜಿಲ್ಲೆಗಳಿಗೆ ಕೆ.ಸಿ ವ್ಯಾಲಿ ಮತ್ತು ಹೆಚ್.ಎನ್ ವ್ಯಾಲಿ ಮೂಲಕ ಕೆರೆಗಳಿಗೆ ನೀರು ಹರಿಸಿದ ಆಧುನಿಕ ಭಗೀರಥರಾಗಿದ್ದಾರೆ. ಸಚಿವರಾಗಿದ್ದ ಸಂದರ್ಭದಲ್ಲಿ ನಗರದ ಜಿಲ್ಲಾ ಆಸ್ಪತ್ರೆಗೆ ಎಂಆರ್‌ಐ ಮತ್ತು ಸಿಟಿ ಸ್ಕ್ಯಾನಿಂಗ್ ಸೆಂಟರ್,ತಾಯಿ ಮಕ್ಕಳ ಆಸ್ಪತ್ರೆಯ ನೂತನ ಕಟ್ಟಡ ಸೇರಿದಂತೆ ಸೌಲಭ್ಯಗಳನ್ನು ನೀಡಿ ಬಡವರಿಗೆ ಅನುಕೂಲ ಮಾಡಿದ್ದಾರೆ ಅದರಿಂದಾಗಿ ಅವರ ಹುಟ್ಟುಹಬ್ಬವನ್ನು ಇದೇ ಆಸ್ಪತ್ರೆಯಲ್ಲಿ ಸರಳವಾಗಿ ಆಚರಣೆ ಮಾಡಲಾಗುತ್ತಿದೆ ಎಂದರು.

ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೈಲಾಂಡಹಳ್ಳಿ ಮುರಳಿ ಮಾತನಾಡಿ, ಸದಾ ರೈತರ ಹಿತಕ್ಕಾಗಿ ದುಡಿಯುವ ರಮೇಶ್ ಕುಮಾರ್‌ಅವರು ಕಾಂಗ್ರೆಸ್ ಕಾರ್ಯಕರ್ತರಿಗೆ ಆದರ್ಶವಾಗಿದ್ದಾರೆ. ಮುಂದೆ ಅವರಿಗೆ ಒಳ್ಳೆಯ ರಾಜಕೀಯ ಸ್ಥಾನಮಾನ ದೊರೆಯಲಿ ಎಂದು ಆಶಿಸಿದರು. ಜಿಲ್ಲಾ ಆಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ.ಜಗದೀಶ್, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ವೈ ಶಿವಕುಮಾರ್, ಸುನಿಲ್ ಕುಮಾರ್,ಕರವೇ ನವೀನ್, ಕೋಟೆ ಶ್ರೀನಿವಾಸ್ ಇದ್ದರು.

ರೋಟರಿಯಿಂದ ಉಚಿತ ಚಿಕಿತ್ಸಾ ಶಿಬಿರ

ತುಮಕೂರು: ರೋಟರಿ ತುಮಕೂರು ಹಾಗೂ ಡಾ.ರಾಮ ಮನೋಹರ ಲೋಹಿಯಾ ಆರೋಗ್ಯ ಜೀವನ ಸಂಸ್ಥಾನ ಸಹಯೋಗದಲ್ಲಿ ನಗರದಲ್ಲಿ ಒಂದು ವಾರ ಕಾಲ ನಡೆಯುವ ಉಚಿತ ತಪಾಸಣೆ – ಚಿಕಿತ್ಸಾ ಶಿಬಿರ ಶನಿವಾರ ಆರಂಭವಾಯಿತು.ನಗರದ ರೋಟರಿ ಬಾಲಭವನದ ಸಮಾರಂಭದಲ್ಲಿ ರೋಟರಿ ತುಮಕೂರು ಅಧ್ಯಕ್ಷ ಡಾ.ಸುದರ್ಶನ್ ಶಿಬಿರ ಉದ್ಘಾಟಿಸಿ, ರೋಟರಿಯ ಸೇವಾ ಚಟುವಟಿಕೆಗಳ ಬಗ್ಗೆ ವಿವರಿಸಿ, ಈ ಶಿಬಿರದಲ್ಲಿ ನರರೋಗ ತಜ್ಞ ಡಾ.ವಿಕ್ರಂ ಮಶಾಲ್, ತಜ್ಞವೈದ್ಯ ಡಾ.ಆಕಾಶ್ ಶರ್ಮಾ,ರೂಪೇಶ್ ಚೌಧರಿ ಮತ್ತು ಅವರ ತಂಡ ಸಾರ್ವಜನಿಕರಿಗೆ ವಿವಿಧ ದೈಹಿಕ ಸಮಸ್ಯೆಗಳ ತಪಾಸಣೆ ನಡೆಸಿ ಚಿಕಿತ್ಸೆ ನೀಡುವರು ಎಂದು ಹೇಳಿದರು. ಬೆನ್ನು ನೋವು, ಭುಜದ ನೋವು, ಮೊಣಕಾಲು ನೋವು, ಸರ್ವಿಕಲ್ ಸ್ಪಾಂಡಿಯೋಲಿಸಿಸ್, ಮಲಬದ್ಧತೆ, ಸಿಯಾಟಿಕ್, ಸ್ನಾಯುಗಳ ನೋವು, ಪಾರ್ಶ್ವವಾಯು ಮತ್ತು ಇನ್ನಿತರ ನೋವುಗಳಿಗೆ ಚಿಕಿತ್ಸೆ ನೀಡುವರು ಎಂದರು. ರೋಟರಿ ಜಿಲ್ಲಾ ಜಂಟಿ ಕಾರ್ಯದರ್ಶಿ ಸಿ.ನಾಗರಾಜ್, ನಿರ್ದೇಶಕಿ ಚಂದ್ರಕಲಾ, ಕಾರ್ಯದರ್ಶಿ ಮಲ್ಲೇಶಯ್ಯ, ಜಯರಾಮ ಶೆಟ್ಟಿ, ಶಿವಕುಮಾರಸ್ವಾಮಿ, ಚಂದ್ರಶೇಖರ್,ನಾಗಮಣಿ, ಅನಿತಾ ನಾಗೇಶ್, ವೀಣಾ ಉಮಾಶಂಕರ್,ರಾಜೇಶ್ವರಿ ರುದ್ರಪ್ಪ, ರಾಧಾ ಭಾಗವಹಿಸಿದ್ದರು.

ಮಕ್ಕಳಿಗೆ ಕಳಪೆ ಆಹಾರ: ಕ್ರಮಕ್ಕೆ ಪ್ರತಿಭಟನೆ

ಬಾಗೇಪಲ್ಲಿ: ಸರಕಾರಿ ಶಾಲೆಯ ವಿದ್ಯಾರ್ಥಿಗಳ ಆಹಾರ ಪದಾರ್ಥಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿ ಕಳಪೆ ಗುಣಮಟ್ಟದ ಆಹಾರವನ್ನು ಮಕ್ಕಳಿಗೆ ಉಣಬಡಿಸುತ್ತಿರುವ ಮುಖ್ಯ ಶಿಕ್ಷಕನ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಎಸ್‌ಎಫ್‌ಐ ಮುಖಂಡ ಸೋಮಶೇಖರ್‌ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಒತ್ತಾಯಿಸಿದರು. ಬಾಗೇಪಲ್ಲಿ ಪಟ್ಟಣದ ಮುಖ್ಯ ರಸ್ತೆಯ ಸರ್ಕಾರಿ ಬಾಲಕರ ಪ್ರೌಢಶಾಲೆಯಲ್ಲಿ ಬಿಸಿಯೂಟದ ಬಾಳೆಹಣ್ಣು,ಮೊಟ್ಟೆಯನ್ನು ವಿದ್ಯಾರ್ಥಿಗಳಿಗೆ ನೀಡದೆ ಕಾಳಸಂತೆಯಲ್ಲಿ ಮಾರಾಟ ಮಾಡಿಕೊಳ್ಳುತ್ತಿರುವ ಮುಖ್ಯ ಶಿಕ್ಷಕ ವಿ.ವೆಂಕಟೇಶ್ ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಿದರು. ಅಧಿಕಾರಿಗಳ ತಂಡ ಇದುವರೆಗೂ ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿಗಳ ಸಮಸ್ಯೆಗೆ ಪರಿಹಾರ ಕಲ್ಪಿಸಿಲ್ಲ. ಹುಳ ಬಿದ್ದಿರುವ ಬಿಸಿಯೂಟ ನೀಡುತ್ತಿರುವ ಅಡುಗೆ ಸಿಬ್ಬಂದಿಯನ್ನು ಪ್ರಶ್ನಿಸಿದರೆ ವಿದ್ಯಾರ್ಥಿಗಳನ್ನು ಕೊಠಡಿಯಲ್ಲಿ ಕೂಡಿಹಾಕಿ ಥಳಿಸಿದ್ದಾರೆ. ಹೊರಗಡೆ ಮಾತನಾಡದಂತೆ ಭಯ ಹುಟ್ಟಿಸುತ್ತಿದ್ದಾರೆ ಎಂದು ಆರೋಪಿಸಿದರು.

{ **ಕೆ.ವೆಂಕಟೇಶ್** } ಸಚಿವ

ರಾಜ್ಯದಲ್ಲಿ 4 ಲಕ್ಷ ಕೋಟಿ ಬಜೆಟ್ನಲ್ಲಿ 55 ಸಾವಿರ ಕೋಟಿ ರೂ.ವನ್ನು ವಾರ್ಷಿಕವಾಗಿ ಗ್ಯಾರಂಟಿ ಯೋಜನೆಗೆ ಬಳಸಲಾಗುತ್ತಿದೆ. ಶಕ್ತಿ ಯೋಜನೆಯಡಿ ರಾಜ್ಯದಲ್ಲಿ ಇದುವರೆಗೆ 600 ಕೋಟಿ ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡಿದ್ದಾರೆ. ಸರಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳು ಇಡೀ ದೇಶದಲ್ಲಿಯೇ ಮಾದರಿಯಾಗಿದ್ದು, ಗ್ಯಾರಂಟಿ ಯೋಜನೆ ರೂಪಿಸಿರುವುದು ಕರ್ನಾಟಕದ ಹೆಮ್ಮೆ.



ಜನವರಿಯಿಂದ 'ಆಹಾರ ಕಿಟ್'

'ಗ್ಯಾರಂಟಿ ಕಾರ್ಯಾಗಾರ ಮತ್ತು ಗ್ಯಾರಂಟಿ ಉತ್ಸವ' | ಉಸ್ತುವಾರಿ ಸಚಿವ ಭೋಸರಾಜು ಚಾಲನೆ

ಮಡಿಕೇರಿ: ಚುನಾವಣಾ ಸಂದರ್ಭದಲ್ಲಿ ರಾಜ್ಯದ ಜನರಿಗೆ ಭರವಸೆ ನೀಡಿದಂತೆ 'ಪಂಚ ಗ್ಯಾರಂಟಿ' ಯೋಜನೆಗಳನ್ನು ಜಾರಿಗೊಳಿಸಿ ರಾಜ್ಯದ ಎಲ್ಲಾ ಜನರಿಗೆ ಒಂದಲ್ಲ ಒಂದು ಸೌಲಭ್ಯಗಳು ತಲುಪುವಂತೆ ಮಾಡುವಲ್ಲಿ ಸರಕಾರ ಶ್ರಮಿಸುತ್ತಿದೆ ಎಂದು ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್.ಭೋಸರಾಜು ಅವರು ತಿಳಿಸಿದ್ದಾರೆ.

ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುರಿತು ನಗರದ ಜಿಪಂ ಸಭಾಂಗಣದಲ್ಲಿ ಶನಿವಾರ ನಡೆದ ಜಿಲ್ಲಾ ಮಟ್ಟದ 'ಗ್ಯಾರಂಟಿ ಕಾರ್ಯಾಗಾರ ಮತ್ತು ಗ್ಯಾರಂಟಿ ಉತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಅವರ ನೇತೃತ್ವದ ಸರ್ಕಾರ ಯಾವುದೇ ಧರ್ಮ,ಜಾತಿ ನೋಡಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿಲ್ಲ, ಸರ್ಕಾರದ ಗ್ಯಾರಂಟಿ ಯೋಜನೆಗಳು ಎಲ್ಲಾ ಜನರಿಗೂ ತಲುಪುತ್ತಿದ್ದು, ನುಡಿದಂತೆ ನಡೆಯುತ್ತಿರುವ ಸರಕಾರವಾಗಿದೆ. ಮುಂದಿನ ಜನವರಿಯಿಂದ 'ಇಂದಿರಾ ಆಹಾರ ಕಿಟ್' ಯೋಜನೆ ಜಾರಿಗೆ ಬರಲಿದ್ದು, ಬಡ ಜನರ ಆರ್ಥಿಕ ಅಭಿವೃದ್ಧಿಗೆ ಸರಕಾರ ಶ್ರಮಿಸುತ್ತಿದೆ. ಗ್ಯಾರಂಟಿ ಯೋಜನೆಗಳ ಜೊತೆಗೆ ಸರ್ಕಾರ ಜಿಲ್ಲೆಯ ಎರಡು ಕ್ಷೇತ್ರಗಳಿಗೂ ತಲಾ 55 ಕೋಟಿ ರೂ. ನೀಡಿದೆ ಎಂದು ವಿವರಿಸಿದರು.

ಸಿಎಂ ಕಾನೂನು ಸಲಹೆಗಾರರಾದ ಎ.ಎಸ್.ಪೊನ್ನಣ್ಣ ಅವರು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸಾಮಾಜಿಕ ನ್ಯಾಯಾದ ಪರಿಕಲ್ಪನೆಯಲ್ಲಿ ನಡೆಯುತ್ತಿದ್ದು, ಎಲ್ಲಾ ಜನರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದೆ ಎಂದು ಹೇಳಿದರು.

ಕೊಟ್ಟ ಮಾತಿನಂತೆ ಸರ್ಕಾರ ನಡೆದುಕೊಂಡಿದೆ. ಗ್ಯಾರಂಟಿಗಳು ಬಡ ಜನರ ಖಾತೆಗೆ ಹಣ ನೇರವಾಗಿ ತಲುಪುತ್ತಿದೆ. ಯಾವುದೇ ಯೋಜನೆ ಜಾರಿಗೊಳಿಸಲು ಜನ ಬೆಂಬಲ ಇರಬೇಕು. ಬಡವರ, ಶೋಷಿತರ ಆರ್ಥಿಕ ಸಬಲೀಕರಣಕ್ಕೆ ಗ್ಯಾರಂಟಿಗಳನ್ನು ಜಾರಿಗೊಳಿಸಿದೆ ಎಂದರು.

ಕೊಡಗು ಜಿಲ್ಲೆಯಲ್ಲಿ ಆದಿವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಇವರಿಗೆ ವಸತಿ ಯೋಜನೆ ಜೊತೆಗೆ ಆಧಾರ್‌ಕಾರ್ಡ್, ಪಡಿತರ ಇತರೆ ಮೂಲ ಸೌಲಭ್ಯ ಕಲ್ಪಿಸಬೇಕು ಎಂದು ಸಲಹೆ ಮಾಡಿದರು.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್.ಭೋಸರಾಜು ಅವರು ಜಿಪಂ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ 'ಗ್ಯಾರಂಟಿ ಕಾರ್ಯಾಗಾರ ಮತ್ತು ಗ್ಯಾರಂಟಿ ಉತ್ಸವಕ್ಕೆ ಚಾಲನೆ ನೀಡಿದರು.

ಇಡೀ ದೇಶವೇ ಇತ್ತ ತಿರುಗಿ ನೋಡುತ್ತಿದೆ !

ಗ್ಯಾರಂಟಿಗಳ ಪ್ರಾಧಿಕಾರದ ರಾಜ್ಯ ಅಧ್ಯಕ್ಷರಾದ ಎಚ್.ಎಂ.ರೇವಣ್ಣ ಮಾತನಾಡಿ, ಮಡಿಕೇರಿ ಜಿಲ್ಲೆಯಲ್ಲಿ ಶೇ.98 ಕ್ಕೂ ಹೆಚ್ಚು ಗ್ಯಾರಂಟಿ ಯೋಜನೆಗಳು ತಲುಪುತ್ತಿರುವುದು ಶ್ಲಾಘನೀಯ ಕಾರ್ಯ. ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಪಂಚ ಗ್ಯಾರಂಟಿ ಯೋಜನೆಯನ್ನು ಜಾರಿಗೊಳಿಸಿ ಇಡೀ ದೇಶವೇ ತಿರುಗಿ ನೋಡುವಂತೆ ಮಾಡಿದ್ದಾರೆ ಎಂದು ಹೇಳಿದರು.

ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷರಾದ ಪುಷ್ಪ ಅಮರನಾಥ್ ಮಾತನಾಡಿ, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ನುಡಿದಂತೆ ನಡೆದಿದೆ. ಹೆಣ್ಣು ಮಕ್ಕಳ ಕಣ್ಣೀರು ಒರೆಸುವ ಕೆಲಸ ಮಾಡಿದೆ ಎಂದು ಪ್ರತಿಪಾದಿಸಿದರು.

ಗ್ಯಾರಂಟಿ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷರಾದ ಮೆಹರೂಜ್ ಖಾನ್ ಮಾತನಾಡಿದರು. ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾ ಘಟಕದ ಅಧ್ಯಕ್ಷರಾದ ಧರ್ಮಜ ಉತ್ತಪ್ಪ ಮಾತನಾಡಿದರು.

ಕೊಡಗು ಜಿಲ್ಲಾ ವಿದ್ಯಾಸಾಗರ ಕಲಾ ವೇದಿಕೆಯ ಈ.ರಾಜು ಮತ್ತು ತಂಡದವರು ಗ್ಯಾರಂಟಿ ಯೋಜನೆ ಕುರಿತು ಹಾಡು ಹಾಡಿ ಗಮನ ಸೆಳೆದರು.

ಜಿಲ್ಲಾಧಿಕಾರಿ ವೆಂಕಟ್ ರಾಜಾ ಸ್ವಾಗತಿಸಿದರು. ಪವನ್ ಕುಮಾರ್‌ನಿರೂಪಿಸಿದರು. ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ ವಂದಿಸಿದರು. ನಗರಸಭೆ ಅಧ್ಯಕ್ಷರಾದ ಪಿ. ಕಲಾವತಿ, ಗ್ಯಾರಂಟಿ ತಾ.ಅಧ್ಯಕ್ಷರಾದ ಮಂದ್ರೀರ ಮೋಹನ್ದಾಸ್, (ಮಡಿಕೇರಿ) ಹೇಮಂತರಾಜು(ಸೋಮವಾರಪೇಟೆ), ವಿ.ಪಿ.ಶಶಿಧರ (ಕುಶಾಲನಗರ), ಪಿ.ವಿ.ಜಾನ್ಸನ್ (ವಿರಾಜಪೇಟೆ), ಕಾಳಿಮಾಡ ಪ್ರಶಾಂತ್(ಪೊನ್ನಂಪೇಟೆ), ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಆಹಾರ ಇಲಾಖೆ ಜಂಟಿ ನಿರ್ದೇಶಕರಾದ ಮಂಟೆಸ್ವಾಮಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಡಿ.ಆರ್. ಪ್ರಸನ್ನ ಕುಮಾರ್,ಮಡಿಕೇರಿ ಘಟಕ,ಕ.ರಾ.ರ.ಸಾ ನಿಗಮ, ವ್ಯವಸ್ಥಾಪಕರಾದ ಎ. ಈರಶಪ್ಪ, ಸೆಸ್ಕ್ ಕಾರ್ಯಪಾಲಕ ಅಭಿಯಂತರರಾದ ರಾಮಚಂದ್ರ, ಜಿಲ್ಲಾ ಉದ್ಯೋಗ ವಿನಿಯಮ ಕೇಂದ್ರ ಜಿಲ್ಲಾ ಉದ್ಯೋಗಾಧಿಕಾರಿ ಮಂಜುನಾಥಸಿ.ಬಿ.ಇತರರು ಇದ್ದರು.

ಗ್ಯಾರಂಟಿ ಯೋಜನೆಗಗಳ ಕುರಿತು ಏರ್ಪಡಿಸಲಾಗಿದ್ದ ವಸ್ತುಪ್ರದರ್ಶನ ಮಳಿಗೆಯನ್ನು ಜಿಲ್ಲಾ ಉಸ್ತುವಾರಿ ಸಚಿವರು ಉದ್ಘಾಟಿಸಿದರು.

ಸಾರಿಗೆ ದಂಡ ಪಾವತಿಗೆ ಡಿ.12ರವರೆಗೆ ವಿಸ್ತರಣೆ

ರಾಮನಗರ: ಪೊಲೀಸ್ ಇಲಾಖೆಯ ಸಂಚಾರಿ ಇ- ಚಲನ್ ನಲ್ಲಿ ದಾಖಲಾಗಿರುವ ದಂಡದ ಪ್ರಕರಣಗಳು ಹಾಗೂ ಸಾರಿಗೆ ಇಲಾಖೆಯಲ್ಲಿ 1991-92 ರಿಂದ 2019-20ರ ಅವಧಿಯಲ್ಲಿ ದಾಖಲಾಗಿ, ಪಾವತಿಗೆ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಿ ಸಾರಿಗೆ ಇಲಾಖೆ ಆದೇಶಿಸಿದ್ದು, ವಾಹನಗಳ ಮಾಲೀಕರು ಇದರ ಸದುಪಯೋಗ ಪಡೆದು ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವಂತೆ

ಬೆಂಗಳೂರು ದಕ್ಷಿಣ ಜಿಲ್ಲೆಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಂ. ಎಚ್. ಅಣ್ಣಯ್ಯನವರ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಪೊಲೀಸ್ ಇಲಾಖೆಯ ಸಂಚಾರಿ ಇ- ಚಲನ್ ನಲ್ಲಿದಾಖಲಾಗಿರುವ ದಂಡದ ಪ್ರಕರಣಗಳು ಹಾಗೂ ಸಾರಿಗೆ ಇಲಾಖೆಯಲ್ಲಿ 1991-92ರಿಂದ 2019-20ರ ಅವಧಿಯಲ್ಲಿ ದಾಖಲಾಗಿ, ಪಾವತಿಗೆ ಬಾಕಿಯಿರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ. 50ರಷ್ಟು ರಿಯಾಯಿತಿ ನೀಡಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ನ. 21 ರಿಂದ ಡಿ.12 ರವರೆಗೆ ಕಾಲಾವಕಾಶ ನೀಡಲಾಗಿದೆ ಎಂದವರು ಹೇಳಿದರು.

ಸೆ. 13 ರಂದು ನಡೆದ ಲೋಕ ಅದಾಲತ್ನಲ್ಲಿ ಒಟ್ಟು 8241 ಪ್ರಕರಣಗಳಲ್ಲಿ 29,60,500 ರೂ.ಗಳ ಮೊತ್ತ ಪಾವತಿಯಾಗಿತ್ತು. ಮುಂದಿನ ಲೋಕ ಅದಾಲತ್ ಡಿ. 13 ರಂದು ನಡೆಯಲಿದ್ದು ಸಾರಿಗೆ ಪ್ರಕರಣಗಳಿಗೆ ಸಂಬಂಧಿಸಿದ ಪ್ರಕರಣಗಳಿಗೆ ಹಾಜರಾಗಿ ಕಕ್ಷಿದಾರರು ರಾಜಿ ಸಂಧಾನ ಮಾಡಿಕೊಳ್ಳಬೇಕೆಂದು ಕರೆ ನೀಡಿದರು.

ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್ ನಲ್ಲಿ ದಾಖಲಾಗಿರುವ ದಂಡದ ಮೊತ್ತದ ಶೇ. 50 ರಷ್ಟು ರಿಯಾಯಿತಿಯ ಮೊದಲನೇ ದಿನವಾದ ನ.21 ರಂದು ಒಂದೇ ವಾಹನದ 29 ಪ್ರಕರಣಗಳಲ್ಲಿ 7500 ರೂ. ದಂಡದ ಮೊತ್ತ ಪಾವತಿಯಾಗಿದೆ ಎಂದು ರಾಮನಗರ ಉಪ ವಿಭಾಗದ ಡಿ.ವೈ.ಎಸ್.ಪಿ ಶ್ರೀನಿವಾಸ್ ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಸವಿತಾ ಪಿ. ಆರ್‌ಗೋಷ್ಠಿಯಲ್ಲಿದ್ದರು.

ರಾಮನಗರ ಜಿಲ್ಲಾ ನ್ಯಾಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ನ್ಯಾ. ಅಣ್ಣಯ್ಯನವರ ಮಾತನಾಡಿದರು.

ಸಿಎಂ ಭಾಗ್ಯಕ್ಕಾಗಿ 91 ಕೆಜಿ ಎಳ್ಳು ತುಲಾಭಾರ

ಪಾವಗಡ: ಡಿಸಿಎಂ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಲೆಂದು ಅಭಿಮಾನಿಗಳು ಪಾವಗಡದ ಶ್ರೀ ಶನೈಶ್ಚರ ಸ್ವಾಮಿಗೆ 91 ಕೆಜಿ ಎಳ್ಳಿನ ತುಲಾಭಾರ ಅರ್ಪಿಸಿ ಪ್ರಾರ್ಥನೆ ಸಲ್ಲಿಸಿದರು.

ಪಟ್ಟಣದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಅಭಿಮಾನಿಗಳು ಶ್ರೀ ಶನೈಶ್ಚರ ಸ್ವಾಮಿಮೊರೆ ಹೋಗಿದ್ದು ವಿಶೇಷ ಪೂಜೆ ಸಲ್ಲಿಸಿ ಸಿಎಂ ಪದವಿಗಾಗಿ ಪ್ರಾರ್ಥಿಸಿ, 91 ಕೆಜಿ ಎಳ್ಳಿನ ತುಲಾಭಾರ ಅರ್ಪಿಸಿದರು. ಪಾವಗಡ ಡಿ.ಕೆ. ಶಿವಕುಮಾರ್‌ಅಭಿಮಾನಿ ಬಳಗದ ವತಿಯಿಂದ ಶ್ರೀ ಶನೈಶ್ಚರ ದೇವರಿಗೆ ವಿಶೇಷ ಪೂಜೆ, ನವಗ್ರಹಗಳಿಗೆ ತೈಲಾಭಿಷೇಕ, ತುಲಾಭಾರದ ಧಾರ್ಮಿಕ ವಿಧಿವಿಧಾನಗಳನ್ನು ನಡೆಸಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾ ರ್ ಅವರಿಗೆ ಕುಜದೋಷ, ಶನಿ ದೋಷಗಳು ದೂರವಾಗಿ, ಮುಖ್ಯಮಂತ್ರಿಯಾಗಿ ಅಧಿಕಾರ ಅಲಂಕರಿಸಲು ಮಾರ್ಗ ಸುಗಮವಾಗಲಿ ಎಂಬ ಉದ್ದೇಶದಿಂದ ತುಲಾಭಾರ ಮತ್ತು ವಿಶೇಷ ಪೂಜೆಯನ್ನು ಹಮ್ಮಿಕೊಂಡಿದ್ದರು.

ಡಿಸಿಎಂ ಡಿ.ಕೆ.ಶಿವಕುಮಾರ್‌ಮುಖ್ಯಮಂತ್ರಿ ಆಗಲೆಂದು ಅಭಿಮಾನಿಗಳು ಪಾವಗಡದ ಶ್ರೀ ಶನೈಶ್ಚರ ಸ್ವಾಮಿಗೆ 91 ಕೆಜಿ ಎಳ್ಳಿನ ತುಲಾಭಾರ ಅರ್ಪಿಸಿ ಪ್ರಾರ್ಥನೆ ಸಲ್ಲಿಸಿದರು.

ಮಂಡ್ಯ ಜಿಲ್ಲೆಗೆ ಹೆಚ್ಚುವರಿ ಸಚಿವ ಸ್ಥಾನ ಬೇಕು: ರವಿ ಗಣಿಗ

ಮಂಡ್ಯ: ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಜೊತೆ ನಾನು ದೆಹಲಿಗೆ ತೆರಳಿದ್ದು, ಖಾಸಗಿ ಕೆಲಸಕ್ಕಷ್ಟೇ. ಅದಾಗಿಯೂ ಕೆಲ ನಾಯಕರನ್ನು ಭೇಟಿ ಮಾಡಿ ಮಂಡ್ಯ ಜಿಲ್ಲೆಗೆ ಹೆಚ್ಚುವರಿ ಸಚಿವ ಸ್ಥಾನವನ್ನು ಕೇಳಿದ್ದೇವೆ ಹೊರತು ಡಿ.ಕೆ. ಶಿವಕುಮಾರ್‌ರನ್ನು ಮುಖ್ಯಮಂತ್ರಿ ಮಾಡಿ ಎಂಬ ಬೇಡಿಕೆ ಇಟ್ಟಿಲ್ಲ ಎಂದು ಶಾಸಕ ರವಿಕುಮಾರ್‌ಗಣಿಗ ಸ್ಪಷ್ಟಪಡಿಸಿದರು. ಶನಿವಾರ ನಗರದ ಬಂದೀಗೌಡ ಬಡಾವಣೆಯಲ್ಲಿರುವ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದರು.

ಸುಪ್ರೀಂಕೋರ್ಟಿನಲ್ಲಿ ನನ್ನ ವೈಯಕ್ತಿಕ ಪ್ರಕರಣಕ್ಕೆ ನಾನು ದೆಹಲಿಗೆ ತೆರಳಬೇಕಿತ್ತು. ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಕೇಂದ್ರ ಕೃಷಿ ಸಚಿವರು ಹಾಗೂ ಇನ್ನಿತರೆ ಅಧಿಕಾರಿಗಳನ್ನ ಭೇಟಿ ಮಾಡಬೇಕಿತ್ತು. ಹಾಗಾಗಿ ಮಂಡ್ಯ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ಸಭೆ ಮುಗಿಸಿ ಇಬ್ಬರು ಜೊತೆಯಲ್ಲೇ ದೆಹಲಿಗೆ ಹೋದೆವು.

ನಮ್ಮಲ್ಲಿ ಯಾವುದೇ ಬಣ ಬಡಿದಾಟವಿಲ್ಲ

ಸಿದ್ದರಾಮಯ್ಯ ಸಹ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಿದ್ದು ಮತ್ತು ಡಿಕೆಶಿ ಜೊತೆಗೆ ನಮ್ಮ ಪಕ್ಷದ 140 ಶಾಸಕರು ಇದ್ದಾರೆ. ನಮ್ಮಲ್ಲಿ ಯಾವುದೇ ಬಣ ಬಡಿದಾಟವಿಲ್ಲ, ಕೆಲ ಶಾಸಕರು ಸಿದ್ದರಾಮಯ್ಯ ಅಥವಾ ಡಿ.ಕೆ. ಶಿವಕುಮಾರ್‌ಪರ ಮಾತನಾಡಿದರೆ ಅದು ಅವರ ವೈಯಕ್ತಿಕ. ಈ ಎಲ್ಲಾ ಗೊಂದಲಗಳಿಗೆ ಶೀಘ್ರದಲ್ಲೇ ಹೈಕಮಾಂಡ್ ತೆರೆ ಎಳೆಯಬೇಕು. ಜೊತೆಗೆ ಸೂಕ್ತ ಸಂದರ್ಭದಲ್ಲಿ ಹೈಕಮಾಂಡ್ ಒಳ್ಳೆಯ ತೀರ್ಮಾನ ಕೈಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಆದರೆ ಅಕ್ಕಪಕ್ಕ ಜಿಲ್ಲೆಯ ಕೆಲ ಶಾಸಕರು ಒಂದು ವೇಳೆ ದೆಹಲಿಗೆ ಬಂದಿದ್ದರೆ ನಮ್ಮ ಸಂಪರ್ಕದಲ್ಲಿರಲಿಲ್ಲ ಎಂದು ತಿಳಿಸಿದರು.

ದೆಹಲಿಗೆ ಹೋದಂತಹ ಸಂದರ್ಭದಲ್ಲಿ ವರಿಷ್ಠ ನಾಯಕರನ್ನು ಭೇಟಿ ಮಾಡುವುದು ನಮ್ಮ ಕಾಂಗ್ರೆಸ್ಸಿಗರಾದ ನಮ್ಮ ಕರ್ತವ್ಯ. ಆ ಪ್ರಕಾರವಾಗಿ ಕೆಲ ನಾಯಕರನ್ನು ಭೇಟಿ ಮಾಡಿದ್ದು, ಮಂಡ್ಯ ಜಿಲ್ಲೆಗೆ ಈಗಾಗಲೇ ಸಚಿವರನ್ನಾಗಿ ನೇಮಿಸಲಾಗಿದೆ. ಸಚಿವರಾಗಿರುವ ಎನ್.ಚಲುವರಾಯಸ್ವಾಮಿ ಅವರು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಂಪುಟ ವಿಸ್ತರಣೆಯಾದರೆ ಜಿಲ್ಲೆಗೆ ಇನ್ನೊಂದು ಸಚಿವ ಸ್ಥಾನ ಸ್ಥಾನಬೇಕೆಂದು ಬೇಡಿಕೆ ಇಟ್ಟಿದ್ದೇವೆ. ನನಗಾಗಲಿ, ಶ್ರೀರಂಗಪಟ್ಟಣ ಶಾಸಕ ರಮೇಶ್ ಬಂಡಿಸಿದ್ದೇಗೌಡರಿಗಾಗಲಿ ಅಥವಾ ಮದ್ದೂರು ಶಾಸಕ ಉದಯ್ ಅವರಿಗಾಗಲಿ ಸಚಿವ ಸ್ಥಾನ ಕೊಡಿ ಎಂದು ಒತ್ತಾಯ ಮಾಡಿ ಬಂದಿದ್ದೇವೆ ಎಂದು ಹೇಳಿದರು. ಡಿ.ಕೆ. ಶಿವಕುಮಾರ್‌ಮುಖ್ಯಮಂತ್ರಿಯಾಗಬೇಕೆಂದು ಬಯಸುವವರಲ್ಲಿ ನಾನೂ ಒಬ್ಬ. ಅವರು ಪಕ್ಷಕ್ಕಾಗಿ ದುಡಿದಿದ್ದಾರೆ. ಪಕ್ಷ ಕಟ್ಟಿದ್ದಾರೆ. ಆದರೆ ಅವರು ಯಾವ ಸನ್ನಿವೇಶದಲ್ಲಿ ಬೇಕಾದರೂ ಮುಖ್ಯಮಂತ್ರಿಯಾಗಬಹುದು. ಆ ಗಳಿಗೆ ನಿರ್ಧರಿಸುವವರು ಹೈಕಮಾಂಡ್ ಮಾತ್ರ ಎಂದು ಸ್ಪಷ್ಟಪಡಿಸಿದರು.

ಸಾಲುಮರದ ತಿಮ್ಮಕ್ಕಗೆ ನುಡಿ ನಮನ ಇಂದು

ಕೋಲಾರ: ತಾಲೂಕಿನ ಹೊಳಲಿ ಗ್ರಾಮಸ್ಥರಿಂದ ನ.23ರಂದು ಭಾನುವಾರ ಸಂಜೆ5 ಗಂಟೆಗೆ ರಾಜ್ಯೋತ್ಸವ ಮತ್ತು ವೃಕ್ಷಮಾತೆ ಸಾಲು ಮರದ ತಿಮ್ಮಕ್ಕ ಅವರಿಗೆ ನುಡಿ ನಮನವನ್ನು ಆಯೋಜಿಸಲಾಗಿದೆ ಎಂದು ಯುವ ಮುಖಂಡ ಎಚ್.ಆರ್.ಅಮರೇಶ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಗ್ರಾಮ ಪಂಚಾಯಿತಿ ಸದಸ್ಯರಾದ ವಿ.ಶಿವಣ್ಣ ಮತ್ತು ಪಿಳ್ಳಮ್ಮಗೋವಿಂದಪ್ಪ ಧ್ವಜಾರೋಹಣ ನರವೇರಿಸಲಿದ್ದು ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಸರೀನಾ ಸಿಕ್ಕಲಗಾರ್‌ಸಮಾರಂಭ ಉದ್ಘಾಟಿಸುವರು. ಶಾಶ್ವತ ನೀರಾವರಿ ಹೋರಾಟ ಸಮಿತಿ ಮುಖ್ಯಸ್ಥ ಹೊಳಲಿ ಪ್ರಕಾಶ್ ಅಧ್ಯಕ್ಷತೆ ವಹಿಸುವರೆಂದರು. ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾಧ್ಯಕ್ಷ ಜೆ.ಜಿ.ನಾಗರಾಜ್, ಗ್ರಾಮಾಂತರ ಸರ್ಕಲ್ ಇನ್‌ಸ್ಪೆಕ್ಟರ್‌ಕಾಂತರಾಜು, ಪಿಎಸ್‌ಐ ನಯನ ಸಿಕ್ಕಲಗಾರ್,ಕರವೇ ಜಿಲ್ಲಾಧ್ಯಕ್ಷ ಮೇಡಿಹಾಳ ರಾಘವೇಂದ್ರ, ಸಾಹಿತಿ ಆನಂದರೆಡ್ಡಿ, ಹುತ್ತೂರು ಪಿಡಿಒ ಲಕ್ಷ್ಮಿ ಭಾಗವಹಿಸುವರೆಂದು ಅಮರೇಶ್ ಮಾಹಿತಿ ನೀಡಿದರು.

ಗ್ರಾಮದ ಮುಖಂಡರಾದ ಎಚ್.ಆರ್. ವೆಂಕಟಾಚಲಪತಿ,ಶಂಕರಪ್ಪ, ರಘುನಾಥ್, ಎಚ್. ಎನ್.ಮಂಜುನಾಥ್, ಸುನಿಲ್ ಕುಮಾರ್ ,ನೌಷಾದ್, ರವಿಕುಮಾರ್,ಬಾಲಾಜಿ, ಎಚ್. ಜೆ.ಮಂಜುನಾಥ್, ಮಹೇಂದ್ರ ಇದ್ದರು.

ಯುವ ಮುಖಂಡ ಎಚ್.ಆರ್.ಅಮರೇಶ ಕಾರ್ಯಕ್ರಮದ ಕರಪತ್ರ ಬಿಡುಗಡೆ ಮಾಡಿದರು.

ದಾಸಣ್ಣರಿಗೆ ಇಂದಿರಾ ಪರಿಸರ ಪ್ರಶಸ್ತಿ ಪ್ರದಾನ

ತುಮಕೂರು: ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ 50ನೇ ಸುವರ್ಣ ಮಹೋತ್ಸವದ ಅಂಗವಾಗಿ ನೀಡಲಾಗುವ ಇಂದಿರಾ ಪ್ರಿಯದರ್ಶಿನಿ ಪರಿಸರ ಪ್ರಶಸ್ತಿಯನ್ನು ಪಾವಗಡದ ವಿಶ್ವ ಗ್ರಾಮೋದಯ ಟ್ರಸ್ಟ್ ಸಂಸ್ಥಾಪಕ ಹಾಗೂ ಕಾರ್ಯದರ್ಶಿ ವಿ. ದಾಸಣ್ಣಗೆ ಪ್ರದಾನ ಮಾಡಲಾಯಿತು. ಕಳೆದ 18 ವರ್ಷಗಳಿಂದ ಪರಿಸರ ಸಂರಕ್ಷಣೆ, ಜಲ ಸಂರಕ್ಷಣೆ, ಅರಣ್ಯ ಅಭಿವೃದ್ಧಿ, ಹಸಿರು ಚಳವಳಿ ಹಾಗೂ ಗ್ರಾಮೀಣ ಅಭಿವೃದ್ಧಿಗೆ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಅಂಗವಾಗಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರಶಸ್ತಿಯನ್ನು ಅರಣ್ಯ ಹಾಗೂ ಪರಿಸರ ಸಚಿವ ಈಶ್ವರ್‌ಬಿ. ಖಂಡ್ರೆ ಪ್ರದಾನ ಮಾಡಿದರು. ಸಚಿವ ದಿನೇಶ್ ಗೂಂಡೂರಾವ್, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಇದ್ದರು.

ಮುಂದಿನ ಸಲ ಮೈತ್ರಿಕೂಟ ಅಧಿಕಾರಕ್ಕೆ

ಜಾತ್ಯತೀತ ಜನತಾ ದಳದ 25ನೇ ವರ್ಷದ ಬೆಳ್ಳಿ ಹಬ್ಬ

ತಿ.ನರಸೀಪುರದಲ್ಲಿ ಜಾತ್ಯತೀತ ಜನತಾ ದಳದ 25ನೇ ವರ್ಷದ ಬೆಳ್ಳಿ ಹಬ್ಬ ಅದ್ದೂರಿಯಾಗಿ ಆಚರಿಸಲಾಯಿತು.

ತಿ.ನರಸೀಪುರ: ರಾಜ್ಯದಲ್ಲಿ ಮುಂದಿನ ವಿಧಾನ ಸಭಾ ಚುನಾವಣೆಯಲ್ಲಿ ಮೈತ್ರಿ ಪಕ್ಷವಾಗಿ ಎನ್ ಡಿ ಎ ಬಹುಮತ ಗೆದ್ದು ಮತ್ತೆ ಹೆಚ್.ಡಿ.ಕುಮಾರ ಸ್ವಾಮಿಯವರು ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಜೆಡಿಎಸ್ ಪಕ್ಷದ ತಾ. ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಜಾತ್ಯತೀತ ಜನತಾ ದಳದ 25ನೇ ವರ್ಷದ ಬೆಳ್ಳಿ ಹಬ್ಬ ಮಹೋತ್ಸವದ ಪ್ರಯುಕ್ತ ಶ್ರೀ ಗುಂಜಾನರಸಿಂಹಸ್ವಾಮಿಗೆ ಪೂಜೆ ಸಲ್ಲಿಸಿ ನಂತರ ಜೆಡಿಎಸ್ ಕಚೇರಿ ಮುಂಭಾಗ ಕೇಕ್ ಕತ್ತರಿಸಿ ಬಳಿಕ ಸಾರ್ವಜನಿಕ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ನಂತರ ಮಾತನಾಡಿ ತಾಲ್ಲೂಕಿನಲ್ಲಿ ಜೆಡಿಎಸ್ ಪಕ್ಷವನ್ನು ಹೆಚ್ಚಿನ ರೀತಿಯಲ್ಲಿ ಸಂಘಟಿಸುವುದಲ್ಲದೆ ಈ ಬಾರಿ ಗೆಲುವು ಸಾದಿಸಲಿದೆ ಎಂದ ಅವರು ರಾಜ್ಯದಲ್ಲಿ ಮೈತ್ರಿ ಪಕ್ಷವಾದ ಜೆಡಿಎಸ್ ಪಕ್ಷವು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸುವುದಲ್ಲದೆ ಮತ್ತೆ ಈ ರಾಜ್ಯದ ಮುಖ್ಯಮಂತ್ರಿಯಾಗಿ ಕುಮಾರಣ್ಣ ಗದ್ದುಗೆ ಏರಳಿದ್ದಾರೆ ಎಂದರು.

ಜೆಡಿಎಸ್ ಮುಖಂಡ ಹೆಮ್ಮಿಗೆ ಹೊನ್ನನಾಯಕ ಮಾತನಾಡಿ , ಜೆಡಿಎಸ್ ಪಕ್ಷದ ಯುವ ಮುಖಂಡ ನಿಖಿಲ್ ಕುಮಾರಸ್ವಾಮಿಯವರು ರಾಜ್ಯದಾದ್ಯಂತ ಜೆಡಿಎಸ್ ಪಕ್ಷವನ್ನು ಹೆಚ್ಚಿನ ರೀತಿಯಲ್ಲಿ ಸಂಘಟನೆ ಮಾಡಲಾಗುತ್ತಿದೆ . ನಮ್ಮ ರಾಜ್ಯದ ಅಭಿವೃದ್ಧಿಗೆ ಶ್ರಮಿಸುವ ಪ್ರಾದೇಶಿಕ ಪಕ್ಷವನ್ನು ಗೆಲ್ಲಿಸಬೇಕಿದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಜಿಪಂ ಸದಸ್ಯ ಜಯಪಾಲ ಭರಣಿ, ದೊಡ್ಡಮಾದನಾಯಕ, ಕನ್ನಹಳ್ಳಿ ಮೊಳೆ ಚಿಕ್ಕಸ್ವಾಮಿ, ಪ್ರಭುಸ್ವಾಮಿ,ಲಿಂಗಪ್ವಾಜಿ,ಶಿವಮಲ್ಲು, ಶಿವಕುಮಾರ್(ಬಡ್ಡು), ಸದಸ್ಯ ಮಹೇಶ್, ಬನ್ನಹಳ್ಳಿಹುಂಡಿ ಶಿವಕುಮಾರ್,ಕಟ್ಟೆಪುರ ಸಿದ್ದಪ್ಪ, ಮಾರಡಿಪುರ ಬಸವರಾಜು, ಮಾದಾಪುರ ಬಸವರಾಜು, ಹೊಸನರಿಪುರ ರಾಚಪ್ಪ, ವಿಜಯಪುರ ಕುಮಾರ್,ಶಂಭುದೇವನಪುರ ರಮೇಶ್, ಹಿರಿಯೂರು ಸೋಮಣ್ಣ, ವಾಟಾಳ್ ಪುರ ಶ್ರೀಕಾಂತ್ ,ನಾಗರಾಜು,ಉಮಾಪತಿ, ಮಾವನಹಳ್ಳಿ ರಾಜೇಶ್, ಹ್ಯಾಕನೂರು ಬಾಲು, ಮೂಗೂರು ನಾಗೇಂದ್ರ, ಗ್ರಾಪಂ ಸದಸ್ಯಚೇತನ್, ಶಿವಮೂರ್ತಿ,ಮಹಾದೇವ ಸ್ವಾಮಿ, ಕಾರ್ ರೇವಣ್ಣ, ಶಾಂತ, ಶಿವರಾಮ್, ಕನ್ನಹಳ್ಳಿ ಮಹಾದೇವ ಇದ್ದರು.

ಗಂಡಸಿ ಹೋಬಳಿ ಕೆರೆಗಳಿಗೂ ನೀರಿನ ಭಾಗ್ಯ

ಶೀಘ್ರವೇ 200 ಕೋಟಿ ರು. ವೆಚ್ಚದ ಕಾಮಗಾರಿಗೆ ಚಾಲನೆ: ಶಾಸಕ ಶಿವಲಿಂಗೇಗೌಡ

ಅರಸೀಕೆರೆ: ಜಿಲ್ಲೆಯ ಹೇಮಾವತಿ ನದಿ ಮೂಲದಿಂದ ಕಾಚೇನಹಳ್ಳಿ ಏತ ನೀರಾವರಿ ಯೋಜನೆಯಡಿ ಮೂರನೇ ಹಂತದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿರುವ ಕಾಮಗಾರಿಯಲ್ಲಿ ಗಂಡಸಿ ಹೋಬಳಿಯ ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆ ಸಾಕಾರಗೊಳ್ಳಲಿದೆ. ಯೋಜನೆ ಅನುಷ್ಠಾನಕ್ಕೆ 200 ಕೋಟಿ ಅನುದಾನ ಈಗಾಗಲೇ ಬಿಡುಗಡೆ ಆಗಿದ್ದು, ಶೀಘ್ರವೇ ಮುಖ್ಯಮಂತ್ರಿ ಸಿದ್ದರಾಮಯ್ಯ – ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಆಹ್ವಾನಿಸಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರೂ ಆದ ಶಾಸಕ ಕೆ.ಎಂ.ಶಿವಲಿಂಗೇಗೌಡ ಹೇಳಿದರು.

ತಾಲೂಕಿನ ಗಂಡಸಿ ಹ್ಯಾಂಡ್‌ಪೋಸ್ಟ್ ವೃತ್ತವನ್ನು ಸುಮಾರು 7 ಕೋಟಿಗೂ ಹೆಚ್ಚಿನ ಅನುದಾನದಲ್ಲಿ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿಗೆ ಇಂದು ಚಾಲನೆ ನೀಡಿ ಮಾತನಾಡಿದ ಅವರು, ವೃತ್ತವನ್ನು ಆಕರ್ಷಕ ರೀತಿಯಲ್ಲಿ ಅಭಿವೃದ್ಧಿ ಪಡಿಸುವುದರ ಜೊತೆಗೆ, ಹ್ಯಾಂಡ್‌ಪೋಸ್ಟ್ ವೃತ್ತಕ್ಕೆ ಹೈಟೆಕ್ ಸ್ಪರ್ಶ ನೀಡಲಾಗುವುದು ಎಂದರು. ನಾನು ಗಂಡಸಿ ಹೋಬಳಿಯ ಮಗನಾಗಿದ್ದು, ಈ ಮಣ್ಣಿನ ಹಾಗೂ ನಿಮ್ಮ ಋಣವನ್ನು ತೀರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದು, ಹೋಬಳಿಯ ಅಭಿವೃದ್ಧಿಗೆ ಸಂಬಂಧಿಸಿದಂತೆ ರಾಜಕೀಯ ಭಿನ್ನಾಭಿಪ್ರಾಯ ಬಿಡುವಂತೆ ಪ್ರತಿಪಕ್ಷಗಳ ಮುಖಂಡರಿಗೆ ಕಿವಿ ಮಾತು ಹೇಳಿದರು.

ಕಾಚೇನಹಳ್ಳಿ ಮೂರನೇ ಹಂತದ ಕಾಮಗಾರಿ ಗಂಡಸಿ ಹೋಬಳಿ ಜನತೆಯ ನೀರಿನ ಬವಣೆ ನೀಗಿಸುವುದರಲ್ಲಿ ಸಂದೇ ಹವಿಲ್ಲ. ಗಂಡಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೆಟ್ರೋಬಾಬು ಮಾತನಾಡಿ, ಅಭಿವೃದ್ಧಿ ವಿಷಯಕ್ಕೆ ಸಂಬಂಧಪಟ್ಟಂತೆ ಶಿವಲಿಂಗೇಗೌಡರು, ಕ್ರಾಂತಿ ಮಾಡಿದ್ದು, ರಾಜ್ಯದಲ್ಲೇ ಅರಸೀಕೆರೆ ಕ್ಷೇತ್ರ ಮಾದರಿ ವಿಧಾನಸಭಾ ಕ್ಷೇತ್ರವಾಗಿ ರೂಪುಗೊಳ್ಳುತ್ತಿರುವುದರಲ್ಲಿ ಸಂದೇಶವಿಲ್ಲ ಎಂದು ಶಾಸಕರ ಕಾರ್ಯವೈ ಖರಿ ಶ್ಲಾಘಿಸಿದರು. ಹೊಸದಾಗಿ ವಿಸ್ತಾರಗೊಳ್ಳುತ್ತಿರುವ ಗಂಡಸಿ ಹ್ಯಾಂಡ್‌ಪೋಸ್ಟ್ ವೃತ್ತದಲ್ಲಿ ನಾಡಪ್ರಭು ಕೆಂಪೇಗೌಡರ ಪುತ್ಥಳಿ ಪ್ರತಿಷ್ಠಾಪಿಸಿ ಎಂದು ಇದೇ ವೇಳೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ರಾಮಚಂದ್ರ, ಎಪಿಎಂಸಿ ಮಾಜಿ ಅಧ್ಯಕ್ಷ ಜಯರಾಂ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಅಯ್ಯಣ್ಣ, ಮುಖಂಡರಾದ ಮಂಜುರಾಜ್, ಮಲ್ಲೇಶಣ್ಣ, ತಾಪಂ ಮಾಜಿ ಸದಸ್ಯ ಈಶ್ವರಪ್ಪ ಇದ್ದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ದೇಗುಲದ ಅಕ್ರಮಕ್ಕೆ ಶಾಸಕರು ಗರಂ

ನಂಜನಗೂಡು: ನಗರದ ಶ್ರೀಕಂಠೇಶ್ವರ ದೇವಾಲಯಕ್ಕೆ ಸೇರಿದ ಮಳಿಗೆಗಳನ್ನು ಬಾಡಿಗೆಗೆ ಪಡೆದ ವ್ಯಾಪಾರಿಗಳು ತಮ್ಮ ವ್ಯಾಪ್ತಿ ಮೀರಿ ಮಳಿಗೆಯ ಹೊರಗೆ ವಸ್ತುಗಳನ್ನು ಇಟ್ಟುಕೊಂಡು ಭಕ್ತರ ಓಡಾಟಕ್ಕೆ ತೊಂದರೆ ಕೊಡುತ್ತಿದ್ದಾರೆ, ದೇವಾಲಯದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ದೂರುಗಳಿವೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ದೇವಾಲಯದ ಇಒ ಜಗದೀಶ್ ಕುಮಾರ್‌ಅವರನ್ನು ತರಾಟೆ ತೆಗೆದುಕೊಂಡರು.

ನಗರದ ತಾ.ಪಂ.ಕಚೇರಿ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಕೆಡಿಬಿ ಸಭೆಯಲ್ಲಿ ಅವರು ಮಾತನಾಡಿದರು.

ಪ್ರತಿಬಾರಿ ಸಭೆಯಲ್ಲಿ ನಿಮಗೆ ಒಳ್ಳೆ ಮಾತಲ್ಲಿ ಹೇಳಿ ಸಾಕಾಗಿದೆ,ನಿಮಗೆ ಯಾವ ಭಾಷೆಯಲ್ಲಿ ಹೇಳಬೇಕು,ನಿಮಗೆ ಕೆಲಸ ಮಾಡಲು ಇಷ್ಟವಿಲ್ಲದಿದ್ದರೆ ಹೇಳಿ ವ್ಯವಸ್ಥೆ ಮಾಡೋಣ ಎಂದು ಎಚ್ಚರಿಕೆ ನೀಡಿದರು.

ಶಾಸಕ ಯತೀಂದ್ರ ಸಿದ್ದರಾಮಯ್ಯ ಪ್ರತಿಕ್ರಿಯಿಸಿ, ದೇವಾಲಯದಲ್ಲಿ ನಡೆಯುವ ಅಕ್ರಮಗಳ ಬಗ್ಗೆ ಭಕ್ತರು ಟ್ವಿಟ್ಟರ್‌ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಬರೆದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ, ಇದರಿಂದ ಜಿಲ್ಲೆಗೆ, ನಮಗೆ ಅವಮಾನ, ಪಾರ್ಕಿಂಗ್ ವ್ಯವಸ್ಥೆ,ನದಿಯ ಬಳಿ ರಕ್ಷಣೆಗೆ ಸಿಬ್ಬಂದಿಯನ್ನು ನೇಮಿಸಿ,ಅಕ್ರಮವನ್ನು ತಡೆಗಟ್ಟಿ ಎಂದು ಹರಿಹಾಯ್ದರು.

ಶ್ರೀಕಂಠೇಶ್ವರ ದೇವಾಲಯದ ವಿಐಪಿ ವಸತಿಗೃಹ ಪಿಠೋಪಕರಣಗಳ ವ್ಯವಸ್ಥೆ ಮಾಡಿ,ದೇವಾಲಯದ ಬಳಿ ಗೋಶಾಲೆ ನಿರ್ಮಿಸಬೇಕು,ತಾಲ್ಲೂಕಿನ ಕಂತೆ ಮಹದೇಶ್ವರ ಬೆಟ್ಟಕ್ಕೆ ರಸ್ತೆ ನಿರ್ಮಿಸಲು ಮರಗಳನ್ನು ತೆರವುಗೊಳಿಸಿ,ಬೆಟ್ಟದ 1.7 ಗುಂಟೆ ಜಾಗದಲ್ಲಿ ಭಕ್ತರ ಅನುಕೂಲಕ್ಕಾಗಿ ಕಟ್ಟಡ ನಿರ್ಮಿಸಲು ಕ್ರಮವಹಿಸಬೇಕು ಎಂದು ದರ್ಶನ್ ಧ್ರುವನಾರಾಯಣ ತಾಕೀತು ಮಾಡಿದರು, ಸಭೆಯಲ್ಲಿ ತಾ.ಪಂ. ಇಒ ಜೆರಾಲ್ಡ್ ರಾಜೇಶ್,ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಹಾಡ್ಯ ರಂಗಸ್ವಾಮಿ,ತಹಶೀಲ್ದಾರ್‌ಶಿವಕುಮಾರ್‌ಕಾಸ್ನೂರ್ ,ಟಿಎಪಿಸಿಎಂ ಎಸ್ ಅಧ್ಯಕ್ಷ ಕುರಹಟ್ಟಿ ಮಹೇಶ್,ಪಿ. ಎಲ್.ಡಿ ಬ್ಯಾಂಕ್ ಅಧ್ಯಕ್ಷ ಚೆನ್ನಪ್ಪ, ಬಿಇಒ ಮಹೇಶ್ ,ಸಿಪಿಐ ಆನಂದ್ ಉಪಸ್ಥಿತರಿದ್ದರು.

ನಂಜನಗೂಡಿನ ತಾ.ಪಂ.ಕಚೇರಿ ಸಭಾಂಗಣದಲ್ಲಿ ತ್ರೈಮಾಸಿಕ ಕೆಡಿಪಿ ಸಭೆ ನಡೆಯಿತು.

ಸಮಾಚಾರ ಸಣ್ಣದಲ್ಲ

ಮುಷ್ತಾಕ್ ಅಲಿ ಟ್ರೋಫಿ ಮುಂಬೈಗೆ ಬಲಿಷ್ಠ ತಂಡ

ಮುಂಬೈ: ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿಗಾಗಿ 17 ಸದಸ್ಯರ ಮುಂಬೈ ತಂಡವನ್ನು ಘೋಷಣೆ ಮಾಡಲಾಗಿದೆ. ಈ ತಂಡದಲ್ಲಿ ಭಾರತ ಟಿ20 ತಂಡದ ನಾಯಕ ಸೂರ್ಯ ಕುಮಾರ್ ಯಾದವ್, ಸರ್ಫ ರಾಜ್ ಖಾನ್, ಶಿವಂ ದುಬೆ ಹಾಗೂ ಅಜಿಂಕ್ಯ ರಹಾನೆ ಇದ್ದು, ತಂಡವನ್ನು ಶಾರ್ದೂಲ್ ಠಾಕೂರ್ ಮುನ್ನಡೆಸಲಿದ್ದಾರೆ. ಹಾಲಿ ಚಾಂಪಿಯನ್ ಮುಂಬೈ ತಂಡವನ್ನು ಕಳೆದ ವರ್ಷ ಶ್ರೇಯಸ್ ಅಯ್ಯರ್ ಮುನ್ನಡೆಸಿದ್ದರು. ಈ ಬಾರಿ ಅವರು ಗಾಯಗೊಂಡು ವಿಶ್ರಾಂತಿ ಪಡೆಯುತ್ತಿದ್ದಾರೆ. ತಂಡದಲ್ಲಿ ಹಾರ್ದಿಕ್ ತಮೋರೆ ಹಾಗೂ ಅಂಗ್‌ಕ್ರಿಶ್ ರಘುವಂಶಿ ವಿಕೆಟ್ ಕೀಪರ್ ಆಗಿ ಕಾಣಿಸಿಕೊಂಡಿದ್ದು, ಬೌಲಿಂಗ್ ವಿಭಾಗ ದಲ್ಲಿ ತುಷಾರ್ ದೇಶಪಾಂಡೆ ಮತ್ತು ಸ್ಪಿನ್ನರ್ ತನುಷ್ ಕೋಟ್ಯಾನ್ ಸ್ಥಾನ ಪಡೆದಿದ್ದಾರೆ. ಸದ್ಯ, ನಡೆಯು ತ್ತಿರುವ ರಣಜಿ ಟ್ರೋಫಿಯ ಮೊದಲ ಕಂತಿನಲ್ಲಿ ಮುಂಬೈ ಪರ ಆಡಿರುವ 5 ಪಂದ್ಯಗಳಿಂದ 3 ಶತಕ ಮತ್ತು 1 ಅರ್ಧಶತಕ ಸಹಿತ 530 ರನ್ ಗಳಿಸಿರುವ ಸಿದ್ದೇಶ್ ಲಾಡ್ ತಂಡದಲ್ಲಿ ಸ್ಥಾನ ಪಡೆದಿ ದ್ದಾರೆ. ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿಯ ಎಲೈಟ್ ವಿಭಾಗವು ನವೆಂಬರ್ 26ರಿಂದ ಡಿಸೆಂಬರ್ 18ರವರೆಗೆ ನಡೆಯಲಿದೆ. ಸ್ಪರ್ಧೆಯ ಮೊದಲ ಸುತ್ತಿನ ಪಂದ್ಯಗಳು ಲಖನೌ, ಹೈದರಾಬಾದ್, ಅಹಮದಾಬಾದ್ ಮತ್ತು ಕೋಲ್ಕತ್ತದಲ್ಲಿ ನಡೆಯ ಲಿದ್ದು, ನಾಕೌಟ್ ಪಂದ್ಯಗಳು ಇಂದೋರ್‌ನಲ್ಲಿ ನಡೆಯಲಿವೆ.

ಪ.ಬಂಗಾಳ ತಂಡದಲ್ಲಿ ಶಮಿ, ಆಕಾಶ್ ದೀಪ್



ಕೋಲ್ಕತ್ತ: ಸಯ್ಯದ್‌ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಗೆ ಬಂಗಾಳ ತಂಡ ವನ್ನು ಪ್ರಕಟಿಸಿದ್ದು, ಭಾರತ ತಂಡದ ಪ್ರಮುಖ ವೇಗದ ಬೌಲರ್‌ಗಳಾದ ಮೊಹಮ್ಮದ್ ಶಮಿ, ಆಕಾಶ್ ದೀಪ್ ಅವರು ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಬಂಗಾಳ ತಂಡವು 17 ಆಟಗಾರರ ತಂಡವನ್ನು ಪ್ರಕಟಿಸಿದ್ದು, ಅಭಿಮನ್ಯು ಈಶ್ವರನ್ ತಂಡವನ್ನು ಮುನ್ನಡೆಸಲಿದ್ದಾರೆ. ಗಾಯದಿಂದ ಚೇತರಿಸಿಕೊಂಡ ಬಳಿಕ ರಣಜಿ ಟೂರ್ನಿಯಲ್ಲಿ ಭಾಗವಹಿಸುತ್ತಿರುವ ಮೊಹಮ್ಮದ್ ಶಮಿ ಮೊದಲ 4 ಪಂದ್ಯಗಳಲ್ಲಿ 20 ವಿಕೆಟ್ ಪಡೆದು ಮಿಂಚಿದ್ದಾರೆ. ಉತ್ತರಾಖಂಡ ಮತ್ತು ಗುಜರಾತ್‌ವಿರುದ್ಧದ ಪಂದ್ಯಗಳಲ್ಲೇ ಶಮಿ 15 ವಿಕೆಟ್‌ಕಬಳಿಸಿದ್ದರು. ಸಯ್ಯದ್‌ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಮಿಂಚುವ ಮೂಲಕ ಮತ್ತೆ ಭಾರತ ತಂಡದಲ್ಲಿ ಸ್ಥಾನ ಪಡೆಯುವ ನಿರೀಕ್ಷೆಯಲ್ಲಿದ್ದಾರೆ. ಅಭಿಷೇಕ್ ಪೋರೆಲ್, ಶಹಬಾಜ್ ಅಹಮದ್ ಕೂಡ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಗುವಾಹಟಿ ಟೆಸ್ಟ್: ದಕ್ಷಿಣ ಆಫ್ರಿಕಾ 247ಕ್ಕೆ 6 | ಕುಲ್‌ದೀಪ್‌ಗೆ 3 ವಿಕೆಟ್

ಮೊದಲ ದಿನ ಸಮಬಲದ ಹೋರಾಟ

ಗುವಾಹಟಿ: ಭಾರತ ಹಾಗೂ ದಕ್ಷಿಣ ಆಫ್ರಿಕಾ ನಡುವಣ ಎರಡನೇ ಟೆಸ್ಟ್ ಮೊದಲ ದಿನ ಉಭಯ ತಂಡದ ಆಟಗಾರರು ಸಮಬಲದ ಪ್ರದರ್ಶನ ನೀಡಿದ್ದಾರೆ. ಭಾರತದ ಪರ ಬೌಲರ್‌ಗಳು 6 ವಿಕೆಟ್ ಕಬಳಿಸಿದರೆ, ದಕ್ಷಿಣ ಆಫ್ರಿಕಾ ಮೊದಲ ದಿನ 247 ರನ್ ಕಲೆ ಹಾಕಿ ದಿಟ್ಟ ಉತ್ತರ ನೀಡಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ಉತ್ತಮ ಆರಂಭವನ್ನು ಕಂಡಿತು. ಸ್ಟಾರ್ ಆರಂಭಿಕ ಜೋಡಿ ಏಡೆನ್ ಮಾರ್ಕ್ರಮ್ ಹಾಗೂ ರಿಯಾನ್ ರಿಕಲ್ಟನ್ ಭಾರತೀಯ ಬೌಲರ್‌ಗಳ ದಾಳಿ ಯನ್ನು ಸಮರ್ಥವಾಗಿ ಎದುರಿಸಿದರು. ಈ ಜೋಡಿ 26.5 ಓವರ್‌ಗಳಲ್ಲಿ ಮೊದಲ ವಿಕೆಟ್‌ಗೆ 82 ರನ್ ಸೇರಿಸಿದ್ದಾಗ ಮಾರ್ಕ್ರಮ್ ಅವರಿಗೆ ಬುಮ್ರಾ ಪೆವಿಲಿ ಯನ್ ಹಾದಿ ತೋರಿಸಿದರು. ಮಾರ್ಕ್ರಮ್ 5 ಬೌಂಡರಿ ಸಹಾಯದಿಂದ 38 ರನ್ ಬಾರಿಸಿದರು.

ಮಾರ್ಕ್ರಮ್ ಔಟ್ ಆಗುತ್ತಿದ್ದಂತೆ ರಿಯಾನ್ ರಿಕಲ್ಟನ್ ಕುಲ್‌ದೀಪ್ ಯಾದವ್ ಎಸೆತದಲ್ಲಿ ರಿಷಭ್ ಪಂತ್‌ಗೆ ಕ್ಯಾಚ್ ನೀಡಿದರು. ಸತತ 2 ವಿಕೆಟ್ ಕಳೆದುಕೊಂಡು ಒತ್ತಡದಲ್ಲಿದ್ದ ದಕ್ಷಿಣ ಆಫ್ರಿಕಾಕ್ಕೆ ನಾಯಕ ತೆಂಬು ಬವುಮಾ ಹಾಗೂ ಟ್ರಿಸ್ಟನ್ ಸ್ಟಬ್ಸ್ ಜೋಡಿ ಆಸರೆಯಾದರು. ಈ ಜೋಡಿ ಮೂರನೇ ವಿಕೆಟ್‌ಗೆ 182 ಎಸೆತಗಳನ್ನು ಎದುರಿಸಿ 84 ರನ್ ಕಲೆ ಹಾಕಿತು.

ಮೂರನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಿದ ಟ್ರಿಸ್ಟನ್ ಸ್ಟಬ್ಸ್ 112 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಸಹಾಯ ದಿಂದ 49 ರನ್ ಬಾರಿಸಿದ್ದಾಗ, ಕುಲ್‌ದೀಪ್ ಯಾದವ್ ಎಸೆತದಲ್ಲಿ ಕೆ.ಎಲ್ ರಾಹುಲ್ ಅವರಿಗೆ ಕ್ಯಾಚ್ ನೀಡಿ ದರು. ತೆಂಬು ಬವುಮಾ ಸಹ 41 ರನ್ ಬಾರಿಸಿದ್ದಾಗ ರವೀಂದ್ರ ಜಡೇಜಾ ಬೌಲಿಂಗ್‌ನಲ್ಲಿ ಯಶಸ್ವಿ ಜೈಸ್ವಾಲ್ ಹಿಡಿದ ಉತ್ತಮ ಕ್ಯಾಚ್ ಪಡೆದರು. ವಿಯಾನ್ ಮುಲ್ಡರ್ ಸಹ ಕುಲ್‌ದೀಪ್ ಎಸೆತದಲ್ಲಿ ಪೆವಿಲಿಯನ್ ಸೇರಿದರು.

ಕುಲ್‌ದೀಪ್‌ಗೆ 3 ವಿಕೆಟ್: 201 ರನ್‌ಗೆ 5 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ತಂಡಕ್ಕೆ ಸೆನುರಾನ್ ಮುತ್ತುಸಾಮಿ ಹಾಗೂ ಟೋನಿ ಡಿ ಜೋರ್ಜಿ ಜೋಡಿ ನೆರವಾಯಿತು. ಈ ಜೊಡಿ 6ನೇ ವಿಕೆಟ್‌ಗೆ 83 ಎಸೆತಗಳಲ್ಲಿ 45 ರನ್ ಸೇರಿಸಿತು. ಟೋನಿ ಡಿ ಜೋರ್ಜಿ 28 ರನ್ ಬಾರಿಸಿದ್ದಾಗ ಸಿರಾಜ್ ಇವರ ವಿಕೆಟ್ ಪಡೆದರು. 81.5 ಓವರ್‌ನಲ್ಲಿ ಮಂದ ಬೆಳಕಿನ ಕಾರಣ ಪಂದ್ಯವನ್ನು ಸ್ಥಗಿತಗೊಳಿಸಲಾಯಿತು. ಈ ವೇಳೆ ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗೆ 247 ರನ್ ಸೇರಿಸಿದೆ. ಭಾರತದ ಪರ ಕುಲ್‌ದೀಪ್ ಯಾದವ್ 3, ರವೀಂದ್ರ ಜಡೇಜಾ, ಸಿರಾಜ್, ಬುಮ್ರಾ ತಲಾ ಒಂದು ವಿಕೆಟ್ ಪಡೆದರು.

ಸ್ಮರಣೀಯ ಟೆಸ್ಟ್: ಗುವಾಹಟಿ ಟೆಸ್ಟ್ ಭಾರತದ ಪಾಲಿಗೆ 300ನೇ ಟೆಸ್ಟ್ ಪಂದ್ಯ. ಈ ಸಾಧನೆ ಮಾಡಿದ ವಿಶ್ವದ ಮೂರನೇ ರಾಷ್ಟ್ರ ಎಂಬ ಹಿರಿಮೆಯೂ ಟೀಮ್ ಇಂಡಿಯಾಕ್ಕೆ ಸಿಕ್ಕಿದೆ.

ರಿಯಾನ್ ರಿಕಲ್ಟನ್ ವಿಕೆಟ್ ಪಡೆದ ಕುಲ್‌ದೀಪ್ ಯಾದವ್ ಸಂಭ್ರಮ.

ರಿಷಭ್ ಪಂತ್‌ಗೆ ನಾಯಕತ್ವ ಗೌರವ

ಎರಡನೇ ಟೆಸ್ಟ್ ಪಂದ್ಯದಲ್ಲಿ ನಾಯಕತ್ವ ವಹಿಸಿದ ರಿಷಭ್ ಪಂತ್ 93 ವರ್ಷಗಳ ಭಾರತದ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ತಂಡವನ್ನು ಮುನ್ನಡೆಸುತ್ತಿರುವ 2ನೇ ವಿಕೆಟ್ ಕೀಪರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ಎಂ.ಎಸ್ ಧೋನಿ ದೀರ್ಘಾವಧಿಗೆ ಟೆಸ್ಟ್ ನಾಯಕತ್ವ ವಹಿಸಿದ್ದರು. ರಿಷಭ್ ಪಂತ್ ದಕ್ಷಿಣ ಆಫ್ರಿಕಾ ವಿರುದ್ಧವೇ 2022ರಲ್ಲಿ ಟಿ20 ಕ್ರಿಕೆಟ್ ನಲ್ಲಿ ತಂಡವನ್ನು ಮುನ್ನಡೆಸಿದ್ದರು. ಈ ವೇಳೆ ತಂಡ 2 ಪಂದ್ಯಗಳಲ್ಲಿ ಜಯ, 2 ಪಂದ್ಯಗಳಲ್ಲಿ ಸೋಲು ಕಂಡಿತ್ತು.

ಢಾಕಾದಲ್ಲಿ ಸೋಲು: ನಿಲ್ಲದ ಚರ್ಚೆ

ಢಾಕಾ: ಏಷ್ಯಾ ಕಪ್ ರೈಸಿಂಗ್ ಸ್ಟಾರ್ಸ್ 2025 ಸೆಮಿಫೈನಲ್ ಪಂದ್ಯದಲ್ಲಿ ಬಾಂಗ್ಲಾದೇಶದ ವಿರುದ್ಧ ಭಾರತದ ಸೋಲು ಸಾಮಾಜಿಕ ಮಾಧ್ಯಮದದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ಸೂಪರ್ ಓವರ್ ನಲ್ಲಿ ವೈಭವ್ ಸೂರ್ಯವಂಶಿಯನ್ನು ಬ್ಯಾಟಿಂಗ್‌ಗೆ ಇಳಿಸದ ನಾಯಕ ಜಿತೇಶ್ ಶರ್ಮಾ ಅವರ ನಿರ್ಧಾರವನ್ನು ಕ್ರಿಕೆಟ್ ಅಭಿಮಾನಿಗಳು ಟೀಕಿಸುತ್ತಿದ್ದಾರೆ.

ಆದರೆ ಜಿತೇಶ್ ತಮ್ಮ ನಿರ್ಧಾರವನ್ನು ಸಮರ್ಥಿಸಿ ಕೊಂಡಿದ್ದು, ತಂಡದಲ್ಲಿ, ವೈಭವ್ ಮತ್ತು ಪ್ರಿಯಾಂಶ್ ಪವರ್ ಪ್ಲೇನಲ್ಲಿ ನಿಪುಣರು. ಆದರೆ, ಡೆತ್ ಓವರ್ ಗಳಲ್ಲಿ ಅಶುತೋಷ್ ಮತ್ತು ರಮಣದೀಪ್ ಉತ್ತಮ ಪ್ರದರ್ಶನ ನೀಡುತ್ತಾರೆ. ಆದ್ದರಿಂದ ಸೂಪರ್ ಓವರ್ ನಲ್ಲಿ ಯಾರು ಆಡಬೇಕೆಂಬುದು ತಂಡದ ನಿರ್ಧಾರ ವಾಗಿತ್ತು. ನಾನು ಅಂತಿಮ ನಿರ್ಧಾರ ತೆಗೆದುಕೊಂಡೆ' ಎಂದು ಪಂದ್ಯದ ನಂತರದ ಪ್ರಸ್ತುತಿ ಸಮಾರಂಭದಲ್ಲಿ ಜಿತೇಶ್ ಹೇಳಿದರು.

ಶುಕ್ರವಾರ ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ 20 ಓವರ್‌ಗಳಲ್ಲಿ ಆರು ವಿಕೆಟ್ ನಷ್ಟಕ್ಕೆ 194 ರನ್ ಗಳಿಸಿತ್ತು. ಭಾರತವೂ ಅಷ್ಟೇ ರನ್ ಗಳಿಸಿದಾಗ ಸೂಪರ್ ಓವರ್ ಅನಿವಾರ್ಯವಾಯಿತು. ಭಾರತ ಸೂಪರ್ ಓವರ್‌ನಲ್ಲಿ ಜಿತೇಶ್, ಅಶುತೋಷ್ ಶರ್ಮಾ ಮತ್ತು ರಮಣದೀಪ್ ಸಿಂಗ್ ಅವರನ್ನು ಕಣಕ್ಕಿಳಿಸಲು ನಿರ್ಧರಿಸಿತು. ಈ ನಡೆ ತಿರುಗುಬಾಣವಾಯಿತು. ಜಿತೇಶ್ ಮತ್ತು ಅಶುತೋಷ್ ಇಬ್ಬರೂ ಸೂಪರ್ ಓವರ್‌ನಲ್ಲಿ ವೇಗಿ ರಿಪನ್ ಮಂಡೋಲ್ ಅವರ ಎಸೆತದಲ್ಲಿ ಔಟ್ ಆದ ಕಾರಣ ಭಾರತ ಕೇವಲ ಒಂದು ರನ್ ಗಳಿಸಲಷ್ಟೇ ಶಕ್ತವಾಯಿತು. ಬಾಂಗ್ಲಾ ಮೊದಲ ಎಸೆತದಲ್ಲೇ ಯಾಸಿರ್ ಅಲಿಯನ್ನು ಕಳೆದುಕೊಂಡರೂ, ಲೆಗ್ ಸ್ಪಿನ್ನರ್ ಸುಯಾಶ್ ಶರ್ಮಾ ಎಸೆದ ಎರಡನೇ ಎಸೆತ ವೈಡ್ ಆದ ಕಾರಣ ಬಾಂಗ್ಲಾ ತಂಡವು ಫೈನಲ್ ಪ್ರವೇಶಕ್ಕೆ ಬೇಕಿದ್ದ ಒಂದು ರನ್ ಗಳಿಸಿತು. ಈ ಸರಣಿಯಲ್ಲಿ ವೈಭವ್ ಸೂರ್ಯವಂಶಿ ಅದ್ಭುತ ಪ್ರದರ್ಶನ ತೋರಿದ್ದು, ಸೆಮಿಫೈನಲ್ ಪಂದ್ಯದಲ್ಲಿ 15 ಎಸೆತಗಳಲ್ಲಿ 38 ರನ್ ಗಳಿಸಿದ್ದರು.

ಜಿತೇಶ್

ವೇಗದ ಶತಕ ಬಾರಿಸಿ ಮಿಂಚಿದ ಟ್ರಾವಿಸ್ ಹೆಡ್ ಎರಡೇ ದಿನದಲ್ಲಿ ಮೊದಲ ಟೆಸ್ಟ್ ಮುಕ್ತಾಯ

ಆಸೀಸ್‌ಗೆ 8 ವಿಕೆಟ್ ಜಯ

ಪರ್ತ್: ಟ್ರಾವಿಸ್ ಹೆಡ್ ಅವರ ಅಮೋಘ ಶತಕದ (123 ರನ್, 83 ಎಸೆತ) ನೆರವಿನಿಂದ ಆ್ಯಶಸ್ ಸರಣಿಯ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ಇಂಗ್ಲೆಂಡ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಈ ಮೂಲಕ 5 ಪಂದ್ಯಗಳ ಹೈವೋಲ್ಟೇಜ್ ಟೆಸ್ಟ್ ಸರಣಿಯಲ್ಲಿ ಆಸೀಸ್ 1-0 ಮುನ್ನಡೆ ಸಾಧಿಸಿದೆ.

ಮೊದಲ ಪಂದ್ಯ ಇನ್ನೂ ಬಾಕಿ ಉಳಿದಿರು ವಂತೆಯೇ ಕೇವಲ 144.1 ಓವರ್‌ಗಳಲ್ಲಿ ಮುಕ್ತಾಯ ಕಂಡಿದೆ. ಆಸೀಸ್ ಶನಿವಾರ ಆಟ ಶುರುವಾದಾಗ 9 ವಿಕೆಟ್‌ಗೆ 123 ರನ್ ನೊಂದಿಗೆ ಆಟ ಮುಂದುವರಿಸಿ 132ಕ್ಕೆ ಆಲೌಟ್ ಆಗಿತ್ತು. 40 ರನ್‌ಗಳ ಮುನ್ನಡೆ ಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ತಂಡದ ಬ್ಯಾಟರ್‌ಗಳು ಮತ್ತೊಮ್ಮೆ ಉತ್ತಮ ಮೊತ್ತ ಕಲೆ ಹಾಕುವಲ್ಲಿ ವಿಫಲ ರಾದರು. ಮೊದಲ ಇನಿಂಗ್ಸ್‌ನಂತೆ ಎರಡನೇ ಇನಿಂಗ್ಸ್‌ನಲ್ಲೂ ಇಂಗ್ಲೆಂಡ್ ತಂಡದ ಜಾಕ್ ಕ್ರಾಲಿ ನಿರಾಸೆ ಅನುಭವಿಸಿದರು. ಎರಡನೇ ವಿಕೆಟ್‌ಗೆ ಬೆನ್ ಡಕೆಟ್ (28) ಹಾಗೂ ಓಲಿ ಪೋಪ್ (33) ಜೋಡಿ 65 ರನ್ ಜೊತೆ ಯಾಟದ ಕಾಣಿಕೆ ನೀಡಿತು. ಈ ಜೋಡಿ ಯನ್ನು ಬೇರ್ಪಡಿಸುವಲ್ಲಿ ಸ್ಕಾಟ್ ಬೋಲ್ಯಾಂಡ್ ಸಫಲರಾದರು.

ಇಂಗ್ಲೆಂಡ್ ತಂಡದ ಬ್ಯಾಟಿಂಗ್ ಬೆನ್ನೆಲು ಬಾದ ಜೋ ರೂಟ್, ಎರಡನೇ ಇನಿಂಗ್ಸ್ ನಲ್ಲೂ ಒಂದಂಕಿಯಲ್ಲಿ ಆಟ ಮುಗಿಸಿದರು. ಇವರ ಬಳಿಕ ಹ್ಯಾರಿ ಬ್ರೂಕ್, ಬೆನ್ ಸ್ಟೋಕ್ಸ್ ಸಹ ವೈಫಲ್ಯ ಅನುಭವಿಸಿದರು. ಕೆಳ ಕ್ರಮಾಂಕದಲ್ಲಿ ಗಸ್ ಅಟ್ಕಿನ್ಸನ್ 2 ಬೌಂಡರಿ, 2 ಸಿಕ್ಸರ್ ಸಹಾಯದಿಂದ 37 ರನ್ ಸಿಡಿಸಿದರು. ವಿಕೆಟ್ ಕೀಪರ್ ಬ್ಯಾಟರ್ ಜೇಮಿ ಸ್ಮಿತ್ 15 ರನ್ ಕೊಂಚ ಆಸೀಸ್ ಬೌಲರ್‌ಗಳನ್ನು ಕಾಡಿ ದರು. ಅಂತಿಮವಾಗಿ ಇಂಗ್ಲೆಂಡ್ 34.4 ಓವರ್‌ಗಳಲ್ಲಿ 164 ರನ್ ಸಿಡಿಸಿ ಆಲೌಟ್ ಆಯಿತು. ಆಸ್ಟ್ರೇಲಿಯಾದ ಪರ ಮಿಚೆಲ್ ಸ್ಟಾರ್ಕ್ ಮತ್ತೊಮ್ಮೆ ಬಿಗುವಿನ ದಾಳಿ ನಡೆಸಿ 3 ವಿಕೆಟ್ ಕಬಳಿಸಿದರು. ಬ್ರೆಂಡನ್ ಡಾಗೆಟ್ ಸಹ ಮೂರು ವಿಕೆಟ್ ತಮ್ಮದಾಗಿಸಿಕೊಂಡರು. ಆದರೆ ಸ್ಕಾಟ್ ಬೋಲ್ಯಾಂಡ್ 4 ವಿಕೆಟ್ ಕಬಳಿಸಿ ಮಿಂಚಿದರು.

ಟ್ರಾವಿಸ್ ಹೆಡ್ ಶತಕ ವೈಭವ: 205 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡಕ್ಕೆ ಆರಂಭಿಕನಾಗಿ ಕಣಕ್ಕಿಳಿದ ಟ್ರಾವಿಸ್ ಹೆಡ್ ಭರ್ಜರಿ ಆರಂಭ ಒದಗಿಸಿದರು. ಮೊದಲ ವಿಕೆಟ್‌ಗೆ ಜೇಕ್ ವೆದರಾಲ್ಡ್ (23) ಹಾಗೂ ಟ್ರಾವಿಸ್ ಹೆಡ್ 11.3 ಓವರ್‌ಗಳಲ್ಲಿ 75 ರನ್ ಸೇರಿಸಿತು. ಟ್ರಾವಿಸ್ ಹೆಡ್ ಏಕದಿನ ಶೈಲಿ ಯಲ್ಲಿ ಬ್ಯಾಟಿಂಗ್ ಮಾಡಿ ಅರ್ಭಟಿಸಿದರು.

ಟ್ರಾವಿಸ್

ಟ್ರಾವಿಸ್ ದಾಖಲೆ ಶತಕ

ಆಸ್ಟ್ರೇಲಿಯಾದ ಆರಂಭಿಕ ಆಟಗಾರ ಟ್ರಾವಿಸ್ ಕೇವಲ 69 ಎಸೆತಗಳಲ್ಲಿ ಶತಕ ಸಿಡಿಸುವ ಮೂಲಕ ಆ್ಯಶಸ್ ಸರಣಿಯಲ್ಲಿ ಎರಡನೇ ಅತಿ ವೇಗದ ಶತಕ ಸಿಡಿಸಿದರು. 2006ರಲ್ಲಿ ಆ್ಯಡಂ ಗಿಲ್ ಕ್ರಿಸ್ಟ್ ಕೇವಲ 57 ಎಸೆತದಲ್ಲಿ ಶತಕ ಸಿಡಿಸಿದ್ದರು. ಇದು ಆಸೀಸ್ ಪರ ಟೆಸ್ಟ್ ಪಂದ್ಯದಲ್ಲಿ ಮೂರನೇ ಅತಿ ವೇಗದ ಶತಕ. ಟೆಸ್ಟ್ ಇತಿಹಾಸದಲ್ಲಿ ದಾಖಲಾದ 8ನೇ ವೇಗದ ಶತಕ ಇದಾಗಿದೆ. ಆಸೀಸ್ ವಿರುದ್ಧ ವಿರುದ್ಧ ಬ್ರೆಂಡನ್ ಮೆಕಲಮ್ 54 ಎಸೆತದಲ್ಲಿ ಶತಕ ಸಿಡಿಸಿದ್ದು, ಅತಿವೇಗದ ಶತಕ ವಾಗಿದೆ. ಈ ದಶಕದಲ್ಲಿ ಟ್ರಾವಿಸ್ ಪಾಲಿಗಿದು 14ನೇ ಶತಕ.

ಮಿಚೆಲ್ ಸ್ಟಾರ್ಕ್ ಪಂದ್ಯ ಶ್ರೇಷ್ಠ

2 ಪಂದ್ಯಗಳಲ್ಲಿ ಮಾರಕ ದಾಳಿ ನಡೆಸಿ ಆಂಗ್ಲರ ಗೆಲುವಿಗೆ ತಡೆಯಾದ ಮಿಚೆಲ್ ಸ್ಟಾರ್ಕ್ 10 ವಿಕೆಟ್‌ಗಳನ್ನು ಪಡೆಯುವ ಮೂಲಕ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನ ರಾದರು. ಮೊದಲ ಇನ್ನಿಂಗ್ಸ್‌ನಲ್ಲಿ 12.5 ಓವರ್‌ಗಳಲ್ಲಿ 58 ರನ್ ಬಿಟ್ಟುಕೊಟ್ಟು 7 ವಿಕೆಟ್ ಕಿತ್ತಿದ್ದ ಸ್ಟಾರ್ಕ್, 2ನೇ ಇನ್ನಿಂಗ್ಸ್‌ನಲ್ಲಿ 12 ಓವರ್ ಗಳಲ್ಲಿ 55 ರನ್ ಕೊಟ್ಟು 3 ವಿಕೆಟ್ ಪಡೆದರು.

ವಿಟಾಕೀಸ್

ಗಣಿ ಎಂಟ್ರಿಗೆ ಡೇಟ್ ಫಿಕ್ಸ್

ನಿರ್ದೇಶಕ ಅಭಿಷೇಕ್ ಶೆಟ್ಟಿ ಈ ಹಿಂದೆ ನಮ್ ಗಣಿ ಬಿಕಾಂ ಪಾಸ್ ಚಿತ್ರವನ್ನು ನಿರ್ದೇಶನ ಮಾಡಿ ಪ್ರೇಕ್ಷಕರ ಮನಸೂರೆ ಗೊಂಡಿದ್ದರು. ಈ ಚಿತ್ರದ ಮೂಲಕ ನಟನಾಗಿಯೂ ಗುರುತಿಸಿಕೊಂಡರು. ವಿಭಿನ್ನ ಶೀರ್ಷಿಕೆಯ ಗಣಿ ಸಿನಿಪ್ರಿಯರ ಮನಗೆದ್ದಿತ್ತು. ಈಗ ಅದೇ ಸೀಕ್ವೆಲ್ ಆಧರಿಸಿ, ನಮ್ ಗಣಿ ಬಿಕಾಂ ಪಾಸ್ 2 ಚಿತ್ರ ನಿರ್ಮಾಣವಾಗಿದೆ. ಅಭಿಷೇಕ್ ಶೆಟ್ಟಿ ಅವರೇ ಈ ಚಿತ್ರವನ್ನು ನಿರ್ದೇಶನ ಮಾಡಿದ್ದು, ನಾಯಕನಾಗಿಯೂ ನಟಿಸಿದ್ದಾರೆ. ಆರು ವರ್ಷದ ಬಳಿಕ ಮತ್ತೆ ಗಣಿಯಾಗಿ ಮನಗೆಲ್ಲಲು ಸಿದ್ಧವಾಗಿದ್ದಾರೆ. ಮತ್ತೆ ಮೋಡಿ ಮಾಡಲು ಬರುತ್ತಿರುವ ಗಣಿ ಪೋಸ್ಟರ್ ಹಾಗೂ ಹಾಡಿನ ಮೂಲಕವೇ ಮನಗೆದ್ದಿದೆ. ಗಣಿ ಯಾವಾಗ ತೆರೆಗೆ ಬರಲಿದ್ದಾನೆ ಎಂದು ಸಿನಿಪ್ರಿಯರು ಕಾತರರಾಗಿ ದ್ದರು. ಈ ನಡುವೆಯೇ ಚಿತ್ರತಂಡ ಸಿಹಿ ಸುದ್ದಿ ನೀಡಿದೆ. ಗಣಿ.ಬಿಕಾಂ ಪಾಸ್ ಫೆಬ್ರವರಿ 12ರಂದು ವಿಶ್ವಾದ್ಯಂತ ತೆರೆಗೆ ಬರಲಿದೆ. ಅಪ್ಪಟ ಕನ್ನಡ ಸಿನಿಮಾವಾಗಿರುವ ಗಣಿ ಬಿಕಾಂ ಪಾಸ್ ಪ್ಯಾನ್ ಇಂಡಿಯಾ ಸಿನಿಮಾವಾಗಿ ಯಶಸ್ಸು ಪಡೆಯುವ ಎಲ್ಲಾ ಲಕ್ಷಣಗಳು ಇವೆ. ಶೀರ್ಷಿಕೆಯಲ್ಲಿಯೇ ಮನಗೆದ್ದಿರುವ ಗಣಿ ಬಿಕಾಂ ಪಾಸ್ ಚಿತ್ರದಲ್ಲಿ ನವಿರಾದ ಪ್ರೇಮ ಕಥೆಯ ಜತೆಗೆ ಸೆಂಟಿಮೆಂಟ್ ಸ್ಟೋರಿಯೂ ಬೆರೆತಿದೆ. ಅದನ್ನು ಇಂದಿನ ಟ್ರೆಂಡ್‌ಗೆ ಹೊಂದುವಂತೆ ನಿರ್ದೇಶಕರು ಕಟ್ಟಿಕೊಟ್ಟಿ ದ್ದಾರೆ. ಅದ್ದೂರಿಯಾಗಿ ಮೂಡಿಬಂದಿರುವ ಈ ಚಿತ್ರವನ್ನು ಬಿ.ಎಸ್.ಪ್ರಶಾಂತ್ ಶೆಟ್ಟಿ ಹಾಗೂ ಪ್ರಶಾಂತ್ ರೆಡ್ಡಿ ಒಟ್ಟಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ. ಸುಮಂತ್ ಆಚಾರ್ಯ ಛಾಯಾಗ್ರಹಣ, ವಿಜೇತ್ ಚಂದ್ರ ಸಂಕಲನ, ಆನಂದ್ ರಾಜವಿಕ್ರಮ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಮಕ್ಕಳ ರಕ್ಷಣೆಗೆ ರುದ್ರ ಅವತಾರ

ಹಿರಿಯ ನಟ ಶಶಿಕುಮಾರ್ ಹಾಗೂ ತಾರಾ ಹಲವು ಸಿನಿಮಾಗಳಲ್ಲಿ ಒಟ್ಟಾಗಿ ನಟಿಸಿದ್ದಾರೆ, ಪ್ರೇಕ್ಷಕರ ಮನಗೆದ್ದಿದ್ದಾರೆ. ಈಗ ಬಹು ವರ್ಷಗಳ ಬಳಿಕ ಮತ್ತೆ ತೆರೆಯಲ್ಲಿ ಒಟ್ಟಿಗೆ ನಟಿಸುತ್ತಿದ್ದಾರೆ. ಸವಾದ್ ಮಂಗಳೂರು ನಿರ್ದೇಶನದ ರುದ್ರ ಅವತಾರ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿ ಸುತ್ತಿದ್ದಾರೆ. ಈ ಚಿತ್ರದ ಪ್ರಮುಖ ಪಾತ್ರಗಳನ್ನು ಪರಿಚಯಿಸುವ ಟೀಸರ್ ಬಿಡುಗಡೆಯಾಗಿದೆ. ವಿಶೇಷವಾಗಿ ತಯಾರಿಸ ಲಾದ ಈ ಮೋಷನ್ ಪೋಸ್ಟರ್‌ನಲ್ಲಿ ಚಿತ್ರದ ಎಲ್ಲ ಕಲಾವಿದರ ಪಾತ್ರಗಳನ್ನು ಪರಿಚಯಸಲಾಗಿದೆ. ಶಶಿ ಕುಮಾರ್ ಹಾಗೂ ತಾರಾ ನಟಿಸುತ್ತಿರುವ ಇಪ್ಪತ್ತಾರನೇ ಚಿತ್ರವಿದು ಎಂಬುದು ಮತ್ತೊಂದು ವಿಶೇಷ.

ಸಮಾಜಕ್ಕೆ ಒಳ್ಳೆಯ ಸಂದೇಶ ಒಳ್ಳೆಯ ನೀಡುವ ಸಿನಿಮಾ ನಿರ್ಮಾಣ ಮಾಡಬೇಕು ಎಂಬುದು ನನ್ನ ಆಸೆಯಾಗಿತ್ತು. ಅಂದುಕೊಂಡಂತೆ ಈ ಚಿತ್ರದ ಮೂಲಕ ಸಮಾಜಕ್ಕೆ ಒಳ್ಳೆಯ ಮೆಸೇಜ್ ಇದೆ. ಹಾಗಾಗಿಯೇ ಚಿತ್ರ ನಿರ್ಮಾಣಕ್ಕೆ ಮುಂದಾಗಿದ್ದೇನೆ. ನಿರ್ದೇಶಕರು ಹೇಳಿದ ಈ ಕಥೆ ನನಗೆ ತುಂಬಾ ಇಷ್ಟವಾಯಿತು. ಇದೊಂದೇ ಸಿನಿಮಾ ಅಲ್ಲ, ಮುಂದೆಯೂ ಚಿತ್ರಗಳನ್ನು ನಿರ್ಮಾಣ ಮಾಡುವ ಪ್ಲಾನ್ ಇದೆ, ನಾನೂ ಸಹ ಚಿತ್ರದಲ್ಲಿ ಒಂದು ಪಾತ್ರ ನಿರ್ವಹಿಸುತ್ತಿದ್ದೇನೆ ಎಂದು ನಿರ್ಮಾಪಕ ಪ್ರೇಮಾ ನಂದ್ ಹೇಳಿದರು.

ರುದ್ರ ಅವತಾರ ಶಿವನ ಮತ್ತೊಂದು ರೂಪ. ಮಧ್ಯಮ ವರ್ಗದ ಜನತೆ ತಮ್ಮ ಮಕ್ಕಳ ರಕ್ಷಣೆ ಗೋಸ್ಕರ ಯಾವ ರೀತಿ ಹೋರಾಡುತ್ತಾರೆ, ಹೇಗೆ ರುದ್ರ ಅವತಾರ ತಾಳುತ್ತಾರೆ ಎಂಬುದನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇನೆ. ಮಕ್ಕಳ ಕನಸುಗಳನ್ನು ಈಡೇರಿಸುವ ಸಲುವಾಗಿ, ಪೋಷಕರು ತಮ್ಮ ಕನಸು, ಆಸೆಗಳನ್ನು ಕಟ್ಟಿಟ್ಟು ಜೀವನ ನಡೆಸುತ್ತಾರೆ. ಅದೇ ತಮ್ಮ ಮಕ್ಕಳಗೆ ತೊಂದರೆ ಎದುರಾದಾಗ, ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಯಾವರೀತಿ ಹೋರಾಡುತ್ತಾರೆ ಎನ್ನುವುದೇ ನಮ್ಮ ಚಿತ್ರದ ಕಥಾಹಂದರ ಎಂದು ನಿರ್ದೇಶಕ ಸವಾದ್ ಮಂಗಳೂರು ತಿಳಿಸಿದರು.

ಇದು ನಾಯಕ ಅಥವಾ ನಾಯಕಿಗೆ ಸೀಮಿತವಾದ ಕಥೆಯಲ್ಲ, ಇಲ್ಲಿ ಕಥೆಯೇ ನಾಯಕ. ಈ ಚಿತ್ರದಲ್ಲಿ ನಾನೊಬ್ಬ ಆಟೋ ಡ್ರೈವರ್ ಪಾತ್ರ ನಿರ್ವಹಿಸುತ್ತಿದ್ದು, ಹೆಣ್ಣುಮಗಳ ತಂದೆಯಾಗಿ ನಟಿಸುತ್ತಿದ್ದೇನೆ. ಮಗಳಿ ಗಾಗಿ ಹೋರಾಡುವ ತಂದೆಯ ಪಾತ್ರ ನನ್ನದು. ಚಿತ್ರದಲ್ಲಿ ಹೃದಯ ಸ್ಪರ್ಶಿ ಕಥೆ ಅಡಕವಾಗಿದೆ. ಕಥೆ ಕೇಳಿದಾಗಲೇ ನನಗೆ ರೋಮಾಂಚನವಾಯಿತು ಎಂದು ಶಶಿಕುಮಾರ್ ಸಂತಸದಿಂದ ನುಡಿದರು.

ಈ ಚಿತ್ರದಲ್ಲಿ ಎಲ್ಲಾ ಪಾತ್ರಗಳಿಗೂ ಪ್ರಾಮುಖ್ಯತೆ ಇದೆ. ತುಂಬಾ ವರ್ಷಗಳ ನಂತರ ಶಶಿಕುಮಾರ್, ಸಂಗೀತಾ ಜತೆ ಕೆಲಸ ಮಾಡುತ್ತಿದ್ದೇನೆ ಎಂದು ತಾರಾ ಸಂತಸ ವ್ಯಕ್ತಪಡಿಸಿದರು. ಸಂಗೀತಾ, ಯಶ್ ಶೆಟ್ಟಿ, ಅಂಕಿತಾ ಜಯರಾಮ್, ಸಾಧನಾ ಮುಂತಾದವರು ತಾರಾಗಣದಲ್ಲಿದ್ದಾರೆ. ಅಲನ್ ಭರತ್ ಅವರ ಛಾಯಾ ಗ್ರಹಣ, ಪಾಲ್ ಅಲೆಕ್ಸ್ ಸಂಗೀತ ಸಂಯೋ ಜನೆ, ಶ್ರೀಕಾಂತ್ ಸಂಕಲನ ಈ ಚಿತ್ರಕ್ಕಿದೆ. ಪ್ರೇಮ್ ಜಿ ಪ್ರೊಡಕ್ಷನ್ಸ್ ಮೂಲಕ ಡಾ.ಪ್ರೇಮಾನಂದ್.ವಿ.ಗವಸ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

ಅಖಂಡ 2 ಟ್ರೇಲರ್ ರಿಲೀಸ್

ನಂದಮೂರಿ ಬಾಲಕೃಷ್ಣ ನಟನೆಯ ಬಹು ನಿರೀಕ್ಷಿತ ಅಖಂಡ 2 ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಚಿಕ್ಕಬಳ್ಳಾಪುರದ ಚಿಂತಾಮಣಿಯ ಚಿನ್ನಸಂದ್ರ ಬಳಿ ಬೃಹತ್ ಸಮಾರಂಭದಲ್ಲಿ ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಟ್ರೇಲರ್ ಬಿಡುಗಡೆ ಮಾಡಿ ಶುಭಕೋರಿದರು. ನಾವೆಲ್ಲಾ ಒಂದೇ ಕುಟುಂಬದವರು ಇದ್ದ ಹಾಗೇ, ಇವರ ತಂದೆ ನನಗೆ ದೊಡ್ಡಪ್ಪ. ಬಾಲಯ್ಯ ನನಗೆ ಅಣ್ಣ, ಇವರ ಕಾರ್ಯಕ್ರಮಕ್ಕೆ ಬರುವುದು ನಮಗೆ ಖುಷಿಯಾಗುತ್ತದೆ. ಸಿನಿಮಾ ಟ್ರೇಲರ್ ಅದ್ಭುತ ವಾಗಿದೆ ಎಂದು ಶಿವಣ್ಣ ಮೆಚ್ಚಿಕೊಂಡಾಡಿದರು. ನನ್ನ ತಮ್ಮ ಶಿವಣ್ಣ ಕಾರ್ಯಕ್ರಮಕ್ಕೆ ಬಂದು ಟ್ರೇಲರ್ ರಿಲೀಸ್ ಮಾಡಿಕೊಟ್ಟಿರುವುದು ಸಂತಸ ತಂದಿದೆ. ಅಖಂಡ ಸಿನಿಮಾ ಕೇವಲ ತೆಲುಗು, ಕನ್ನಡ ಸಿನಿಮಾ ವಲ್ಲ. ಇದು ಪ್ಯಾನ್ ಇಂಡಿಯಾ ಸಿನಿಮಾ ಎಂದು ನಟ ನಂದಮೂರಿ ಬಾಲಕೃಷ್ಣ ಹೇಳಿದರು.

ಅಖಂಡ ಚಿತ್ರದ ಸೀಕ್ವೆಲ್ ಇದಾಗಿದ್ದು, ಬೋಯಪಾಟಿ ಶ್ರೀನು ನಿರ್ದೇಶನ ಮಾಡಿದ್ದಾರೆ. ಫ್ಯಾಂಟಸಿ, ಆಕ್ಷನ್, ಥ್ರಿಲ್ಲರ್ ಜಾನರ್‌ನ ಸಿನಿಮಾ ಇದಾಗಿದ್ದು, ಬಾಲಯ್ಯ ಅವರಿಗೆ ಜೋಡಿಯಾಗಿ ಸಂಯುಕ್ತಾ ಮೆನನ್ ನಟಿಸಿದ್ದಾರೆ. ಆದಿ ಪಿನಿಸೆಟ್ಟಿ ಖಳನಾಗಿ ಅಬ್ಬರಿಸಿದ್ದಾರೆ. ಚಿತ್ರದ ಹಾಡುಗಳಿಗೆ ತಮನ್ ಮ್ಯೂಸಿಕ್ ಸಂಗೀತ ಸಂಯೋಜಿಸಿದ್ದಾರೆ. ಅಖಂಡ 2 ಸಿನಿಮಾ ಪ್ರತಿಷ್ಠಿತ 14 ರೀಲ್ಸ್ ಪ್ಲಸ್ ಬ್ಯಾನರ್ ಮೂಲಕ ನಿರ್ಮಾಣವಾಗಿದ್ದು, ರಾಮ್ ಅಚಂತ ಹಾಗೂ ಗೋಪಿ ಚಂದ್ ಅಚಂತ ಚಿತ್ರ ನಿರ್ಮಾಣ ಮಾಡಿದ್ದಾರೆ. ಸಿ.ರಾಮಪ್ರಸಾದ್ ಹಾಗೂ ಸಂತೋಷ್ ಛಾಯಾಗ್ರಹಣ, ಎ.ಎಸ್. ಪ್ರಕಾಶ್ ಕಲಾ ನಿರ್ದೇಶನ, ತಮ್ಮಿರಾಜು ಸಂಕಲನ, ರಾಮ್, ಲಕ್ಷ್ಮಣ್ ಸಾಹಸ ನಿರ್ದೇಶನ ಈ ಸಿನಿಮಾಗಿದೆ. ಡಿಸೆಂಬರ್ 5ರಂದು ಅಖಂಡ 2 ಪ್ಯಾನ್ ಇಂಡಿಯಾ ಸಿನಿಮಾವಾಗಿ ತೆರೆಗೆ ಬರಲಿದೆ.

ಮೆಚ್ಚುಗೆ ಪಡೆದ ನಡುಬೆಟ್ಟು ಅಪ್ಪಣ್ಣ

ಭವಿಷ್ಯ ಸಿನಿಮಾಸ್ ಲಾಂಛನದಲ್ಲಿ ನಿರ್ಮಾಣವಾಗಿ, ಸಂಪೂರ್ಣ ಅರೆ ಭಾಷೆಯಲ್ಲಿ ಸಿದ್ಧವಾಗಿರುವ ನಡುಬೆಟ್ಟು ಅಪ್ಪಣ್ಣ ಚಿತ್ರ ತೆರೆಗೆ ಬರಲು ಸಿದ್ದವಾಗಿದೆ. ಬಿಡುಗಡೆಗೂ ಮೊದಲೇ ಕೊಲ್ಕತ್ತಾ ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಈ ಚಿತ್ರ ಪ್ರದರ್ಶನ ಗೊಂಡಿದ್ದು, ಮೆಚ್ಚುಗೆ ಪಡೆದಿದೆ. ಅನುಪಮಾ ಶರಧಿ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಆ ಮೂಲಕ ಕನ್ನಡ ಚಿತ್ರರಂಗದಲ್ಲಿ ನಿರ್ದೇಶಕಿಯಾಗಿ ಗುರುತಿಸಿಕೊಳ್ಳುತ್ತಿದ್ದಾರೆ.

ನಡುಬೆಟ್ಟು ಅಪ್ಪಣ್ಣ ಕಥೆಯು ದಬ್ಬಡ್ಕ ಎಂಬ ದೂರದ ಹಳ್ಳಿಯಲ್ಲಿ ಅಪ್ಪಣ್ಣ ಮತ್ತು ಅವನ ಕುಟುಂಬದ ಸುತ್ತ ಸಾಗುತ್ತದೆ. ಅಪ್ಪಣ್ಣ ಹಳ್ಳಿಯ ಕಷ್ಟಗಳ ಬಗ್ಗೆಯಾಗಲಿ ಅಥವಾ ಅವನ ಕುಟುಂಬದ ಅಗತ್ಯಗಳ ಬಗ್ಗೆಯಾಗಲಿ ಕಾಳಜಿ ವಹಿಸುವುದಿಲ್ಲ. ಈ ಊರಿನ ಜನರು ಆನೆ ದಾಳಿ ಯಿಂದ ಬೇಸತ್ತಿರುತ್ತಾರೆ, ಆದರೆ ಅಪ್ಪಣ್ಣ ಮಾತ್ರ ಊರಿನ ಜನರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಹೀಗಿರುವಾಗಲೇ ಆನೆಯೊಂದು ತನ್ನ ತೋಟಗಳ ಮೇಲೆ ದಾಳಿ ಮಾಡುತ್ತದೆ, ಪರಿಣಾಮ ಅಪ್ಪಣ್ಣ ತನ್ನ ಹೆಂಡತಿ ಮತ್ತು ಮಗನನ್ನು ಕಳೆದು ಕೊಳ್ಳುತ್ತಾನೆ. ಈ ಘಟನೆಯ ನಂತರ, ಅಪ್ಪಣ್ಣ ಸಂಪೂರ್ಣವಾಗಿ ಪರಿವರ್ತನೆ ಗೊಳ್ಳುತ್ತಾನೆ. ಮನೆ ಮತ್ತು ತನ್ನ ತೋಟಗಳಿಗೆ ಸರಿಯಾದ ಸುರಕ್ಷತೆಯನ್ನು ಒದಗಿಸದೆ ಹಣವನ್ನು ಉಳಿಸುವುದರಿಂದ ಯಾವುದೇ ಪ್ರಯೋಜನ ವಿಲ್ಲ ಎಂದು ಅರಿತುಕೊಂಡ ಅಪ್ಪಣ್ಣ, ಸ್ವಾರ್ಥಿ ಯಾಗಿರುವುದಕ್ಕೆ ವಿಷಾದಿಸು ತ್ತಾನೆ. ಮುಂದೆ ಹೇಗೆ ಆತ ಊರಿನ ಹಿತಕ್ಕೆ ಶ್ರಮಿಸುತ್ತಾನೆ ಎಂಬುದನ್ನು ಚಿತ್ರದಲ್ಲಿ ಭಾವನಾ ತ್ಮಕವಾಗಿ ಕಟ್ಟಿಕೊಡಲಾ ಗಿದೆ. ನಟರಾಜ್ ಹೊನ್ನವಳ್ಳಿ ನಡುಬೆಟ್ಟು ಅಪ್ಪಣ್ಣನಾಗಿ ಅಭಿನ ಯಿಸಿದ್ದಾರೆ. ಸುಮತಿ, ನಿಶಾಂತ್, ಜಗನ್ನಾಥ್, ಭವಾನಿ ಶಂಕರ್ ಅಡ್ತಲೆ, ಆಡೂರ್ ಬಾಲಕೃಷ್ಣ ಕಾಸರಗೋಡು, ಜೀವನ್ ಸುಳ್ಯ ಕೆರೆಮೂಲೆ, ಲಾಲಿತ್ಯ ಮುಂತಾದವರು ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಮಧುರವಾಗಿದೆ ಏನಾಗಿದೆ ನನಗೇನಾಗಿದೆ

ಕನ್ನಡದಲ್ಲಿಯೂ ಹಲವು ಆಲ್ಬಂ ಸಾಂಗ್‌ಗಳು ಬಿಡುಗಡೆಯಾಗುತ್ತಿದ್ದು, ಸಂಗೀತ ಪ್ರಿಯರನ್ನು ಸೆಳೆಯುತ್ತಿವೆ. ಈಗ ಆ ಸಾಲಿಗೆ ಏನಾಗಿದೆ ನನಗೇನಾಗಿದೆ.. ಎಂಬ ಆಲ್ಬಂ ಸಾಂಗ್ ಕೂಡ ಸೇರ್ಪಡೆ ಯಾಗಿದೆ. ಅನಿತಾ ಸಾರಾ ಮಹೇಶ್ ದನಿಯಲ್ಲಿ ಹಾಡು ಮಧುರವಾಗಿ ಮೂಡಿಬಂದಿದೆ. ಸಂಗೀತ ನಿರ್ದೇಶಕ ವಿ.ಮನೋಹರ್, ಸಾಧು ಕೋಕಿಲ ಹಾಗೂ ಅಭಿಮಾನ್ ರಾಯ್ ಗಾಯಕಿ ಅನಿತಾ ಸಾರಾ ಮಹೇಶ್ ಅವರ ಪ್ರತಿಭೆಗೆ ತಲೆದೂಗಿದ್ದಾರೆ. ಗೌಸ್ ಪೀರ್ ಸಾಹಿತ್ಯದ ಈ ಹಾಡಿಗೆ ಅನಿತಾ ಸಾರಾ ಮಹೇಶ್ ದನಿಯಾಗಿದ್ದು, ಅಭಿಮಾನ್ ರಾಯ್ ಸಂಗೀತ ಸಂಯೋಜಿಸಿದ್ದಾರೆ. ಈ ಹಾಡು ಯಾವ ಸಿನಿಮಾದ ಹಾಡಿಗೂ ಕಡಿಮೆ ಇಲ್ಲದಂತೆ ಮೂಡಿಬಂದಿದೆ.

ಸಂಗೀತ ನಿರ್ದೇಶಕ ಸಾಧುಕೋಕಿಲ ಈ ಹಾಡು ಬಿಡುಗಡೆ ಮಾಡಿ ಶುಭ ಕೋರಿದರು. ಅನಿತಾ ಅವರ ಈ ಹಾಡು ಯಾವ ಸಿನಿಮಾ ಹಾಡಿಗೂ ಕಡಿಮೆ ಇಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಅನಿತಾ ಅವರ ಹಾಡು ಕೇಳುತ್ತಿದ್ದರೆ, ವೃತ್ತಿಪರ ಹಿನ್ನೆಲೆ ಗಾಯಕಿ ಹಾಡಿದ ರೀತಿ ಇದೆ. ಅವರು ಈಗಾಗಲೇ ಕನ್ನಡದಲ್ಲಿ ಕೆಲವು ಚಿತ್ರಗಳಿಗೆ ಹಾಡಿದ್ದಾರೆ. ಮುಂದೆಯೂ ಅವರು ಇನ್ನಷ್ಟು ಎತ್ತರಕ್ಕೆ ಬೆಳೆಯಲಿ, ಚಿತ್ರವನ್ನೂ ನಿರ್ಮಾಣ ಮಾಡಲಿ ಎಂದು ವಿ.ಮನೋಹರ್ ಹೇಳಿದರು. ಅನಿತಾ ಅವರು ಈ ಹಾಡು ಮಾಡಿಕೊಡುವಂತೆ ಕೇಳಿಕೊಂಡರು. ಅವರ ದನಿಗೆ ಹೊಂದುವಂತೆ ಮೆಲೋಡಿ ಮ್ಯೂಸಿಕ್ ಕಂಪೋಜ್ ಮಾಡಿ ದ್ದೇವೆ. ಏನಾಗಿದೆ ನನಗೇನಾಗಿದೆ... ಸಾಹಿತ್ಯವೂ ಅದ್ಭುತವಾಗಿದೆ. ಮುಂದೆಯೂ ಅವರ ಹಾಡಿಗೆ ಸಂಗೀತ ಸಂಯೋಜಿ ಸುತ್ತೇನೆ ಎಂದು ಸಂಗೀತ ನಿರ್ದೇಶಕ ಅಭಿಮಾನ್ ರಾಯ್ ಹೇಳಿದರು. ನನಗೆ ಚಿಕ್ಕ ವಯಸ್ಸಿನಿಂದಲೇ ಸಂಗೀತದ ಬಗ್ಗೆ ಅಪಾರ ಆಸಕ್ತಿ ಇತ್ತು, ಆ ಅಭಿರುಚಿ ಇಂದಿಗೂ ಮುಂದು ವರಿದಿದೆ. ಇಂತಹ ಮತ್ತಷ್ಟು ಆಲ್ಬಂ ಸಾಂಗ್‌ಗಳನ್ನು ಬಿಡುಗಡೆ ಗೊಳಿಸುವುದಾಗಿ ಅನಿತಾ ಸಂತಸದಿಂದ ನುಡಿದರು.

ವಿರಾಮ

ಓದುವ ಲೋಕಕ್ಕೆ ಓದುವ ನಿಲ್ದಾಣ

ವಿಶ್ವವಾಣಿ

23.11.2025

ಭಾನುವಾರ

ಹಮಾಸ್ ಭಯೋತ್ಪಾದಕರು ದಾಳಿ ನಡೆಸಿದ ನೋವಾ ಫೆಸ್ಟಿವಲ್ ಜರುಗಿದ ತಾಣದಲ್ಲಿ ವಿಶ್ವೇಶ್ವರ ಭಟ್

ಇಸ್ರೇಲ್ ನಾಗರಿಕರ ಮೇಲೆ ಭಯೋತ್ಪಾದಕರ ದಾಳಿಯ ಕಥೆಗಳು

ಎರಡು ವರ್ಷಗಳ ಹಿಂದೆ ಅಕ್ಟೋಬರ್ 7 ರಂದು, ಭಯೋತ್ಪಾದಕರು ಇಸ್ರೇಲ್‌ನ ನಾಗರಿಕರ ಮೇಲೆ ದಾಳಿ ಮಾಡಿ, ಸಾವಿರಕ್ಕೂ ಹೆಚ್ಚು ಜನರನ್ನು ಕೊಂದರು, ಹಲವರನ್ನು ಅಪಹರಿಸಿ, ಒತ್ತೆಯಾಳನ್ನಾಗಿಸಿಕೊಂಡರು. ಆ ಒಂದು ದಿನದ ಅವಧಿಯಲ್ಲಿ ಭಯೋತ್ಪಾದಕರು ನಾಗರಿಕರನ್ನು ಸಾಯಿಸಿದಾಗ, ಹಲವರು ಬದುಕಿ ಉಳಿದರು, ಭಯೋತ್ಪಾದಕರ ವಿರುದ್ಧ ಹೋರಾಡಿದರು. ಈ ದುರ್ಘಟನ ಸಂಭವಿಸಿ ಇಪ್ಪತ್ತೆರಡು ತಿಂಗಳುಗಳ ನಂತರ, ಪತ್ರಕರ್ತ ವಿಶ್ವೇಶ್ವರ ಭಟ್ ಅವರಿಗೆ ಇಸ್ರೇಲಿನ ಆ ಜಾಗಕ್ಕೆ ಭೇಟಿ ನೀಡುವ ಅವಕಾಶ ದೊರಕಿತು. ಅಲ್ಲಿ ನಡೆದ ಭೀಕರ ನರಮೇಧದ ಕಥನವನ್ನು, ಭಯೋತ್ಪಾದಕರ ವಿರುದ್ಧ ಹೋರಾಡಿದ ಕಲಿಗಳ ವಿವರವನ್ನು ತಿಳಿದು ನೊಂದರು. ಅಕ್ಟೋಬರ್ 7 ರಂದು ನಡೆದ ಭಯೋತ್ಪಾದಕರ ದಾಳಿ ಮತ್ತು ಅದರ ವಿರುದ್ಧ ಜನಸಾಮಾನ್ಯರು ನಡೆಸಿದ ಹೋರಾಟವನ್ನು 'ಒನ್ ಡೇ ಇನ್ ಅಕ್ಟೋಬರ್' ಎಂಬ ಪುಸ್ತಕ ಹಿಡಿದಿಟ್ಟಿದೆ. ಈ ಪುಸ್ತಕವನ್ನು ವಿಶ್ವೇಶ್ವರ ಭಟ್ ಅವರು ಅನುವಾದಿಸಿದ್ದಾರೆ; ಕಳೆದವಾರ ಲೋಕಾರ್ಪಣೆ ಗೊಂಡ ಈ ಪುಸ್ತಕದ ಆಯ್ದ ಒಂದು ಅಧ್ಯಾಯವು 'ವಿಶ್ವವಾಣಿ'ಯ ಓದುಗರಿಗಾಗಿ ಇಲ್ಲಿದೆ.

ಈ ಬರಹವು ಹದರ್ ಬಶಾರ್ ಎಂಬಾಕೆ ಅನುಭವಿಸಿದ ನೋವು ತಲ್ಲಣಗಳ ಸಾರ. ಆಕೆಯ ವಯಸ್ಸು 13. ವಾಸಿಸಿದ್ದ ಸ್ಥಳ: ಕಿಬೂತ್ಸ್ ಬೀರಿ, ಇಸ್ರೇಲ್; ಅಕ್ಟೋಬರ್ 7, 2023ರಂದು ಇಸ್ರೇಲ್ ಮೇಲೆ ಭಯೋತ್ಪಾದಕರು ದಾಳಿ ಮಾಡಿ, ಸಾವಿರಕ್ಕೂ ಅಧಿಕ ಜನರನ್ನು ಸಾಯಿಸಿದರು ಮತ್ತು ಇನ್ನಷ್ಟು ಜನರನ್ನು ಸೆರೆ ಹಿಡಿದು, ಗಾಜಾಕ್ಕೆ ಕರೆದೊಯ್ದು ಒತ್ತೆಯಾಳಾಗಿ ಇರಿಸಿಕೊಂಡರು. ಅಂತಹ ಒತ್ತೆಯಾಳುಗಳಲ್ಲಿ, ಹದರ್ ಬಶಾರ್‌ಳ ಗೆಳತಿಯೂ ಸೇರಿದ್ದಳು! ಹದರ್ ಬಶಾರ್ ಮತ್ತು ಆಕೆಯ ತಂದೆ ಭಯೋತ್ಪಾದಕರ ದಾಳಿಯಲ್ಲಿ ಬದುಕುಳಿದರೂ, ಅವರ ಮನೆಗೆ ಬೆಂಕಿ ಹಚ್ಚಿದ್ದರಿಂದ ಆಕೆಯ ತಾಯಿ ಮತ್ತು ಸಹೋದರ ಮೃತರಾದರು. ಇಂತಹ ಹಲವಾರು ದಾರುಣ, ಕರುಣಾಜನ ಮತ್ತು ಜತೆಯಲ್ಲೇ ಹೋರಾಟದ ಕಥೆಗಳು, ಇತ್ತೀಚೆಗೆ ಲೋಕಾರ್ಪಣೆಗೊಂಡ 'ಬದುಕುಳಿದವರು ಕಂಡಂತೆ' ಪುಸ್ತಕದಲ್ಲಿದೆ.



ಬದುಕುಳಿದವರು ಕಂಡಂತೆ

ಮೂಲ : ಯೇರ್ ಅಗಮೋನ್, ಓರಿಯಾ ಮೇವ್ರೋರೊಚ್

ಅನು: ವಿಶ್ವೇಶ್ವರ ಭಟ್

ಪ್ರ: ವಿಶ್ವವಾಣಿ ಪುಸ್ತಕ ಬೆಂಗಳೂರು, 8431007267

ಬೆಲೆ: ರು. 450/- (ಸಾದಾ ಪ್ರತಿ)
ರು. 500/- (ಉತ್ತಮ ಪ್ರತಿ)

ಮನೆಯೊಳಗೆ ಗ್ರೆನೇಡ್ ಸಿಡಿತ ಬೆಂಕಿ ಹೊಗೆ!

» ಮೂಲ : ಯೇರ್ ಆಗಮೋನ್, ಓರಿಯಾ ಮೋವ್ರೊರೊಚ್

» ಅನುವಾದ : ವಿಶ್ವೇಶ್ವರ ಭಟ್

ಅಕ್ಟೋಬರ್ 7ರ ಹಿಂದಿನ ರಾತ್ರಿ, ನಾವು ಯರ್ಡೇನಾ ಪಾರ್ಕ್‌ನಲ್ಲಿದ್ದೆವು. ಫ್ರೆಂಡ್ಸ್ ಇದ್ದರು. ತಡರಾತ್ರಿಯವರೆಗೂ ಹರಟೆ ಹೊಡೆಯುತ್ತಾ, ನಗುತ್ತಾ ಕಾಲ ಕಳೆದಿದ್ದೆವು. ಅಲ್ಲೇ ಒಂದು ಟಿಕ್‌ಟಾಕ್ ವಿಡಿಯೋ ಮಾಡಿದ್ದೆವು. ಅದನ್ನು ಪೋಸ್ಟ್ ಮಾಡಿರಲಿಲ್ಲ. ಆ ವಿಡಿಯೋದಲ್ಲಿ ನಾನು ಮತ್ತು ಗೆಳತಿ ಸೇರಿ ಇನ್ನೊಬ್ಬ ಗೆಳತಿ ಅಲ್ಮಾಳನ್ನು 'ಕಣ್ಮರೆ' ಮಾಡಿಬಿಡುತ್ತೇವೆ. ಹಲವು ಸಲ ಅದನ್ನು ಶೂಟ್ ಮಾಡಿ, ಕೊನೆಗೆ ಒಂದನ್ನು ಫೈನಲ್ ಮಾಡಿದ್ದೆವು. ರಾತ್ರಿ ನಾವು ಮನೆಗೆ ಹೋಗಿ ಮಲಗಿದಾಗ ಎರಡೂವರೆ. ದುರಂತ ಏನೆಂದರೆ, ಮರುದಿನ ಬೆಳಗ್ಗೆ ಅಲ್ಮಾಳನ್ನು ಹಮಾಸ್‌ನವರು ಒತ್ತೆಯಾಳಾಗಿ ತೆಗೆದುಕೊಂಡು ಹೋಗಿ ಗಾಜಾದಲ್ಲಿ ಇರಿಸಿದರು. ನಾವು ಟಿಕ್‌ಟಾಕ್‌ಗೆಂದು ಮಾಡಿದ ವಿಡಿಯೋ ಹಾಗೆ ನಿಜವಾಗಿಬಿಟ್ಟಿತು! ನಂತರ ಅವಳು ಸಂಪೂರ್ಣ 'ಕಣ್ಮರೆ'ಯೇ ಆಗಿಬಿಟ್ಟಳು.

* * *

ನನ್ನ ಹೆಸರು ಹದರ್, ಹದಿಮೂರು ವರ್ಷ ವಯಸ್ಸು. ನಾನು ಕಿಬೂತ್ ಬೀರಿಯಲ್ಲಿ ವಾಸಿಸುತ್ತೇನೆ. ನನ್ನ ಅಮ್ಮ ಡಾನಾ ಒಂದು ಡೇ ಕೇರ್ ಸೆಂಟರ್ ನಡೆಸುತ್ತಿದ್ದರು. ಎಲ್ಲ ಮಕ್ಕಳೂ ಅವರನ್ನು ತುಂಬಾ ತುಂಬಾ ಪ್ರೀತಿಸುತ್ತಿದ್ದರು. ಸಣ್ಣ ಸಣ್ಣ ಮಕ್ಕಳನ್ನು ಅಮ್ಮ ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ನಾನೂ ಸಾಕಷ್ಟು ಸಲ ಅಲ್ಲಿಗೆ ಹೋಗಿ ಟೈಮ್ ಪಾಸ್ ಮಾಡುತ್ತಿದ್ದೆ. ಮಕ್ಕಳನ್ನು ಎತ್ತಿಕೊಳ್ಳುವುದು, ಡೈಪರ್ ಬದಲಿಸುವುದು ಎಲ್ಲವನ್ನೂ ಮಾಡುತ್ತಿದ್ದೆ. ಸಣ್ಣ ಸಣ್ಣ ಮಕ್ಕಳನ್ನು ನೋಡಿಕೊಳ್ಳಲು ಅಮ್ಮನಿಗೆ ತುಂಬಾ ತಾಳ್ಮೆಯಿತ್ತು. ಅವರು ದೊಡ್ಡ ಮಕ್ಕಳೇನೋ ಎಂಬಂತೆ ಅಮ್ಮ ಅವರ ಜತೆ ಮಾತನಾಡುತ್ತಿದ್ದರು. ಆ ಮಕ್ಕಳೆಲ್ಲ ಅಮ್ಮನನ್ನು ಬಹಳ ಇಷ್ಟಪಡುತ್ತಿದ್ದರು. ಅವರ ಅಪ್ಪ ಅಮ್ಮಂದಿರೂ ಅಮ್ಮನನ್ನು ಅಷ್ಟೇ ಇಷ್ಟಪಡುತ್ತಿದ್ದರು. ನಿಜ ಹೇಳಬೇಕೆಂದರೆ, ಬೀರಿಯಲ್ಲಿರುವ ಎಲ್ಲರೂ ಅಮ್ಮನನ್ನು ಇಷ್ಟಪಡುತ್ತಿದ್ದರು.

ನನಗೆ ಅಡುಗೆ ಮಾಡುವುದೆಂದರೆ ಇಷ್ಟ, ಅದರಲ್ಲೂ ಕೇಕ್, ಕುಕೀಸ್, ಜಹ್ನೂನ್, ಪೇಸ್ಟ್ರಿಗಳನ್ನು ಮಾಡುವುದೆಂದರೆ ತುಂಬಾ ಇಷ್ಟ. ನನ್ನ ಮನೆಯಲ್ಲಿ ಬೇಕಿಂಗ್ ಸಲಕರಣೆಗಳೆಲ್ಲವೂ ಇದ್ದವು. ತುಂಬಾ ಸಲ ನಾನು ಬಹಳ ಕಷ್ಟಕರ ರೆಸಿಪಿಗಳನ್ನೆಲ್ಲ ಪ್ರಯತ್ನಿಸುತ್ತಿದ್ದೆ. ಸಿಹಿ, ಹುಳಿ, ಖಾರ ಹೀಗೆ ಎಲ್ಲ ರೀತಿಯ ಬೇಕರಿ ತಿನಿಸುಗಳನ್ನೂ ನಾನು ಮಾಡುತ್ತಿದ್ದೆ. ಬೇಕಿಂಗ್ ಜತೆಗೆ ನನಗೆ ಸರ್ಫಿಂಗ್ ಕೂಡ ತುಂಬಾ ಇಷ್ಟ. ನನ್ನ ಅಣ್ಣ ಕಾರ್ಮೆಲ್‌ಗೂ ಅದು ಇಷ್ಟ. ಬಹುಶಃ ಅವನಿಂದಲೇ ನನಗೆ ಸರ್ಫಿಂಗ್‌ನ ಹುಚ್ಚು ಹಿಡಿದಿರಬೇಕು. ಸಮುದ್ರಕ್ಕೆ ಹೋಗಿ ನಾವು ಸರ್ಫ್ ಮಾಡುತ್ತೇವೆ. ನನ್ನ ಬಗ್ಗೆ ಹೇಳಬೇಕಿರುವುದು ಇಷ್ಟೆ.

* * *

ಶಬ್ಬಾತ್ ದಿನ ಬೆಳಗ್ಗೆ ಆರೂವರೆಗೆ ಒಂದಾದ ಮೇಲೊಂದು ಬೂಮ್ ಬೂಮ್ ಬೂಮ್ ಬೂಮ್ ಸದ್ದು ಕೇಳಿಸತೊಡಗಿತು. ನಾವೆಲ್ಲರೂ ತಕ್ಷಣ ಎದ್ದು ಯಾವಾಗಲೂ ಮಾಡುವಂತೆ, ಸೇಫ್ ರೂಮಿಗೆ ಓಡಿದೆವು. ಆಗ ಮನೆಯಲ್ಲಿದ್ದವರು ನಾನು, ನನ್ನ ಅಪ್ಪ, ಅಮ್ಮ ಮತ್ತು ಅಣ್ಣ ಕಾರ್ಮೆಲ್. ನನ್ನ ಇನ್ನೊಬ್ಬ ಅಣ್ಣ ನೋಫರ್ ಸೇನೆಯಲ್ಲಿದ್ದಾನೆ. ಆಗಷ್ಟೇ ಅವನು ಗಾರ್ಡ್ ಡ್ಯೂಟಿಗೆ ಸೇರಿದ್ದ. ನಮ್ಮೆಲ್ಲರಿಗಿಂತ ಹಿರಿಯನಾದ ಇನ್ನೊಬ್ಬ ಅಣ್ಣ ರೋಟೆಮ್ ಭಾರತಕ್ಕೆ ಹೋಗಿದ್ದ. ಹೀಗಾಗಿ ಸೇಫ್ ರೂಮ್‌ನಲ್ಲಿ ನಾವು ನಾಲ್ವರಿದ್ದೆವು. ಬಹಳ ಬೇಗ ನಮಗೆ ಈ ಸಲ ಏನೋ ದೊಡ್ಡ ಅನಾಹುತವಾಗಿದೆ ಅನ್ನಿಸತೊಡಗಿತ್ತು. ಏಕೆಂದರೆ ಹೊರಗಿನ ವಿದ್ಯಮಾನಗಳು ಎಂದಿನಂತಿರಲಿಲ್ಲ. ಕೇವಲ ಐದು ನಿಮಿಷದಲ್ಲಿ ಎಷ್ಟೊಂದು ರಾಕೆಟ್‌ಗಳು ಬಂದು ಬಿದ್ದಿದ್ದವು. ನಾನಂತೂ ಹಿಂದೆ ಯಾವತ್ತೂ ಅಂಥ ದಾಳಿಯನ್ನು ನೋಡಿರಲಿಲ್ಲ. ರೆಡ್ ಅಲರ್ಟ್ ಬಳಿಕ ರೆಡ್ ಅಲರ್ಟ್. ಸೈರನ್ ಆದಮೇಲೆ ಸೈರನ್. ಒಂದಾದ ಮೇಲೆ ಒಂದು ಕ್ಷಿಪಣಿ ಆಗಸದಲ್ಲೇ ಧ್ವಂಸ. ಅಷ್ಟರಲ್ಲಿ ಅಮ್ಮನಿಗೆ ಮೈಕ್‌ನಲ್ಲಿ ಎಚ್ಚರಿಕೆಯ ಕೂಗು ಕೇಳಿಸಿತು. 'ಭಯೋತ್ಪಾದಕರು ದೇಶಕ್ಕೆ ನುಗ್ಗಿದ್ದಾರೆ!' ಎಂದು ಮೈಕ್‌ನಲ್ಲಿ ಅನೌನ್ಸ್ ಮಾಡಲಾಗುತ್ತಿತ್ತು. ನಾವು ಕಿಬೂತ್‌ನ ವಾಟ್ಸಾಪ್ ಗ್ರೂಪ್ ನೋಡಿದೆವು. ಅಲ್ಲಿ ಕೂಡ, 'ಉಗ್ರರು ನುಗ್ಗಿದ್ದಾರೆ. ಒಳಗಿನಿಂದ ಲಾಕ್ ಮಾಡಿಕೊಳ್ಳಿ. ಲೈಟ್ ಆಫ್ ಮಾಡಿ. ಸೇಫ್ ರೂಮಿಗೆ ಹೋಗಿ, ಡೋರ್ ಲಾಕ್ ಮಾಡಿಕೊಳ್ಳಿ!' ಎಂದು ಸಂದೇಶವಿತ್ತು. ಅದನ್ನು ನೋಡಿ ನಾನೂ ಸೇರಿದಂತೆ ಎಲ್ಲರೂ ಶಾಕ್ ಆಗಿದ್ದೆವು.

ಸೇಫ್ ರೂಮಿನಲ್ಲಿ ಇನ್ನೂ ಎಷ್ಟು ಹೊತ್ತು ಇರಬೇಕಾಗಬಹುದು? ಉಗ್ರರನ್ನು ಸದೆಬಡಿಯಲು ಎಷ್ಟು ಹೊತ್ತು ಹಿಡಿಯಬಹುದು? ಊಟ, ನೀರು ಇಲ್ಲಿಗೇ ತಂದುಕೊಳ್ಳಬೇಕಾ ಎಂದೆಲ್ಲ ಚರ್ಚಿಸಿದೆವು. ಕೊನೆಗೆ ಬೇಡವೆಂದು ನಿರ್ಧರಿಸಿದೆವು. ನಾವೆಲ್ಲರೂ ರಾತ್ರಿಯ ಪೈಜಾಮದಲ್ಲೇ ಇದ್ದೆವು. ಅಷ್ಟಷ್ಟಾಗಿ ಉಗ್ರರ ದಾಳಿ ಇಡೀ ಕಿಬೂತ್‌ಗೆ ಹರಡುತ್ತಿರುವ ಮಾಹಿತಿಗಳು ಬರತೊಡಗಿದವು. ನಾವು ಇರುವ ಜಾಗದ ಸಮೀಪಕ್ಕೂ ದಾಳಿ ವಿಸ್ತರಿಸುತ್ತಿತ್ತು. ಅಣ್ಣ ಕಾರ್ಮೆಲ್ ಓಡಿಹೋಗಿ ಅಡುಗೆ ಮನೆಯಿಂದ ದೊಡ್ಡ ಚಾಕು ತಂದ; ಅರ್ಕಾಸ್ ಚಾಕು. ಅದನ್ನು ಅವನು ಹಿಡಿದಿರುವ ಫೋಟೋ ಕೂಡ ನಮ್ಮಲ್ಲಿದೆ.

ಸೇಫ್ ರೂಮಿನ ಕತ್ತಲೆಯಲ್ಲಿ ಒಂದಷ್ಟು ಹೊತ್ತು ಕುಳಿತ ಮೇಲೆ ನಮಗೆ ಮೂತ್ರ ಮಾಡಬೇಕಿತ್ತು. ಬಾತ್‌ರೂಮಿಗೆ ಹೋಗುತ್ತೇವೆ ಎಂದು ನಾನು ಮತ್ತು ಅಮ್ಮ ಹೇಳಿದೆವು. ಅಪ್ಪ ಬಿಲ್‌ಕುಲ್ ಒಪ್ಪಲಿಲ್ಲ. ಯಾವುದೇ ಕಾರಣಕ್ಕೂ ಸೇಫ್ ರೂಮ್‌ನಿಂದ ಹೊರಗೆ ಹೋಗುವಂತಿಲ್ಲ ಎಂದು ಅಪ್ಪಣೆ ಮಾಡಿದರು. ಹೀಗಾಗಿ ಅಲ್ಲೇ ಸೇಫ್ ರೂಮಿನಲ್ಲಿಟ್ಟಿದ್ದ ಒಂದು ಪಾಟ್‌ನಲ್ಲೇ ಮೂತ್ರ ವಿಸರ್ಜನೆ ಮಾಡಿದೆವು. ನನ್ನ ಬೇಕಿಂಗ್ ಕ್ಯಾಬಿನೆಟ್‌ಗಳು ಕೂಡ ಅಲ್ಲೇ ಇದ್ದವು. ಒಂದಷ್ಟು ಬಟ್ಟೆಗಳು ಆ ಪಾಟ್‌ಗಳ ಮೇಲಿದ್ದವು. ನಾವು ಬಟ್ಟೆಯ ಮೇಲೆ ಮೂತ್ರ ವಿಸರ್ಜಿಸಿದೆವು. ಉಗ್ರರು ಏನಾದರೂ ಅಲ್ಲೇ ಹೊರಗೆ ಹೋಗುತ್ತಿದ್ದರೆ ಅವರಿಗೆ ಮೂತ್ರದ ಶಬ್ದ ಕೇಳಬಾರದು ಎಂದು ಹಾಗೆ ಮಾಡಿದ್ದೆವು! ಸೇಪ್ ರೂಮಿನಲ್ಲಿ ನಾವು ತುಂಬಾ ತುಂಬಾ ನಿಶ್ಯಬ್ದವಾಗಿದ್ದೆವು.

ಸ್ವಲ್ಪ ಹೊತ್ತಿನ ಬಳಿಕ ನಮಗೆ ಅರೇಬಿಕ್‌ನಲ್ಲಿ ಯಾರೋ ಕೂಗಾಡುತ್ತಿರುವುದು ಕೇಳಿಸಿತು. ನಮ್ಮ ಮನೆಯ ಕಿಟಕಿ ಹೊರಗೇ ಬಹಳ ಜೋರಾಗಿ ಕೂಗುತ್ತಿದ್ದರು. ನಂತರ ಅವರು ಬರುತ್ತಿರುವ ಶಬ್ದ ಕೇಳಿಸಿತು. ಹಾಗೇ ಅವರ ಹೆಜ್ಜೆಯ ಸಪ್ಪಳ ಕೇಳಿಸಿತು. ನಂತರ ಅವರು ನಮ್ಮ ಸೇಫ್ ರೂಮಿನ ಬಳಿಗೂ ಬಂದರು! ಸೇಫ್ ರೂಮಿನ ಬಾಗಿಲಿಗೆ ಬಂದರು! ಬಳಿಕ ಅರೇಬಿಕ್‌ನಲ್ಲಿ ಕೂಗತೊಡಗಿದರು. 'ಇಫ್ತಾ ಅಲ್ ಬಾಬ್! ಇಫ್ತಾ ಅಲ್ ಬಾಬ್! ಬಾಗಿಲು ತೆರೆಯಿರಿ! ಬಾಗಿಲು ತೆರೆಯಿರಿ!' ನನ್ನ ಅಪ್ಪ ಮತ್ತು ಅಣ್ಣ ಬಾಗಿಲನ್ನು ಒಳಗಿನಿಂದ ಒತ್ತಿ ಹಿಡಿದಿದ್ದರು. ಏಕೆಂದರೆ ಅದಕ್ಕೆ ಲಾಕ್ ಇರಲಿಲ್ಲ. ಅವರಿಬ್ಬರೂ ಬಾಗಿಲಿನ ಹ್ಯಾಂಡಲ್ ಹಿಡಿದುಕೊಂಡಿದ್ದರು. ಉಗ್ರರು ಹೊರಗಿನಿಂದ ಒದೆಯುತ್ತಾ, ಕಿರುಚುತ್ತಾ, ದಡಬಡ ಬಡಿಯುತ್ತಿದ್ದರು. ನನ್ನ ಅಪ್ಪ ಧೈರ್ಯ ಮಾಡಿ, ಅರೇಬಿಕ್‌ನಲ್ಲಿ, 'ಇಲ್ಲಿ ಮಕ್ಕಳಿದ್ದಾರೆ... ರೂಹ್, ಕುಲಾಹ್ ವಲಾದ್! ಹೋಗಿ ಇಲ್ಲಿಂದ' ಎಂದು ಹೇಳಿದರು. ತಕ್ಷಣ ಅವರು ಬಾಗಿಲಿಗೆ ಗುಂಡು ಹಾರಿಸಿದರು. ಅದು ಬಾಗಿಲನ್ನು ಸೀಳಿ ಬಂದು ಕಾರ್ಮೆಲ್‌ನ ತೋಳಿಗೆ ತಾಗಿದ ಹೊಡೆತಕ್ಕೆ ಅವನು ಬಾಗಿಲಿಗೆ ಇಟ್ಟಿದ್ದ ಕೈ ಹಾರಿಹೋಯಿತು.

ಅಮ್ಮನದು ಮಕ್ಕಳನ್ನು ನೋಡಿಕೊಳ್ಳುವ ಕೆಲಸವಾದ್ದರಿಂದ ಅವಳು ಫಸ್ಟ್-ಏಡ್ ಕೋರ್ಸ್ ಮಾಡಿದ್ದಾಳೆ. ಹೀಗಾಗಿ ಟೂರ್ನಿಕೆ ಮಾಡುವುದು ಗೊತ್ತು. ಹೀಗಾಗಿ ನಾನು ಮತ್ತು ಅಮ್ಮ ಕಾರ್ಮೆಲ್ ಇದ್ದಲ್ಲಿಗೆ ಹೋಗಿ, ಅವನಿಗೆ ಟೂರ್ನಿಕೆ ಮಾಡಿ ಬಿಗಿದೆವು. ಅಷ್ಟೂ ಹೊತ್ತು ಭಯೋತ್ಪಾದಕರು ಬಾಗಿಲು ತೆರೆಯುವಂತೆ ಕಿರುಚುತ್ತಲೇ ಇದ್ದರು. ಮತ್ತೆ ಬಾಗಿಲಿನ ಮೇಲೆ ಗುಂಡಿನ ದಾಳಿ ನಡೆಸಿದರು. ಈ ಸಲ ಅಪ್ಪನ ಕಾಲಿಗೆ ಗುಂಡು ಬಿತ್ತು. ಅವರು ಬಾಗಿಲಿನಿಂದ ಹಿಂದಕ್ಕೆ ಹಾರಿ ನೆಲಕ್ಕೆ ಬಿದ್ದರು. ನಂತರ ಅವರು ಬಾಗಿಲಿಗೆ ಬಂದು, ಕಾಲಿನಿಂದ ಒದ್ದು, ಕೈಯಿಂದ ತಳ್ಳಿ ಅದನ್ನು ತೆರೆಯಲು ಯತ್ನಿಸಿದರು.

← 4ನೇ ಪುಟಕ್ಕೆ

ನೋವಾ ಫೆಸ್ಟಿವಲ್ ತಾಣದಲ್ಲಿ ಹತ್ಯೆಗೀದಾವರ ಭಾವಚಿತ್ರಗಳು.

ಹತ್ಯಾಕಾಂಡದ ಡಾರ್ಕ್ ಡೈರಿ

ಇದು ಯಾರೋ ಹೇಳಿದ ಗೋಳಿನ ಕಥೆಯಲ್ಲ, ಇದು ಒಂದು ಹತ್ಯಾಕಾಂಡದ ಡಾರ್ಕ್ ಡೈರಿ! 2023 ರ ಅಕ್ಟೋಬರ್ ಏಳರ ಮುಂಜಾವು, ಹೊಸ ಭರವಸೆ, ಕನಸು ಕಾಣುತ್ತಿದ್ದ ಸಾವಿರಾರು ಜನರ ಮೇಲೆ ನರರೂಪಿ ರಾಕ್ಷಸರು ಎರಗಿಬಂದರು. ಎಲ್ಲೆಡೆ ಆಕ್ರಂದನ ಮುಗಿಲು ಮುಟ್ಟಿದ ಚೀರಾಟ...ಅಗ್ನಿನರ್ತನ. ಮನೆ, ಹೊಲ, ಮೈದಾನ, ಎಲ್ಲೆಲ್ಲೂ ಹೆಣಗಳ ರಾಶಿ. ಇಂಥಾ ಕರಾಳ ಲೋಕದಲ್ಲಿ ಮಾನವೀಯತೆ ಸತ್ತುಹೋಗಿದೆ ಎಂದು ಎಲ್ಲರೂ ಕೈ ಚೆಲ್ಲಿ ಕೂತಾಗ, ಎದೆಯಲ್ಲಿ ಬೆಂಕಿ ಇಟ್ಟುಕೊಂಡು ಎದ್ದು ನಿಂತರು ಕೆಲವು ಹುಲಿಯಂಥ ಮನುಷ್ಯರು!

ಊಹಿಸಿ, ಇಲ್ಲಿ ನಿಮ್ಮ ಪಕ್ಕದ ಮನೆಯವನು, ನಿಮ್ಮ ಅತ್ತೆ-ಮಾವ, ನಿಮ್ಮ ಸ್ನೇಹಿತ... ಇದಕ್ಕಿದ್ದಂತೆ ವೀರಯೋಧನಾಗಿ ಬದಲಾದರೆ ಸಾಮಾನ್ಯರು ಅಸಾಮಾನ್ಯರಂತೆ ಕದನಕಲಿಯಾದರೆ? ನಿಜ.. ಅಂದು ಆ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಮೂವತ್ನಾಲ್ಕು ಜೀವಗಳು ಸಾವಿನ ಕಡೆ ಬಡಿದು, ಮರಳಿ ಬಂದು ಹೇಳಿದ ರೋಚಕ ಕಥೆಗಳಿವು.

ಇಲ್ಲಿ ಭಯಕ್ಕೆ ಹೆದರಿ ದಿಂಬಿಗೆ ಮುಖ ಒತ್ತಿ ಅತ್ತವರ ಕಥೆಯೂ ಇದೆ, ಕೈಗೆ ಸಿಕ್ಕಿದ್ದನ್ನು ಹಿಡಿದು ವೈರಿಗೆ ಎದಿರೇಟು ಕೊಟ್ಟ ಸಿಂಹಗಳ ಕಥೆಯೂ ಇದೆ. ಒಬ್ಬ ತಾಯಿ ತನ್ನ ಕಂದಮ್ಮನ ಅಳುವನ್ನು ನಿಲ್ಲಿಸಲು ಮಾಡಿದ ಉಪಾಯ, ಮಗಳಿಗಾಗಿ ಪ್ರಾಣ ಕೊಟ್ಟ ವೃದ್ಧ ತಂದೆ, ಅಸಹಾಯಕನಾಗಿ ರೋದಿಸಿದ ಸೈನಿಕ, ಕೈಯಲ್ಲಿ ನಿಶಸ್ತ್ರನಾಗಿ ಸೆಣಸಿದ ಅಮಾಯಕ, ತಾಯಿ ತನ್ನ ಮಗುವಿನ ಅಳು ಉಗ್ರರಿಗೆ ಕೇಳಿಸದಿರಲೆಂದು ಬೆರಳನ್ನು ಬಾಯಲ್ಲಿಟ್ಟ ಸನ್ನಿವೇಶ, ಗಾಯಾಳುಗಳಿಗೆ ಆಶ್ರಯ ಕೊಟ್ಟ ದಾದಿಯ ಧೈರ್ಯ ಮತ್ತು ಭಯಾನಕತೆಯಲ್ಲಿಯೂ ಭರವಸೆಯನ್ನು ಬಿತ್ತಿದ ಪವಾಡ... ಈ ಕಥೆಗಳೆಲ್ಲ ನಿಮ್ಮ ಎದೆಯಲ್ಲಿ ಒಂದು ಬಿಸಿ ರಕ್ತದ ಉಂಡೆಗಳನ್ನು ಇಡುತ್ತಾ ಹೋಗುತ್ತವೆ. ಒಬ್ಬ ಡ್ರೈವರ್ ತನ್ನ ಗಾಡಿಯಲ್ಲಿ ಮೂವತ್ತು ಜೀವಗಳನ್ನು ತುಂಬಿಕೊಂಡು, ಗುಂಡುಗಳ ಮಳೆ ನಡುವೆ ರಾತ್ರಿಯೆಲ್ಲ ಓಡುತ್ತಾನೆ. ಒಬ್ಬ ವೃದ್ಧೆ ತನ್ನ ಮನೆಯ ನೆಲಮಾಳಿಗೆಯನ್ನು ತಾತ್ಕಾಲಿಕ ತಾತ್ಕಾಲಿಕ ಆಸ್ಪತ್ರೆಯಾಗಿ ಬದಲಾಯಿಸುತ್ತಾಳೆ. ಒಬ್ಬ ಯುವಕ, ಶತ್ರುಗಳ ಕಣ್ಣೆದುರೇ ಗ್ರೆನೇಡ್‌ಗಳನ್ನು ವಾಪಸ್ ಎಸೆಯುತ್ತಾನೆ. ಅಲ್ಲಿ ಜಾತಿ ಇಲ್ಲ, ಧರ್ಮ ಇಲ್ಲ, ಇದ್ದಿದ್ದು ಬರೀ ಜೀವ ಉಳಿಸಿಕೊಳ್ಳುವ ಉಸಿರ ಹಪಾಹಪಿ!

ಪಾಪಿಗಳ ಲೋಕದಲ್ಲಿ ಒಳ್ಳೆಯವರು ಉಳಿದುಕೊಳ್ಳುವುದು ಸುಲಭವಲ್ಲ. ಆದರೂ, ಇವರು ಬದುಕುಳಿದರು. ಕೆಲವರು ಶಾಶ್ವತವಾಗಿ ಕಣ್ಮುಚ್ಚಿದರು. ಆದರೆ ಬದುಕಿದ್ದ ಪ್ರತಿಯೊಬ್ಬರಿಗೂ ಜೀವದ ಬೆಲೆಯನ್ನು ಹೇಳಿ ಹೋದರು.

ಇದು ಮರೆಯಲಾಗದ ವೀರರ, ಊಹಿಸಲಾಗದ ಕಥೆಗಳು. ಇದು ಕೇವಲ ನೋವಿನ ಕಥೆಗಳಲ್ಲ, ಪ್ರತಿ ಕಠಿಣ ಸವಾಲನ್ನು ಎದುರಿಸಿ ನಿಂತ ಮಾನವ ಚೇತನದ ಸ್ಫೂರ್ತಿಯ ಸೆಲೆ. ಈ ಕಥೆಗಳನ್ನು ನಾನು ಬರೀ ಅನುವಾದಿಸಿಲ್ಲ. ಈ ಕಥೆಗಳು ಹುಟ್ಟಿದ ಜಾಗಕ್ಕೆ ಖುದ್ದಾಗಿ ಹೋಗಿ, ಅಲ್ಲಿನ ನೆತ್ತರ ನೆಲದ ಬಿಸಿಯನ್ನು ಅನುಭವಿಸಿ ಬಂದು ಬರೆದಿದ್ದೇನೆ. ಈ ಅನುವಾದದ ಪ್ರಕ್ರಿಯೆ ನನ್ನನ್ನೂ ಕಥೆಯ ಒಂದು ಭಾಗವಾಗಿಸಿದೆ.

– ವಿಶ್ವೇಶ್ವರ ಭಟ್

ಪುಸ್ತಕ ವಿಮಾನ



ಮಿಂಚುಹುಳದ ದಾರಿ
ಲೇ: ಸುಚಿತ್ರಾ ಹೆಗಡೆ
ಪ್ರ: ಬಹುರೂಪಿ ಪ್ರಕಾಶನ
7019182729
ಬೆಲೆ ರು.175/-

ಇಲ್ಲೊಂದು ಮಿಂಚುಹುಳ!

ಉತ್ತರಕನ್ನಡ ಜಿಲ್ಲೆಯ ಭಾಷೆಯ ಬನಿಯನ್ನು ಹಿಡಿದಿಡುವ ಇಲ್ಲಿನ ಲಲಿತ ಪ್ರಬಂಧಗಳು, ಬರಹದ ಓಘದಲ್ಲಿ ಖಂಡಾಂತರಗಳನ್ನು ದಾಡಿ, ಸ್ವೀಡನ್, ಫ್ರಾನ್ಸ್ ಮೊದಲಾದ ದೇಶಗಳಲ್ಲಿ ಸಂಚರಿಸುವ ಪರಿ ವಿನೂತನ. ವಿಶ್ವದ ಹಲವು ಭಾಗಗಳಲ್ಲಿ ಪ್ರವಾಸಕ್ಕೆಂದು ಓಡಾಡಿರುವ ಲೇಖಕರಿ ಸುಚಿತ್ರಾ ಹೆಗಡೆಯವರು, ಆ ಅನುಭವವನ್ನು ನವಿರಾಗಿ ತಮ್ಮ ಲಲಿತಪ್ರಬಂಧಗಳಲ್ಲಿ ಅಳವಡಿಸಿರುವುದರಿಂದಾಗಿ, ಇಲ್ಲಿ ಬರಹಗಳು ಮನಸ್ಸಿಗೆ ಮುದ ನೀಡುತ್ತವೆ, ಕೆಲವು ಬಾರಿ ಕಚಗುಳಿ ಇಡುತ್ತವೆ, ಇನ್ನು ಕೆಲವು ಬಾರಿ ಚಿಂತನೆಗೂ, ದೀರ್ಘ ಯೋಚನೆಗೂ ಹಚ್ಚುತ್ತವೆ! ''ಸುಚಿತ್ರಾ ಹೆಗಡೆ ಅವರ ಕವಿತೆಗಳ ರೀತಿಗೆ, ಪ್ರವಾಸ ಕಥನದ ಹೊಸತನಕ್ಕೆ ಮಾರು ಹೋದವನಿಗೆ ಸಿಕ್ಕಿದ್ದು ಈ 'ಮಿಂಚು ಹುಳದ ದಾರಿ'. ಕನ್ನಡ ಲಲಿತ ಪ್ರಬಂಧಗಳ ಲೋಕ ಅಂತಹ ಆಶಾದಾಯಕವೇನೂ ಅಲ್ಲ. ಹಿರಿಯರು ಹಾಕಿಕೊಟ್ಟ ದಾರಿ ಸಂಪನ್ನವಾಗಿದ್ದರೂ ಹೊಸ ತಲೆಮಾರು ಲಲಿತ ಪ್ರಬಂಧಗಳತ್ತ ತಿರುಗಿ ನೋಡುತ್ತಿಲ್ಲ. ಅಂತಹ ಸಂದರ್ಭದಲ್ಲಿ ಸುಚಿತ್ರಾ ಅವರ ಈ ಕೃತಿ ಒಂದೇ ಏಟಿಗೆ ಮನ ಸೆಳೆಯುತ್ತದೆ. ಸುಚಿತ್ರಾ ಅವರಿಗೆ ಭಾಷೆಯನ್ನು ಹೇಗೆ ಪಳಗಿಸಬೇಕು ಎನ್ನುವುದು ಗೊತ್ತು, ಯಾವಾಗ ಪಂಚ್ ನೀಡಬೇಕು ಎನ್ನುವುದೂ... ಬೇಕೆಂದಾಗ ಕಚಗುಳಿ ಇಡುವ, ಆಗೀಗ ಕಾವ್ಯಮಯವಾಗುವ, ಸದಾ ಹೊಸತನ್ನೇ ಹುಡುಕುವ ಸುಚಿತ್ರಾ ಅವರ ಈ ಕೃತಿಗೆ ಮಹತ್ವದ ಸ್ಥಾನವಿದೆ.'' (ಬ್ಲರ್ಬ್‌ನಲ್ಲಿ ಜಿ ಎನ್ ಮೋಹನ್)



ಕೋಟ ಹದಿನಾಲ್ಕು ಗ್ರಾಮಗಳು
ಲೇ: ನೀಲಾವರ ಸುರೇಂದ್ರ ಅಡಿಗ
ಪ್ರ: ಮೋಹನ್ ಪ್ರಕಾಶನ ಮೈಸೂರು
9242139645
ಬೆಲೆ ರು.175/-

ಪ್ರಾದೇಶಕ ಮಾಹಿತಿಯ ಮಹತ್ವ

ಈಗಾಗಲೇ ಸುಮಾರು 72 ಪುಸ್ತಕಗಳನ್ನು ಹೊರತಂದಿರುವ ನೀಲಾವರ ಸುರೇಂದ್ರ ಅಡಿಗರು, ನಿರಂತರವಾಗಿ ಸಾಹಿತ್ಯ ಸೇವೆಯನ್ನು ಮಾಡುತ್ತಾ ಬಂದವರು. ಹಾಲಿ ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗಿರುವ ಸುರೇಂದ್ರ ಅಡಿಗರ ಹೊಸ ಪುಸ್ತಕ 'ಕೋಟ ಹದಿನಾಲ್ಕು ಗ್ರಾಮಗಳು' ಒಂದು ಪುಟ್ಟ ವಿಶ್ವಕೋಶದ ಸ್ವರೂಪ ಹೊಂದಿದೆ. ಕೋಟ ಸುತ್ತಲಿನ ಹದಿನಾಲ್ಕು ಗ್ರಾಮಗಳ ಸಮಸ್ತ ವಿವರಗಳನ್ನು, ಅವುಗಳಲ್ಲಿ ಸಾಹಿತ್ಯ ಸಂಸ್ಕೃತಿ ಕಲೆಯ ಜತೆಯಲ್ಲೇ, ಜನರ ಬದುಕು, ಸಮಾಜ, ಸನ್ನಿವೇಶವನ್ನೂ ಅಡಕಗೊಳಿಸಿದ್ದು, ಇಲ್ಲಿ ನೀಡಲಾಗಿದೆ. ಒಬ್ಬ ಸಾಹಿತ್ಯಾಸಕ್ತನಿಗೆ ಇಂತಹ ಮಾಹಿತಿಗಳ ಸಮಗ್ರ ಪರಿಚಯವು, ಅಧ್ಯಯನದ ಮತ್ತು ಅನುಭವ ಸರಕಾಗಿಯೂ ಉಪಯೋಗಕ್ಕೆ ಬರಬಲ್ಲದು ಎಂದು ಗುರುತಿಸಿದಾಗ, ಇಲ್ಲಿನ ವಿಶ್ವಕೋಶ ಸ್ವರೂಪದ ಸಂಗ್ರಹದ ಮಹತ್ವ ಅರಿವಾಗುತ್ತದೆ. ಪ್ರಾದೇಶಿಕ ಅಧ್ಯಯನದ ಮಾರ್ಗವನ್ನು ಅಳವಡಿಸಿಕೊಂಡಿರುವ ಈ ಕೃತಿಯು, ತನ್ನದೇ ರೀತಿಯಲ್ಲಿ ಮಹತ್ವಪೂರ್ಣ ಎನಿಸಿದೆ ಮತ್ತು ಇಂತಹ ನಿಖರ ಮಾಹಿತಿ ಕೋಶಗಳು ನಮ್ಮ ನಾಡಿನ ಎಲ್ಲಾ ಊರುಗಳಿಗೆ ಮತ್ತು ಪ್ರದೇಶಗಳಿಗೆ ಸಂಬಂಧಿಸಿದಂತೆ ಹೊರಬರುವ ಅಗತ್ಯವನ್ನು ಎತ್ತಿ ತೋರಿಸುತ್ತದೆ.

ಗ್ರಾಮೀಣ ತಲ್ಲಣಗಳನ್ನು ಹಿಡಿದಿಟ್ಟ ಕಥೆಗಳು

» ದ್ವಾರನಕುಂಟೆ ಪಾತಣ್ಣ

ಕರೋನಾ ಮತ್ತಿತರ ವಿದ್ಯಮಾನಗಳು ಹಳ್ಳಿಯ ಜನರ ಬದುಕಿನ ಮೇಲೆ ಪರಿಣಾಮ ಬೀರಿ, ಹಲವು ಬಾರಿ ಅವರ ಬದುಕನ್ನೇ ಕಂಗೆಡಿಸಿದ ಪರಿಯನ್ನು ಇಲ್ಲಿನ ಕಥೆಗಳು ಸೊಗಸಾಗಿ ಹಿಡಿದಿಟ್ಟಿವೆ.

ಈ ಕಥಾ ಸಂಕಲನದಲ್ಲಿ 12 ಕಥೆಗಳಿವೆ. ಶೀರ್ಷಿಕೆಯ ಕಥೆ 'ಬೂಸ್ಟರ್ ಡೋಸ್ ಮುನಿಯಮ್ಮ' ಕಥೆಯನ್ನೇ ಪರಿಶೀಲಿಸುವುದಾದರೆ, ತಲತಲಾಂತರದಿಂದ ಬಳುವಳಿಯಾಗಿ ಬಂದಂತಹ 'ಹಸಿರು ತ್ರಾಣ'ದ ನಾಟಿ ವೈದ್ಯ ಪದ್ಧತಿಯನ್ನು ಆಕೆ ಕಲಿತಿದ್ದಾಳೆ. ಅದನ್ನು ಜನೋಪಯೋಗಿ ಕೆಲಸಗಳಿಗೆ ಬಳಕೆ ಮಾಡುವುದು ಅವಳ ಪ್ರವೃತ್ತಿ; ಆದರೆ, ಜನರಿಗೆ ಸಹಾಯ ಮಾಡುವಲ್ಲಿ ನಿರತರಾಗಿದ್ದ ಸಮಯದಲ್ಲಿ ಸರ್ಕಾರಿ ವೈದ್ಯ ಮತ್ತು ಕಾಂಪೌಂಡರ್‌ಗಳ ಚಿತಾವಣೆಗೆ ನೊಂದ ಮುನಿಯಮ್ಮ, ಭಯಭೀತಳಾದಳು. ಕೊನೆಗೆ ಪೊಲೀಸ್ ದೂರು ನೀಡಲಾಗುತ್ತದೆ. ಪೊಲೀಸರ ದರ್ಪಕ್ಕೆ ಮಂಕಾದ ಮುನಿಯಮ್ಮಳಿಗೆ ದಿಕ್ಕೇ ತೋಚದಂತಾದ ಸಮಯದಲ್ಲಿ, ನಿವೃತ್ತ ಪೊಲೀಸ್ ಒಬ್ಬರ ಸಹಾಯದಿಂದ ಆಕೆಗೆ ಸ್ವಲ್ಪ ಆಸರೆ ದೊರಕಿತು; ಧೈರ್ಯ ಬಂದಿತು. ಆದರೆ ಆಕೆ ಮಾತ್ರ ಈ ಚಿತಾವಣೆಯನ್ನು ನೆನೆದು ದುಃಖಿತಳಾಗಿದ್ದಳು. ಆದರೂ ಇವೆಲ್ಲವನ್ನು ಸಮಾಧಾನ ಚಿತ್ತದಿಂದ ಎದುರಿಸುತ್ತಾ ತಾನು ನಂಬಿದ ಕಾಯಕವನ್ನು ಮುಂದುವರಿಸಿದ್ದಳು.

'ಕಾಯಿಲೆ ಬರುವುದು ದೇಹಕ್ಕಲ್ಲ ಮನುಷ್ಯನ ಮನಸ್ಸಿಗೆ' ಎನ್ನುವುದು ಅವಳಿಗೆ ಈಗ ಅರ್ಥವಾಗಿತ್ತು. ತಾನು ಇಷ್ಟು ದಿವಸ ದೇಹಕ್ಕಾಗಿ ಕಾಯಿಲೆ ಕಸಾಲೆಗೆ ಮದ್ದು ಕೊಟ್ಟಿದ್ದು ವ್ಯರ್ಥವಾಗಿ ಹೋಯಿತು 'ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತೆ ಆಯ್ತು' ಎಂದು ರೋಸಿ ಹೋಗುತ್ತಾಳೆ. ಎಷ್ಟೇ ಕಷ್ಟ ಬಂದರೂ ಆತ್ಮಸ್ಥೈರ್ಯದಿಂದ ಬದುಕು ಕಟ್ಟಿಕೊಳ್ಳುವ ನಿಟ್ಟಿನಿಂದ, ಆಕೆ ಬದುಕಿನುದ್ದಕ್ಕೂ ನಡೆಸಿದ ಹೋರಾಟ ಅನನ್ಯ. ಈ ನಡುವೆ, ಇಡೀ ಊರಿಗೆ ಮತ್ತು ಜಗತ್ತಿಗೆ ಕರೋನಾ ಕಾಯಿಲೆ ಅಪ್ಪಳಿಸಿದಾಗ, ತನ್ನ ಗಂಡ ಊರಿನ ಜನರಿಗೆ ಮದ್ದು ಕೊಡುವಾಗಲೇ, ಕುಸಿದು ಸಾವನ್ನಪ್ಪುತ್ತಾನೆ. ಇದು ಎಲ್ಲರ ಮೇಲೆ ಪರಿಣಾಮ ಬೀಡುತ್ತದೆ: ಊರಿನ ಜನ 'ಮದ್ದು ಕೊಡುವ ಅವನನ್ನೇ ಸಾವು ಬಿಡಲಿಲ್ಲ, ಇನ್ನು ನಮ್ಮನ್ನು ಬಿಟ್ಟೀತೆ!' ಎಂದು ಉದ್ಗರಿಸಿ, ತುಸು ದಿಗಿಲಿನಲ್ಲಿ ಸಿಲುಕಿದಾಗ, ಮುನಿಯಮ್ಮ ಸಂದಿಗ್ಧಕ್ಕೆ ಒಳಗಾಗುತ್ತಾಳೆ; ಊರಿಗೆ ಅಪ್ಪಳಿಸಿದ ಕರೋನಾ ಕಾಯಿಲೆಯಿಂದ ಉಂಟಾಗುವ ಅನಾಹುತ ತಪ್ಪಿಸಲೆಂದು, ಮುನಿಯಮ್ಮ ಹೆಗಲಿಗೆ ಜೋಳಿಗೆ ಹಾಕಿಕೊಂಡು, 'ಹಸಿರು ತ್ರಾಣ'ದ ಮದ್ದು ಹುಡುಕಲು ಮೊಮ್ಮಕ್ಕಳ ಜೊತೆಗೆ ಕಾಡಿಗೆ ಹೋದಳು.



ಬೂಸ್ಟರ್ ಡೋಸ್ ಮುನಿಯಮ್ಮ
ಲೇ: ಸಂತೆಕಸಲಗೆರೆ ಪ್ರಕಾಶ್
ಪ್ರ: ವೀರ ಲೋಕ ಪುಸ್ತಕ ಬೆಂಗಳೂರು

'ಕೂಗು ಮಾರಿಯ ದುಗುಡ' ಕಥೆಯ ಶೀರ್ಷಿಕೆಯಲ್ಲಿ ಕಥೆಯು ಅಡಕವಾಗಿದೆ. ಕರೋನಾ ಬಂದು ವಿಶ್ವವನ್ನೇ ತಲ್ಲಣಗೊಳಿಸಿತು ಎಂಬ ಒಂದು ಎಳೆಯ ಕಥೆಯನ್ನು ಇಟ್ಟುಕೊಂಡು ರಚಿತವಾದ ಕಥೆ ಇದು. ಚೆನ್ನಮ್ಮ ತನ್ನ ಮಗ ಮತ್ತು ಸೊಸೆಯನ್ನು ಕರೋನಾಗೆ ತುತ್ತಾಗಿದ್ದ ಸನ್ನಿವೇಶದಲ್ಲಿ ತನ್ನ ಗೂರಲು ಪತಿ ಹಾಗೂ ವಂಶದ ಕುಡಿ ಮೊಮ್ಮಗನೊಂದಿಗೆ ಜೀವಿಸುವ ಹೊತ್ತಿನಲ್ಲಿ ಹಸಿವಿನಿಂದ ಕಂಗೆಟ್ಟು ತುತ್ತು ಅನ್ನಕ್ಕಾಗಿ ಹೇಗೆ, ಕಷ್ಟ ಅನುಭವಿಸಿದಳು ಎಂಬುದನ್ನು ಪ್ರಕಾಶ ಅವರು ಕರುಳು ಕಿತ್ತು ಬರುವಂತೆ ಚಿತ್ರಿಸಿದ್ದಾರೆ. ಇಡೀ ಜಗತ್ತನ್ನು ಕರೋನಾ ಕಾಡಿದ ನೋವು, ಈ ಕಥೆಯಲ್ಲಿ ಅಡಕಗೊಳಿಸಿದ್ದಾರೆ ಎನ್ನಬಹುದು.

'ಆಕಾಶದ ಚುಕ್ಕೆಯಾದ ಅಜ್ಜಿ' ಕಥೆಯಲ್ಲಿ ಅಜ್ಜಿಯು ಮಕ್ಕಳೊಂದಿಗೆ ಮಕ್ಕಳಾದ ಕಥೆಯಿದೆ. ಮಕ್ಕಳಿಗೆ ತಾನು ತಿಳಿದ ಕಥೆಗಳನ್ನು ಹೇಳುವುದರ ಮೂಲಕ ಮಕ್ಕಳ ಮನಸ್ಸನ್ನು ಪರಿವರ್ತನೆಯ ಭಾಗವಾಗಿ ನೋಡಬಹುದು. ಜೊತೆಗೆ ದೇಶಿಯ ಆಟಗಳಾದ ಕುಂಟಬಿಲ್ಲೆ, ಚೌಕಭಾರ, ಆಣಿಕಲ್ಲು ಆಡುವುದರೊಂದಿಗೆ ಮಕ್ಕಳಾಗಿದ್ದ ಅಜ್ಜಿ ಅವರಿಗೆ ಕಣ್ಮಣಿ ಯಾಗಿದ್ದಳು. ಈ ಸಂಕಲನದಲ್ಲಿರುವ ಇತರ ಕಥೆಗಳು ಸಹ ಗ್ರಾಮೀಣ ಜೀವನದ ತಲ್ಲಣಗಳನ್ನು ಸೊಗಸಾಗಿ ಹಿಡಿದಿಟ್ಟಿವೆ. ಹಳ್ಳಿಯಲ್ಲಿ ಆಗುತ್ತಿರುವ ಬದಲಾವಣೆ, ಆಧುನಿಕತೆಯು ತಂದಿಟ್ಟ ಸಂಕಷ್ಟಗಳು, ಕರೋನಾದಂತಹ ಹೆಸರೇ ಕೇಳಿರದ ಕಾಯಿಲೆಗಳು ಗ್ರಾಮೀಣ ಮನಸ್ಸುಗಳ ಮೇಲೆ ಬೀರಿದ ಪರಿಣಾಮ ಮೊದಲಾದ ವಿಷಯಗಳ ಸುತ್ತಲೇ ಸುತ್ತವ ಇಲ್ಲಿನ ಕಥೆಗಳು, ಹೊಸದೊಂದು ಪ್ರಪಂಚವನ್ನು ಪರಿಚಯಮಾಡಿಸುತ್ತವೆ.

ಪತ್ರಕರ್ತರಾದ ಸಂತೆಕಸಲಗೆರೆ ಪ್ರಕಾಶ್ ಅವರು ಈಗಾಗಲೇ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ ಮತ್ತು ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇವರಿಗೆ ಕಥೆ ಕಟ್ಟುವ ಹೇಳುವ ಕಲೆಗಾರಿಕೆ ಸಿದ್ಧಿಸಿದೆ; ಇಲ್ಲಿನ ಕಥೆಗಳು ಓದಿಸಿಕೊಂಡು ಹೋಗುವ ಗುಣ ಹೊಂದಿದೆ.

ಕಥೆಗಾರ ಓದುಗರ ನಡುವಿನ ಸಂವಾದ!

ಹಲವರ ಮೆಚ್ಚುಗೆ ಗಳಿಸಿರುವ ಕಥಾ ಸಂಕಲನ 'ಸೀತಾಳೆದಂಡೆಯ ಸದ್ದಿಲ್ಲದ ಕತೆಗಳು' ಮರುಮುದ್ರಣ ಕಂಡಿರುವ ಸಂದರ್ಭದಲ್ಲಿ, ಅಲ್ಲಿನ ಕಥೆಗಳ ಕುರಿತ ಕಿರು ಅವಲೋಕನ.

ಲೇಖಕಿ, ಪತ್ರಕರ್ತೆ ಭಾರತಿ ಹೆಗಡೆ ಅವರ 'ಸೀತಾಳೆದಂಡೆಯ ಸದ್ದಿಲ್ಲದ ಕತೆಗಳು' ಎರಡನೆಯ ಮುದ್ರಣ ಕಂಡಿದೆ; ಇಲ್ಲಿನ ಕತೆಗಳ ಕುರಿತು, ಬೆನ್ನುಡಿಯಲ್ಲಿ ಲೇಖಕ, ಕೆಂಡಸಂಪಿಗೆಯ ಅಬ್ದುಲ್ ರಶೀದ್ ಅವರು ಹೇಳಿರುವುದು ಹೀಗೆ: ''ಭಾರತಿ ತಲ್ಲೀನಳಾಗಿ ಹೇಳುತ್ತಿದ್ದ ಕಥೆಗಳನ್ನು, ''ಎಷ್ಟು ಚಂದ ಹೇಳೀಯ ಮಾರಾಯ್ತಿ, ಅಡ್ಡ ಬೀಳ್ತಿನಿ ಬರಿ' ಅಂತ ಬರೆಸಿದ ಖುಷಿ ನನ್ನಲ್ಲಿ ಈಗಲೂ ಹಾಗೇ ಇದೆ. ಪತ್ರಿಕೆಗಳ ಸಿನೆಮಾ ಪುಟಗಳಲ್ಲಿ, ಮಹಿಳಾ ಪುರವಣಿಗಳಲ್ಲಿ ಸದಾ ಮುಳುಗಿದ್ದ ಈಕೆಯ ಜೀವ ಇರುವುದು ಕಥೆಗಳನ್ನು ಕಾಣುವುದರಲ್ಲಿ ಮತ್ತು ಅದನ್ನು ಬರೆಯುವುದರಲ್ಲಿ ಎನ್ನುವ ನನ್ನ ನಂಬಿಕೆಯೂ ಹೆಚ್ಚಾಗುತ್ತಲೇ ಇದೆ. ಕಥಾ ಶ್ರವಣದಿಂದ ಬದುಕಿನ ಬವಣೆಗಳಿಗೆ ಮುಕ್ತಿ ದೊರೆಯುವುದು ಹಾಗೂ ಕಥೆ ಹೇಳುವುದರಿಂದ ಜೀವವೊಂದು ಅಂತ್ಯದಿಂದ ಪಾರಾಗುವುದು ಎಂಬ ಮಾತುಗಳನ್ನು ನಾನು ನಂಬುತ್ತೇನೆ. ಇಲ್ಲಿರುವ ಕಥೆಗಳು ಅವುಗಳೊಳಗಿರುವ ಕಥಾ ಪಾತ್ರಗಳ ಜೀವನದ ಪಾಡುಗಳನ್ನು ಒಂದು ಚೌಕಟ್ಟಿನೊಳಗಿಟ್ಟು ಒಂದು ಪ್ರಾಪಂಚಿಕ ಅರ್ಥ ನೀಡುತ್ತದೆ. ತಾವು ಕೊನೆಗೂ ಸಮಾಜದಿಂದ ನಿಕೃಷ್ಟರೆಂದು ಅನಿಸಿಕೊಂಡು ಅಂತ್ಯಕ್ಕೀಡಾದ ಇಲ್ಲಿನ ಬಹುತೇಕ ನೈಜ ಕಥಾ ಪಾತ್ರಗಳು ಆ ಕಾಲದಲ್ಲಿ ಬಾಲಕಿಯಾಗಿದ್ದ ಚುರುಕು ಕಣ್ಣಿನ, ಭಯ ಸಂಕೋಚಗಳ ಭಾರತಿಯ ಮಿದುಳೊಳಗೆ ಎರಕಗಳಾಗಿ ಹೋಗಿದ್ದವರು ಈ ಬರಹಗಳಿಂದಾಗಿ ಬಿಡುಗಡೆಗೊಂಡು ಜೀವಪಡೆದು ನಮ್ಮ ಸುತ್ತಮುತ್ತ ಬೆಳಕು ಸೂಸುವ ಆತ್ಮಗಳಂತೆ ಹಾರಾಡತೊಡಗುತ್ತಾರೆ.

''ಕಥೆ ಬರೆಯುವುದೆಂದರೆ ಲೇಖಕಿ ಅಥವಾ ಲೇಖಕ ತನಗೆ ತಾನೇ ಮಾಡಿಕೊಳ್ಳುವ ಸ್ವಯಂ ಮನೋಚಿಕಿತ್ಸೆ. ಒಂದು ರೀತಿಯಲ್ಲಿ ಸ್ವಂತವಾದ ತಮ್ಮ ಹಲವು ವ್ಯಾಕುಲಗಳಿಂದ ಬಿಡುಗಡೆಗೊಳ್ಳುವ ಬಗೆ. ಕಥೆ ಹೇಳುವುದರ ಮೂಲಕ ಆ ಕಥಾಲೋಕದ ಕತ್ತಲ ಕೋಣೆ ಯೊಂದರ ಕಥಾಪಾತ್ರದಂತಿರುವ ಬರಹಗಾರನೂ ಬೆಳಕ ಕಿಂಡಿಗಳನ್ನು ಕಾಣಲು ತೊಡಗುತ್ತಾನೆ ಮತ್ತು ಅವುಗಳನ್ನು ಓದುಗನಿಗೂ ಅವ್ಯಕ್ತವಾಗಿ ಕಾಣಿಸುತ್ತಾನೆ. ಕಥೆಯೊಂದನ್ನು ಹೇಳುವುದು ಕೇಳುವುದು ಬರೆಯುವುದು ಮತ್ತು ಓದುವುದು ಇವೆಲ್ಲವೂ ಕಥೆ ಬರೆಯುವವರ ಮತ್ತು ಓದುವವರ ನಡುವೆ ನಡೆಯುವ ಜೀವ ಸಂವಾದ. ಭಾರತಿ ಈ ಸಂವಾದವನ್ನು ಬಹಳ ಶಕ್ತವಾಗಿ ಆದರೆ ಆಯಾಸಗೊಳ್ಳದ ಹಾಗೆ ನಿರ್ವಹಿಸಿದ್ದಾರೆ. ಅವರ ಮಿದುಳಿಗಿಂತ ಹೃದಯವೇ ಹೆಚ್ಚು ಮಿಡಿದಿರುವುದರಿಂದ ಅವರಿಗೆ ಆಯಾಸವಾಗಿಲ್ಲ.

''ಇಲ್ಲಿರುವ ಕಥೆಗಳನ್ನು ಸ್ತ್ರೀ ಶೋಷಣೆ, ಲಿಂಗ ತಾರತಮ್ಯ ಧಾರ್ಮಿಕ ಮಡಿವಂತಿಕೆ ಇತ್ಯಾದಿ ಕೋನಗಳಿಂದ ನೋಡುವವರ ಕುರಿತು ನಾನು ಏನೂ ಹೆಚ್ಚಿಗೆ ಹೇಳಲಾರೆ. ಈ ಕಥೆಗಳಲ್ಲಿ ಬದುಕಿರುವ ಆದರೆ ನಿಜದಲ್ಲಿ ಮಡಿದಿರುವ ಜೀವಗಳಿಗೆ ಭಾರತಿ ಸ್ವರ್ಗವನ್ನೂ ತೋರಿಸದೆ, ನರಕವನ್ನೂ ಕಾಣಿಸದೆ ರೆಕ್ಕೆಗಳನ್ನು ಕೊಟ್ಟು ಮತ್ತೆ ಹಾರಲು ಬಿಟ್ಟಿದ್ದಾರೆ. ಜೊತೆಗೆ ತಾವೂ ತಮ್ಮ ಬಾಲ್ಯದ ಹಲವು ಕೆಟ್ಟ ಕಾರ್ಪಣ್ಯಗಳ ನೆನಪ ಸಂಕಟಗಳಿಂದ ಬಿಡುಗಡೆ ಪಡೆದಿದ್ದಾರೆ.''(ಬೆನ್ನುಡಿಯಲ್ಲಿ ಅಬ್ದುಲ್ ರಶೀದ್)

ಸೀತಾಳೆದಂಡೆಯ ಸದ್ದಿಲ್ಲದ ಕತೆಗಳು
ಲೇ: ಭಾರತಿ ಹೆಗಡೆ
ಪ್ರ: ವಿಕಾಸ ಪ್ರಕಾಶನ
99000 95204
ಬೆಲೆ ರು.250/-

ಭಾರತದ ಪ್ರಗತಿಯ ಕನ್ನಡಿ

» ಅಜಯ್

1947ರಲ್ಲಿ ಭಾರತ ವಿದೇಶಿ ದಾಸ್ಯದಿಂದ ಸ್ವತಂತ್ರಗೊಂಡಾಗ ರಾಜಕೀಯವಾಗಿ, ಧಾರ್ಮಿಕವಾಗಿ, ಸಾಂಘಿಕವಾಗಿ ಹಾಗೂ ಆರ್ಥಿಕವಾಗಿ ಇದ್ದ ಸ್ಥಿತಿಯನ್ನು ಕಂಡು ಹಲವರು ಪ್ರಮುಖ ವಿದೇಶಿ ನಾಯಕರು ಹಾಗೂ ಗಣ್ಯ ವಿದ್ವಾಂಸರು 'ಈ ದೇಶ ಹೆಚ್ಚು ಕಾಲ ಒಂದಾಗಿ ಉಳಿಯಲಾರದು, ಉಳಿದರೂ ಪ್ರಜಾಪ್ರಭುತ್ವ ರಾಷ್ಟ್ರವಾಗಿರಲಾ ರದು' ಎಂದು ಷರಾ ಬರೆದು ಬಿಟ್ಟಿದ್ದರು. ಅದಾಗಿ ಮುಕ್ಕಾಲು ಶತಮಾನ ಕಳೆದು ಹೋಗಿದೆ. ಭಾರತ ಒಂದಾಗಿ ಉಳಿದಿದೆ ಮತ್ತು ಭಾರತೀಯರು ''ಅಜಾದಿ ಕಾ ಅಮೃತ್ ಮಹೋತ್ಸವ'' ಅನ್ನು ಹೆಮ್ಮೆ ಹಾಗೂ ಸಂಭ್ರಮದಿಂದ, ಆಚರಿಸಿದ್ದನ್ನು ಜಗತ್ತೇ ನೋಡಿದೆ. ಇಲ್ಲಿ ಪ್ರಜಾಪ್ರಭುತ್ವ ದಿನೇ ದಿನೇ ದೃಢಗೊಳ್ಳುತ್ತಿದೆ ಎನ್ನುವುದಕ್ಕೆ ಸಾಕ್ಷಿಯಾಗಿ ಭಾರತೀಯರು ಈಗಷ್ಟೇ ಹದಿನೆಂಟನೆಯ ಲೋಕಸಭೆಯನ್ನು ಯಶಸ್ವಿಯಾಗಿ ಆಯ್ಕೆಮಾಡಿದ್ದಾರೆ. ಆರ್ಥಿಕವಾಗಿ ಅಂದು ನಿಕೃಷ್ಟ ಸ್ಥಾನದಲ್ಲಿದ್ದ ಭಾರತ ಇಂದು ಜಗತ್ತಿನ ಐದನೆಯ ಅತಿದೊಡ್ಡ ಅರ್ಥವ್ಯವಸ್ಥೆ, ಸದ್ಯದಲ್ಲೇ ಜರ್ಮನಿ ಹಾಗೂ ಜಪಾನ್ ಅನ್ನು ಹಿಂದೆ ಹಾಕಿ ಭಾರತ ಜಗತ್ತಿನ ಮೂರನೆಯ ಬೃಹತ್ ಅರ್ಥ ವ್ಯವಸ್ಥೆಯಾಗಲಿದೆ ಎಂದು ಜಾಗತಿಕ ಆರ್ಥಿಕ ಹಾಗೂ ಹಣಕಾಸು ಸಂಸ್ಥೆಗಳು ಹೇಳುತ್ತಿವೆ. ಒಂದು ಕಾಲದಲ್ಲಿ ಆಹಾರ ಧಾನ್ಯಗಳ ಬಹುದೊಡ್ಡ ಆಯಾತಕ ರಾಷ್ಟ್ರವಾಗಿದ್ದ ಭಾರತ ಇಂದು ಅವುಗಳನ್ನು ಗಣನೀಯ ಪ್ರಮಾಣದಲ್ಲಿ ರಫ್ತುಮಾಡುತ್ತಿದೆ. ಜತೆಗೆ ಔಷಧಿಗಳು ಮತ್ತು ವೈದ್ಯಕೀಯ ಸಲಕರಣೆಗಳ ಉತ್ಪಾದನೆ ಹಾಗೂ ರಫ್ತಿನಲ್ಲೂ ಭಾರತ ಮುಂಚೂಣಿಯಲ್ಲಿದೆ. ಸೇನಾಶಕ್ತಿಯಲ್ಲಿ ಇಂದು ಭಾರತ ಜಾಗತಿಕವಾಗಿ ನಾಲ್ಕನೆಯ ಸ್ಥಾನದಲ್ಲಿದೆ ಮತ್ತು ಅದರ ಶಕ್ತಿ ದಿನೇ ದಿನೇ ವೇಗವಾಗಿ ವೃದ್ಧಿಸುತ್ತಿದೆ. ವಿದೇಶ ನೀತಿ ಹಾಗೂ ಅಂತರರಾಷ್ಟ್ರೀಯ ರಾಜತಂತ್ರದಲ್ಲೂ ಭಾರತದ ಸಾಧನೆ ಮತ್ತು ವರ್ಚಸ್ಸುಗಳಂತೂ ಎಲ್ಲೆಲ್ಲೂ ಪ್ರಶಂಸೆಗೆ ಪಾತ್ರವಾಗುತ್ತಿದೆ. ಅಲ್ಲಲ್ಲಿ ಅಸೂಯೆಯೂ ಹೊಗೆಯಾಡುವುದುಂಟು. ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುತ್ತಲೇ ಶಕ್ತಿಬಣಗಳ ನಡುವೆ ಸಂಬಂಧಗಳ ಸಮತೋಲನವನ್ನು ಕಾಪಾಡಿಕೊಂಡು ಹೋಗುತ್ತಿರುವ ಭಾರತ ಇತರ ಅನೇಕ ದೇಶಗಳಿಗೆ ಮಾದರಿಯಾಗಿದೆ. ಇದೆಲ್ಲವೂ ಆದದ್ದು ಹೇಗೆ?'' ಈ ಪ್ರಶ್ನೆಯನ್ನು ತೆಗೆದುಕೊಂಡು, ವಿಭಿನ್ನ ಆಯಾಮದಲ್ಲಿ ಈ ಪುಸ್ತಕದಲ್ಲಿ ಚರ್ಚೆ ನಡೆಸಲಾಗಿದೆ.



75ರ ಭಾರತ
ಲೇ: ಪ್ರೇಮಶೇಖರ
ಪ್ರ: ವಿಕ್ರಮ್ ಪ್ರಕಾಶನ
9740994008
ಬೆಲೆ ರು.440/-

ರೋಚಕ ಓದಿನ ಸುಖ



ಅವಳಿ ಎಂಬ ಮಾಯೆ
ಲೇ: ಬೇಲೂರು ರಾಮಮೂರ್ತಿ
ಪ್ರ: ಅಂಕಿತ ಪುಸ್ತಕ ಬೆಂಗಳೂರು
ಬೆಲೆ ರು.250/-

» ರಾಯಭಾರಿ

ಅಧ್ಯಾತ್ಮ ವಿಚಾರ, ಹಾಸ್ಯ, ನಗೆಬರಹ ಮತ್ತು ನಾನಾ ಪ್ರಕಾರಗಳ ಸಾಹಿತ್ಯರಚನೆಯಲ್ಲಿ ತೊಡಗಿಕೊಂಡಿರುವ ಬೇಲೂರು ರಾಮಮೂರ್ತಿ ಯವರ ಲೇಖನಿಯಿಂದ ಈಗ ಪತ್ತೇದಾರಿ ಕಾದಂಬರಿ ಯೊಂದು ಹೊರ ಬಂದಿದೆ. ನೂರಕ್ಕೂ ಹೆಚ್ಚು ಪುಸ್ತಕ ಗಳನ್ನು ಈಗಾಗಲೇ ಬರೆದಿರುವ ಲೇಖಕರು, ಪತ್ತೇ ದಾರಿ ಕಾದಂಬರಿಯಲ್ಲಿ ರೋಚಕ ಕಥೆಯೊಂದನ್ನು ಹೇಳಲು ಹೊರಟಿದ್ದಾರೆ. ''ನಿರ್ಜನವಾದ ಬೀದಿ, ಸಂಜೆಗತ್ತಲು, ಒಬ್ಬ ವ್ಯಕ್ತಿ ಹಿಂದೆ ಹಿಂದೆ ತಿರುಗಿ ನೋಡುತ್ತಾ ಅನುಮಾನಾಸ್ಪದವಾಗಿ ಬೇಗ ಬೇಗ ಹೆಜ್ಜೆ ಹಾಕುತ್ತಿದ್ದಾನೆ. ಅವನಿಗೆ ಗೊತ್ತಾಗದಂತೆ ಒಬ್ಬ ಹಿಂಬಾಲಿಸುತ್ತಿದ್ದಾನೆ. ಅವನ ಕೈಯಲ್ಲಿ ಪಿಸ್ತೂಲಿದೆ. ದೂರದಲ್ಲೆಲ್ಲೋ ನಾಯಿ ಬೊಗಳುತ್ತಿದೆ. ಸಣ್ಣದಾಗಿ ಮಳೆ ಬೀಳುತ್ತಿದೆ. ಮುಂದೆ ಹೋಗುತ್ತಿದ್ದ ವ್ಯಕ್ತಿ ಓಡಲು ಆರಂಭಿಸುತ್ತಾನೆ. ಹಿಂಬಾಲಿಸುತ್ತಿದ್ದವ ಕೂಡಲೇ ಗುರಿಯಿಟ್ಟು ಪಿಸ್ತೂಲಿನಿಂದ ಇನ್ನೇನು ಗುಂಡು ಹಾರಿಸಬೇಕು.... ಇಲ್ಲ ಇಲ್ಲ, ಬೇಲೂರು ರಾಮ ಮೂರ್ತಿಯವರ ಪುಸ್ತಕದಲ್ಲಿ ಹೀಗೆಲ್ಲಾ ಆಗುವುದಿಲ್ಲ. ಕೊಲೆಯಾಗುತ್ತದೆ ನಿಜ. ಅದೂ ಹಾಡು ಹಗಲಲ್ಲೇ. ಆ ಕೊಲೆಗಾರನನ್ನು ಪತ್ತೆಹಚ್ಚಲು ಪೊಲೀಸರು ತಮ್ಮೆಲ್ಲಾ ಬುದ್ಧಿ ಖರ್ಚು ಮಾಡುತ್ತಾರೆ. ಕಂಡ ಕಂಡವರ ಮೇಲೆಲ್ಲಾ ಅನುಮಾನ ಪಡುತ್ತಾರೆ. ಪ್ರತಿ ಅಧ್ಯಾಯವೂ ಆಕಸ್ಮಿಕ ತಿರುವುಗಳನ್ನು ಹೊಂದಿದೆ. ಓದುಗರು ಮುಂದಿನ ದೃಶ್ಯ ಊಹಿಸುವು ದರಲ್ಲಿ ಮತ್ತೇನೋ ನಡೆದಿರುತ್ತದೆ.'' (ಬೆನ್ನುಡಿ ಯಿಂದ) ರೋಚಕ ದಾರಿಯಲ್ಲಿ ಸಾಗುವ ಕುದುರೆಯ ಮೇಲಿನ ನಾಗಾಲೋಟವನ್ನು ಸವಿಯಲು ಈ ಕಾದಂಬರಿಯನ್ನು ಓದಬಹುದು.

ಒಂದು ಕಾಲದಲ್ಲಿ ಕಾಸರ ಗೋಡು ಕನ್ನಡನಾಡಿನ ಭಾಗ ವಾಗಿತ್ತು; ಈಗ ಕೇರಳದ ಪಾಲಾಗಿದೆ. ಅಲ್ಲಿನ ಕನ್ನಡಿಗರು ಸಾಹಿತ್ಯ, ಸಂಗೀತ, ಕಲೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಅಪಾರ ಸಾಧನೆ ಗೈದಿದ್ದಾರೆ. ಅಂಥವರ ಪರಿಚಯ ವನ್ನು ಮಾಡಿಕೊಡುವ ಈ ಪುಸ್ತಕವು, ಕನ್ನಡದ ಶಕ್ತಿಯನ್ನೂ ಬಿಂಬಿಸುತ್ತದೆ.

ಕಾಸರಗೋಡಿನ ಕನ್ನಡಿಗರು!

» ಮಂಜುನಾಥ ಡಿ. ಎಸ್.

ಭಾಷಾಧಾರಿತ ಪ್ರಾಂತ್ಯಗಳ ರಚನೆಗೆ ಮೊದಲು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದ ಕಾಸರಗೋಡು ಕರ್ನಾಟಕದ ಅವಿ ಭಾಜ್ಯ ಅಂಗವಾಗಿತ್ತು. ಬಹುಭಾಷೆ, ಬಹು ಸಂಸ್ಕೃತಿಯ ನೆಲವಾಗಿದ್ದರೂ ಕಾಸರಗೋಡು ಕನ್ನಡ ಸಾಧಕರ ತಪೋಭೂಮಿಯಾಗಿತ್ತು. ಕನ್ನಡ ಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟ ಕಟ್ಟಾಳುಗಳ ಕರ್ಮಭೂಮಿಯಾಗಿತ್ತು. ಕಾಸರಗೋಡು ಕೇರಳಕ್ಕೆ ಸೇರಿ ಏಳು ದಶಕ ಗಳು ಸಂದಿದ್ದರೂ ಕನ್ನಡವನ್ನೇ ಉಸಿರಾಡುವ ಶಿಕ್ಷಕರು, ವಿದ್ಯಾರ್ಥಿ ಗಳು, ಲೇಖಕರು, ಕವಿ ಗಳು, ವಿಮರ್ಶಕರು, ಸಂಘಟಕರು ಈಗಲೂ ಇದ್ದಾರೆ. ಆದರೆ ಅವರಲ್ಲಿ ಬಹುತೇಕರು ಅಜ್ಞಾತವಾಗಿಯೇ ಉಳಿದಿದ್ದಾರೆ.

ಕಾಸರಗೋಡಿನ ವಿವಿಧ ಕ್ಷೇತ್ರಗಳ ಹಿರಿಯ, ಪ್ರಬುದ್ಧ, ಪ್ರತಿಭಾವಂತ ಕನ್ನಡ ಸಾಧಕರನ್ನು ಗುರ್ತಿಸಿ, ಅವರ ಕೊಡುಗೆಯನ್ನು ಕೃತಜ್ಞತೆ ಯಿಂದ ಸ್ಮರಿಸಿ, ಅವುಗಳನ್ನು ದಾಖಲಿಸುವ ಮೂಲಕ ಅವರನ್ನು ಮುಂದಿನ ತಲೆಮಾರುಗಳಿಗೆ ಪರಿಚಯಿಸಲು ಆಶಿಸಿದ ವರು ಬಹುಮುಖ ಪ್ರತಿಭೆ ಡಾ. ರಮಾನಂದ ಬನಾರಿಯವರು. ಸಪ್ತ ಸದಸ್ಯರ ಸಂಪಾ ದಕೀಯ ಸಲಹಾ ಸಮಿತಿ ಯನ್ನು ರಚಿಸಿ, ಅದರ ಸಾರಥ್ಯ ವಹಿಸಿ, 'ಕನ್ನಡಿ ಯಲ್ಲಿ ಕನ್ನಡಿಗ' ಶೀರ್ಷಿಕೆಯ ಐದು ಸಂಪುಟ ಗಳನ್ನು ಪ್ರಕಟಿಸಿದ್ದಾರೆ.

ಹಲವು ಮಾನದಂಡ ಗಳನ್ನಾ ಧರಿಸಿ ಆಯ್ಕೆ ಮಾಡಿದ ಸಾಧಕರನ್ನು ಪರಿಚಯಿಸುವ ಈ ಕೃತಿಯಲ್ಲಿ ಸಂದರ್ಶನದ ಮಾದರಿಯನ್ನು ಬಳಸಿಕೊಳ್ಳಲಾಗಿದೆ. ಇತ್ತೀಚೆಗೆ ಲೋಕಾರ್ಪಣೆಗೊಂಡ, 'ಕನ್ನಡಿ ಯಲ್ಲಿ ಕನ್ನಡಿಗ' ಕೃತಿಯ ಐದನೆಯ ಸಂಪುಟವನ್ನು ಡಾ. ಪ್ರಮೀಳಾ ಮಾಧವ್ ಸಂಪಾದಿಸಿದ್ದಾರೆ. ಮೊದಲ ನಾಲ್ಕು ಸಂಪುಟಗಳಲ್ಲಿ ಒಟ್ಟು 50 ಸಾಧಕರ ಪ್ರತಿಭೆ ಹಾಗು ಕೊಡುಗೆಗಳು ಸಾಕಾರ ಗೊಂಡಿವೆ. ಇದೀಗ ಹೊರ ಬಂದಿರುವ ಐದನೆಯ ಸಂಪುಟದಲ್ಲಿ 16 ಸಾಧಕರ ವಿವರಗಳು ದಾಖಲಾ ಗಿವೆ. ಶಿಕ್ಷಣ ತಜ್ಞರು, ನ್ಯಾಯಾಧೀಶರು, ನ್ಯಾಯವಾದಿ ಗಳು, ಆಡಳಿತಾಧಿಕಾರಿಗಳು, ಗ್ರಂಥ ಪಾಲಕರು, ಸಾಹಿತಿಗಳು, ಪತ್ರಕರ್ತರು, ಸಂಘಟಕರು, ಹಾಗು ಕಲಾವಿದರು ಈ ಸಂಚಿಕೆ ಯಲ್ಲಿ ಸ್ಥಾನ ಪಡೆದಿದ್ದಾರೆ.

ಈ ಕೃತಿಯ ಓದು ಸಾಧಕರ ಪ್ರಮುಖ ಗುಣಗಳಾದ ಶಿಸ್ತು, ಛಲ, ಜ್ಞಾನದಾಹ, ಪರಿಶ್ರಮ, ಇತ್ಯಾದಿಗಳನ್ನು ಮನದಟ್ಟು ಮಾಡಿಸುತ್ತದೆ. ಕಾಸರಗೋಡಿನಲ್ಲಿದ್ದ ಆರೇಳು ದಶಕಗಳ ಹಿಂದಿನ ಸಾಹಿತ್ಯ ಹಾಗು ಕಲಾ ಸಮೃದ್ಧ ಚಿತ್ರವೂ ಕಣ್ಮುಂದೆ ಮೂಡುತ್ತದೆ. ಸಂಪನ್ಮೂಲ ಕೊರತೆ ಗಳಿದ್ದರೂ ಲೆಕ್ಕಿಸದೆ, ಛಲ ಹಾಗು ಪರಿಶ್ರಮ ಗಳಿಂದ ಮುನ್ನಡಿಯಿಟ್ಟು ಸಾಧನೆಗೈದಿರುವುದು ಗೋಚರಿಸುತ್ತದೆ.



ಕನ್ನಡಿಯಲ್ಲಿ ಕನ್ನಡಿಗ 5
ಸಂ: ಡಾ. ಪ್ರಮೀಳಾ ಮಾಧವ್
ಪ್ರ: ಅಚಲ ಪ್ರಕಾಶನ,
ಬೆಲೆ : ರು.245/-

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಬದುಕುಳಿದವರು ಕಂಡಂತೆ
(2023ರ ಅಕ್ಟೋಬರ್ 7 ರಂದು ಹಮಾಸ್ ಉಗ್ರರು ಇಸ್ರೇಲ್ ಮೇಲೆ ನಡೆಸಿದ ಭಯಾನಕ ಹತ್ಯಾಕಾಂಡದಲ್ಲಿ ಬದುಕುಳಿದವರು ಹೇಳಿದ ಮನ ಮಿಡಿಯುವ ರೋಚಕ ಕಥನ)
ಮೂಲ: ಯೇರ್ ಆಗಮೋನ್, ಓರಿಯಾ ಮೇವೊರೊಚ್
ಅನು: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ: ರೂ 500/-

2



ಪ್ರವಾಸಿಗರು ಕಂಡ ಬೌದ್ಧಸಂಸ್ಕೃತಿ
(ಬೇರೆ ದೇಶಗಳ ಪ್ರವಾಸಿಗರು ಬೌದ್ಧ ಸಂಸ್ಕೃತಿಯನ್ನು ಅರಿಯಲು ಭಾರತಕ್ಕೆ ಬಂದಿದ್ದರು! ಅವರ ದೃಷ್ಟಿಯಲ್ಲಿ ಬೌದ್ಧ ಸಂಸ್ಕೃತಿ ಹೇಗಿತ್ತು?)
ಪ್ರ: ಪಾಲಿ ಇನ್‌ಸ್ಟಿಟ್ಯೂಟ್, ಕಲಬುರಗಿ
ಬೆಲೆ: ರೂ 200/-

3

ಹುಚ್ಚು ಮನಸ್ಸಿನ ಪೆಚ್ಚು ಮುಖಗಳು
(ಆಧುನಿಕ ವಿಚಾರಗಳು ಈಗ ವೈಚಾರಿಕ ಪ್ರಬಂಧಗಳಾಗಿ ವಿಸ್ತರಿಸಿಕೊಂಡಿವೆ)
ಲೇ: ಶರತ್ ಭಟ್ ಸೇರಾಜೆ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: ರೂ 170/-

4



ಬದುಕ ಗೆಲ್ಲಿಸು ಮನವೇ
(ನೈಜ ಘಟನೆಗಳನ್ನು ಆಧರಿಸಿದ, ಸ್ಫೂರ್ತಿ ನೀಡುವ ಬರಹಗಳ ಸಂಗ್ರಹ)
ಲೇ: ನೇಮಿಚಂದ್ರ
ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ: ರೂ 325/-

5

ಓ ಅರಬ್ಬಿ ಕೊಲ್ಲಿಯೇ ....
(ಗಳಿಕೆಗಾಗಿ ಕೊಲ್ಲಿ ದೇಶಗಳಿಗೆ ಹೋದವರು ಸುಖವಾಗಿದ್ದಾರೆಯೇ? ಭಾರತೀಯ ವಲಸಿಗರ ಮನ ಕದಡುವ ಕಥಾನಕಗಳು)
ಲೇ: ರೆಜಿಮೋನ್ ಕುಟ್ಟಪ್ಪನ್
ಅನು: ಜ್ಯೋತಿ ಎ
ಪ್ರ: ಬಹುರೂಪಿ, ಬೆಂಗಳೂರು
ಬೆಲೆ: 400/-

6

ಕಾವ್ಯ ಜಗತ್ತು
(ಅಡಿಗರು ಕನ್ನಡದ ಪ್ರಸಿದ್ಧ ಕವಿಗಳು; ಅವರು ಅನುವಾದಿಸಿರುವ ನೊಬೆಲ್ ಪ್ರಶಸ್ತಿ ಪಡೆದ 26 ಕವಿಗಳ 71 ಕವಿತೆಗಳು)
ಲೇ: ಗೋಪಾಲಕೃಷ್ಣ ಅಡಿಗ
ಪ್ರಿಸಂ ಬುಕ್ಸ್ ಪ್ರೈ.ಲಿ. ಬೆಂಗಳೂರು
ಬೆಲೆ: ರೂ 225/-

7



ಶೌರ್ಯಮಲೆ ಅಯ್ಯಪ್ಪನ ಪೂಂಗಾವನ
(ಶಬರಿ ಮಲೈ ಅಯ್ಯಪ್ಪನನ್ನು ಕಾದಂಬರಿ ಯೊಂದು ಪ್ರಕಟವಾಗಿರುವುದು ಈಗಲೇ)
ಲೇ: ರಮೇಶ್ ಶೆಟ್ಟಿಗಾರ್ ಮಂಜೇಶ್ವರ್
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ: ರೂ 280/-

8



ಭೂಮಿಗೀತ
(ಕರಾವಳಿ ಭಾಗದ ಜನಜೀವನವನ್ನು ಚಿತ್ರಿಸುವ ಹೊಸ ಕಾದಂಬರಿ)
ಲೇ: ಡಾ| ನಾ ಮೊಗಸಾಲೆ
ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ: ರೂ 450/-

9



ಗಾಂಧಿಮನೆಯ ಅವಲಕ್ಕಿ ಸರ
(ಎಂ.ಜಿ. ಹೆಗಡೆ ಅವರ ಭಿನ್ನವಾದ ಕಾದಂಬರಿ. ಓದಿದ ನಂತರ ವಿಶಿಷ್ಟ ಅನುಭವವನ್ನು ನೀಡುತ್ತದೆ)
ಲೇ: ಎಂ. ಜಿ. ಹೆಗಡೆ
ಪ್ರ: ಸೃಷ್ಟಿ ಪ್ರಕಾಶನ, ಬೆಂಗಳೂರು
ಬೆಲೆ: ರೂ 380/-

10

ಮಕ್ಕಳು ಮಕ್ಕಳಾಗಿರಲು ಬಿಡಿ
(ಮಕ್ಕಳಿಗೆ ಇರುವುದೊಂದೇ ಬಾಲ್ಯ; ಆದ್ದರಿಂದ ಮಕ್ಕಳು ಮಕ್ಕಳಾಗಿರಲು ಬಿಡಿ ಎನ್ನುತ್ತಾರೆ ಲೇಖಕರು)
ಲೇ: ಡಾ| ವಿರೂಪಾಕ್ಷ ದೇವರಮನೆ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ: ರೂ 300/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ಮಾತ್ರೆದೇವೋಭವ

» ಗೊರೂರು ಶಿವೇಶ್

ಬೆನ್ನು ನೋವಿಗೂ ಮಾತ್ರೆ, ತಲೆ ನೋವಿಗೂ ಮಾತ್ರೆ. ಬೆಳಗ್ಗೆ ಒಂದು ಮಧ್ಯಾಹ್ನ ಒಂದು ರಾತ್ರೆ ಒಂದು ಮಾತ್ರೆ ತಿನ್ನುವವರ ಸಂಖ್ಯೆ ಈ ದಿನಗಳಲ್ಲಿ ಎಲ್ಲಾ ಕಡೆ ಇದ್ದದ್ದೇ! ಆದ್ದರಿಂದಲೇ, ಕೆಲವರು ಪ್ರತಿ ದಿನ 'ಮಾತ್ರೆದೇವೋಭವ' ಎನ್ನುವ ಮಂತ್ರ ಜಪಿಸುತ್ತಿದ್ದಾರೆ!

ಇತ್ತೀಚೆಗೆ ಬಂಧುಗಳೊಬ್ಬರು ಮನೆಗೆ ಬಂದಿದ್ದರು. ಅವರು ವಯಸ್ಸಿಗೆ ಸಂಬಂಧಿಸಿದ ಕೆಲ ದೈಹಿಕ ಸಮಸ್ಯೆ ಗಳಿಂದ ನರಳುತ್ತಿದ್ದರು. ಸಂಜೆಯಾದರೊಡನೆ ಒಮ್ಮೆಲೆ ಚಡಪಡಿಸಲಾರಂಭಿಸಿದರು. ಕಾರಣ ಅವರು ತಮ್ಮೊಡನೆ ತಂದಿದ್ದ ಮಾತ್ರೆಗಳಲ್ಲಿ ಒಂದನ್ನು ತರುವುದನ್ನು ಮರೆತುಬಿಟ್ಟಿದ್ದರು! (ಮರೆವೂ ಸಹ ವಯೋಸಹಜ ಸಮಸ್ಯೆ ತಾನೆ!) ಮಾತ್ರೆಯ ಹೆಸರು ನೆನಪಿನಲ್ಲಿ ಇದ್ದರೂ, ಅದರ ಸರಿಯಾದ ಸ್ಪೆಲಿಂಗ್ ಗೊತ್ತಿರಲಿಲ್ಲ. ಊರಿಗೆ ಫೋನಾಯಿಸಿ ಮಾತ್ರೆಯ ಹೆಸರು ತಿಳಿದುಕೊಂಡಿದ್ದಾಯಿತು. ಆದರೆ ಇಡೀ ಹಾಸನವನ್ನು ಸುತ್ತಿದರೂ ಆ ಮಾತ್ರೆ ಸಿಗಲಿಲ್ಲ. ಅದೇ ಸಂಯೋಜನೆ ಇರುವ ಬೇರೆ ಮಾತ್ರೆ ನೀಡುವುದಾಗಿ ಅಂಗಡಿಯವರು ತಿಳಿಸಿದರು. ಮನೆಗೆ ಬಂದು ವಿಚಾರಿಸಿದರೆ ಅದು ಆಗುತ್ತೋ ಇಲ್ಲವೋ ಎಂಬ ಯೋಚನೆ ಅವರಿಗೆ.

ಇದೇ ಮಾತ್ರೆಯನ್ನು ತಿನ್ನಿ ಎಂದು ಬರೆದು ಕೊಟ್ಟಿದ್ದ ಡಾಕ್ಟರನ್ನು ಸಂಪರ್ಕಿಸಬೇಕೆಂದರೆ ಮಾತ್ರೆಯ ಚೀಟಿ ಊರಲ್ಲಿದೆ. ಮತ್ತೊಮ್ಮೆ ಅವರ ಊರನ್ನು ಸಂಪರ್ಕಿಸಿ ಅವರಿಂದ ನಂಬರ್ ತಗೊಂಡು ಆ ಡಾಕ್ಟರಿಗೆ ಸಂಪರ್ಕಿಸಿದರೆ, ಅವರು ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದರು! ರಾತ್ರಿಯಾದಂತೆ ಅವರ ಚಡಪಡಿಕೆ ಹೆಚ್ಚಾಗುತ್ತಿದ್ದಂತೆ ಪರಿಚಯವಿದ್ದ ಡಾಕ್ಟರ್‌ರೊಬ್ಬರನ್ನು ಸಂಪರ್ಕಿಸಿದಾಗ, 'ಅದೇ ಸಂಯೋಜನೆಯ ಬೇರೆ ಮಾತ್ರೆಯನ್ನು ಕೊಡಬಹುದು, ತಕ್ಷಣ ಕೊಡಿ' ಎಂದರು. ಆ ದಿನದ

ಲಹರಿ

ಮಟ್ಟಿಗೆ ಒಂದು ಮಾತ್ರೆಯನ್ನು ನೀಡಿದಾಗ ಅವರು ಅನುಮಾನಿಸುತ್ತಲೇ ನುಂಗಿ, ಅದು ಪರಿಣಾಮ ಬೀರುವುದೋ? ಇಲ್ಲವೋ ? ಎಂದು ಹತ್ತಾರು ಬಾರಿ ಪ್ರಶ್ನಿಸಿ ಕೊನೆಗೆ, ಅವರು ನೆಮ್ಮದಿಯಿಂದ ನಿದ್ದೆ ಹೋದಾಗ 'ಸದ್ಯ ಬಚಾವಾದೆ!' ಎಂದು, ನಾನೂ ಆ ರಾತ್ರಿ ನೆಮ್ಮದಿಯ ನಿದ್ರೆ ಮಾಡಿದೆ!

ಈಗಿನ ಕಾಲವೇ ಹಾಗೆ ತಾನೆ! ಹೆಚ್ಚಿನವರು ಒಂದಲ್ಲ ಒಂದು ಮಾತ್ರೆಯನ್ನು ತಿನ್ನುತ್ತಾರೆ, ಕೆಲವರು ಹಲವು ಮಾತ್ರೆಗಳನ್ನು ತಿನ್ನುತ್ತಾರೆ! ಅದರಲ್ಲೂ, ನಗರ, ಪಟ್ಟಣಗಳಲ್ಲಿದ್ದರಿಗೆ, ಮಾತ್ರೆಗಳ ಮೇಲಿನ ಅವಲಂಬನೆ ಜಾಸ್ತಿ. ಕಾಲು ನೋವಿಗೆ ಮಾತ್ರೆ, ತಲೆ ನೋವಿಗೆ ಮಾತ್ರೆ, ಆ್ಯಸಿಡಿಟಿಗೆ ಮಾತ್ರೆ, ಮಧುಮೇಹಕ್ಕೆ ಮಾತ್ರೆ, ಬಿಪಿಗೆ ಮಾತ್ರೆ. . ಇನ್ನೂ ಏನೇನೋ. ಮಾತ್ರೆ ತಿಂದರೆ ಮಾತ್ರೆ ಆರೋಗ್ಯವಾಗಿರಬಹುದು ಎಂದು ನಾವೆಲ್ಲರೂ ನಂಬಿದ್ದೇವೆ, ಅಲ್ಲವೆ!

ಬೆಳಗ್ಗೆ ಒಂದು ಹಿಡಿ!

ಖ್ಯಾತ ಚಲನಚಿತ್ರ ಸಾಹಿತಿ ಚಿ.ಉದಯಶಂಕರ್ ರವರನ್ನು 'ತಿಂಡಿ, ಊಟ ಏನು ಮಾಡ್ತೀರಿ?' ಎಂದು ಆತ್ಮೀಯರೊಬ್ಬರು ಪ್ರಶ್ನಿಸಿದಾಗ 'ಬೆಳಿಗ್ಗೆ ತಿಂಡಿಗೆ ಒಂದು ಹಿಡಿ, ಮಧ್ಯಾಹ್ನ, ರಾತ್ರಿ ಊಟಕ್ಕೆ ಒಂದೊಂದು ಹಿಡಿ ಮಾತ್ರೆ ನುಂಗ್ತೀನಿ' ಎಂದು ತಮಾಷೆಯಾಗಿ ಉತ್ತರಿಸಿದ್ದರು! ಅವರು ಇದನ್ನು ಹಾಸ್ಯಮಿಶ್ರಿತ ದನಿಯಲ್ಲಿ ಹೇಳಿದ್ದರೂ, ಅದು ಇಂದಿನ ಕಟುವಾಸ್ತವದ ಕನ್ನಡಿ! ಬಹುತೇಕ ರಾಜ

ಕಾರಣಗಳಿಗೆ ಅವರಿಗೆ ಸಮಯಕ್ಕೆ ಸರಿಯಾಗಿ ಮಾತ್ರೆ ನೀಡಲೆಂದು ಒಬ್ಬ ಸಹಾಯಕರನ್ನು ಇಟ್ಟಕೊಳ್ಳುವುದನ್ನು ಗಮನಿಸಿದ್ದೇವೆ.

ನನ್ನ ಜೊತೆ ಬಿ.ಎಸ್ಸಿ ಮಾಡಿಸಿದ ಶೀನ ಎಂಎಸ್ಸಿ ಮಾಡಲು ಹೋಗಬಹುದಿದ್ದರೂ, ಅದನ್ನು ಬಿಟ್ಟು ಬಿ.ಫಾರ್ಮ. ಮಾಡಿ, ಔಷಧಿ ಅಂಗಡಿಯೊಂದನ್ನು ಸರ್ಕಾರಿ ಆಸ್ಪತ್ರೆಯೊಂದರ ಮುಂದೆ ತೆರೆದಿದ್ದ; ಏಕೆ ಎಂದು ಕೇಳಿದ್ದಕ್ಕೆ, ಇದರಲ್ಲಿ ಒಳ್ಳೆಯ ಲಾಭವುಂಟು ಎಂದು ಹೇಳಿದ್ದ. ಹಲವು ವರ್ಷ ಅವನನ್ನು ನೋಡಿರಲಿಲ್ಲ; ಕೊನಗೆ, ಹದಿನೈದು ವರ್ಷಗಳ ನಂತರ ಭೇಟಿಯದಾಗ ಅವನ ವೈಭವೋಪೇತ ಜೀವನ ಕಂಡು ಬೆರಗಾದೆ. ಎಂಎಸ್ಸಿ ಮಾಡದೆ ಉಪನ್ಯಾಸಕ ವೃತ್ತಿಯಿಂದ ವಂಚಿತನಾದನಲ್ಲ ಎಂದು ಹಿಂದೆ ನಾವೆಲ್ಲಾ ಕನಿಕರ ತೋರಿದ್ದೆವೆ; ಆದರೆ, ಇಂದು ನಾವೇ ಪರಿತಪಿಸುವಷ್ಟು ಆತ ಬದಲಾಗಿದ್ದ.

ಶಬ್ದಮಾಡುವ ಕವರು!

'ಏನಪ್ಪ ಶೀನ ನಿನ್ನ ಕಥೆ' ಎಂದಾಗ ''ಮಾತ್ರೆ ಮಾರೋ ಜನ ಸುಖಿನೋಭವಂತು'' ಎಂದು ಆಧುನಿಕ ಶ್ಲೋಕವನ್ನು ಉದ್ಗರಿಸಿದ್ದ. 'ಹೌದಾ?' ಎಂದು ನಾನು ಬೆರಗಾಗಿ ಕೇಳುತ್ತಿರುವಂತೆ ನುಡಿದ : 'ನಾನು ಹಾಕಿದ ಬಂಡವಾಳ ಎಂದರೆ, ನನ್ನ ಬಿಫಾರ್ಮ ಸರ್ಟಿಫಿಕೇಟ್ ಅಷ್ಟೇ. ಅಂಗಡಿ ತೆರೆಯಲು ಬ್ಯಾಂಕ್ ಲೋನ್ ಕೊಡ್ತು, ಅಂಗಡಿ ಇಟ್ಟೆ, ಔಷಧಿ ಕಂಪನಿಯವರು ತಾವೇ ಪ್ರತಿದಿನ ಬಂದು, ನಾನು ಕುಳಿತ ಜಾಗಕ್ಕೆ ನಾನಾ ಬಣ್ಣದ ಕವರು ಇರುವ ಮಾತ್ರೆ ಕಳುಹಿಸುತ್ತಾರೆ; ಒಂದೊಂದು ಮಾತ್ರೆಯನ್ನು ಮುಟ್ಟಿದರೆ, ಅದರ ಕವರು ಚರಚರ ಎಂಬ ಮಧುರವಾದ ಶಬ್ದ ಸಹ ಮಾಡುತ್ತೆ! ಮಾತ್ರೆ ಮಾರಾಟ ಮಾಡಿದ್ದಕ್ಕೆ, ಶೇಕಡಾ ಇಪ್ಪತ್ತೈದರಿಂದ ನಲವತ್ತರವರೆಗೆ ಲಾಭ. ವ್ಯಾಟ್ ಬರುವುದಕ್ಕೆ ಮುನ್ನ ಎಲ್.ಟಿ. ಎಕ್ಸಟ್ರಾ, ಅಂಥ ಅದು ಬೇರೆ ಹತ್ತು ಪರ್ಸೆಂಟ್ ಸಿಗ್ತಾ ಇತ್ತು. ಡಾಕ್ಟರುಗಳು ಜನರಿಗೆ ಒಮ್ಮೆ ಮಾತ್ರೆ ಬರೆದುಕೊಟ್ಟರು ಎಂದರೆ, ಹಿಡಿ ಹಿಡಿ ಮಾತ್ರೆ ಅವರು ಖರೀದಿಸುತ್ತಾರೆ; ಎಲ್ಲಾ ಸೇರಿ, ಒಂದು ಕೋರ್ಸ್ ಎಂದು ಇಪ್ಪತ್ತು, ಮೂವತ್ತು ಮಾತ್ರೆ ಜೊತೆಗೆ ಪುಷ್ಟಿಗೆ ಅಂತ ಕಬ್ಬಿಣದ, ವಿಟಮಿನ್ ಮಾತ್ರೆಗಳು ಮತ್ತು ದುಬಾರಿ ಟಾನಿಕ್‌ಗಳನ್ನು ಬರಿತಾರೆ. ಹೀಗೆ ವ್ಯಾಪಾರಕ್ಕೂ ತೊಂದರೆ ಇಲ್ಲ, ಲಾಭಕ್ಕೂ ಏನೂ ತೊಂದ್ರೆ ಇಲ್ಲ. ಇತ್ತೀಚೆಗೆ ಕಂಪನಿಯವರು ಒಳ್ಳೆ ಸೇಲ್ ಮಾಡಿದ್ರೆ ಫಾರಿನ್ ಟೂರ್ ಕೂಡಾ ಕಳುಹಿಸ್ತಾ ಇದ್ದಾರೆ. ಒಟ್ನಲ್ಲಿ ಒಳ್ಳೆ ಏರಿಯಾದಲ್ಲಿ ಇರ್ಬೇಕು ಅಷ್ಟೇ. ಆದ್ದರಿಂದ, ಮಾತ್ರೆಗಳೇ ನನ್ನ ದೇವತೆ! ಮಾತ್ರೆ ದೇವೋಭವ'' ಎಂದು ಸುಧೀರ್ಘವಾಗಿ ವಿವರಿಸಿದ.

ಕೆಲವು ಖಾಸಗಿ ಪ್ರಾಕ್ಟೀಸ್ ಮಾಡುವ ಡಾಕ್ಟರ್‌ಗಳು ತಮ್ಮ ಹತ್ತಿರದ ಬಂಧುಗಳಿಗೆ ಔಷಧಿ ಅಂಗಡಿಯನ್ನು ಮಾಡಿಕೊಟ್ಟು ಲಾಭಾಂಶವನ್ನು ಪಡೆಯುತ್ತಿದ್ದಾರೆ. ಹೀಗಾಗಿ ಕೆಲವು ಬಡಾವಣೆಗಳಲ್ಲಿ ಔಷಧಿ ಅಂಗಡಿಯವರೆ ಡಾಕ್ಟರ್‌ಗಳಿಗೆ ಷಾಪನ್ನು ತೆರೆಯಲು ಅನುವು ಮಾಡಿಕೊಟ್ಟು ಅದರ ಬಾಡಿಗೆಯನ್ನು ಇವರೇ ನೀಡಿ ಜೊತೆಗೆ ಲಾಭಾಂಶದ ಹಂಚಿಕೆ ಮಾಡುತಿದ್ದಾರೆ. ಒಬ್ಬ ಡಾಕ್ಟರಂತೂ, 'ಪಕ್ಕದ ಅಂಗಡಿಯಲ್ಲಿ ಔಷಧಿ, ಮಾತ್ರೆ ತೆಗೆದುಕೊಂಡ ನಂತರ ಒಮ್ಮೆ ತೋರಿಸಿಕೊಂಡು ಹೋಗಿ' ಎನ್ನುತ್ತಿದ್ದರು. ಬಹುಶಃ

ಔಷಧಿ ಮಾತ್ರೆಗಳು ತಪ್ಪಾಗಿ ನೀಡಿದ್ದರೆ, ಸರಿಪಡಿಸಲು ಇರಬಹುದೆಂದು ನಾನು ಭಾವಿಸಿದ್ದೆ. ಆದರೆ ಅವರು ಕವರ್‌ನಿಂದ ಒಮ್ಮೆ ತೆಗೆದಂತೆ ಮಾಡಿ ಸರಿ, ಸರಿ ಎಂದು ಕಳುಹಿಸುತ್ತಿದ್ದರು. ನಂತರ ತಿಳಿದಿದ್ದು ಅಂಗಡಿಯವನಿಗೂ, ಡಾಕ್ಟರಿಗೂ ಲಾಭ ಹಂಚಿಕೊಳ್ಳುವ ವಿಷಯದಲ್ಲಿ ಏರುಪೇರಾಗಿ ಅಂಗಡಿಯವ ತಪ್ಪು ಲೆಕ್ಕ ನೀಡುತ್ತಿದ್ದಾನೆ ಎಂಬ ಕಾರಣಕ್ಕೆ ಈ ರೀತಿ ಯೋಜನೆ ಅವರು ರೂಪಿಸಿದ್ದರು. ಇದು ಎಲ್ಲರಿಗೂ ಅನ್ವಯ ಆಗುವುದಿಲ್ಲ; ಅಲ್ಲಲ್ಲಿ ಹೀಗೂ ನಡೆಯುತ್ತದೆ ಎನ್ನಬಹುದು.

ನರಳಾಡುವ ಮಾತ್ರೆಗಳು!

ಡಾಕ್ಟರ್‌ಗಳು ಮಾತ್ರೆ ಬರೆದರೂ, ಕೆಲವು ರೋಗಿಗಳು ರಂಗೋಲಿಯ ಕೆಳಗೆ ನುಸಿಯುವುದುಂಟು. ವೈದ್ಯರು ಒಂದು ಕೋರ್ಸ್ ಆ್ಯಂಟಿಬಯೋಟಿಕ್ ತೆಗೆದುಕೊಳ್ಳಲೇಬೇಕು ಎಂದು ಹದಿನೈದು ಮಾತ್ರೆ ಬರೆದರೆ, ಕೇವಲ ಆರು ಮಾತ್ರೆ ತೆಗೆದುಕೊಂಡು ಗುಣಕಾಣದಿದ್ದರೆ ಮತ್ತೆ ಮೂರರಂತೆ ಖರೀದಿಸುವರು ಉಂಟು. ಆದರೆ ಬಹಳಷ್ಟು ಸಲ ಅವರು ಬರೆದುಕೊಟ್ಟ ಅಷ್ಟೂ ಮಾತ್ರೆ ಖರೀದಿಸಿ ಒಂದೆರಡು ದಿನಕ್ಕೆ ಗುಣಕಂಡ ನಂತರ ಉಳಿದ ಮಾತ್ರೆಗಳು ಡ್ರಾಯರ್‌ಗಳಲ್ಲಿ ಇಲ್ಲವೆ ಔಷಧಿ ಪೆಟ್ಟಿಗೆಗಳಲ್ಲೊ ಬಿದ್ದು ನರಳಾಡುತ್ತವೆ. ಮತ್ತೊಮ್ಮೆ ಅದನ್ನು ತೆಗೆದಾಗ ಅದು ಯಾವ ಖಾಯಿಲೆಗೆ ತಂದದ್ದು ಎಂಬುದೇ ಮರೆತುಹೋಗಿರುತ್ತದೆ.

ಮಕ್ಕಳಿಗೆ ಹುಷಾರಿಲ್ಲದಿದ್ದಾಗ ಚಡಪಡಿಕೆ ಹೆಚ್ಚು. ಒಂದೆರಡು ದಿನಗಳಲ್ಲಿ ಜ್ವರ, ಶೀತ ಹತೋಟಿಗೆ ಬರುವುದು ಕಷ್ಟ. ಹೀಗಾಗಿ ಡಾಕ್ಟರನ್ನು ಬದಲಾಯಿಸಿದರೆ ಅವರು ಮಾತ್ರೆಗಳನ್ನು ಬದಲಾಯಿಸುತ್ತಾರೆ. ಮಗಳು ಚಿಕ್ಕವಳಿದ್ದಾಗ ಜ್ವರ ಬಂದಿತೆಂದು ಡಾಕ್ಟರ್ ಬಳಿ ಹೋದರೆ ಅವರು ಆ್ಯಂಟಿಬಯೋಟಿಕ್ ಜೊತೆ ಡೋಲೋ ಬರೆದಿದ್ದರು; ಗುಣಕಾಣಲಿಲ್ಲವೆಂದು ಬೇರೆ ವೈದ್ಯರ ಬಳಿ ಹೋದರೆ ಅವರು ಆ ಮಾತ್ರೆ ನಿಲ್ಲಿಸಿ, ನಾನು ಬೇರೆ ಮಾತ್ರೆ ಬರೆಯುತ್ತೇನೆ. ಎಂದು ಕಾಲ್‌ಪಾಲ್ ಎಂದು ಬರೆದಿದ್ದರು. ನನಗೆ ಆಗ ಮಾಹಿತಿ ಇರಲಿಲ್ಲ; ಕೆಲವು ದಿನಗಳ ನಂತರ ತಿಳಿಯಿತು: ಎರಡೂ ಕೂಡ ಪ್ಯಾರಾಸೆಟಾಮಾಲ್ ಮಾತ್ರೆಗಳು ಎಂದು.

ಇನ್ನು ನಮ್ಮಲ್ಲೇ ಕೆಲವರನ್ನು ನೀವು ನೋಡಿರಬಹುದು: ಮನೆಯಲ್ಲಿ ಅಗತ್ಯಕ್ಕೆ ಇರಲಿ ಎಂದು ಜ್ವರದ, ನೋವಿನ, ಆ್ಯಸಿಡಿಟಿ ಮಾತ್ರೆಗಳನ್ನು ಸದಾ ಇಟ್ಟುಕೊಂಡಿರುತ್ತಾರೆ. ನೆಗಡಿ ಆದ ತಕ್ಷಣ ಪ್ಯಾರಾಸೆಟಾಮಲ್ ಮಾತ್ರೆ ತಿನ್ನುತ್ತಾರೆ; ಹುಳಿ ತೇಗು ಬಂದ ತಕ್ಷಣ ಆ್ಯಸಿಡಿಟಿ ಮಾತ್ರೆ ನುಂಗುತ್ತಾರೆ; ನೋವಿನ ಮಾತ್ರೆಯಿಂದ ನೋವು ಕಡಿಮೆ ಮಾಡಿಕೊಳ್ಳುತ್ತಾರೆ! ಅದೇಕೆ ಅಷ್ಟು ಬೇಗ ಮಾತ್ರೆ ತಿಂದಿರಿ, ಒಂದೆರಡು ದಿನ ನೋಡಿದರೆ, ಕೆಲವು ಬಾರಿ ಅದರಷ್ಟಕ್ಕೇ ಅದು ಗುಣವಾಗುತ್ತದೆ ಎಂದು ಹೇಳಿದರೆ, 'ಮೊದಲ ದಿನವೇ ಜ್ವರದ ಮಾತ್ರೆ ತಿನ್ನಬೇಕು, ಏಕೆಂದರೆ, ಆ ಮೇಲೆ ಜ್ವರ ಬರುವುದಿಲ್ಲ. ಅದು ಜಾಸ್ತಿ ಆದ ನಂತರ, ಜಾಸ್ತಿ ಮಾತ್ರೆಯನ್ನು ಬರೆದುಕೊಡುತ್ತಾರೆ, ಅದರ ಬದಲು, ಮೊದಲಿಗೇ ಒಂದೆರಡು ಪ್ಯಾರಾಸೆಟಾಮಲ್ ತಿಂದರೆ ಒಳ್ಳೆದಾಗುತ್ತದೆ, ನೀವೂ ಹಾಗೆಯೇ ಮಾಡಿ!' ಎಂದು ಸಲಹೆ ನೀಡುತ್ತಾರೆ! ವಯೋಸಹಜ ದೈಹಿಕ ಸಮಸ್ಯೆಗಳ ಜತೆಯಲ್ಲೇ, ನೆಗಡಿ ಕೆಮ್ಮು ಜ್ವರದಂತಹ ರೋಗದ ಭೀತಿ ಜನರನ್ನು ಕಾಡುತ್ತಿರುವುದರಿಂದಾಗಿ, ಮಾತೃ, ಪಿತೃ, ಆಚಾರ್ಯರಿಗಿಂತ 'ಮಾತ್ರೆ ದೇವೋಭವ' ಎನ್ನುವವರ ಸಂಖ್ಯೆ ಹೆಚ್ಚುತ್ತಿರುವುದು ವಾಸ್ತವ!

(ಪ್ರತಿಕ್ರಿಯಿಸಿ: viramapost@gmail.com)

ವಲಸೆಗಾರನ ಮಿಡತೆ ಬೇಟೆ!



» ಶಶಿಧರಸ್ವಾಮಿ ಆರ್. ಹಿರೇಮಠ

ಮುಂಜಾನೆ ಒಂಬತ್ತರ ಸಮಯ. ರಾಜಸ್ಥಾನದ ಜೈಸಲ್ಮೇರ್ ಹತ್ತಿರದ ಡೆಸರ್ಟ್ ನ್ಯಾಷನಲ್ ಪಾರ್ಕಿನಲ್ಲಿ ಹಕ್ಕಿಗಳ ಫೋಟೋಗ್ರಫಿಗಾಗಿ ತೆರೆದ ಜೀಪಿನಲ್ಲಿ ತೇರಳುತ್ತಿದ್ದೆ. ಕಣ್ಣು ಹಾಯಿಸಿದಷ್ಟು ಬರೀ ಮರಳುಗಾಡು, ಅಲ್ಲಲ್ಲಿ ಕಾಣಸಿಗುವ ಕುರುಚಲು ಮರಗಳು. ಈ ಪ್ರದೇಶಗಳಲ್ಲಿ ಜನವಸತಿ ಇಲ್ಲವೇ ಇಲ್ಲ. ಚಾಲಕ ಕಮ್ ಗೈಡ್ ಮುಸಾಖಾನ್ ಜೀಪನ್ನು ನಿಧಾನವಾಗಿ ಚಲಿಸುತ್ತಿದ್ದರು. ಒಣಗಿದ ಟೊಂಗೆಯ ಮೇಲೆ ಕಪ್ಪು-ಬಿಳಿ ಬಣ್ಣದ ಹಕ್ಕಿಯೊಂದು ಕುಳಿತು ಸುತ್ತಲಿನ ಪ್ರದೇಶವನ್ನು ಅವಲೋಕಿಸುತ್ತಿತ್ತು. ಮುಸಾಖಾನ್‌ಗೆ ಜೀಪ್ ರೋಕೋ ಸಾಬ್, ಮೇ ಉಸ್ ಪಕ್ಷೀ ಕೀ ಫೋಟೋ ಲೇನಾ ಚಾಹತಾ ಹೂಂ ಎಂದೆ. 'ವೋ ಪೈಡ್ ವೀಟಿಯರ್, ಮೆಲ್ ಪಕ್ಷೀ ಹೈ' ಎಂದು ಹೇಳುತ್ತಾ ಜೀಪು ನಿಲ್ಲಿಸಿದ ತಕ್ಷಣ ಆ ಹಕ್ಕಿಯ ಫೋಟೋ ಕ್ಲಿಕ್ಕಿಸಿಕೊಂಡೆ. ಅವರು ಚಾಲಕರಾದರೂ, ಇಲ್ಲಿನ ಹಕ್ಕಿಗಳ ಹೆಸರು, ಅವುಗಳ ಜೀವನ ಕ್ರಮ ಎಲ್ಲವನ್ನೂ ತಿಳಿದಿದ್ದರು ಮತ್ತು ನಮ್ಮಂತಹವರಿಗೆ ವಿವರಿಸುತ್ತಿದ್ದರು.

ಹಕ್ಕಿಯು ನೆಲದ ಕಡೆಗೊಮ್ಮೆ ನೋಡುವುದು, ಮತ್ತೆ ಅತ್ತ ಇತ್ತ ನೋಡುವುದರಲ್ಲಿ ಮಗ್ನವಾಗಿತ್ತು. ಯಾಕೇ ಹೀಗೆ ನೆಲದ ಕಲ್ಲು ಕಡೇ ಪದೇ ಪದೇ ನೋಡ್ತಾ ಇದೆ ಎಂದು ಆ ಹಕ್ಕಿಯನೇ ನೆಟ್ಟಿಸಿ ನೋಡುತ್ತಾ ಕುಳಿತೇವು. ಒಂದೆರಡು ನಿಮಿಷ ಕಳೆದಿರಬೇಕು, ಪುರೆಂದು ಒಂದೇ ನೆಗೆತಕ್ಕೆ ನೆಲದತ್ತ ಹಾರಿ, ಕಲ್ಲು ನೆಲದ ಮೇಲೆ ಇದ್ದ ಮಿಡತೆಯನ್ನು ತನ್ನ ಕೊಕ್ಕಿನಲ್ಲಿ ಹಿಡಿಯಿತು. ಮಿಡತೆಯು ಜೀವಂತವಿದ್ದು ಕೈಕಾಲುಗಳನ್ನು ಅಲುಗಾಡಿಸುತ್ತಾ ಒದ್ದಾಡುತ್ತಿದ್ದಾಗ ಕೊಕ್ಕಿನಲ್ಲಿ ಬಿಗಿಯಾಗಿ ಹಿಡಿದು ನೆಲೆಕ್ಕೆ ಹೊಡೆದು ಹೊಡೆದು ಸಾಯಿಸತೊಡಗಿತು. ಮಿಡತೆಯ ತಪ್ಪಿಸಿಕೊಳ್ಳಲು ಪ್ರಯತ್ನಿಸಿತ್ತಾದರೂ ಬಿಗಿಯಾದ ಹಿಡಿತದಿಂದ ಸಾಧ್ಯವಾಗಲೇ ಇಲ್ಲ. ಎಲ್ಲ ದೃಶ್ಯಗಳ ನಮ್ಮ ಕ್ಯಾಮರಾದಲ್ಲಿ ಸೆರೆಯಾದವು.

ಈಗ ಅದನ್ನು ತಿನ್ನುವ ಸರದಿ, ಹಕ್ಕಿಗೆ ನಮ್ಮ ಇರುವಿಕೆ ಗೊತ್ತಾಗಿತು ಅಂತಾ ಕಾಣಿಸುತ್ತದೆ. ತಕ್ಷಣವೇ ಕೊಕ್ಕಿನಲ್ಲಿ ಮಿಡತೆಯನ್ನು ಹಿಡಿದು ಅಲ್ಲಿಂದ ದೂರಕ್ಕೆ ಹಾರಿಹೋಗಿತು. ಅದಕ್ಕೆ ತೊಂದರೆ ಮಾಡುವುದು ಬೇಡವೆಂದು ಇನ್ನೊಂದು ಹಕ್ಕಿಯನ್ನು ಹುಡುಕಿಕೊಂಡು ಹೋಗಲು ಮುಸಾಖಾನ್ ಚಲೋ ದುಸರಾ ಪಕ್ಷೀ ತಲಾಸ ಕರ್ನೆಕಿ ಜಾಯಂಗೆ ಎಂದಾಗ ಜೀಪು ನಿಧಾನವಾಗಿ ಇನ್ನೊಂದು ಹಕ್ಕಿಯನ್ನು ಹುಡುಕಿಕೊಂಡು ಸಾಗಿತು. ಈ ಹಕ್ಕಿಯನ್ನು ಇಂಗ್ಲೀಷನಲ್ಲಿ ಪೈಡ್ ವೀಟಿಯರ್ ಎನ್ನುತ್ತಾರೆ. ಈ ಹಕ್ಕಿಗಳು 14 ರಿಂದ 16 ಸೆಂ.ಮೀ. ಗುಬ್ಬಚ್ಚಿ ಗಾತ್ರದಷ್ಟಿವೆ. ಗಂಡು ಹಕ್ಕಿ ಕಪ್ಪು-ಬಿಳಿ ಬಣ್ಣ ಹೊಂದಿದ್ದು ಬಿಳುಪಾದ ನೆತ್ತಿ, ಮುಖದಿಂದ ಬಾಲದವರೆಗೂ ಕಪ್ಪಾಗಿದ್ದು, ಹೊಟ್ಟೆಯ ತಳಭಾಗವು ಬಿಳಿ, ಚಿಕ್ಕದಾದ ಕಪ್ಪು ಕೊಕ್ಕು, ಕಾಲುಗಳು ಕಪ್ಪಾಗಿವೆ. ಹೆಣ್ಣು ಕಂದು ಬಣ್ಣದ್ದಾಗಿದ್ದು, ತಲೆಯು ಮರಳಿನ ಬಣ್ಣದ್ದು, ಚಿಕ್ಕದಾಗಿ ಕಾಣುತ್ತವೆ ಮತ್ತು ಪೃಷ್ಠದ ಮೇಲೆ ಕಡಿಮೆ ಬಿಳಿ ಬಣ್ಣವನ್ನು ಹೊಂದಿವೆ. ಬಾಲದ ಗರಿಗಳು ವಿಶಿಷ್ಟವಾದ ಕಪ್ಪು ಗುರುತುಗಳೊಂದಿಗೆ ಬಿಳಿಯಾಗಿರುತ್ತವೆ.

ಆಫ್ರಿಕಾದ ದಾರಿ ಹಿಡಿದು

ಈ ಹಕ್ಕಿಗಳು ವಲಸೆಗಾರ ಹಕ್ಕಿಗಳಾಗಿದ್ದು, ಆಗ್ನೇಯ ಯುರೋಪ್ ಮತ್ತು ಪಶ್ಚಿಮ ಏಷ್ಯಾಕ್ಕೆ ಸ್ಥಳೀಯವಾಗಿವೆ. ಸಂತಾನೋತ್ಪತ್ತಿ ವ್ಯಾಪ್ತಿಯು ರೊಮೇನಿಯಾ ಮತ್ತು ಬಲ್ಗೇರಿಯಾದಿಂದ ಸೈಬೀರಿಯಾ, ಅಲ್ಟಾಯ್ ಮತ್ತು ಮಂಗೋಲಿಯಾ ಮತ್ತು ದಕ್ಷಿಣಕ್ಕೆ ಕಾಕಸಸ್, ಟ್ರಾನ್ಸ್‌ಕ್ಯಾಸ್ಪಿಯಾ, ತುರ್ಕಿಸ್ತಾನ್, ಇರಾನ್ ಮತ್ತು ಅಫ್ಘಾನಿಸ್ತಾನದವರೆಗೆ ವಿಸ್ತರಣೆಗೊಂಡಿದೆ. ಇವು ಈಶಾನ್ಯ ಆಫ್ರಿಕಾಕ್ಕೆ ವಲಸೆ ಹೋಗುತ್ತವೆ, ದಾರಿಯಲ್ಲಿ ನೈಋತ್ಯ ಏಷ್ಯಾದ ಮೂಲಕ ಹಾದುಹೋಗುತ್ತವೆ. ಸಂತಾನಾಭಿವೃದ್ಧಿ ಅವಧಿಯಲ್ಲಿ ಇವು ಒರಟಾದ ತೆರೆದ ಪ್ರದೇಶಗಳಲ್ಲಿ, ಕಡಿಮೆ ಸಸ್ಯವರ್ಗವನ್ನು ಹೊಂದಿರುವ ಹುಲ್ಲುಗಾವಲುಗಳು, ಕಲ್ಲಿನ ಇಳಿಜಾರು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಅದರೆ ಚಳಿಗಾಲದಲ್ಲಿ ಇವು ಕಲ್ಲು ಮತ್ತು ಮುಳ್ಳಿನ ಪೊದೆಗಳನ್ನು ಹೊಂದಿರುವ ಬಯಲು ಪ್ರದೇಶಗಳಲ್ಲಿ ಕಂಡುಬರುತ್ತವೆ. ಇವು ಕೆಲವೊಮ್ಮೆ ಹುಲ್ಲುಗಾವಲು ಪ್ರದೇಶಗಳಿಗೆ ಬೇಟಿ ನೀಡುತ್ತವೆ. ಇವು ನಾಚಿಕೆ ಸ್ವಭಾವದವು. ಒಂಟಿ ಅಥವಾ ಜೋಡಿಗಳಾಗಿ ಒರಟಾದ, ಕಲ್ಲಿನ ಗ್ರಾಮಾಂತರ ಪ್ರದೇಶಗಳಲ್ಲಿ ಕಂಡುಬರುತ್ತವೆ. ಚಳಿಗಾಲದಲ್ಲಿ ಮತ್ತು ವಲಸೆಯ ಸಮಯದಲ್ಲಿ ಮಾತ್ರ ನಮ್ಮ ದೇಶದಲ್ಲಿ ಕಾಣಸಿಗುತ್ತವೆ.

ಮುಂದುವರಿದ ದೇಶಗಳಲ್ಲಿ ವಸ್ತುಸಂಗ್ರಹಾಲಯವನ್ನು ನೋಡುವುದು ಒಂದು ಪ್ರಮುಖ ಪ್ರವಾಸಿ ಚಟುವಟಿಕೆ. ಕೆಲವು ದೇಶಗಳಲ್ಲಿ ವಸ್ತುಸಂಗ್ರಹಾಲಯಗಳಿಗೆಂದೇ ಪ್ರತ್ಯೇಕ ಬೀದಿಗಳಿವೆ! ಆದರೆ, ನಮ್ಮ ದೇಶದ ವಸ್ತು ಸಂಗ್ರಹಾಲಯಗಳು ದೂಳು ತಿನ್ನುತ್ತಾ ಇರುವ ಉದಾಹರಣೆಯೂ ಇದೆ! ಹಳೆಬೀಡಿನಲ್ಲಿರುವ ಉತ್ತಮ ವಸ್ತು ಸಂಗ್ರಹಾಲಯವು ಪ್ರಚಾರದ ಕೊರತೆಯಿಂದ ನರಳುತ್ತಿದೆ.

ಅಪರೂಪದ ವಸ್ತುಸಂಗ್ರಹಾಲಯ!

» ಸಿ. ಎ. ವಿಲಾಸ ನಾ ಹುದ್ದಾರ

ಹಳೇಬೀಡು ಎಂದು ಪ್ರಸಿದ್ಧಿ ಪಡೆದ ಪ್ರೇಕ್ಷಣೀಯ ಸ್ಥಳವನ್ನು ಶಾಸನಗಳ ಪ್ರಕಾರ ದ್ವಾರಾವತಿ, ದ್ವಾರಸಮುದ್ರ, ದೋರ ಸಮುದ್ರ ಎಂದು ಕರೆಯಲ್ಪಡುತ್ತಿತ್ತು. ಎಲ್ಲರೂ ಹಳೇಬೀಡಿಗೆ ಹೋದಾಗ ಅಲ್ಲಿನ ಪ್ರಸಿದ್ಧ ದೇಗುಲ ಮತ್ತು ಅಲ್ಲಿಯ ವಾಸ್ತು ಶಿಲ್ಪವನ್ನು ವೀಕ್ಷಿಸಿ ಮರಳುತ್ತಾರೆ. ಎಷ್ಟೋ ಪ್ರವಾಸಿಗಳಿಗೆ ಆ ಮಂದಿರದ ಹಿಂಭಾಗದಲ್ಲಿ ಪುರಾತತ್ವ ಇಲಾಖೆ ಸುಮಾರು 1970 ರಲ್ಲಿ ಸ್ಥಾಪಿಸಿದ ವಸ್ತುಸಂಗ್ರಹಾಲಯವು ಗಮನಕ್ಕೆ ಬರುವದೇ ಇಲ್ಲ. ಈ ವಸ್ತುಸಂಗ್ರಹಾಲಯದಲ್ಲಿ ಅಪರೂಪದ ಕಲಾಕೃತಿ ಯೋಗಿ, ಜೈನರ ಪ್ರಭಾವಳಿ, ಚಂದ್ರನಾಥ ತೀರ್ಥಂಕರ (ಬಿಳಿ ಶಿಲೆಯಲ್ಲಿ), ಮೃದಂಗ ವಾದಕ/ ವಾದಕಿ, ಸರಸ್ವತಿ, ತಾಯಿ ಮತ್ತು ಮಗು ಹೀಗೆ ಮುಂತಾದ ಶಿಲ್ಪಗಳು ಕುಶಲ ಕರ್ಮಿಗಳ ಕರಕುಶಲತೆಯಿಂದ ಅರಳಿ ನಿಂತಿವೆ. ಇವೆಲ್ಲವೂ



ಗಳನ್ನು ಪ್ರದರ್ಶನಕ್ಕಿಡಲಾಗಿದೆ. ಇಲ್ಲಿ ಪ್ರದರ್ಶನಕ್ಕಿರುವ ಶಿಲ್ಪಗಳನ್ನು ಸುತ್ತ ಮುತ್ತಲೂ ದೊರಕಿದ ಅವಶೇಷಗಳಿಂದ ಸಂಗ್ರಹಿಸಲಾಗಿದೆ. ಇಲ್ಲಿ ಶಾಸನಗಳು, ಹಿತ್ತಾಳೆ ಕೆತ್ತನೆಗಳೂ ಕಂಡು ಬರುತ್ತವೆ. ಈ ವಿಗ್ರಹ ಗಳನ್ನು ಸಮೀಪದಲ್ಲಿಯೇ (ಪುಷ್ಪಗಿರಿ) ದೊರಕುವ ಮೃದುವಾದ ಬಳಪದ ಕಲ್ಲುಗಳಲ್ಲಿ ಕೆತ್ತನೆ ಮಾಡಲಾಗಿದೆಯಂತೆ.

ಹೊಯ್ ಮತ್ತು ಸಳ!

ಮೊದಲಿಗೆ ಸಂಗ್ರಹಾಲಯದ ಎದುರಿಗೆ ಇರುವ ವಿಶಾಲವಾದ ತೆರೆದ ಪ್ರದೇಶದಲ್ಲಿ ದ್ವಾರಪಾಲಕ ಮತ್ತು ಶೈವ ದ್ವಾರಪಾಲಕನ ಸುಂದರವಾದ ಶಿಲ್ಪಗಳು ಸ್ವಾಗತಿಸುತ್ತವೆ. ದ್ವಾರಪಾಲಕನ ಶಿಲ್ಪವು ಮೊಣಕಾಲಿನ ಮೇಲಿನ ಭಾಗವಷ್ಟೇ ಇದೆ. ಸುಂದರವಾದ ಕಮಾನು ದಾಟಿ ಮುಂದೆ ಬಂದರೆ ಹೊಯ್ಸಳರ ಲಾಂಛನವಾದ ಬಾಲಕ ಮತ್ತು ಹುಲಿ (ಸಿಂಹ) ಕಂಡುಬರುತ್ತಾರೆ. 'ಹೊಯ್' ಅಂದರೆ ಹೊಡಿ, 'ಸಳ' ಎಂದರೆ ಬಾಲಕನ ಹೆಸರು. ಗುರುಗಳು ಹುಲಿ ನುಗ್ಗಿದಾಗ ಸಳ ಎಂಬ ಬಾಲಕನಿಗೆ ಹೊಯ್ ಎಂದು ಆದೇಶಿಸಿದಾಗ ಆ ಬಾಲಕ ಒಂದಿಷ್ಟೂ ಹೆದರದೆ ಅದನ್ನು ಎದುರಿಸಿ ಹೊಡೆದನು. ಅವನೇ ಹೊಯ್ಸಳರ ಮೂಲ ಪುರುಷ ಎಂಬ ಪ್ರತೀತಿ. ಇಲ್ಲಿರುವ ಗೋವರ್ಧನ ಗಿರಿಧಾರಿಯ ಶಿಲ್ಪವು ಸುಂದರವಾಗಿದೆ. ನಾಟ್ಯ ಮಾಡುತ್ತಿರುವ ಮತ್ತು ಶೃಂಗಾರ ಮಾಡಿಕೊಳ್ಳುತ್ತಿರುವ ಲಲನಾ ಮಣಿಗಳ ಸುಂದರ ಶಿಲ್ಪಗಳು ಇಲ್ಲಿವೆ. ಇವುಗಳಲ್ಲದೇ ನಾಟ್ಯ ಮಾಡುತ್ತಿರುವ ಗಣೇಶ, ಶಿವ, ಪಾರ್ವತಿ, ಮಹಿಷಾಸುರ ಮರ್ಧಿನಿ ಮತ್ತಿತರ ಸುಂದರ ಕೆತ್ತನೆಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

ಸಂಗ್ರಹಾಲಯ ಪ್ರವೇಶಿಸಿದಾಗ ಹೊಯ್ಸಳರ ವಂಶಾವಳಿಯ ಫಲಕ ಸ್ವಾಗತಿಸುತ್ತದೆ. (ಕ್ರಿ.ಶ.1006 ರಿಂದ 1346 ರ ವರೆಗೆ.). ಮುಂದೆ ನಡೆದಂತೆ ಕಬ್ಬಿಣದ ದೊಡ್ಡ ಹಂಡೆ, ನಟರಾಜ, ಭೈರವಿ, ದಶಾವತಾರ, ಸಪ್ತ ಮಾತೃಕೆಯರು, ಶಿವ, ಜೈನ ಸುಮಾರು 800-900 ವರ್ಷಗಳ ಹಳೆಯವು. ಇಲ್ಲಿಯ ಕಲಾಕೃತಿಗಳನ್ನು ವಿವಿಧ ದೇಶದ ವಿಶ್ವಪ್ರಸಿದ್ಧ ವಸ್ತುಸಂಗ್ರಹಾಲಯ ಗಳಿಗೆ ಪ್ರದರ್ಶನಕ್ಕೆ ಕಳಿಸುತ್ತಾರಂತೆ.

ತಾಮ್ರ ಶಾಸನ ಫಲಕ

ತಾಮ್ರದಲ್ಲಿ ಬರೆದ ವಿರೂಪಾಕ್ಷ ಎಂದು ಹಸ್ತಾಕ್ಷರ ಇರುವ ಎರಡು ಶಾಸನದ ಫಲಕಗಳನ್ನು ಕಾಣಬಹುದು. ಶಾಸನದ ಅನುವಾದಗಳು ನಮಗೆ ಮೈಸೂರಿನಲ್ಲಿರುವ ಓರಿಯಂಟಲ್ ರಿಸರ್ಚ ಸಂಸ್ಥೆಯಲ್ಲಿ ಲಭ್ಯವಿದೆ ಎಂದು ತಿಳಿದು ಬಂತು. ಸುಂದರವಾದ ಪಾರ್ವತಿಯ ಶಿಲ್ಪ ಕಲಾಕೃತಿ ನಮ್ಮ ಗಮನ ಸೆಳೆಯಿತು. ಇದರ ಮುಖದ ತೇಜಸ್ಸು, ಶರೀರದ ಭಂಗಿ, ಕಾಲುಂಗರಗಳು, ಉಂಗುರಗಳು, ಉಗುರುಗಳು, ಕೈಯಲ್ಲಿ ಹಿಡಿದ ಅಂಕುಶ, ಡಮರು, ಧರಿಸಿದ ಆಭರಣಗಳು ವಿಶೇಷ.

ಸಿಂಗಪುರದಿಂದ ವಾಪಸಾದ ಗಣೇಶ!

ಸುಮಾರು 22 ವರ್ಷ ಸಿಂಗಾಪೂರದಲ್ಲಿದ್ದು 9 ತಿಂಗಳುಗಳ ಹಿಂದಷ್ಟೇ ಇಲ್ಲಿಗೆ ಮರಳಿದ ಸೂಕ್ಷ್ಮ ಕುಸುರಿನಿಂದ ಕೆತ್ತಿದ ಗಣೇಶನ ವಿಗ್ರಹವೂ ಇಲ್ಲಿದೆ. ಹಿತ್ತಾಳೆಯಲ್ಲಿ ಕೆತ್ತಿದ ಅಜಾನುಬಾಹು ತೀರ್ಥಂಕರರ ಸುಂದರ ವಿಗ್ರಹವು ವಂಶಾವಳಿಯ ಫಲಕದ ಪಕ್ಕದಲ್ಲಿ ಇಡಲಾಗಿದೆ. 18 ಅಡಿ ಎತ್ತರದ ಗಂಭೀರವಾಗಿ ನಿಂತ ತೀರ್ಥಂಕರರ ವಿಗ್ರಹವು ಸಂಗ್ರಹಾಲಯದ ಹೊರಭಾಗದಲ್ಲಿರುವ ಬಯಲಿನಲ್ಲಿ ನಮ್ಮ ಗಮನವನ್ನು ಸೆಳೆಯುತ್ತದೆ. ಇನ್ನೂ ಹಲವು ಕಲಾಕೃತಿಗಳು ಈ ವಸ್ತು ಸಂಗ್ರಹಾಲಯದಲ್ಲಿದೆ. 1311ರಲ್ಲಿ ಹೊಯ್ಸಳದ ರಾಜಧಾನಿಯು ಹಾನಿಗೆ ಒಳಗಾಯಿತು; ವೈರಿಗಳ ಸೈನ್ಯವು ಉಳಿದ ರಚನೆಗಳನ್ನು 1326ರಲ್ಲಿ ಹಾಳುಗೆಡ ವಿದರು. ಹಳೆಬೀಡಿನ ಪ್ರವಾಸಕ್ಕೆ ಹೋದಾಗ, ಇಲ್ಲಿನ ವಸ್ತು ಸಂಗ್ರಹಾಲಯವನ್ನೂ ನೋಡಲು ಮರೆಯದಿರಿ!

ಸಿಕ್ದರ್ ಲೆಕ್ಕಕ್ಕೆ ಸಿಕ್ಕಿದ ಎವರೆಸ್ಟ್!

ಜಗತ್ತಿನ ಅತಿ ಎತ್ತರದ ಶಿಖರದ ನಿಖರವಾದ ಎತ್ತರವನ್ನು 1852ರಲ್ಲಿ ಲೆಕ್ಕಹಾಕಿದವರು, ಕೊಲ್ಕೊತ್ತಾದ ರಾಧಾನಾಥ್ ಸಿಕ್ದರ್ ಎಂಬ ಗಣಿತಜ್ಞರು!



» ಮಿರ್ಲೆ ಚಂದ್ರಶೇಖರ

ಇಂದಿನ ದಿನಗಳಲ್ಲಿ ಸಿವಿಲ್ ಇಂಜಿನಿಯರಿಂಗ್ ಕ್ಷೇತ್ರವು ಹೊಸ ಹೊಸ ಸಂಶೋಧನೆಗಳಿಂದ ರಸ್ತೆ, ಕಾಲುವೆ, ಸೇತುವೆಗಳು, ಸುರಂಗ ಮಾರ್ಗ, ಅಣೆಕಟ್ಟೆ, ಆಕಾಶದೆತ್ತರದ ಕಟ್ಟಡಗಳು ಮುಂತಾದ ಎಲ್ಲಾ ವಿಭಾಗಗಳಲೂ ಅಗಾಧವಾಗಿ ಅಭಿವೃದ್ಧಿ ಆಗಿದೆ. ಕೆಲವು ದಶಕಗಳ ಹಿಂದೆ ನಿಖರವಾಗಿ ಅಳತೆ ಮಾಡುವುದಕ್ಕೂ ಕಷ್ಟವಿತ್ತು. ಸರ್ವೆಯರ್ ಚೈನ್, ಮೆಟಾಲಿಕ್ ಅಥವಾ ಸ್ಟೀಲ್ ಟೇಪ್, ಡಂಪಿಲೆವೆಲ್, ಕ್ರಾಸ್ ಸ್ಟಾಫ್, ರೇಂಜಿಂಗ್ ರಾಡ್ ಮುಂತಾದ ಮೆಸರಿಂಗ್ ಇನ್‌ಸ್ಟ್ರುಮೆಂಟ್‌ಗಳನ್ನು ಬಳಸಿ ಅಳತೆಗಳು ಹಾಗೂ ಮೋಜಣಿ ಕೆಲಸಗಳು ನಡೆಯುತ್ತಿತ್ತು; ಕಂಪ್ಯೂಟರ್ ಬಳಕೆಯಂತು ಇರಲೇ ಇಲ್ಲ.

ಆ ದಿನಗಳಲ್ಲಿ ಕಂಡುಹಿಡಿದ ಪಲಿತಾಂಶಗಳು ಒಂದು ಹಂತದವರೆಗೆ ನಿಖರವಾಗಿಯೇ ಇರುತ್ತಿತ್ತು! ಅಂತಹದೊಂದು ಉದಾಹರಣೆ ಎಂದರೆ, ಮೌಂಟ್ ಎವರೆಸ್ಟ್‌ನ ಎತ್ತರದ ಲೆಕ್ಕಾಚಾರ. ದಾಖಲೆಯಲ್ಲಿ ಇರುವಂತೆ ಸ್ಥಳೀಯ ಜನರಿಂದ ಪೂಜಿಸಲ್ಪಡುವ ಕಣಿವೆಯ ದೇವತೆ, ವಿಶ್ವದ ದೇವತೆ, ಸ್ವರ್ಗದ ಶಿಖರ ಹಾಗೂ ಗೌರಿಶಂಕರ ಶಿಖರ ಎಂದು ಕರೆಯಲಾಗುವ ಮೌಂಟ್ ಎವರೆಸ್ಟ್ ಶಿಖರದ ಎತ್ತರ 29,032 ಅಡಿ(8849ಮೀ.). 1852ರಲ್ಲಿಯೇ ಅದರ ಎತ್ತರವನ್ನು ಒಬ್ಬ ಗಣಿತಜ್ಞ ಅಳೆದು ಜಗತ್ತಿಗೆ ತೋರಿಸಿದನೆಂದರೆ ಆಶ್ಚರ್ಯವಲ್ಲವೇ?

ಗಣಿತಜ್ಞ ಹಾಗೂ ಸಮಾಜ ಸುಧಾರಕ ರಾಧಾನಾಥ್ ಸಿಕ್ದರ್ ಎಂಬ ವ್ಯಕ್ತಿ ಮೌಂಟ್ ಎವರೆಸ್ಟ್‌ನ ಎತ್ತರವನ್ನು 1852ರಲ್ಲಿ ಲೆಕ್ಕ ಹಾಕಿದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರವಾದದ್ದು, ಅಂದಿಗೆ ಅದು ಮಹಾನ್ ಸಾಧನೆಯಾಗಿತ್ತು. 1852ರವರೆಗೂ ಭೂಮಿಯ ಅತ್ಯಂತ ಎತ್ತರದ ಬಿಂದು ಇದು ಎಂದು ನಿಖರವಾಗಿ ತಿಳಿದಿರಲಿಲ್ಲ.

1813, ಅಕ್ಟೋಬರ್ 5ರಂದು ಕಲ್ಕತ್ತಾದಲ್ಲಿ ಜನಿಸಿದ ರಾಧಾನಾಥ್ ಸಿಕ್ದರ್, ಗಣಿತ ವಿಷಯದಲ್ಲಿ ಅಸಾಧಾರಣ ಸಾಮರ್ಥ್ಯವನ್ನು ಹೊಂದಿದ್ದರು. ಕಾಲೇಜಿನಲ್ಲಿ ಗಣಿತಶಾಸ್ತ್ರದಲ್ಲಿ ಪ್ರಾಧ್ಯಾಪಕರಾಗಿದ್ದ ಜಾನ್ ಟೈಟ್ಲರ್‌ರವರು ಇವರ ಬುದ್ಧಿವಂತಿಕೆಯನ್ನು ಗುರುತಿಸಿ ಮಾರ್ಗದರ್ಶನವನ್ನು ನೀಡುವ ಮೂಲಕ ಅವರ ಬೌದ್ಧಿಕ ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸಿದರು.

1830ರಿಂದ 1843ರವರೆಗೆ ಸರ್ ಜಾರ್ಜ್ ಎವರೆಸ್ಟ್ ಎಂಬುವವರು ಭಾರತದ ಬ್ರಿಟಿಷ್ ಸರ್ವೆಯರ್ ಜನರಲ್ ಆಗಿದ್ದರು. ಅವರು ಕಲ್ಕತ್ತಾ ಪಟ್ಟಣದ ಮ್ಯಾಪಿಂಗ್ ಪ್ರಕ್ರಿಯೆಗಾಗಿ, ತ್ರಿಕೋನಮಿತಿಯಲ್ಲಿ ಪರಿಣಿತಿ ಹೊಂದಿರುವ ಗಣಿತಜ್ಞರನ್ನು ಹುಡುಕುತ್ತಿದ್ದರು, ಆ ಸಮಯಕ್ಕೆ ಜಾನ್ ಟೈಟ್ಲರ್ ರವರು ತಮ್ಮ ಶಿಷ್ಯನಾಗಿದ್ದ 18 ವರ್ಷದ ತರುಣ ರಾಧಾನಾಥ್ ಸಿಕ್ದರ್ ಅವರನ್ನು ಶಿಫಾರಸು ಮಾಡಿದರು. ಎವರೆಸ್ಟ್ ಅವರ ನೆಚ್ಚಿನ ಶಿಷ್ಯರಾಗಿದ್ದ ಇವರು ಗಣಿತ ಶಾಸ್ತ್ರದಲ್ಲಿ ಹೆಚ್ಚಿನ ಕೌಶಲ್ಯವನ್ನು ತೋರಿದ ಇವರನ್ನು ತಿಂಗಳಿಗೆ ಮೂವತ್ತು ರೂಪಾಯಿ ಸಂಬಳದ ಉದ್ಯೋಗಕ್ಕೆ ಜಿಟಿಎಸ್‌ನಲ್ಲಿ ಸೇರಿಸಿಕೊಂಡರು. ರಾಧಾನಾಥ್‌ರವರ ಕೆಲಸವೆಂದರೆ ಜಿಯೋಡೆಟಿಕ್ ಸಮೀಕ್ಷೆಗಳನ್ನು ಮಾಡುವುದಾಗಿತ್ತು.

ಮುಖ್ಯ ಕಂಪ್ಯೂಟರ್!

1843ರಲ್ಲಿ ಜಾನ್ ಎವರೆಸ್ಟ್‌ರವರು ನಿವೃತ್ತಿ ಆದ ನಂತರ ಕರ್ನಲ್ ಆಂಡ್ರ್ಯೂ ಸ್ಕಾಟ್ ವಾ ರವರು ಅಧಿಕಾರ ವಹಿಸಿಕೊಂಡರು. ಅವರು ರಾಧಾನಾಥ್ ಅವರ ಪರಿಣಿತಿಯನ್ನು ತಿಳಿದು 1851ರಲ್ಲಿ ಅವರಿಗೆ 'ಮುಖ್ಯ ಕಂಪ್ಯೂಟರ್' ಹುದ್ದೆಗೆ ಭಡ್ತಿ ನೀಡಿದರು, ಜೊತೆಗೆ ಹೆಚ್ಚುವರಿಯಾಗಿ ಹವಾಮಾನ ಇಲಾಖೆಯ ಅಧೀಕ್ಷಕರು ಕೂಡ ಆಗಿದ್ದರು. ಕರ್ನಲ್ ವಾ ರವರ ಆದೇಶದಂತೆ ರಾಧಾನಾಥ್ ರವರನ್ನು ಪರ್ವತಗಳ ಎತ್ತರವನ್ನು ಅಳೆಯಲು ಪ್ರಾರಂಭಿಸಿದರು. ಅಲ್ಲಿಯವರೆಗೂ ಕಾಂಚನಜುಂಗಾ ಶಿಖರವನ್ನು ಜಗತ್ತಿನ ಅತಿ ಎತ್ತರದ ಶಿಖರ ಎಂದು ತಿಳಿಯಲಾಗಿತ್ತು. ರಾಧಾನಾಥ್‌ರವರು ಆರು ಬಗೆಯ ಅವಲೋಕನಗಳಿಂದ ಎವರೆಸ್ಟ್ ಶಿಖರದ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಿ, ಅಂತಿಮವಾಗಿ ವಿಶ್ವದಲ್ಲೇ ಅತಿ ಎತ್ತರದ ಶಿಖರ ಎಂಬ ತೀರ್ಮಾನಕ್ಕೆ ಬಂದರು.

ಗಣಿತಜ್ಞ ರಾಧಾನಾಥ್ ಸಿಕ್ದರ್ ಅಳತೆ ಮಾಡಿದ ಎವರೆಸ್ಟ್ ಶಿಖರವು 29000 ಅಡಿ ಎಂದು ಲೆಕ್ಕ ಹಾಕಲಾಗಿತ್ತು, 1955ರಲ್ಲಿ ಭಾರತೀಯ ಸಮೀಕ್ಷೆಯ ಪ್ರಕಾರ 29032 ಅಡಿ ಅಥವಾ 8849ಮೀ. ಎಂದು ಮರು ಲೆಕ್ಕಾಚಾರ ಮಾಡಿ ಅಧಿಕೃತಗೊಳಿಸಲಾಯಿತು. ಅಂದರೆ, ಸಿಕ್ದರ್ ಅವರ ಲೆಕ್ಕಾಚಾರು ಬಹುಮಟ್ಟಿಗೆ ನಿಖರವಾಗಿತ್ತು! ಭಾರತದ ಸರ್ವೆ ಇಲಾಖೆಯ ಅಧಿಕಾರಿ ಜಾರ್ಜ್ ಎವರೆಸ್ಟ್ (1790-1866) ಅವರ ಹೆಸರನ್ನು ಎವರೆಸ್ಟ್‌ಗೆ ಇಡಲಾಯಿತು. ರಾಧಾನಾಥ್ ಸಿಕ್ದರ್‌ರವರು 'ಮುಖ್ಯ ಕಂಪ್ಯೂಟರ್' ಹುದ್ದೆಯಿಂದ ನಿವೃತ್ತರಾದ ಬಳಿಕ ಗಣಿತಶಾಸ್ತ್ರದ ಉಪನ್ಯಾಸಕರಾಗಿ ಸೇವೆಗೆ ನೇಮಕಗೊಂಡರು. ಸಿಕ್ದರ್‌ರವರ ಗಣಿತ ಪ್ರತಿಭೆಯನ್ನು ಗುರುತಿಸಿ ಜರ್ಮನ್ ಫಿಲಾಸಫಿಕಲ್ ಸೊಸೈಟಿಯು ನಿವೃತ್ತಿಯ ಎರಡು ವರ್ಷಗಳ ನಂತರ ಸದಸ್ಯರನ್ನಾಗಿ ಮಾಡಿಕೊಂಡಿತು. ಭಾರತ ಸರ್ಕಾರದ ಅಂಚೆ ಇಲಾಖೆಯು 27, ಜೂನ್ 2004ರಲ್ಲಿ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿತು.

ವಿಶ್ವದ ಅತ್ಯಂತ ಎತ್ತರದ ಮೌಂಟ್ ಎವರೆಸ್ಟ್ ಶಿಖರವನ್ನು 2024ರ ಹೊತ್ತಿಗೆ, 7269 ಸಾಹಸಿಗರು ಏರಿ ತುದಿ ಮುಟ್ಟಿದ್ದಾರೆ. ಪ್ರತೀ ವರ್ಷ ಸಾವಿರಾರು ಪರ್ವತಾರೋಹಿಗಳು ಅದನ್ನು ಏರಲು ಶ್ರಮ ಪಡುತ್ತಾರೆ!

ಮನೆಯೊಳಗೆ ಗ್ರೆನೇಡ್...

← ಮೊದಲಪುಟದಿಂದ

ಆದರೆ ಬಾಗಿಲು ಓಪನ್ ಆಗಲಿಲ್ಲ. ಬಹುಶಃ ಅವರ ಗುಂಡಿನ ದಾಳಿಗೋ ಅಥವಾ ಒದೆತಕ್ಕೋ ಅದು ಜಾಮ್ ಆಗಿರಬೇಕು. ಅಪ್ಪನ ಕೈ ಇನ್ನೂ ಸುಸ್ಥಿತಿಯಲ್ಲಿತ್ತು. ಹೀಗಾಗಿ ಅವರೇ ಟೂರ್ನಿಕೆ ಮಾಡಿಕೊಂಡು ಕಾಲಿಗೆ ಬಿಗಿದರು. ಅಪ್ಪ ತನ್ನ ಗಾಯಕ್ಕೆ ಚಿಕಿತ್ಸೆ ಮಾಡಿಕೊಳ್ಳುತ್ತಿದ್ದಾಗಲೇ ಅವರು ಒಳಗಿನಿಂದ ನಮ್ಮ ಮನೆಗೆ ಬೆಂಕಿ ಹಚ್ಚಲು ಆರಂಭಿಸಿದರು.

ಮನೆಯ ವಸ್ತುಗಳಿಂದಲೇ ಬೆಂಕಿ

ಮನೆಯ ಎಲ್ಲ ಮೂಲೆ ಮೂಲೆ ಹುಡುಕಿ, ಸುಡಬಹುದಾದ ವಸ್ತುಗಳನ್ನೆಲ್ಲ ತಂದು ರಾಶಿ ಹಾಕತೊಡಗಿದರು. ಕುರ್ಚಿ, ಸೋಫಾ, ಬಟ್ಟೆಗಳು ಎಲ್ಲವನ್ನೂ ತಂದು ಸೇಫ್ ರೂಮಿನ ಬಾಗಿಲಿನ ಬಳಿಯಲ್ಲಿ ಜೋಡಿಸಿ ಬೆಂಕಿ ಹಚ್ಚಿದರು. ನಂತರ ಅಲ್ಲೇ ಇದ್ದುಕೊಂಡು ಬೆಂಕಿ ಆರದಂತೆ ನೋಡಿಕೊಂಡರು. ಪ್ರತಿ ಬಾರಿ ಬೆಂಕಿ ಆರಿದಾಗಲೂ ಮತ್ತೆ ಏನಾದರೊಂದು ತಂದಿಟ್ಟು ಅದಕ್ಕೆ ಬೆಂಕಿ ಹಚ್ಚುತ್ತಿದ್ದರು. ಒಳಗೆ ಇಡೀ ಸೇಫ್ ರೂಮ್ ಹೊಗೆಯಿಂದ ಕಟ್ಟಿಕೊಂಡಿತು. ನಮಗೆ ಏನೂ ಕಾಣಿಸುತ್ತಿರಲಿಲ್ಲ. ಹೊಗೆ ಯಾವ ಪ್ರಮಾಣದಲ್ಲಿ ತುಂಬಿಕೊಂಡಿತ್ತು ಅಂದರೆ, ನಮಗೆ ಉಸಿರಾಡುವುದಕ್ಕೂ ಆಗುತ್ತಿರಲಿಲ್ಲ. ಹೀಗಾಗಿ ನಾವು ಪಾಟ್‌ಗಳಲ್ಲಿದ್ದ ಬಟ್ಟೆ ತೆಗೆದುಕೊಂಡು ಮೂಗಿಗೆ ಒತ್ತಿ ಹಿಡಿದೆವು. ಅವು ಸ್ವಲ್ಪ ಸಮಯದ ಹಿಂದೆ ನಾವೇ ಮೂತ್ರ ಮಾಡಿದ್ದ ಬಟ್ಟೆಗಳಾಗಿದ್ದವು. ಆದರೂ ಒತ್ತಿ ಮುಖಕ್ಕೆ ಹಿಡಿದುಕೊಂಡಿದ್ದರಿಂದ ಸ್ವಲ್ಪ ಉಸಿರಾಡಲು ಸಾಧ್ಯವಾಯಿತು. ಮಧ್ಯಾಹ್ನ ಮೂರು ಗಂಟೆಯವರೆಗೂ ನಾವು ಮೂಗಿಗೆ ಬಟ್ಟೆ ಒತ್ತಿ ಹಿಡಿದುಕೊಂಡು ಅಲ್ಲೇ ಇದ್ದೆವು.

ನಾನಾ ಕಸರತ್ತು ನಡೆಸಿದರೂ ನಾವು ಬಾಗಿಲು ತೆರೆಯಲು ಬಿಡದ ಕಾರಣ ಉಗ್ರರು ಸೇಫ್ ರೂಮಿನ ಕಿಟಕಿಯಿಂದ ಒಳಗೆ ಬರಲು ನಿರ್ಧರಿಸಿದರು. ಅದಕ್ಕಾಗಿ ಕಿಟಕಿ ಮೇಲೆ ದೊಡ್ಡ ದೊಡ್ಡ ಸ್ಫೋಟಕಗಳನ್ನು ಇರಿಸಿ ಸ್ಫೋಟಿಸಲು ಮುಂದಾದರು. ಏನಾದರೂ ಮಾಡಿ ಒಳಗೆ ಬರಲೇಬೇಕು ಎಂದು ಅವರು ಹಟಕ್ಕೆ ಬಿದ್ದಿದ್ದರು. ಮೊದಲು ಒಂದು ಬ್ಲಾಕ್ ಇಟ್ಟು ಸ್ಫೋಟಿಸಿದರು. ನಂತರ ಇನ್ನೊಂದು ಬ್ಲಾಕ್ ಇಟ್ಟು ಬೆಂಕಿ ಹಚ್ಚಿದರು. ಎರಡನೇ ಬ್ಲಾಕ್ ಸ್ಫೋಟಿಸುವ ಹೊತ್ತಿಗೆ ಕಿಟಕಿಯಲ್ಲಿ ದೊಡ್ಡ ರಂಧ್ರವಾಯಿತು. ಅದರೊಳಗಿನಿಂದ ಮೂರು ಗ್ರೆನೇಡ್‌ಗಳನ್ನು ಎಸೆದರು. ಒಳಗೆ ನಾವೆಲ್ಲಿದ್ದೇವೆ ಎಂಬುದು ಅವರಿಗೆ ಕಾಣಿಸುತ್ತಿರಲಿಲ್ಲ. ಏಕೆಂದರೆ ಇಡೀ ಕೋಣೆಯಲ್ಲಿ ಹೊಗೆ ತುಂಬಿತ್ತು. ಗ್ರೆನೇಡ್ ಬಂದು ಅಲ್ಲಿದ್ದ ಮಂಚಕ್ಕೆ ಬಡಿದು ಸ್ಫೋಟಿಸಿತು. ನನ್ನ ಕಾಲಿಗೆ ಮೊಳೆಗಳು ಹೊಕ್ಕವು. ಅಪ್ಪನ ಹೊಟ್ಟೆಗೆ, ಅಮ್ಮನ ತೋಳುಗಳಿಗೆ ಮೊಳೆಗಳು ಚುಚ್ಚಿದವು. ಆದರೆ ಅವು ಗಂಭೀರ ಗಾಯಗಳಾಗಿರಲಿಲ್ಲ.

ನಂತರ ಒಬ್ಬ ಉಗ್ರ ಕಿಟಕಿಯ ರಂಧ್ರದಲ್ಲಿ ರೈಫಲ್ ನಳಿಕೆ ಇರಿಸಿ ಕೆಲ ಗುಂಡುಗಳನ್ನು ಹಾರಿಸಿದ. ಒಂದು ಗುಂಡು ಅಮ್ಮನಿಗೆ ಬಡಿಯಿತು. ನೇರವಾಗಿ ಅವಳ ಶ್ವಾಸಕೋಶಕ್ಕೇ ಗುಂಡು ತಗಲಿತ್ತು. ಅಮ್ಮ ಅಲ್ಲೇ ನೆಲದ ಮೇಲೆ ಕುಸಿದು, ಮೈಯೆಲ್ಲ ಮುದುರಿಕೊಂಡು ಚೀರಿದಳು. ನಮ್ಮಲ್ಲಿ ನಾಲ್ಕೂ ಜನರಿಗೂ ಗಾಯಗಳಾಗಿದ್ದವು. ಇದ್ದುದರಲ್ಲೇ ಸ್ವಲ್ಪ ಪರವಾಗಿಲ್ಲ ಎಂಬ ಸ್ಥಿತಿಯಲ್ಲಿ ನಾನಿದ್ದೆ. ಹೀಗಾಗಿ ಎಲ್ಲರ ಫೋನ್‌ಗಳನ್ನು ತೆಗೆದುಕೊಂಡು ಯಾರ್ಯಾರಿಗೆ ಸಾಧ್ಯವೋ ಅವರಿಗೆಲ್ಲ ಮೆಸೇಜ್ ಕಳುಹಿಸಲು ಆರಂಭಿಸಿದೆ. ವಾಯ್ಸ್ ರೆಕಾರ್ಡ್ ಮಾಡಿ ಇಡೀ ಕಿಬೂತ್ಸ್‌ಗೆ ಕಳುಹಿಸಿದೆ. ಆ ಮೆಸೇಜ್ ಈಗಲೂ ನನ್ನಲ್ಲಿದೆ: 'ಯಾರಾದರೂ ಬಂದು ನಮ್ಮನ್ನು ಉಳಿಸಿ. ನಮಗೆ ಸಹಾಯ ಬೇಕು. ಕಾರ್ಮೆಲ್‌ಗೆ ಉಸಿರಾಡಲು ಆಗುತ್ತಿಲ್ಲ. ದಯವಿಟ್ಟು ಯಾರಾದರೂ ಬನ್ನಿ.'

ಸರ್ಫ್ ಬೋರ್ಡ್ ಜತೆ ಸಮಾಧಿ

ನಂತರ ಮಗೆನ್ ಡೇವಿಡ್ ಅಡೋಮ್ ಸೆಂಟರ್‌ಗೆ ಕರೆ ಮಾಡಿದೆ. ಅವರು ಕಿಬೂತ್‌ಗೆ ಬರಲು ಸಾಧ್ಯವಿಲ್ಲ ಎಂದು ಹೇಳಿದರು. ನಂತರ ಸಿವಿಲಿಯನ್ ಸೆಕ್ಯುರಿಟಿ ಪಡೆ ಮುಖ್ಯಸ್ಥರಿಗೆ ಕರೆ ಮಾಡಿದೆ. ಅವರು ಕಾಲ್ ತೆಗೆದುಕೊಳ್ಳಲಿಲ್ಲ. ಅವರು ಈಗಾಗಲೇ ಸತ್ತುಹೋಗಿದ್ದಾರೆ ಎಂಬುದು ನನಗೆ ಗೊತ್ತಿರಲಿಲ್ಲ. ನಂತರ ನನಗೆ ಮಗೆನ್ ಡೇವಿಡ್ ಅಡೋಮ್‌ನಿಂದ ಕರೆ ಬಂತು. 'ಅಮ್ಮನ ಮೈಮೇಲಿನ ಬಟ್ಟೆ ತೆಗೆದು ಎಲ್ಲಿ ಗುಂಡು ತಾಗಿದೆ ಅಂತ ನೋಡು!' ಎಂದು ಹೇಳಿದರು. ನಾನು ಅಮ್ಮನ ಪೈಜಾಮಾದ ಟಾಪ್ ಹರಿದು ಗಾಯಕ್ಕಾಗಿ ಹುಡುಕಿದೆ. ನನಗೆ ಏನೂ ಕಾಣಿಸಲಿಲ್ಲ. ಅಮ್ಮ ಮತ್ತು ಕಾರ್ಮೆಲ್ ನಮಗೆ ಗುಡ್‌ಬೈ ಹೇಳುತ್ತಿದ್ದರು! 'ಐ ಲವ್ ಯೂ' 'ಐ ಲವ್ ಯೂ ಆಲ್' ಎಂದು ಹೇಳುತ್ತಲೇ ಇದ್ದರು. ನಿಧಾನವಾಗಿ ಅವರ ಪ್ರಜ್ಞೆ ಹೋಗುತ್ತಿತ್ತು. ಕಾರ್ಮೆಲ್ ತನ್ನನ್ನು ಸರ್ಫ್ ಬೋರ್ಡ್‌ನ ಜತೆಗೇ ಮಣ್ಣು ಮಾಡುವಂತೆ ನಮಗೆ ಹೇಳಿದ! ನಾವು ಆಮೇಲೆ ಹಾಗೇ ಮಾಡಿದೆವು. ಅವನನ್ನು ಅವನ ಪ್ರೀತಿಯ ಸರ್ಫಿಂಗ್ ಬೋರ್ಡ್ ಜತೆಯಲ್ಲೇ ಮಣ್ಣು ಮಾಡಿದೆವು.

* * *

ನಾವೆಲ್ಲರೂ ಸೇಫ್ ರೂಮಿನ ನೆಲದ ಮೇಲೆ ಬಿದ್ದುಕೊಂಡಿದ್ದೆವು. ಇಡೀ ಕೋಣೆಯಲ್ಲಿ ಇನ್ನೂ ಹೊಗೆ ತುಂಬಿಕೊಂಡಿತ್ತು. ನಮ್ಮ ಮೂಗು ಕಟ್ಟಿತ್ತು. ಆದರೆ ನೆಲದ ಮೇಲೆ ಮಲಗಿ ಉಸಿರಾಡುವುದು ಸ್ವಲ್ಪ ಸುಲಭವಾಗುತ್ತಿತ್ತು. ಹೀಗಾಗಿ ಎಲ್ಲರೂ ಒಬ್ಬರ ಮೇಲೊಬ್ಬರು ಮಲಗಿದಂತೆ ಮಲಗಿದ್ದೆವು. ನಾನು ಅಮ್ಮನ ಮೂಗಿನಿಂದ ಮಸಿಯನ್ನು ಕ್ಲೀನ್ ಮಾಡುತ್ತಿದ್ದೆ. ಅವಳಿಗೆ ಉಸಿರಾಡುವುದಕ್ಕೇ ಆಗುತ್ತಿರಲಿಲ್ಲ. 'ನನಗೆ ಯಾರ ಮೇಲೂ ದ್ವೇಷವಿಲ್ಲ, ನನಗೆ ಯಾರ ಮೇಲೂ ಸಿಟ್ಟಿಲ್ಲ...' ಎಂದು ಅವಳು ಬಡಬಡಿಸುತ್ತಿದ್ದಳು. ಉಸಿರು ಇನ್ನೂ ಕ್ಷೀಣಿಸುತ್ತಿತ್ತು. ಏನೋ ಗೊಣಗುತ್ತಲೇ ಅಮ್ಮ ಹೋಗಿಬಿಟ್ಟಳು. ನಾನು ಮತ್ತೆ ಮಗೆನ್ ಡೇವಿಡ್ ಅಡೋಮ್‌ಗೆ ಕರೆ ಮಾಡಿದೆ. ಅವರು 'ಉಸಿರಾಟ ಚೆಕ್ ಮಾಡು' ಎಂದರು. ಉಸಿರು ನಿಂತುಹೋಗಿತ್ತು. 'ಅಮ್ಮನ ಕಷ್ಟ ಮುಗಿಯಿತು ಮಗೂ. ಅವಳಿನ್ನು ಕಷ್ಟಪಡಬೇಕಿಲ್ಲ. ಏನು ಮಾಡೋಣ. ಈಗ ಕಾರ್ಮೆಲ್‌ನನ್ನು ಬದುಕಿಸಿಕೊಳ್ಳಲು ಪ್ರಯತ್ನ ಮಾಡೋಣ' ಎಂದು ಅಪ್ಪ ಹೇಳಿದರು.

ಹಮಾಸ್ ಭಯೋತ್ಪಾದಕರ ದಾಳಿಯಲ್ಲಿ ಬಚಾವ್ ಆದ ಸಂತ್ರಸ್ತೆ, ಅನುವಾದಕರೊಂದಿಗೆ

ನನ್ನ ಕಾಲಿಗೆ ತೀವ್ರ ಗಾಯವಾಗಿತ್ತು. ಶರ್ಟ್ ಬಿಚ್ಚಿ ಅದರಿಂದ ನಾನೇ ಟೂರ್ನಿಕೆ ಮಾಡಿಕೊಂಡೆ. ಮೈಮೇಲೆ ಅಂಡರ್‌ವೇರ್ ಬಿಟ್ಟರೆ ಇನ್ನೇನೂ ಇರಲಿಲ್ಲ. ಕಾಲಿಗೆ ಮೊಳೆಗಳು ಹೊಕ್ಕಿ ತುಂಬಾ ರಕ್ತಸ್ರಾವ ಆಗಿತ್ತು. ಅಷ್ಟರಲ್ಲಿ ರಾಕ್ಷಸರು ಮತ್ತೆ ಬಂದರು. ಸೇಫ್ ರೂಮಿನ ಬಾಗಿಲಿನಲ್ಲಿ ಮತ್ತೆ ಬೆಂಕಿ ಹಚ್ಚಿದರು. ಬಾಗಿಲಿಗೆ ತಾಗಿಯೇ ಬೆಂಕಿ ಹಚ್ಚಿದ್ದರಿಂದ ನನ್ನ ಕಾಲಿಗೆ ಸುಟ್ಟ ಗಾಯಗಳಾದವು. ಕಾರ್ಮೆಲ್‌ಗೆ 'ಈ ಕಡೆ ಬಾ, ನಾವು ಆ ಕಡೆಯ ಬಾಗಿಲಿನಿಂದ ದೂರ ಹೋಗಬೇಕು' ಎಂದು ಸೇಫ್ ರೂಮಿನ ಇನ್ನೊಂದು ಬದಿಗೆ ಕರೆದುಕೊಂಡು ಹೋದೆ. ಆದರೆ ಅಷ್ಟರಲ್ಲಿ ಕಾರ್ಮೆಲ್ ಮತ್ತು ನನ್ನ ತಂದೆಯ ಜೀವ ಹೋಗುತ್ತಿತ್ತು. ಅವರಿಬ್ಬರಿಗೂ ನಾನು, 'ಏಳಿ ಏಳಿ! ಏನೂ ಆಗೋದಿಲ್ಲ ನಿಮಗೆ, ಏಳಿ! ಎಚ್ಚರವಾಗಿರೋದಕ್ಕೆ ಪ್ರಯತ್ನಿಸಿ' ಎಂದು ಹೇಳುತ್ತಲೇ ಇದ್ದೆ. ಮೊಬೈಲಿನಲ್ಲಿ ನೂರಾರು ಮೆಸೇಜ್‌ಗಳನ್ನು ಕಳುಹಿಸಿ ನಮ್ಮನ್ನು ಕಾಪಾಡಲು ಬರುವಂತೆ ಬೇಡಿಕೊಂಡೆ.

ಒಂದು ಹಂತದಲ್ಲಿ ಕಾರ್ಮೆಲ್‌ಗೆ ವೀಸಿಂಗ್ ಶುರುವಾಯಿತು. ಅವನು ವಿಚಿತ್ರವಾಗಿ ಉಸಿರು ಎಳೆದುಕೊಳ್ಳುತ್ತಿದ್ದ. 'ಕಾರ್ಮೆಲ್, ಇಲ್ಲಿ ಕೇಳು, ನೀನೀಗ ವೀಸ್ ಮಾಡುವ ಹಾಗಿಲ್ಲ! ಟೆರರಿಸ್ಟ್‌ಗಳು ಇಲ್ಲೇ ಹೊರಗಿದ್ದಾರೆ. ಅವರಿಗೆ ಕೇಳಿಸಿದರೆ ನಾವಿನ್ನೂ ಸತ್ತಿಲ್ಲ ಎಂದು ಒಳಗೆ ನುಗ್ಗುತ್ತಾರೆ. ನಮ್ಮನ್ನೆಲ್ಲ ಅವರು ಕಿಡ್ನಾಪ್ ಮಾಡುತ್ತಾರೆ ಅಥವಾ ಗ್ರೆನೇಡ್ ಎಸೆದು ಎಲ್ಲರನ್ನೂ ಸಾಯಿಸುತ್ತಾರೆ. ಪ್ಲೀಸ್, ಶಬ್ದ ಮಾಡಬೇಡ' ಎಂದು ಹೇಳಿದೆ. ಸ್ವಲ್ಪ ಹೊತ್ತಿನಲ್ಲೇ ಅವನ ಉಸಿರಾಟ ಕ್ಷೀಣಿಸತೊಡಗಿತು. ಮತ್ತೆ ಸ್ವಲ್ಪ ಹೊತ್ತಿನಲ್ಲಿ ಅವನೂ ಜೀವ ಬಿಟ್ಟ. ಅವನನ್ನು ಮೇಲೆತ್ತಿ ಅಂಗಾತ ಮಲಗಿಸಲು ಪ್ರಯತ್ನಿಸಿದೆ. ಸಿಪಿಆರ್ ಮಾಡಿ ಬದುಕಿಸಲು ಸಾಧ್ಯವೇ ಎಂದು ಯೋಚಿಸುತ್ತಿದ್ದೆ. ಆದರೆ ಅವನನ್ನು ಎತ್ತುವಷ್ಟು ಶಕ್ತಿ ನನಗಿರಲಿಲ್ಲ. ಹೊಗೆ ಸೇವಿಸಿ ನಾನೂ ಬಹಳ ವೀಕ್ ಆಗಿದ್ದೆ. ನನ್ನ ಕಷ್ಟ ನೋಡಿದ ಅಪ್ಪ, 'ಹದರಿ, ಅಮ್ಮ ಮತ್ತು ಕಾರ್ಮೆಲ್ ಈಗ ಕಷ್ಟದಿಂದ ಮುಕ್ತವಾದರು. ನಾವೀಗ ನಮ್ಮ ಮೇಲೆ ಫೋಕಸ್ ಮಾಡಬೇಕು' ಎಂದು ಹೇಳಿದರು.

ನಮ್ಮೆಲ್ಲರ ಮೊಬೈಲಿನಿಂದಲೂ ನಾನು ಇನ್ನಷ್ಟು ಜನರಿಗೆ ಮೆಸೇಜ್ ಕಳುಹಿಸಿದೆ. ಕಿಬೂತ್‌ನ ಗ್ರೂಪಿಗೆ ಅಮ್ಮನ ಫೋನ್‌ನಿಂದ ಮೆಸೇಜ್ ಕಳುಹಿಸಿದೆ. 'ಇನಾನು ಹದರ್, ನಮಗೆಲ್ಲರಿಗೂ ಗಾಯವಾಗಿದೆ. ಅವರು ಗುಂಡು ಹಾರಿಸುತ್ತಿದ್ದಾರೆ. ಪ್ಲೀಸ್ ನಮ್ಮನ್ನು ಕಾಪಾಡಿ. ಅವರು ನಮ್ಮ ಮನೆಗೆ ಬೆಂಕಿ ಹಚ್ಚಿದ್ದಾರೆ. ಅಮ್ಮ ಮತ್ತು ಕಾರ್ಮೆಲ್ ಸತ್ತುಹೋಗಿದ್ದಾರೆ. ನನಗೆ ಸಾಯೋದಕ್ಕೆ ಭಯವಾಗ್ತಿದೆ. ದಯವಿಟ್ಟು ಬನ್ನಿ' ಎಂದು ಸಂದೇಶ ಕಳುಹಿಸಿದ್ದೆ. ಪ್ರತಿ ಬಾರಿ ನನಗೆ ಸದ್ದು ಕೇಳಿಸಿದಾಗಲೂ ಅಲ್ಲಿದ್ದ ಸೂಟ್‌ಕೇಸಿನ ಕೆಳಗೆ ಅಡಗುತ್ತಿದ್ದೆ. ಮೊಬೈಲಿನ ಬೆಳಕು ಅವರಿಗೆ ಕಾಣದಿರಲಿ ಎಂದು ನಾನಾ ಕಸರತ್ತು ಮಾಡುತ್ತಿದ್ದೆ. ಮೆಸೇಜುಗಳನ್ನು ಮಾತ್ರ ಕಳುಹಿಸುತ್ತಲೇ ಇದ್ದೆ. ಯಾವುದೋ ಒಂದು ಮೆಸೇಜ್ ಇನ್ನೆಲ್ಲೋ ಇದ್ದ ಪುಣ್ಯಾತ್ಮನೊಬ್ಬನಿಗೆ ಸಿಕ್ಕಿರಬೇಕು. ಆತ ನಾವಿರುವಲ್ಲಿಗೇ ನೇರವಾಗಿ ಯುದ್ಧಟ್ಯಾಂಕ್ ಒಂದನ್ನು ಕಳುಹಿಸಿದರು. ನಮ್ಮ ಮನೆಗೆ ಸೈನಿಕರು ನುಗ್ಗಿದರು. ಅವರ ಮಾತು ನನಗೆ ಕೇಳಿಸತೊಡಗಿತು. ಅಪ್ಪ ಒಮ್ಮೆ ಜೋರಾಗಿ ಅವರನ್ನು ಕರೆದರು. ಆದರೆ ಅವರಿಗೆ ಮತ್ತೆ ಕೂಗುವುದಕ್ಕೂ ಆಗಲಿಲ್ಲ. ಅಷ್ಟೊಂದು ನಿಶ್ಶಕ್ತರಾಗಿದ್ದರು. ಸಾಯುವ ರೀತಿಯಲ್ಲಿ ಉಸಿರಿಗೆ ಪರದಾಡುತ್ತಿದ್ದರು. ಅವರನ್ನು ಬದುಕಿಸಿಕೊಳ್ಳುವುದಕ್ಕಾಗಿ ನಾನು 'ಡ್ಯಾಡಿ, ಪ್ಲೀಸ್ ನಮ್ಮನ್ನು ಬಿಟ್ಟು ಹೋಗೋಡಿ, ನೀವಿಲ್ಲದೆ ಬದುಕಲು ನಮ್ಮಿಂದ ಸಾಧ್ಯವಿಲ್ಲ! ಪ್ಲೀಸ್ ಡ್ಯಾಡಿ' ಎಂದು ಕಿರುಚುತ್ತಿದ್ದೆ. ಅವರ ಉಸಿರಾಟ ಕ್ಷೀಣಿಸುತ್ತಿತ್ತು. ನನಗೆ ಸೈನಿಕರ ಮಾತು, ಓಡಾಟ ಕೇಳಿಸುತ್ತಿತ್ತು. ನಾನೇ ಅವರನ್ನು ಕೂಗಿ ಕರೆಯತೊಡಗಿದೆ. ಅವರು ಒಳಗೆ ಇಣುಕಿದಾಗ ಎಲ್ಲೆಡೆ ರಕ್ತ ಚೆಲ್ಲಿತ್ತು. ಬಾಗಿಲು ಜಾಮ್ ಆಗಿತ್ತು. ಹೀಗಾಗಿ ಸೇಫ್ ರೂಮಿನೊಳಗೆ ಬರುವುದಕ್ಕೆ ಅವರಿಂದ ಸಾಧ್ಯವಾಗಲಿಲ್ಲ.

* * *

ಸೈನಿಕರು ಬಂದು ನಮ್ಮನ್ನು ನೋಡಿದಾಗ ರಾತ್ರಿ ಸುಮಾರು ಏಳು ಗಂಟೆ. ನಾವು ಸುಮಾರು ಹನ್ನೆರಡು ತಾಸು ಸೇಫ್ ರೂಮಿನಲ್ಲಿದ್ದೆವು. ಹೊಗೆ ಸೇವಿಸಿ ನಾನು ನಿತ್ರಾಣವಾಗಿದ್ದೆ. ಅಪ್ಪ ನೆಲಕ್ಕೆ ಬಿದ್ದಿದ್ದರು. ಹೊಟ್ಟೆಗೆ ಏನೂ ಇಲ್ಲ. ಕೊನೆಗೂ ಸೈನಿಕರಿಗೆ ಹೊರಗಿನಿಂದ ಬಾಗಿಲು ತೆರೆಯಲು ಆಗಲಿಲ್ಲ. ಹೀಗಾಗಿ ನಾವು ಕಿಟಕಿಯ ರಂಧ್ರದಲ್ಲೇ ನುಸುಳಿ ಹೊರಗೆ ಬರಬೇಕಾಯಿತು. ಆದರೆ ನನಗೆ ಕಾಲೂರಲು ಆಗುತ್ತಿರಲಿಲ್ಲ. ಮೈಮೇಲೆ ಬಟ್ಟೆ ಇರಲಿಲ್ಲ. ಸೈನಿಕರು ಅಲ್ಲೇ ಇದ್ದ ಯಾವುದೋ ಬಟ್ಟೆ ತಂದು ಹೊದಿಸಿದರು. ನಾನು ನೀರು ಕೇಳಿದೆ. ಅವರು ತಂದುಕೊಟ್ಟರು. ನಾನು ಒಂದೇ ಸಮನೆ ಒಂದೂವರೆ ಲೀಟರ್ ನೀರು ಕುಡಿದೆ.

ನಂತರ ಅವರು ನನ್ನನ್ನು ಕುರ್ಚಿಯ ಮೇಲೆ ಕುಳ್ಳಿರಿಸಿ ಕರೆದುಕೊಂಡು ಹೋದರು. ಅಪ್ಪನನ್ನು ಸ್ಟ್ರೆಚರ್ ಮೇಲೆ ಮಲಗಿಸಿದರು. ಇಬ್ಬರನ್ನೂ ಕಿಬೂತ್ಸ್‌ನ ನಿರ್ಗಮನ ದ್ವಾರಕ್ಕೆ ತೆಗೆದುಕೊಂಡು ಹೋದರು. ಅಲ್ಲಿಂದ ಸೇನೆಯ ಆ್ಯಂಬುಲೆನ್ಸ್‌ನಲ್ಲಿ ಸೊರೊಕಾ ಆಸ್ಪತ್ರೆಗೆ ಕರೆದೊಯ್ದರು. ನನಗೆ ಎಮರ್ಜೆನ್ಸಿ ರೂಮ್‌ನಲ್ಲಿ ಚಿಕಿತ್ಸೆ ನೀಡಿದರು. ಆರ್ಥೋಪೆಡಿಕ್‌ಗಳು ಬಂದು, ಟೂರ್ನಿಕೆ ಬಿಚ್ಚಿ, ಕಾಲು ಸ್ವಚ್ಛಗೊಳಿಸಿದರು. 'ನೀನು ಟೂರ್ನಿಕೆಯನ್ನು ಇನ್ನೂ ಅರ್ಧ ತಾಸು ಇಟ್ಟುಕೊಂಡಿದ್ದರೆ ಕಾಲು ಕತ್ತರಿಸಬೇಕಾಗುತ್ತಿತ್ತು' ಎಂದು ಹೇಳಿದರು. ಅಪ್ಪನನ್ನು ಎಮರ್ಜೆನ್ಸಿ ಸರ್ಜರಿಗೆ ಕರೆದುಕೊಂಡು ಹೋದರು. ಅವರ ಸ್ಥಿತಿ ಗಂಭೀರವಾಗಿತ್ತು. ಡಾಕ್ಟರ್‌ಗಳು ಅವರ ಕಾಲು ಉಳಿಸಲು ಯತ್ನಿಸಿದರು. ಮುಖ್ಯ ರಕ್ತನಾಳವನ್ನು ಮರುಜೋಡಣೆ ಮಾಡಲು ಸಾಕಷ್ಟು ಸಾಹಸಪಟ್ಟರು. ಆದರೆ ತುಂಬಾ ಸಮಯ ಕಳೆದುಹೋಗಿತ್ತು. ಹೀಗಾ, ಕೊನೆಗೆ ಕಾಲು ಕತ್ತರಿಸಬೇಕಾಯಿತು. ಆದರೆ ಕೊನೆಯ ಪಕ್ಷ ಅವರ ಜೀವ ಉಳಿಯಿತು. ರಾಕ್ಷಸರ ಕೈಗೆ ಸಿಲುಕಿದ ಮೇಲೂ ನಾನು ಮತ್ತು ಅಪ್ಪ ಹೇಗೋ ಉಳಿದುಕೊಂಡೆವು.

ಈ ಕತೆಯ ಬಗ್ಗೆ ಏನು ಹೇಳಬೇಕೋ ನನಗೆ ತಿಳಿಯುತ್ತಿಲ್ಲ. ಹೇಳುವುದಕ್ಕೆ ಏನೂ ಉಳಿದಿಲ್ಲ. ಕಿಬೂತ್ಸ್‌ಗೆ ಮರಳಿ ಹೋಗಬೇಕು ಎಂಬ ಕನಸು ನನಗಿದೆ. ನಾನು ಪೇಸ್ಟ್ರಿ ಶೆಫ್ ಆಗಬೇಕು. ಆದರೆ ನಾನೀಗ ಹೆಚ್ಚು ಕನಸು ಕಾಣುವುದಿಲ್ಲ. ನಾನೇನಾಗಬೇಕು ಎಂದು ಬಯಸಬೇಕು ಎಂಬುದೂ ನನಗೆ ತಿಳಿಯುತ್ತಿಲ್ಲ. ಗಾಜಾಕ್ಕೆ ಒತ್ತೆಯಾಳಾಗಿ ಹೋಗಿದ್ದ ನನ್ನ ಗೆಳತಿ ಅಲ್ಮಾಳನ್ನು ಅವರು ಇಸ್ರೇಲ್ ಸರಕಾರದ ಜತೆಗಿನ ಒಪ್ಪಂದದಂತೆ ಬಿಡುಗಡೆ ಮಾಡಿದ್ದಾರೆ. ಅವಳು ಮತ್ತು ನಾನು ಈಗ ಮತ್ತೆ ಜತೆಯಾಗಿದ್ದೇವೆ. ಪಾರ್ಕ್‌ನಲ್ಲಿ ಇಬ್ಬರೂ ಜತೆಗೆ ಕುಳಿತು ಮಾತನಾಡುತ್ತೇವೆ. ಆದರೆ ನಮ್ಮ ಬದುಕು ಬದಲಾಗಿದೆ. ಯಾವುದೂ ಈಗ ಮೊದಲಿದ್ದಂತಿಲ್ಲ. ನಾವು ನಕ್ಕರೆ ಅದೂ ಈಗ ಮೊದಲಿದ್ದಂತೆ ಇರುವುದಿಲ್ಲ.

ಭೇಟಿಯಾದವರ ಹೆಸರನ್ನು ನೆನಪಿನಲ್ಲಿಟ್ಟುಕೊಳ್ಳುವುದು ಹೇಗೆ?

ಕಡ್ಲೆ ಮಹಾಬಲ, (ಇಮೇಲ್ ಮೂಲಕ)

- **ಭಟ್ರೇ, ನನಗೆ ಈಗ ಐವತ್ತೊಂಬತ್ತು ವರ್ಷ. ಯಾರಾದರೂ ಎದುರಿಗೆ ತಕ್ಷಣ ಬಂದಾಗ ಇವರನ್ನು ಎಲ್ಲೋ ನೋಡಿದ್ದೇನಲ್ಲ ಎಂದು ಅನಿಸುತ್ತದೆ. ಅವರ ಹೆಸರು ಮತ್ತು ಪರಿಚಯ ಸಿಗುವುದಿಲ್ಲ. 'ನಾನು ಯಾರು ಎಂದು ಹೇಳುತ್ತೀರಾ?' ಎಂದು ಕೇಳಿದರೂ ನನಗೆ ತಕ್ಷಣ ನೆನಪಾಗುವುದಿಲ್ಲ. ಭೇಟಿಯಾದ ಜನರ ಹೆಸರು, ಪರಿಚಯವನ್ನು ಇಟ್ಟುಕೊಳ್ಳುವುದು ಹೇಗೆ?**

– ಮಹಾಬಲ ಅವರೇ, ನಿಮ್ಮ ಸಮಸ್ಯೆಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ ಮತ್ತು ಇದು ನೀವು ಅಂದುಕೊಂಡಿರುವುದಕ್ಕಿಂತ ಹೆಚ್ಚು ಸಾಮಾನ್ಯವಾದ ವಿಷಯವಾಗಿದೆ. ಮೊದಲನೆಯದಾಗಿ, ಇದರ ಬಗ್ಗೆ ಹೆಚ್ಚು ಆತಂಕಪಡಬೇಡಬೇಕಿಲ್ಲ, ಅರವತ್ತರ ಆಸುಪಾಸಿನಲ್ಲಿ, ಮಿದುಳು ಮಾಹಿತಿಯನ್ನು ಸಂಗ್ರಹಿಸುವ ಮತ್ತು ಹಿಂಪಡೆಯುವ ವೇಗದಲ್ಲಿ ಸ್ವಲ್ಪ ಬದಲಾವಣೆಯಾಗುವುದು ಸಹಜ ಪ್ರಕ್ರಿಯೆ. ಮುಖ ಪರಿಚಯವಿದ್ದು, ಹೆಸರು ನೆನಪಾಗದಿರುವುದು ಖಿಜಿಟಟ್ಟಿಜಿಖಿ ಠಿಟ್ಲಜ್ಞಖಿ (ನಾಲಿಗೆ ತುದಿಯಲ್ಲಿದೆ, ಆದರೆ ಹೊರಗೆ ಬರುತ್ತಿಲ್ಲ) ಎಂಬ ಸ್ಥಿತಿ. ನಮ್ಮ ಮಿದುಳು ಮುಖಗಳನ್ನು ದೃಶ್ಯರೂಪದಲ್ಲಿ (Visual) ಮತ್ತು ಹೆಸರುಗಳನ್ನು ಅಮೂರ್ತ ರೂಪದಲ್ಲಿ (Abstract) ಸಂಗ್ರಹಿಸುತ್ತದೆ. ಈ ಎರಡರ ನಡುವಿನ ಸಂಪರ್ಕ ಕಡಿತಗೊಂಡಾಗ ಈ ಸಮಸ್ಯೆ ಉಂಟಾಗುತ್ತದೆ.

ಹೊಸಬರನ್ನು ಭೇಟಿಯಾದಾಗ ಅಥವಾ ಹಳೆಯ ಪರಿಚಯಸ್ಥರನ್ನು ಮತ್ತೆ ನೋಡಿದಾಗ ಅವರ ಹೆಸರು ಮತ್ತು ವಿವರಗಳನ್ನು ನೆನಪಿಟ್ಟುಕೊಳ್ಳಲು ಸಹಾಯ ಮಾಡುವ ಕೆಲವು ಪ್ರಾಯೋಗಿಕ ತಂತ್ರಗಳಿವೆ. ಮೊದಲ ಭೇಟಿಯ ಸಮಯದಲ್ಲಿ ಗಮನ ಕೇಂದ್ರೀಕರಿಸಿ. ಹೆಚ್ಚಿನ ಬಾರಿ ನಾವು ಜನರ ಹೆಸರನ್ನು ಮರೆಯಲು ಕಾರಣ, ಅವರು ಪರಿಚಯ ಮಾಡಿಕೊಳ್ಳುವಾಗ ನಾವು ಸರಿಯಾಗಿ ಕೇಳಿಸಿಕೊಂಡಿರುವುದಿಲ್ಲ. ನಮ್ಮ ಮನಸ್ಸು ಬೇರೆ ಯೋಚನೆಯಲ್ಲಿರುತ್ತದೆ ಅಥವಾ ನಾವು ಮುಂದೆ ಏನು ಮಾತನಾಡಬೇಕು ಎಂದು ಯೋಚಿಸುತ್ತಿರುತ್ತೇವೆ. ಯಾರಾದರೂ ತಮ್ಮ ಹೆಸರನ್ನು ಹೇಳಿದಾಗ, ಬೇರೆಲ್ಲ ಯೋಚನೆ ಬಿಟ್ಟು ಆ ಹೆಸರಿನ ಕಡೆಗೆ ಸಂಪೂರ್ಣ ಗಮನ ಕೊಡಿ.

ಅವರು ಹೆಸರು ಹೇಳಿದ ತಕ್ಷಣ, ನೀವು ಅವರ ಹೆಸರನ್ನು ತಕ್ಷಣ ಪುನರುಚ್ಚರಿಸಿ. ಉದಾಹರಣೆಗೆ, 'ನನ್ನ ಹೆಸರು ರಮೇಶ್' ಎಂದಾಗ, ನೀವು 'ಓಹ್, ನಮಸ್ಕಾರ ರಮೇಶ್ ಅವರೇ, ನಿಮ್ಮನ್ನು ಭೇಟಿಯಾಗಿದ್ದು ಸಂತೋಷವಾಯಿತು' ಎಂದು ಹೇಳಿ. ಹೀಗೆ ಮಾಡುವುದರಿಂದ ಮಿದುಳಿಗೆ ಆ ಹೆಸರನ್ನು ನೋಂದಾಯಿಸಿಕೊಳ್ಳಲು ಎರಡನೇ ಅವಕಾಶ ಸಿಗುತ್ತದೆ.

ಮಾತಿನ ನಡುವೆ ಹೆಸರನ್ನು ಬಳಸಬೇಕು. ಸಂಭಾಷಣೆಯ ಸಮಯದಲ್ಲಿ ಆಗಾಗ (ಅತಿಯಾಗದಂತೆ) ಅವರ ಹೆಸರನ್ನು ಬಳಸಬೇಕು. ಉದಾಹರಣೆಗೆ, 'ಹೌದು ರಮೇಶ್, ನೀವು ಹೇಳಿದ ವಿಷಯ ಬಹಳ ಮುಖ್ಯವಾದದ್ದು'. ಇದು ನಿಮ್ಮ ನೆನಪಿನಲ್ಲಿ ಆ ಹೆಸರನ್ನು ಗಟ್ಟಿಗೊಳಿಸಲು ಸಹಾಯ ಮಾಡುತ್ತದೆ.

ಮುಖದ ಲಕ್ಷಣ ಮತ್ತು ಹೆಸರಿನ ನಂಟು ಬಹಳ ಮುಖ್ಯ. ಇದು ಸ್ವಲ್ಪ ಅಭ್ಯಾಸ ಬೇಡುವ ಆದರೆ ಬಹಳ ಪರಿಣಾಮಕಾರಿ ತಂತ್ರ. ಅವರ ಮುಖದ ಯಾವುದಾದರೂ ಒಂದು ಪ್ರಮುಖ ಲಕ್ಷಣವನ್ನು (ಉದಾಹರಣೆಗೆ, ಗುಂಗುರು ಕೂದಲು, ಕನ್ನಡಕ, ದಪ್ಪ ಮೀಸೆ, ನಗುವಿನ ರೀತಿ) ಅವರ ಹೆಸರಿನೊಂದಿಗೆ ತಳುಕು ಹಾಕಿ. ಉದಾಹರಣೆಗೆ, ಒಬ್ಬ ವ್ಯಕ್ತಿಯ ಹೆಸರು 'ಕಿರಣ್' ಎಂದಿಟ್ಟುಕೊಳ್ಳೋಣ, ಅವರ ಮುಖದಲ್ಲಿ ಸದಾ ನಗು ಇದ್ದರೆ, 'ಕಿರಣ್ – ನಗುವಿನ ಕಿರಣ' ಎಂದು ಮನಸ್ಸಿನಲ್ಲಿ ಅಂದುಕೊಳ್ಳಿ. ಮುಂದಿನ ಬಾರಿ ಆ ನಗು ನೋಡಿದಾಗ ಹೆಸರು ನೆನಪಾಗುತ್ತದೆ. ಬೇರೆಯವರೊಂದಿಗೆ ಹೋಲಿಕೆ ಮಾಡುವುದು ಇನ್ನೊಂದು ವಿಧಾನ. ನೀವು ಭೇಟಿಯಾದ ವ್ಯಕ್ತಿಯ ಹೆಸರು ನಿಮ್ಮ ಹಳೆಯ ಸ್ನೇಹಿತನ ಅಥವಾ ಸಂಬಂಧಿಯ ಹೆಸರೇ ಆಗಿದ್ದರೆ, ಅದನ್ನು ಮನಸ್ಸಿನಲ್ಲಿ ಹೋಲಿಕೆ ಮಾಡಿಕೊಳ್ಳಿ. 'ಇವರ ಹೆಸರು ನಮ್ಮ ಮಾವನ ಹೆಸರೇ – ಸುರೇಶ್.'

ಟಿಪ್ಪಣಿ ಮಾಡಿಕೊಳ್ಳುವ ಅಭ್ಯಾಸ ಒಳ್ಳೆಯದು. ಇಂದಿನ ಸ್ಮಾರ್ಟ್‌ಫೋನ್ ಯುಗದಲ್ಲಿ ಇದು ತುಂಬಾ ಸುಲಭ. ಯಾರನ್ನಾದರೂ ಭೇಟಿಯಾಗಿ ಅವರು ನಿಮ್ಮಿಂದ ದೂರ ಹೋದ ತಕ್ಷಣ, ನಿಮ್ಮ ಫೋನ್‌ನಲ್ಲಿ ಒಂದು ಸಣ್ಣ ನೋಟ್ ಮಾಡಿಕೊಳ್ಳಿ. ಹೇಗೆ ಅಂದ್ರೆ, ಅವರ ಹೆಸರು, ಅವರನ್ನು ಎಲ್ಲಿ ಭೇಟಿಯಾದಿರಿ ಮತ್ತು ಅವರ ಬಗ್ಗೆ ಒಂದು ಮುಖ್ಯ ವಿಷಯ (ಉದಾಹರಣೆಗೆ, 'ರವಿ – ಮದುವೆ ಮನೆಯಲ್ಲಿ ಸಿಕ್ಕರು – ಬ್ಯಾಂಕ್ ಮ್ಯಾನೇಜರ್ – ಕನ್ನಡಕ ಧರಿಸುತ್ತಾರೆ'). ಮುಂದಿನ ಬಾರಿ ಭೇಟಿಯಾಗುವ ಮೊದಲು ಇದನ್ನು ನೋಡಿಕೊಂಡರೆ ಸಹಾಯವಾಗುತ್ತದೆ.

'ನಿಮ್ಮ ಹೆಸರೇನು?' ಎಂದು ಕೇಳಲು ಮುಜುಗರ ಬೇಡ. ಎಲ್ಲ ಪ್ರಯತ್ನಗಳ ನಂತರವೂ ಹೆಸರು ನೆನಪಾಗದಿದ್ದರೆ, ಪ್ರಾಮಾಣಿಕವಾಗಿ ಕೇಳುವುದು ತಪ್ಪಲ್ಲ. 'ಕ್ಷಮಿಸಿ, ನಿಮ್ಮ ಮುಖ ಪರಿಚಯವಿದೆ, ಆದರೆ ವಯಸ್ಸಿನ ಸಹಜ ಗುಣದಿಂದಲೋ ಏನೋ, ನಿಮ್ಮ ಹೆಸರು ತಕ್ಷಣ ನೆನಪಾಗುತ್ತಿಲ್ಲ. ದಯವಿಟ್ಟು ಮತ್ತೊಮ್ಮೆ ಹೇಳುತ್ತೀರಾ?' ಎಂದು ನಗುತ್ತಾ ಕೇಳಿ. ಹೆಚ್ಚಿನವರು ಇದನ್ನು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಸಂತೋಷದಿಂದ ಹೆಸರು ಹೇಳುತ್ತಾರೆ. ಈ ಅಭ್ಯಾಸಗಳನ್ನು ನಿಧಾನವಾಗಿ ರೂಢಿಸಿಕೊಳ್ಳಿ. ಮುಖ್ಯವಾಗಿ, ಈ ವಿಷಯದ ಬಗ್ಗೆ ಹೆಚ್ಚು ಒತ್ತಡ ತೆಗೆದುಕೊಳ್ಳಬೇಡಿ, ಏಕೆಂದರೆ ಆತಂಕವು ನೆನಪಿನ ಶಕ್ತಿಯನ್ನು ಇನ್ನಷ್ಟು ಕುಗ್ಗಿಸುತ್ತದೆ. ಮನಸ್ಸು ಶಾಂತವಾಗಿದ್ದಷ್ಟು ನೆನಪುಗಳು ಬೇಗ ಮರುಕಳಿಸುತ್ತವೆ.

Ask the Editor



• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಪುರುಷೋತ್ತಮ ರಾವ್, ಉಡುಪಿ

- **ಸಂಪಾದಕರೇ, ನನಗೆ ಈಗ ಅರವತ್ತೆಂಟು ವರ್ಷ. ನಾನು ಕಳೆದ ನಲವತ್ತೆರಡು ವರ್ಷಗಳಿಂದ ನನ್ನ ಬಂಧು-ಮಿತ್ರರಿಗೆ ಪತ್ರ ಬರೆಯುತ್ತಾ ಬಂದಿದ್ದೇನೆ. ಅವರೂ ಉತ್ತರ ಬರೆಯುತ್ತಿದ್ದರು. ಆದರೆ ಕಳೆದ ಆರೇಳು ವರ್ಷಗಳಿಂದ ಅವರಾರೂ ಪತ್ರ ಬರೆಯುತ್ತಿಲ್ಲ, ಬರೀ ವಾಟ್ಸಾಪ್ ಮೆಸೇಜ್ ಕಳಿಸುತ್ತಾರೆ. ಹೀಗಾಗಿ ಪತ್ರ ಬರೆಯುವ ಸಂಸ್ಕೃತಿಯೇ ನಾಶವಾಗುತ್ತಿದೆ. ಇದರಿಂದ ನಾನು ಬಹಳ ಕಳವಳಕ್ಕೀಡಾಗಿದ್ದೇನೆ. ಯಾರಿಗೂ ಪತ್ರ ಬರೆಯುವುದರಲ್ಲಿ ಆಸಕ್ತಿಯೇ ಇಲ್ಲ. ಈ ಕಲೆಯನ್ನು ಪುನಃ ಅರಳಿಸುವುದು ಹೇಗೆ ಎಂದು ಯೋಚಿಸುತ್ತಿದ್ದೇನೆ. ನಿಮ್ಮ ಸಲಹೆ?**

– ಪುರುಷೋತ್ತಮ ರಾವ್ ಅವರೇ, ನಿಮ್ಮ ಕಳವಳ ಮತ್ತು ಬೇಸರ ನನಗೆ ಸಂಪೂರ್ಣವಾಗಿ ಅರ್ಥವಾಗುತ್ತದೆ. ನಲವತ್ತೆರಡು ವರ್ಷಗಳ ಕಾಲ ಸತತವಾಗಿ ಪತ್ರ ಬರೆಯುವ ನಿಮ್ಮ ಹವ್ಯಾಸ, ಆ ಬದ್ಧತೆ ಮತ್ತು ಸಂಬಂಧಗಳಿಗೆ ನೀವು ನೀಡುವ ಬೆಲೆ ನಿಜಕ್ಕೂ ಶ್ಲಾಘನೀಯ. ಇಂದಿನ ವೇಗದ ಯುಗದಲ್ಲಿ, ಅಂಥ ತಾಳ್ಮೆ ಮತ್ತು ಪ್ರೀತಿ ಅಪರೂಪವಾಗಿದೆ.

ವಾಟ್ಸಾಪ್ ಮತ್ತು ಇತರೆ ಸಾಮಾಜಿಕ ಜಾಲತಾಣಗಳು ಬಂದ ನಂತರ ಪತ್ರ ಬರೆಯುವ ಸಂಸ್ಕೃತಿ ಕಣ್ಮರೆಯಾಗುತ್ತಿರುವುದು ಕಟುವಾಸ್ತವ. ವಾಟ್ಸಾಪ್‌ನಲ್ಲಿ ವೇಗವಿದೆ, ಆದರೆ ಪತ್ರದಲ್ಲಿರುವ ಆತ್ಮೀಯತೆ, ಸ್ಪರ್ಶ ಭಾವನೆ ಮತ್ತು ಅದನ್ನು ಕಾಪಾಡಿಟ್ಟುಕೊಳ್ಳುವ ಮೌಲ್ಯ ಅದಕ್ಕಿಲ್ಲ. ಪತ್ರ ಬರೆಯುವುದು ಕೇವಲ ಮಾಹಿತಿಯ ವಿನಿಮಯವಲ್ಲ, ಅದೊಂದು ಭಾವನೆಗಳ ಹಂಚಿಕೆ.

ಈ ಸುಂದರ ಕಲೆಯನ್ನು ಪುನಃ ಅರಳಿಸಲು ಅಥವಾ ಕನಿಷ್ಠ ಪಕ್ಷ ನಿಮ್ಮ ವಲಯದಲ್ಲಾದರೂ ಉಳಿಸಿಕೊಳ್ಳಲು ನೀವು ಕೆಲವು ಪ್ರಯತ್ನಗಳನ್ನು ಮಾಡಬಹುದು. ಮೊದಲನೆಯದಾಗಿ ನೀವೇ ಮಾದರಿಯಾಗಿ ಮುಂದುವರಿಯಿರಿ. ಅವರು ಉತ್ತರ ಬರೆಯದಿದ್ದರೂ ಪರವಾಗಿಲ್ಲ, ನೀವು ಬರೆಯುವುದನ್ನು ನಿಲ್ಲಿಸಬೇಡಿ. ವಾಟ್ಸಾಪ್ ಮೆಸೇಜ್ ನೋಡಿ ಮರೆಯಬಹುದು, ಆದರೆ ನಿಮ್ಮ ಕೈಬರಹದ ಪತ್ರ ಮನೆಗೆ ತಲುಪಿದಾಗ, ಅದನ್ನು ಕೈಯಲ್ಲಿ ಹಿಡಿದಾಗ ಅವರಿಗೆ ಖಂಡಿತವಾಗಿಯೂ ಒಂದು ಕ್ಷಣ ವಿಶೇಷ ಭಾವನೆ ಉಂಟಾಗುತ್ತದೆ. 'ನೀವು ಉತ್ತರ ಬರೆಯದಿದ್ದರೂ, ನನ್ನ ಪತ್ರ ನಿಮಗೆ ತಲುಪಿದೆ ಎಂದು ತಿಳಿದರೆ ಸಾಕು' ಎಂದು ಪತ್ರದ ಕೊನೆಯಲ್ಲಿ ಬರೆಯಿರಿ. ನಿಮ್ಮ ನಿರಂತರತೆ ಎಂದಾದರೂ ಅವರ ಮನಸ್ಸು ಬದಲಿಸಬಹುದು.

ಎರಡನೆಯದಾಗಿ, ಪತ್ರವನ್ನು ವಿಶೇಷವಾಗಿಸಿ (Make it Special). ಕೇವಲ ಕುಶಲ ವಿಚಾರಗಳಲ್ಲದೇ ಪತ್ರದಲ್ಲಿ ಬೇರೆ ವಿಷಯಗಳೂ ಇರಲಿ. ಅವರೊಂದಿಗೆ ಕಳೆದ ಸುಂದರ ಕ್ಷಣಗಳ ಬಗ್ಗೆ ಬರೆಯಿರಿ. 'ನಿನಗೆ ನೆನಪಿದೆಯೇ, ನಾವು ಅಂದು ಅಲ್ಲಿಗೆ ಹೋಗಿದ್ದೆವು...' ಎಂಬಂಥ ವಿಷಯಗಳು ಅವರಿಗೆ ವಾಟ್ಸಾಪ್ ನೀಡಲಾಗದ ಆಪ್ತತೆಯನ್ನು ನೀಡುತ್ತದೆ. ಪತ್ರದ ಜತೆಗೆ ಒಂದು ಹಳೆಯ ಫೋಟೋ, ಪತ್ರಿಕೆಯ ಒಂದು ಒಳ್ಳೆಯ ತುಣುಕು ಅಥವಾ ಒಂದು ಒಣಗಿದ ಹೂವನ್ನು ಇಟ್ಟು ಕಳುಹಿಸಿ. ಅದು ಪತ್ರದ ಮೌಲ್ಯವನ್ನು ಹೆಚ್ಚಿಸುತ್ತದೆ.

ಮೂರನೆಯದಾಗಿ, ಹೊಸ ತಲೆಮಾರನ್ನು ಉತ್ತೇಜಿಸಿ. ನಿಮ್ಮ ಸಮಕಾಲೀನರು ಅಥವಾ ನಿಮ್ಮ ಮಕ್ಕಳ ವಯಸ್ಸಿನವರು ಬರೆಯಲು ಸೋಮಾರಿತನ ತೋರಬಹುದು. ಆದರೆ ನಿಮ್ಮ ಮೊಮ್ಮಕ್ಕಳು ಅಥವಾ ಚಿಕ್ಕ ಮಕ್ಕಳಿಗೆ ಪತ್ರ ಬರೆಯುವುದು ಒಂದು ಹೊಸ ಅನುಭವವಾಗಬಹುದು. ಅವರ ಹುಟ್ಟುಹಬ್ಬಕ್ಕೆ ಸುಂದರವಾದ ಗ್ರೀಟಿಂಗ್ ಕಾರ್ಡ್ ಜತೆಗೆ ಕೈಬರಹದ ಪತ್ರ ಬರೆಯಿರಿ. ಅವರಿಗೆ ಪತ್ರ ಬರೆಯಲು ಬೇಕಾದ ಸಾಮಗ್ರಿಗಳನ್ನು (ಸ್ಟ್ಯಾಂಪ್, ಕವರ್, ಲೆಟರ್ ಪ್ಯಾಡ್) ಉಡುಗೊರೆಯಾಗಿ ನೀಡಿ.

ನಾಲ್ಕನೆಯದಾಗಿ, ಸಮಾನ ಮನಸ್ಕರನ್ನು ಹುಡುಕಿ. ನಿಮ್ಮ ಬಂಧು-ಮಿತ್ರರಿಗೆ ಆಸಕ್ತಿ ಇಲ್ಲದಿದ್ದರೆ, ಆಸಕ್ತಿ ಇರುವ ಬೇರೆಯವರನ್ನು ಹುಡುಕಿ. ಪತ್ರ ಬರೆಯುವ ಹವ್ಯಾಸವುಳ್ಳ ಅನೇಕ ಹಿರಿಯರು ಮತ್ತು ಸಾಹಿತ್ಯ ಆಸಕ್ತರು ಇಂದಿಗೂ ಇದ್ದಾರೆ. ಕೆಲವು ಪತ್ರಿಕೆಗಳಲ್ಲಿ 'ಪತ್ರ ಮಿತ್ರ'ರ ವಿಭಾಗವಿರುತ್ತದೆ. ಅಲ್ಲಿಗೂ ಬರೆಯಿರಿ. ನಿಮ್ಮ ಮಕ್ಕಳ ಸಹಾಯ ಪಡೆದು ಇಂಟರ್ನೆಟ್‌ನಲ್ಲಿ ಪತ್ರ ಬರೆಯುವ ಆಸಕ್ತರ ಗುಂಪುಗಳನ್ನು ಹುಡುಕಬಹುದು. ಇದರಿಂದ ಹೊಸ ಮತ್ತು ಆಸಕ್ತಿದಾಯಕ ಸ್ನೇಹ ಬೆಳೆಯಬಹುದು.

ಐದನೆಯದಾಗಿ, ತಂತ್ರಜ್ಞಾನವನ್ನೂ ಬಳಸಿಕೊಳ್ಳಿ. ನೀವು ಪತ್ರ ಪೋಸ್ಟ್ ಮಾಡಿದ ನಂತರ, ಅವರಿಗೆ ವಾಟ್ಸಾಪ್‌ನಲ್ಲಿ ಒಂದು ಫೋಟೋ ಕಳಿಸಿ ಅಥವಾ 'ನಿನಗೊಂದು ವಿಶೇಷ ಪತ್ರ ಬರೆದಿದ್ದೇನೆ, ಅಂಚೆಯಲ್ಲಿ ಬರುತ್ತದೆ, ನೋಡು' ಎಂದು ಮೆಸೇಜ್ ಹಾಕಿ. ಇದು ಅವರಲ್ಲಿ ಕುತೂಹಲ ಮೂಡಿಸಬಹುದು ಮತ್ತು ಪತ್ರಕ್ಕಾಗಿ ಕಾಯುವಂತೆ ಮಾಡಬಹುದು. ಇಂದು ಜನರನ್ನು ಪತ್ರ ಬರೆಯುವಂತೆ ಒತ್ತಾಯಿಸಲು ಸಾಧ್ಯವಿಲ್ಲ. ಆ ಜಮಾನದಿಂದ ನಾವು ಸಾಕಷ್ಟು ಮುಂದಕ್ಕೆ ಬಂದುಬಿಟ್ಟಿದ್ದೇವೆ. ಅಂಚೆ ಡಬ್ಬಗಳು ಗುಜರಿ ಸೇರುತ್ತಿವೆ. ಆದರೆ ನಿಮ್ಮ ಪ್ರೀತಿಯ ಮೂಲಕ ಅವರನ್ನು ಪ್ರೇರೇಪಿಸಬಹುದು. ಪತ್ರಗಳು ಇತಿಹಾಸದ ದಾಖಲೆಗಳು, ವಾಟ್ಸಾಪ್ ಮೆಸೇಜ್‌ಗಳು ನೀರಿನ ಮೇಲಿನ ಗುಳ್ಳೆಗಳು ಎಂಬ ಸತ್ಯವನ್ನು ಅವರಿಗೆ ಸೂಕ್ಷ್ಮವಾಗಿ ತಿಳಿಸಿ. ನಿಮ್ಮ ಈ ಪ್ರಯತ್ನಕ್ಕೆ ನನ್ನ ಅಭಿನಂದನೆಗಳು. ನಿಮ್ಮ ಲೇಖನಿ ಹೀಗೆಯೇ ಮುಂದುವರಿಯಲಿ.

ಪ್ರಶಾಂತ ಬಣವಿ, ಧಾರವಾಡ

- **ಭಟ್ರೇ, ಯಾವುದೇ ಹೊಸ ವಸ್ತು, ಶರ್ಟು, ಪ್ಯಾಂಟು, ಗ್ಯಾಜೆಟ್... ಖರೀದಿಸಿದರೂ ನನ್ನ ಆಸಕ್ತಿ ಒಂದು ವಾರಕ್ಕೆ ಮಾತ್ರ ಸೀಮಿತ. ನಂತರ ಅವುಗಳನ್ನು ಕಣ್ಣೆತ್ತಿಯೂ ನೋಡಬೇಕೆಂದು ಅನಿಸುವುದಿಲ್ಲ. ಒಂದು ವಾರದ ಬಳಿಕ ಹೊಸತು, ಹಳತಾದಂತೆ ಅನಿಸುತ್ತದೆ. ಹೊಸತಾಗಿ ಖರೀದಿಸಿದ ಮೊಬೈಲಿನ ಮೇಲೆ ವಾರ ಕಳೆದಂತೆ ಮೋಹ ಇರುವುದಿಲ್ಲ. ಈ ಭಾವನೆಯನ್ನು ನೀಗಿಸುವುದು ಹೇಗೆ?**

– ಪ್ರಶಾಂತ ಅವರೇ, ಇದು ಮನುಷ್ಯ ಸಹಜವಾದ ವರ್ತನೆ. ಮನಃಶಾಸ್ತ್ರದಲ್ಲಿ ಇದನ್ನು 'ಹೆಡೋನಿಕ್ ಅಡಾಪ್ಟೇಶನ್' ಅಥವಾ 'ಸುಖದ ಹೊಂದಾಣಿಕೆ' ಎಂದು ಕರೆಯುತ್ತಾರೆ. ಅಂದರೆ, ಎಷ್ಟೇ ಬೆಲೆಬಾಳುವ ಅಥವಾ ಸುಂದರವಾದ ವಸ್ತು ಸಿಕ್ಕರೂ, ನಮ್ಮ ಮನಸ್ಸು ಸ್ವಲ್ಪ ದಿನಗಳಲ್ಲಿ ಅದಕ್ಕೆ ಒಗ್ಗಿಕೊಳ್ಳುತ್ತದೆ. ಆ ಹೊಸ ವಸ್ತುವು ನಮ್ಮ ದೈನಂದಿನ ಬದುಕಿನ ಸಾಮಾನ್ಯ ಭಾಗವಾಗಿಬಿಡುತ್ತದೆ. ಹೀಗಾಗಿ ಆರಂಭದ ಉತ್ಸಾಹ ಅಥವಾ ಕಿಕ್ (Dopamine rush) ಶಾಶ್ವತವಾಗಿ ಉಳಿಯುವುದಿಲ್ಲ.

ಈ ಭಾವನೆಯಿಂದ ಹೊರಬರಲು ಮತ್ತು ಖರೀದಿಸಿದ ವಸ್ತುಗಳ ಮೇಲೆ ದೀರ್ಘಕಾಲದ ಪ್ರೀತಿ ಉಳಿಸಿಕೊಳ್ಳಲು ಪರಿಹಾರಗಳಿವೆ. ಮೊದಲನೆಯದು, ಮೂವತ್ತು ದಿನಗಳ ನಿಯಮ (The 30-Day Rule). ಯಾವುದೇ ವಸ್ತುವನ್ನು (ಅಗತ್ಯ ವಸ್ತುಗಳನ್ನು ಹೊರತುಪಡಿಸಿ) ನೋಡಿದ ತಕ್ಷಣ ಖರೀದಿಸಬೇಡಿ. 'ಇದನ್ನು ನಾನು ಮುಂದಿನ ತಿಂಗಳು ಕೊಳ್ಳುತ್ತೇನೆ' ಎಂದು ಮುಂದೂಡಿ. ಮೂವತ್ತು ದಿನಗಳ ನಂತರವೂ ನಿಮಗೆ ಅದೇ ವಸ್ತುವಿನ ಮೇಲೆ ಅದೇ ತೀವ್ರತೆಯ ಆಸೆ ಇದ್ದರೆ ಮಾತ್ರ ಖರೀದಿಸಿ. ಬಹುತೇಕ ಬಾರಿ, ಆ ಕ್ಷಣದ ಆವೇಗ (Impulse) ತಣ್ಣಗಾಗಿರುತ್ತದೆ ಮತ್ತು ನಿಮಗೆ ಆ ವಸ್ತುವಿನ ಅಗತ್ಯವಿಲ್ಲ ಎಂದು ಅರಿವಾಗುತ್ತದೆ.

ಎರಡನೆಯದು, ಅನುಭವಗಳಿಗೆ ಹೆಚ್ಚು ಹಣ ಕೊಡಿ. ವಸ್ತುಗಳು ಬೇಗ ಹಳತಾಗುತ್ತವೆ, ಆದರೆ ಅನುಭವಗಳು ನೆನಪಿನಲ್ಲಿ ಹಸಿರಾಗಿರುತ್ತವೆ. ಹೊಸ ಮೊಬೈಲ್ ಬದಲು ಒಂದು ಪ್ರವಾಸಕ್ಕೆ ಹೋಗಿ ಅಥವಾ ಹೊಸ ಭಾಷೆ ಕಲಿಯಿರಿ ಅಥವಾ ಸಂಗೀತ ಕಚೇರಿಗೆ ಹೋಗಿ. ಈ ನೆನಪುಗಳು ನಿಮಗೆ ವಾರ ಕಳೆದರೂ ಬೇಸರ ತರಿಸುವುದಿಲ್ಲ, ಬದಲಿಗೆ ಹೆಚ್ಚು ಸಂತೋಷ ನೀಡುತ್ತವೆ.

ಮೂರನೆಯದು, ಕೃತಜ್ಞತಾ ಭಾವನೆ (Practice Gratitude). ಹೊಸದನ್ನು ಅರಸುವ ಭರದಲ್ಲಿ, ನಮ್ಮ ಬಳಿ ಈಗ ಏನಿದೆ ಎಂಬುದನ್ನು ಮರೆತುಬಿಡುತ್ತೇವೆ. ವಾರಕ್ಕೊಮ್ಮೆಯಾದರೂ ನಿಮ್ಮ ಹಳೆಯ ಫೋನ್, ಬಟ್ಟೆ ಅಥವಾ ವಾಹನವನ್ನು ಸ್ವಚ್ಛಗೊಳಿಸಿ. 'ಇದು ನನಗೆ ಎಷ್ಟು ಉಪಯುಕ್ತವಾಗಿದೆ' ಎಂದು ಯೋಚಿಸಿ. ಇರುವ ವಸ್ತುವನ್ನು ಪ್ರೀತಿಸಲು ಕಲಿತರೆ, ಹೊಸದರ ಮೇಲಿನ ವ್ಯಾಮೋಹ ಕಡಿಮೆಯಾಗುತ್ತದೆ.

ನಾಲ್ಕನೆಯದು, 'ಕಾಸ್ಟ್ ಪರ್ ಯೂಸ್' ಲೆಕ್ಕಾಚಾರ. ಒಂದು ವಸ್ತುವನ್ನು ಖರೀದಿಸುವ ಮೊದಲು, 'ನಾನು ಇದನ್ನು ಎಷ್ಟು ಬಾರಿ ಬಳಸಬಲ್ಲೆ?' ಎಂದು ಲೆಕ್ಕ ಹಾಕಿ. ಉದಾಹರಣೆಗೆ, ಐದು ಸಾವಿರ ರುಪಾಯಿ ಕೊಟ್ಟು ಒಂದು ಜಾಕೆಟ್ ತಂದರೆ, ಅದನ್ನು ವರ್ಷಕ್ಕೆ ಕನಿಷ್ಠ ಐವತ್ತು ಬಾರಿಯಾದರೂ ಧರಿಸುವಿರಾ? ಇಲ್ಲದಿದ್ದರೆ ಅದು ವ್ಯರ್ಥ. ಈ ಲೆಕ್ಕಾಚಾರ ನಿಮ್ಮ ಮಿದುಳನ್ನು ಭಾವನಾತ್ಮಕ ಖರೀದಿಯಿಂದ ತಾರ್ಕಿಕ ಖರೀದಿಯತ್ತ ತಿರುಗಿಸುತ್ತದೆ. ಐದನೆಯದು, ಹೊಸ ಶರ್ಟ್ ಖರೀದಿಸಿದರೆ, ಹಳೆಯದೊಂದು ಶರ್ಟನ್ನು ದಾನ ಮಾಡಿ. ಹೊಸ ಗ್ಯಾಜೆಟ್ ತಂದರೆ ಹಳೆಯದನ್ನು ಮಾರಾಟ ಮಾಡಿ. ಆಗ ವಸ್ತುಗಳ ರಾಶಿ ಬೀಳುವುದಿಲ್ಲ ಮತ್ತು ಪ್ರತಿಯೊಂದು ವಸ್ತುವಿಗೂ ಬೆಲೆ ಇರುತ್ತದೆ ಎಂಬುದು ಅರಿವಾಗುತ್ತದೆ. ನೆನಪಿಡಿ, ಸಂತೋಷವು ವಸ್ತುವಿನ ಹೊಸತನದಲ್ಲಿ ಇರುವುದಿಲ್ಲ, ವಸ್ತುವಿನ ಬಳಕೆಯಲ್ಲಿ ಇರುತ್ತದೆ. ನೀವು ಆ ವಸ್ತುವನ್ನು ಬಳಸದಿದ್ದರೆ, ಅದು ಎಷ್ಟೇ ಹೊಸದಿದ್ದರೂ ಭಾರವೇ.

ವಿಶಾಲ್ ವೈದ್ಯ, (ಇಮೇಲ್ ಮೂಲಕ)

- **ಭಟ್ರೇ, ನನಗೆ ಹೊಸ ಹೊಸ ಪುಸ್ತಕವನ್ನು ಖರೀದಿಸುವ ಆಸೆ. ನನ್ನ ಮನೆಯಲ್ಲಿ ಸಾವಿರಕ್ಕೂ ಹೆಚ್ಚು ಪುಸ್ತಕಗಳಿವೆ. ಆದರೆ ನಾನು ಯಾವ ಪುಸ್ತಕವನ್ನೂ ಪೂರ್ತಿ ಓದಿ ಮುಗಿಸಿಲ್ಲ. ನಾನು ಪುಸ್ತಕವನ್ನು ಶೋಕಿಗಾಗಿ ಖರೀದಿಸುತ್ತಿದ್ದೇನಾ ಎಂದು ಅನಿಸಲಾರಂಭಿಸಿದೆ. ಹೊಸ ಪುಸ್ತಕ ಕಂಡಾಕ್ಷಣ ಖರೀದಿಸದೇ ಇರಲಾಗುತ್ತಿಲ್ಲ, ನನ್ನ ಮನಸ್ಥಿತಿಯನ್ನು ಹೇಗೆ ವ್ಯಾಖ್ಯಾನಿಸುತ್ತೀರಿ? ನಾನು ಖರೀದಿಸಿದ ಪುಸ್ತಕಗಳನ್ನು ಓದುವುದು ಹೇಗೆ?**

– ವಿಶಾಲ್ ಅವರೇ, ನಿಮ್ಮ ಈ ಪರಿಸ್ಥಿತಿ ಕೇವಲ ನಿಮ್ಮೊಬ್ಬರದ್ದಲ್ಲ. ಪ್ರಪಂಚದಾದ್ಯಂತ ಅನೇಕ ಪುಸ್ತಕ ಪ್ರೇಮಿಗಳು ಇದೇ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ನಿಮ್ಮ ಸಮಸ್ಯೆಯನ್ನು ಮನಶಾಸ್ತ್ರ ಮತ್ತು ಹವ್ಯಾಸದ ದೃಷ್ಟಿಯಿಂದ ವಿಶ್ಲೇಷಿಸಬಹುದು. ಜಪಾನೀಸ್ ಭಾಷೆಯಲ್ಲಿ ಇದಕ್ಕೊಂದು ಸುಂದರವಾದ ಪದವಿದೆ – 'ತ್ಸುಂಡೋಕು' (Tsundoku). ಇದರರ್ಥ 'ಪುಸ್ತಕಗಳನ್ನು ಓದುವ ಉದ್ದೇಶದಿಂದ ಖರೀದಿಸಿ, ಅದನ್ನು ಓದದೇ ಇತರ ಪುಸ್ತಕಗಳ ರಾಶಿಯೊಂದಿಗೆ ಸೇರಿಸಿ ಇಡುವುದು'.

ಇದು ''ಶೋಕಿ'' ಅಲ್ಲ. ನೀವು ಪುಸ್ತಕಗಳನ್ನು ಖರೀದಿಸುವುದು ಕೇವಲ ಪ್ರದರ್ಶನಕ್ಕಲ್ಲ. ಪುಸ್ತಕ ಕೊಳ್ಳುವಾಗ ನಿಮ್ಮ ಮಿದುಳಿನಲ್ಲಿ ಡೋಪಮೈನ್ (Dopamine) ಎಂಬ ರಾಸಾಯನಿಕ ಬಿಡುಗಡೆಯಾಗುತ್ತದೆ. ಇದು ನಿಮಗೆ ಖುಷಿ ಕೊಡುತ್ತದೆ. ನಾವು ಪುಸ್ತಕವನ್ನು ಖರೀದಿಸಿದಾಗ, ಕೇವಲ ಕಾಗದವನ್ನು ಖರೀದಿಸುತ್ತಿಲ್ಲ; ಆ ಪುಸ್ತಕವನ್ನು ಓದಿದ ಮೇಲೆ ನಾವು ಎಷ್ಟೊಂದು ಜ್ಞಾನಿಗಳಾಗುತ್ತೇವೆ ಎಂಬ 'ಭವಿಷ್ಯದ ನಮ್ಮ ವ್ಯಕ್ತಿತ್ವ'ವನ್ನು ಖರೀದಿಸುತ್ತಿರುತ್ತೇವೆ. ಆದರೆ ಓದುವುದು ಶ್ರಮದಾಯಕ ಕೆಲಸವಾದ್ದರಿಂದ, ಖರೀದಿಸಿದ ಕ್ಷಣದ ಆನಂದ ಓದುವಾಗ ಸಿಗುವುದಿಲ್ಲ.

ನಿಮ್ಮಲ್ಲಿರುವ ಸಾವಿರ ಪುಸ್ತಕಗಳಲ್ಲಿ ಕನಿಷ್ಠ ಕೆಲವನ್ನಾದರೂ ಓದಿ ಮುಗಿಸಬಹುದು. ಮುಂದಿನ ಮೂರು ತಿಂಗಳು ಅಥವಾ ಕನಿಷ್ಠ ಹತ್ತು ಪುಸ್ತಕಗಳನ್ನು ಓದಿ ಮುಗಿಸುವವರೆಗೆ ಹೊಸ ಪುಸ್ತಕವನ್ನು ಖರೀದಿಸುವುದಿಲ್ಲ ಎಂದು ದೃಢ ನಿರ್ಧಾರ ಮಾಡಿ. ಅಂಗಡಿಗೆ ಹೋದರೂ ಕೈಯಲ್ಲಿ ಪುಸ್ತಕ ಹಿಡಿದು ನೋಡಿ, 'ನನ್ನ ಮನೆಯಲ್ಲಿರುವ ಪುಸ್ತಕ ಮುಗಿದ ಮೇಲೆ ನಿನ್ನನ್ನು ಕರೆದೊಯ್ಯುತ್ತೇನೆ' ಎಂದು ವಾಪಸ್ ಬನ್ನಿ.

ದಿನಕ್ಕೆ ಕೇವಲ ಹತ್ತು-ಹದಿನೈದು ನಿಮಿಷ ಅಥವಾ ಹತ್ತು ಪುಟಗಳನ್ನು ಮಾತ್ರ ಓದಿ. ಇಡೀ ಪುಸ್ತಕ ಮುಗಿಸಬೇಕೆಂಬ ಒತ್ತಡ ಬೇಡ. 'ಹನಿ ಹನಿ ಗೂಡಿದರೆ ಹಳ್ಳ' ಎಂಬಂತೆ, ಸಣ್ಣ ಓದು ದೊಡ್ಡ ಫಲಿತಾಂಶ ನೀಡುತ್ತದೆ. ಪುಸ್ತಕಗಳನ್ನು ಕಪಾಟಿನಲ್ಲಿ ಕೂಡಿ ಹಾಕಬೇಡಿ. ಒಂದು ಪುಸ್ತಕವನ್ನು ನಿಮ್ಮ ದಿಂಬಿನ ಪಕ್ಕ, ಇನ್ನೊಂದನ್ನು ಟಿವಿ ಎದುರು, ಮತ್ತೊಂದನ್ನು ಬ್ಯಾಗಿನ ಒಳಗೆ ಇಟ್ಟುಕೊಳ್ಳಿ. ಮೊಬೈಲ್ ನೋಡುವ ಬದಲು ಕೈಗೆ ಪುಸ್ತಕ ಸಿಗಲಿ. ನೀವು ಖರೀದಿಸಿದ ಮಾತ್ರಕ್ಕೆ ಅದನ್ನು ಓದಲೇಬೇಕೆಂದಿಲ್ಲ. ಮೊದಲ ಐವತ್ತು ಪುಟ ಓದಿದರೂ ಆಸಕ್ತಿ ಬರದಿದ್ದರೆ, ಆ ಪುಸ್ತಕವನ್ನು ನಿರ್ದಾಕ್ಷಿಣ್ಯವಾಗಿ ಪಕ್ಕಕ್ಕಿಡಿ. ನಿಮಗೆ ಇಷ್ಟವಾಗುವ ಪುಸ್ತಕ ಸಿಗುವವರೆಗೂ ಹುಡುಕಿ.

ಪುಸ್ತಕ ಹಿಡಿದು ಕೂಡಲು ಸಮಯವಿಲ್ಲದಿದ್ದರೆ, ಪ್ರಯಾಣದ ಸಮಯದಲ್ಲಿ ಅಥವಾ ಕೆಲಸ ಮಾಡುವಾಗ ಆಡಿಯೋ ಬುಕ್ ಕೇಳಲು ಪ್ರಯತ್ನಿಸಿ. ಇದು ಓದುವ ಆಸಕ್ತಿಯನ್ನು ಮತ್ತೆ ಚಿಗುರಿಸಬಹುದು. ಇಂದೇ ನಿಮ್ಮ ಸಂಗ್ರಹದಲ್ಲಿರುವ ಅತ್ಯಂತ ತೆಳುವಾದ (ಚಿಕ್ಕ) ಪುಸ್ತಕವನ್ನು ಆಯ್ಕೆ ಮಾಡಿಕೊಳ್ಳಿ. ಅದನ್ನು ಈ ವಾರಾಂತ್ಯದೊಳಗೆ ಓದಿ ಮುಗಿಸಿ. 'ನಾನು ಒಂದು ಪುಸ್ತಕವನ್ನು ಪೂರ್ತಿ ಓದಬಲ್ಲೆ' ಎಂಬ ಆತ್ಮವಿಶ್ವಾಸವೇ ಮುಂದಿನ ಪುಸ್ತಕ ಓದಲು ಪ್ರೇರಣೆ ನೀಡುತ್ತದೆ.

ರಾಜೇಂದ್ರ, ಪಾಟೀಲ, ಬೆಳಗಾವಿ

- **ಭಟ್ರೇ, ನನ್ನ ಡ್ರೆಸ್ ಸೆನ್ಸ್ ಅಷ್ಟು ಆಕರ್ಷಕವಾಗಿಲ್ಲ ಎಂದು ನನಗನಿಸಲಾರಂಭಿಸಿದೆ. ನನಗೆ ನಿತ್ಯವೂ ಕೋಟ್ ಧರಿಸಬೇಕು ಎಂಬ ಆಸೆ. ಆದರೆ ನಾನು ಕೆಲಸ ಮಾಡುವ ಆಫೀಸಿನಲ್ಲಿ, ಬಾಸ್ ಸೇರಿದಂತೆ, ಯಾರೂ ಕೋಟ್ ಧರಿಸುವುದೇ ಇಲ್ಲ. ನನ್ನ ಸ್ನೇಹಿತರಾರೂ ಒಳ್ಳೆಯ ಡ್ರೆಸ್ ಹಾಕುವುದಿಲ್ಲ. ನಾನು ಈ ವಿಷಯದಲ್ಲಿ ಸಂತೋಷವನ್ನು ಕಾಣುವುದು ಹೇಗೆ?**

– ರಾಜೇಂದ್ರ ಅವರೇ, ನಿಮ್ಮ ಈ ಆಸೆ ತುಂಬಾ ಸಹಜವಾದುದು. ನಿಮ್ಮ ಪರಿಸರಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುವಾಗ ಮುಜುಗರವಾಗುವುದು ಸಹಜ. ಆದರೆ, ನೀವು ಬಯಸಿದಂತೆ ಕೋಟ್ ಧರಿಸಿ, ಅದರಲ್ಲಿಯೇ ಸಂತೋಷ ಮತ್ತು ಆತ್ಮವಿಶ್ವಾಸವನ್ನು ಕಂಡುಕೊಳ್ಳಬಹುದು. ಮೊದಲನೆಯದಾಗಿ, 'ನಿಮಗಾಗಿ ನೀವು' ಎಂಬ ಸಿದ್ಧಾಂತ ರೂಢಿಸಿಕೊಳ್ಳಿ. ನಾವು ಬಟ್ಟೆ ಧರಿಸುವುದು ಬೇರೆಯವರನ್ನು ಮೆಚ್ಚಿಸುವುದಕ್ಕಲ್ಲ, ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವುದಕ್ಕೆ. ಮನಃಶಾಸ್ತ್ರದಲ್ಲಿ Enclothed Cognition ಎಂಬ ಪರಿಕಲ್ಪನೆಯಿದೆ. ಇದರ ಪ್ರಕಾರ, ನಾವು ಧರಿಸುವ ಬಟ್ಟೆ ನಮ್ಮ ಆಲೋಚನಾ ಕ್ರಮ ಮತ್ತು ಕಾರ್ಯಕ್ಷಮತೆಯ ಮೇಲೆ ನೇರ ಪರಿಣಾಮ ಬೀರುತ್ತದೆ. ನೀವು ಕೋಟ್ ಧರಿಸಿದಾಗ ನಿಮಗೇ ತಿಳಿಯದಂತೆ ನಿಮ್ಮ ಬೆನ್ನು ನೆಟ್ಟಗಾಗುತ್ತದೆ ಮತ್ತು ನೀವು ಹೆಚ್ಚು ಜವಾಬ್ದಾರಿಯುತ ವ್ಯಕ್ತಿಯಂತೆ ವರ್ತಿಸುತ್ತೀರಿ. ಈ 'ಫೀಲ್' ಅನುಭವಿಸುವುದೇ ನಿಜವಾದ ಸಂತೋಷ.

ಎರಡನೆಯದಾಗಿ, ಸ್ಮಾರ್ಟ್ ಕ್ಯಾಶುಯಲ್ಸ್ ಆಯ್ಕೆ ಮಾಡಿ. ಆಫೀಸಿನಲ್ಲಿ ಯಾರೂ ಕೋಟ್ ಹಾಕುತ್ತಿಲ್ಲ ಎಂದರೆ, ನೀವು ಒಮ್ಮೆಲೇ ಮದುವೆ ಮನೆಯವರಂತೆ 'ಫಾರ್ಮಲ್ ಸೂಟ್' ಹಾಕಿಕೊಂಡು ಹೋದರೆ ಅದು ವಿಚಿತ್ರವಾಗಿ ಕಾಣಬಹುದು. ಅದಕ್ಕೆ ಬದಲಾಗಿ, ಬ್ಲೇಜರ್ ಮತ್ತು ಜೀನ್ಸ್ ಅತ್ಯುತ್ತಮ ಆಯ್ಕೆ. ಕಡು ನೀಲಿ ಅಥವಾ ಬೂದು ಬಣ್ಣದ ಬ್ಲೇಜರ್ ಅನ್ನು ಜೀನ್ಸ್ ಮತ್ತು ಟೀ-ಶರ್ಟ್ ಮೇಲೆ ಧರಿಸಿ. ಇದು 'ಫಾರ್ಮಲ್' ಆಗಿಯೂ ಕಾಣುವುದಿಲ್ಲ, ಆದರೆ ನೀವು ಬಯಸಿದ 'ಕೋಟ್' ಆಸೆಯೂ ಈಡೇರುತ್ತದೆ. ನಮ್ಮ ಹವಾಮಾನಕ್ಕೆ ತಕ್ಕಂತೆ ಹಗುರವಾದ ಕಾಟನ್ ಅಥವಾ ಲಿನನ್ ಜಾಕೆಟ್ ಧರಿಸಿ. ಇದು ಸ್ಟೈಲಿಶ್ ಆಗಿ ಕಾಣುತ್ತದೆ.

ಮೂರನೆಯದಾಗಿ, ಪ್ರತ್ಯೇಕತೆಯನ್ನು ಸಂಭ್ರಮಿಸಿ. ಎಲ್ಲರೂ ಒಂದೇ ತರಹದ ಬಟ್ಟೆ ಧರಿಸುವ ಜಾಗದಲ್ಲಿ, ನೀವು ವಿಭಿನ್ನವಾಗಿ ಕಾಣುವುದು ನಿಮ್ಮ ವ್ಯಕ್ತಿತ್ವಕ್ಕೆ ಒಂದು 'ಬ್ರ್ಯಾಂಡ್' ನೀಡುತ್ತದೆ. ಆಫೀಸಿನಲ್ಲಿ 'ಅವರು ಯಾವಾಗಲೂ ಚೆನ್ನಾಗಿ ಡ್ರೆಸ್ ಮಾಡ್ತಾರೆ' ಎಂದು ಗುರುತಿಸಿಕೊಳ್ಳುವುದು ನಿಮ್ಮ ವೃತ್ತಿಜೀವನಕ್ಕೂ ಒಳ್ಳೆಯದು. ಬಾಸ್ ಕೋಟ್ ಹಾಕದಿದ್ದರೂ, ನೀವು ಹಾಕುವುದರಿಂದ ನೀವು ಕೆಲಸದ ಬಗ್ಗೆ ಹೆಚ್ಚು ಗಂಭೀರವಾಗಿದ್ದೀರಿ ಎಂಬ ಸಂದೇಶ ರವಾನೆಯಾಗುತ್ತದೆ. ನಾಲ್ಕನೆಯದಾಗಿ, 'ಸ್ಪಾಟ್‌ಲೈಟ್ ಎಫೆಕ್ಟ್'ನಿಂದ ಹೊರಬನ್ನಿ. 'ನಾನು ಕೋಟ್ ಹಾಕಿದರೆ ಎಲ್ಲರೂ ನನ್ನನ್ನೇ ನೋಡುತ್ತಾರೆ' ಎಂಬ ಭಯ ನಿಮಗಿರಬಹುದು. ಆದರೆ ಮನಃಶಾಸ್ತ್ರದ ಪ್ರಕಾರ, ಜನರಿಗೆ ತಮ್ಮದೇ ಚಿಂತೆಗಳಿರುತ್ತವೆ. ಅವರು ನಿಮ್ಮ ಬಟ್ಟೆಯನ್ನು ಒಂದು ದಿನ ಗಮನಿಸಬಹುದು, ಎರಡನೇ ದಿನಕ್ಕೆ ಅದು ಅವರಿಗೆ ಅಭ್ಯಾಸವಾಗಿಬಿಡುತ್ತದೆ. ನಿಮ್ಮ ಸ್ನೇಹಿತರು ಅಥವಾ ಸಹೋದ್ಯೋಗಿಗಳು ಆರಂಭದಲ್ಲಿ ಸ್ವಲ್ಪ ರೇಗಿಸಬಹುದು. ನೀವು ನಗುತ್ತಾ, 'ನನಗೆ ಇದು ಇಷ್ಟ, ಅದಕ್ಕೆ ಹಾಕಿದ್ದೀನಿ' ಎಂದು ಹೇಳಿದರೆ, ಅವರೇ ನಿಮ್ಮ ಆತ್ಮವಿಶ್ವಾಸಕ್ಕೆ ತಲೆಬಾಗುತ್ತಾರೆ.

ಗುಂಪಿನಲ್ಲಿ ಗೋವಿಂದನಾಗುವುದಕ್ಕಿಂತ, ಗುಂಪಿನಲ್ಲಿ ಎದ್ದು ಕಾಣುವುದು ಯಾವಾಗಲೂ ಒಳ್ಳೆಯದೇ. ನಿಮ್ಮ ಆಸೆಯನ್ನು ಅದುಮಿಟ್ಟುಕೊಂಡು ಬಾಡಿದ ಮನಸ್ಸಿನಿಂದ ಇರುವುದಕ್ಕಿಂತ, ಇಷ್ಟವಾದ ಕೋಟ್ ಧರಿಸಿ ಖುಷಿಯಾಗಿರುವುದು ಮುಖ್ಯ.